ಶುಕ್ರವಾರ, ಏಪ್ರಿಲ್ 18, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭುವಿ ತಾಲೀಮು

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲರ್ ಭುವನೇಶ್ವರ್ ಕುಮಾರ್ ಗುರುವಾರ ಅಭ್ಯಾಸ ನಡೆಸಿದರು

ರೀಗಲ್ ಜ್ಯುವೆಲರ್ಸ್

MANUFACTURER & WHOLESALERS

ಬೆಂಗಳೂರಿನ ಏಕೈಕ ಹೋಲ್ಸೇಲ್ ಆಭರಣ ತಾಣ ಇದೀಗ ಮಲ್ಲೇಶ್ವರಂನಲ್ಲಿ

ಎಂದಾದರೂ ಹೋಲ್‌ಸೇಲ್ ಜ್ಯುವೆಲ್ಲರ್ ಹತ್ತಿರ ನೇರವಾಗಿ ಖರೀದಿಸಿದ್ದೀರ?

ಇತರೆ ಜ್ಯುವೆಲ್ಲರ್ಸ್ (ಚಿಲ್ಲರೆ ತಯಾರಿಕಾ ಶುಲ್ಕ)	ರೀಗಲ್ ಜ್ಯುವೆಲ್ಲರ್ಸ್ (ಒಟ್ಟಾರೆ ತಯಾರಿಕಾ ಶುಲ್ಕ)
ಕಾರ್ಖಾನೆ → ಮಧ್ಯಸ್ಥಿಕೆ (VA%) → ಇತರ ಜ್ಯುವೆಲ್ಲರ್ಸ್ (ಚಿಲ್ಲರೆ ಅಂಗಡಿ) (VA%) → ಗ್ರಾಹಕ, ಗ್ರಾಹಕ	ಕಾರ್ಖಾನೆ → ರೀಗಲ್ ಜ್ಯುವೆಲ್ಲರ್ಸ್ (ಹೋಲ್ ಸೇಲ್ ಜ್ಯುವೆಲ್ಲರ್ಸ್) (VA%) → ಗ್ರಾಹಕ, ಗ್ರಾಹಕ
ಬೇರೆ ರಿಟೇಲ್ ಜ್ಯುವೆಲ್ಲರ್ಸ್, ಬಹು ಮಧ್ಯವರ್ತಿಗಳಿರುವುದರಿಂದ ಹೆಚ್ಚಿನ ಮೇಕಿಂಗ್ ಶುಲ್ಕವನ್ನು ವಿಧಿಸುತ್ತಾರೆ	ರೀಗಲ್ ಜ್ಯುವೆಲ್ಲರ್ಸ್, ಹೋಲ್‌ಸೇಲ್ ಅಂಗಡಿಯಾಗಿರುವುದರಿಂದ, ಮಧ್ಯವರ್ತಿಗಳಿಲ್ಲದೆ ಕನಿಷ್ಠ ಮೇಕಿಂಗ್ ಚಾರ್ಜ್ ವಿಧಿಸಿ, ಗ್ರಾಹಕರಿಗೆ ಅವರ ಹಣಕ್ಕೆ ಹೆಚ್ಚಿನ ಮೌಲ್ಯವನ್ನು ನೀಡುತ್ತದೆ

ಹೋಲ್‌ಸೇಲ್ ಲಾಭಗಳು

ರೀಗಲ್ ಜ್ಯುವೆಲ್ಲರ್ಸ್‌ನಲ್ಲಿ, ಅತೀ ಸಣ್ಣ ಹೆಚ್‌ಯೂಐಡಿ ಹಾಲ್‌ಮಾರ್ಕ್ ಆಭರಣ ಖರೀದಿಗಳಿಗೂ ಸಹ ಹೋಲ್‌ಸೇಲ್ ದರ ನಿಗದಿಪಡಿಸಲಾಗಿದೆ.

ಪ್ರಾರಂಭೋತ್ಸವದ ಕೊಡುಗೆಗಳು

ಏಪ್ರಿಲ್ 18th–30th

FLAT 60% OFF
ಚಿನ್ನದ ಆಭರಣಗಳ ಮೇಕಿಂಗ್ ಚಾರ್ಜಸ್ ಮೇಲೆ

₹20,000 OFF
ಪ್ರತಿ ಕ್ಯಾರಟ್ ವಜ್ರದ ಆಭರಣಗಳ ಮೇಲೆ.

*T&C Apply

ಹೋಲ್ಸೇಲ್ ದರಗಳು | 100% 916 HUID ಹಾಲ್ ಮಾರ್ಕ್ | ಅಂತಾರಾಷ್ಟ್ರೀಯ ಪ್ರಮಾಣೀಕೃತ ಡೈಮೆಂಡ್ | 100% ಮೌಲ್ಯ ಎಕ್ಸ್ ಚೇಂಜ್ ಮೇಲೆ

FOR UPDATES

ಮುನಿಸಿಪಲ್ ನಂ ೧೩೩, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ೫೬೦೦೦೩

+91 7297 90 90 90 care@regaljewellers.net www.regaljewellers.net

ಮಲ್ಲೇಶ್ವರಂ | ಕಮ್ಮನಹಳ್ಳಿ | ಕೇರಳ

ಶುಕ್ರವಾರ, ಏಪ್ರಿಲ್ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 107 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಮೆಯ ಪಯಣ

- 'ಟ್ಯಾಗ್' ಮಾಡಲಾದ ಆಲಿವ್ ರಿಡ್ಲೆ ಹೆಣ್ಣು ಆಮೆಯೊಂದು 4 ವರ್ಷಗಳಲ್ಲಿ 3,600 ಕಿ.ಮೀ. ಕ್ರಮಿಸಿದೆ.
- ಆಮೆಯೊಂದು ಮೊಟ್ಟೆ ಇಡಲು ಇಷ್ಟು ದೂರ ವಲಸೆ ಬಂದಿರುವುದು ಇದೇ ಮೊದಲು.

ವಿವರ 8

ಆಳ–ಅಗಲ

ನ್ಯಾಯದಾನ: ರಾಜ್ಯ ನಂ.1 ಆದರೆ...

ಭ್ರಷ್ಟರು ಜೈಲಿಗೆ: ಕಾಂಗ್ರೆಸ್ ವಿರುದ್ಧ ಬಿಜೆಪಿ ತಿರುಗೇಟು 8

ಸಿಇಟಿ: ನಕಲಿ ಅಭ್ಯರ್ಥಿ ಪತ್ತೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,553	23,851	₹1,00,730	₹1,01,500	85.38

ವಕ್ಫ್ ಮಂಡಳಿಗಳಿಗೆ ನೇಮಕಾತಿ ನಡೆಸುವುದಿಲ್ಲ: ಸುಪ್ರೀಂ ಕೋರ್ಟ್‌ಗೆ ಕೇಂದ್ರ ಭರವಸೆ

ವಕ್ಫ್ ಆಸ್ತಿ ಡಿನೋಟಿಫೈ ಸದ್ಯಕ್ಕಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ವಕ್ಫ್ ಪರಿಷತ್ತು ಮತ್ತು ರಾಜ್ಯ ವಕ್ಫ್ ಮಂಡಳಿಗಳಿಗೆ ಮುಂದಿನ ವಿಚಾರಣೆಯವರೆಗೆ ಯಾವುದೇ ನೇಮಕಾತಿ ನಡೆಸುವುದಿಲ್ಲ ಮತ್ತು ನ್ಯಾಯಾಲಯಗಳು ವಕ್ಫ್ ಎಂದು ಘೋಷಿಸಿರುವ ಆಸ್ತಿಗಳನ್ನು ಡಿ–ನೋಟಿಫೈ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಗುರುವಾರ ಭರವಸೆ ನೀಡಿದೆ.

ವಕ್ಫ್ (ತಿದ್ದುಪಡಿ) ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್, ಕೆ.ವಿ. ವಿಶ್ವನಾಥನ್ ಅವರ ತ್ರಿಸದಸ್ಯ ಪೀಠವು ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ಹೇಳಿಕೆ ದಾಖಲಿಸಿಕೊಂಡಿತು.

ಕಾಯ್ದೆಯ ಕೆಲವೊಂದು ನಿಯಮಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡುವ ನ್ಯಾಯಪೀಠದ ಪ್ರಸ್ತಾವವನ್ನು ಕೇಂದ್ರ ಸರ್ಕಾರ ಬಲವಾಗಿ ವಿರೋಧಿಸಿತು. 'ನ್ಯಾಯಾಲಯಗಳು ವಕ್ಫ್ ಎಂದು ಘೋಷಿಸಿರುವ ಆಸ್ತಿಗಳು 'ಬಳಕೆಯ ಕಾರಣ ದಿಂದಾಗಿ ವಕ್ಫ್' ಆಗಿರಲಿ ಅಥವಾ 'ಕ್ರಯಪತ್ರದ ಮೂಲಕ ವಕ್ಫ್ ಆಗಿರಲಿ', ಅವುಗಳನ್ನು ಡಿನೋಟಿಫೈ ಮಾಡುವುದಿಲ್ಲ' ಎಂದು ಮೆಹ್ತಾ ಹೇಳಿದರು.

8ನೇ ಪುಟ ನೋಡಿ

> ನಾವು ಹೊಣೆಗಾರಿಕೆಯಲ್ಲಿ ಬದಲಾವಣೆ ತರಲು ಬಯಸುವುದಿಲ್ಲ. ಸಂಸತ್ತು ಕಾನೂನುಗಳನ್ನು ಮಾಡುತ್ತದೆ, ಕಾರ್ಯಾಂಗ ನಿರ್ಧರಿಸುತ್ತದೆ ಮತ್ತು ನ್ಯಾಯಾಂಗ ವಿಶ್ಲೇಷಿಸುತ್ತದೆ
> **ಸಂಜೀವ್ ಖನ್ನಾ,** ಮುಖ್ಯ ನ್ಯಾಯಮೂರ್ತಿ

> ಅಗತ್ಯ ಸಮಾಲೋಚನೆ ನಡೆಸಿದ ಬಳಿಕವೇ ಮಸೂದೆ ಮಂಡಿಸಲಾಗಿದೆ. ಲಕ್ಷ ಲಕ್ಷ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ ಕೊನೆಯದಾಗಿ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ
> **ತುಷಾರ್ ಮೆಹ್ತಾ,** ಸಾಲಿಸಿಟರ್ ಜನರಲ್

> ವಕ್ಫ್ ತಿದ್ದುಪಡಿ ಕಾಯ್ದೆಯು ಕಾನೂನಾತ್ಮಕವಾಗಿ ಲೋಪಗಳಿಂದ ಕೂಡಿದೆ, ನೈತಿಕವಾಗಿ ಟೊಳ್ಳಾಗಿದೆ ಮತ್ತು ಸಂವಿಧಾನದ ಆತ್ಮಕ್ಕೆ ನೇರವಾಗಿ ದಾಳಿ ಮಾಡುತ್ತದೆ
> **ಅಭಿಷೇಕ್ ಮನು ಸಿಂಘ್ವಿ,** ಕಾಂಗ್ರೆಸ್ ನಾಯಕ

ಐದು ಅರ್ಜಿಗಳ ವಿಚಾರಣೆ

'ಕಾಯ್ದೆ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ 100 ಅಥವಾ 120 ಅರ್ಜಿಗಳ ವಿಚಾರಣೆ ಅಸಾಧ್ಯ' ಎಂದ ಪೀಠವು ಒಟ್ಟು ಅರ್ಜಿಗಳ ಪೈಕಿ ಐದನ್ನು ಮಾತ್ರ ವಿಚಾರಣೆಗೆ ಪರಿಗಣಿಸಲು ನಿರ್ಧರಿಸಿತು. ಯಾರು ವಾದಿಸಬೇಕು ಎಂಬುದನ್ನು ನೀವೇ ನಿರ್ಧರಿಸಬೇಕು ಎಂದು ವಕೀಲರಿಗೆ ಪೀಠ ಸೂಚಿಸಿತು.

ವಕೀಲರಾದ ಎಜಾಜ್ ಮಕ್ಬೂಲ್, ವಿಷ್ಣು ಶಂಕರ್ ಜೈನ್ ಮತ್ತು ಕಾನು ಅಗರ್ವಾಲ್ ಅವರನ್ನು ಕೇಂದ್ರದ ನೋಡಲ್ ವಕೀಲರನ್ನಾಗಿ ನ್ಯಾಯಾಲಯವು ನೇಮಿಸಿತು. ಮೇ 5ರಂದು ಪ್ರಾಥಮಿಕ ವಿಚಾರಣೆ ನಡೆಸಲಾಗುವುದು ಮತ್ತು ಅಗತ್ಯವಿದ್ದರೆ ಮಧ್ಯಂತರ ಆದೇಶ ಹೊರಡಿಸಲಾಗುವುದು ಎಂದು ಪೀಠ ಸ್ಪಷ್ಟಪಡಿಸಿತು.

ದಿನದ ಬೆಳವಣಿಗೆಗಳು

- ವಕ್ಫ್ ಆಸ್ತಿಯನ್ನು ಮುಂದಿನ ವಿಚಾರಣೆವರೆಗೆ ಡಿನೋಟಿಫೈ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದ್ದನ್ನು ಕಾಂಗ್ರೆಸ್, ಸಿಪಿಎಂ, ಮುಸ್ಲಿಂ ಲೀಗ್, ವೈಎಸ್ಆರ್ ಕಾಂಗ್ರೆಸ್ ಸ್ವಾಗತಿಸಿವೆ
- ವಕ್ಫ್ ಕಾಯ್ದೆ ವಿರೋಧಿಸಿ ಮುರ್ಶಿದಾಬಾದ್‌ನಲ್ಲಿ ನಡೆದ ಹಿಂಸಾಚಾರವನ್ನು ವಿರೋಧ ಪಕ್ಷಗಳು ಏಕೆ ಖಂಡಿಸಿಲ್ಲ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪ್ರಶ್ನಿಸಿದ್ದಾರೆ
- ಗಲಭೆಯಿಂದ ಸಹಜ ಸ್ಥಿತಿಗೆ ಮರಳುತ್ತಿರುವ ಮುರ್ಶಿದಾಬಾದ್‌ಗೆ ರಾಜ್ಯಪಾಲ ಆನಂದ ಬೋಸ್ ಭೇಟಿ ನೀಡಬಾರದು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೋರಿದ್ದಾರೆ
- ದಾವೂದಿ ಬೊಹ್ರಾ ಸಮುದಾಯದ ನಿಯೋಗವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ವಕ್ಫ್ ತಿದ್ದುಪಡಿ ಕಾಯ್ದೆಗಾಗಿ ಕೃತಜ್ಞತೆ ಸಲ್ಲಿಸಿದೆ. ಈ ಸಮುದಾಯದ ಕೆಲವು ಬೇಡಿಕೆಗಳನ್ನು ಕಾಯ್ದೆಯಲ್ಲಿ ಸೇರಿಸಿಕೊಳ್ಳಲಾಗಿದೆ
- ಕಾಯ್ದೆ ಕುರಿತು ವಿರೋಧ ಪಕ್ಷಗಳು ಹರಡಿರುವ 'ತಪ್ಪುಕಲ್ಪನೆ'ಗಳನ್ನು ಹೋಗಲಾಡಿಸಲು ಅಭಿಯಾನ ನಡೆಸಲಾಗುವುದು ಎಂದು ತ್ರಿಪುರಾ ಬಿಜೆಪಿ ಹೇಳಿದೆ

ಕೇಂದ್ರದ ವಿರುದ್ಧ 'ಕೈ' ಪ್ರತಿಭಟನೆ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಬೆಲೆ ಏರಿಕೆ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಎಲ್‌ಪಿಜಿಯ ಖಾಲಿ ಸಿಲಿಂಡರ್ ಹೊತ್ತು ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ಎಐಸಿಸಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಕ ಹಿಡಿದಿದ್ದರು -ಚಿತ್ರ: ರಂಜು ಪಿ.

ಸುದ್ದಿ 6

ವೀರಶೈವ–ಲಿಂಗಾಯತ ಸಚಿವರ ಅಳಲು

ಆತಂಕ ನಿವಾರಿಸಿ ಅನುಷ್ಠಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ 'ದತ್ತಾಂಶ ಅಧ್ಯಯನ ವರದಿ' ಕುರಿತು ವಿವಿಧ ಸಮುದಾಯಗಳಿಗೆ ಇರಬಹುದಾದ ಆತಂಕ ನಿವಾರಿಸಿ, ಪಕ್ಷಕ್ಕೂ ಹಾನಿಯಾಗದಂತೆ ಶಿಫಾರಸುಗಳನ್ನು ಅನುಷ್ಠಾನ ಮಾಡುವ ಬಗ್ಗೆ ಏಕಮತದ ಅಭಿಪ್ರಾಯಕ್ಕೆ ಬಂದ ಸಚಿವ ಸಂಪುಟ ಸಭೆ, ಯಾವುದೇ ನಿರ್ಣಯ ಕೈಗೊಳ್ಳದೇ ಸಮಾಪ್ತಿಗೊಂಡಿದೆ.

2015ರಲ್ಲಿ ನಡೆದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯ ದತ್ತಾಂಶವನ್ನು ಅಧ್ಯಯನ ಮಾಡಿದ್ದ ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಿತ್ತು. ಈ ವರದಿಯ ಬಗ್ಗೆ ಚರ್ಚೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಸಂಪುಟದ ವಿಶೇಷ ಸಭೆಯನ್ನು ಗುರುವಾರ ಕರೆದಿದ್ದರು.

> ವರದಿಯ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ. ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ ನೋಡೋಣ. ವರದಿಯಲ್ಲಿ ಏನಿದೆ ಎಂಬುದು ಗೊತ್ತಿಲ್ಲ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಏ.11ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಆಯೋಗದ ವರದಿಯನ್ನು ಸ್ವೀಕರಿಸಿದ್ದಲ್ಲದೇ, ದತ್ತಾಂಶ ಹಾಗೂ ಶಿಫಾರಸುಗಳಿರುವ ಪ್ರತಿಯೊಂದನ್ನು ನೀಡಿ, ಅಧ್ಯಯನ ಮಾಡಿಕೊಂಡು ಬರುವಂತೆ ಸಚಿವರಿಗೆ ಸೂಚಿಸಲಾಗಿತ್ತು.

ಗುರುವಾರದ ಸಭೆಯಲ್ಲಿ ವಿಷಯ ಪ್ರಸ್ತಾಪವಾದಾಗ, ಆಯೋಗವು ಸಲ್ಲಿಸಿರುವ ವರದಿಯಲ್ಲಿ ತಮ್ಮ ಜಾತಿ–ಸಮುದಾಯದ ಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ. ಇದು ಸಮುದಾಯದಲ್ಲಿ ಆತಂಕಕ್ಕೆ ಕಾರಣ ವಾಗಿದ್ದು, ಗೊಂದಲವನ್ನೂ ಮೂಡಿಸಿದೆ ಎಂದು ಕೆಲವು ಸಚಿವರ ಅಳಲು ತೋಡಿಕೊಂಡರು ಎಂದು ಗೊತ್ತಾಗಿದೆ.

8ನೇ ಪುಟ ನೋಡಿ

ಸಂಪುಟ ಸಭೆ: ಚರ್ಚೆ ಅಪೂರ್ಣ

ಜಾತಿ ದತ್ತಾಂಶ ಅಧ್ಯಯನ ವರದಿಯ ವಿಷಯವನ್ನು ಮೇ 2ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಮತ್ತೆ ಚರ್ಚೆಗೆ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ವಿವರ 8

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಅಂತ್ಯಗೊಂಡ ಲಾರಿ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ದಿನಗಳಿಂದ ನಡೆಯುತ್ತಿದ್ದ ಲಾರಿ ಮುಷ್ಕರವನ್ನು ರಾಜ್ಯ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘ ಗುರುವಾರ ವಾಪಸ್ ಪಡೆದಿದೆ.

ಸಂಘದ ಪದಾಧಿಕಾರಿಗಳೊಂದಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಂಧಾನ ಸಭೆ ನಡೆಸಿದರು. ಡೀಸೆಲ್ ಬೆಲೆ ಇಳಿಸುವ, ಟೋಲ್ ರದ್ದು ಮಾಡುವ ಬೇಡಿಕೆಗಳನ್ನು ಹೊರತುಪಡಿಸಿ, ಉಳಿದ ಬೇಡಿಕೆಗಳನ್ನು ಈಡೇರಿಸುವುದಾಗಿ ಸಚಿವರು ಭರವಸೆ ನೀಡಿದ್ದರಿಂದ ಮುಷ್ಕರ ಅಂತ್ಯಗೊಂಡಿದೆ.

12ನೇ ಪುಟ ನೋಡಿ

ರಾಷ್ಟ್ರಪತಿಗೆ ಕಾಲಮಿತಿ ವಿಧಿಸಿದ್ದಕ್ಕೆ ಧನಕರ್ ಆಕ್ಷೇಪ

'ಸುಪ್ರೀಂ'ನಿಂದ ಅಣ್ವಸ್ತ್ರ ಕ್ಷಿಪಣಿ'

ನವದೆಹಲಿ (ಪಿಟಿಐ): ರಾಷ್ಟ್ರಪತಿಯವರು ತೀರ್ಮಾನ ಕೈಗೊಳ್ಳುವುದಕ್ಕೆ ನ್ಯಾಯಾಂಗವು ಕಾಲಮಿತಿ ವಿಧಿಸಿರುವುದಕ್ಕೆ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಸಂಸತ್ತಿಗೂ ಮಿಗಿಲಾಗಿರುವ ವರ್ತನೆ'ಯನ್ನು ಪ್ರಶ್ನಿಸಿರುವ ಅವರು, ಪ್ರಜಾತಾಂತ್ರಿಕ ಶಕ್ತಿಗಳನ್ನು ಗುರಿಯಾಗಿಸಿಕೊಂಡು ಸುಪ್ರೀಂ ಕೋರ್ಟ್ 'ಅಣ್ವಸ್ತ್ರ ಕ್ಷಿಪಣಿ' ಪ್ರಯೋಗಿಸುವಂತಿಲ್ಲ' ಎಂದು ಹೇಳಿದ್ದಾರೆ.

7ನೇ ಪುಟ ನೋಡಿ

ಎಫ್‌ಐಆರ್ ದಾಖಲಿಸದಿರುವುದಕ್ಕೆ ಪ್ರಶ್ನೆ

ಜಗದೀಪ್ ಧನಕರ್

ಹೈಕೋರ್ಟ್ ಒಂದರ ನ್ಯಾಯಮೂರ್ತಿಯೊಬ್ಬರ ನಿವಾಸದಲ್ಲಿ ಅರ್ಧ ಸುಟ್ಟ ನೋಟಿನ ಕಂತೆಗಳು ಪತ್ತೆಯಾದ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸದೆ ಇರುವುದನ್ನು ಜಗದೀಪ್ ಧನಕರ್ ಪ್ರಶ್ನಿಸಿದ್ದಾರೆ.

'ಕಾನೂನಿಗಿಂತ ಮಿಗಿಲಾಗಿರುವ ವರ್ಗ'ವೊಂದು ಪ್ರಾಸಿಕ್ಯೂಷನ್ ಕ್ರಮದಿಂದ ರಕ್ಷಣೆ ಪಡೆದಿದೆಯೇ ಎಂದೂ ಅವರು ಕೇಳಿದ್ದಾರೆ.

'ಈ ಘಟನೆಯು ಜನಸಾಮಾನ್ಯನೊಬ್ಬನ ಮನೆಯಲ್ಲಿ ಆಗಿದ್ದಿದ್ದರೆ ಎಲೆಕ್ಟ್ರಾನಿಕ್ ರಾಕೆಟ್‌ನ ವೇಗದಲ್ಲಿ ಕೆಲಸ ನಡೆದಿರುತ್ತಿತ್ತು. ಈಗ ಅದು ಎತ್ತಿನಗಾಡಿಯ ವೇಗದಲ್ಲಿಯೂ ಸಾಗುತ್ತಿಲ್ಲ' ಎಂದು ಅವರು ಹೇಳಿದ್ದಾರೆ.

7ನೇ ಪುಟ ನೋಡಿ

MEDICINE
- MBBS **
- MD/ MS/ Dip - 24 Specializations **
- MCH/ DM - 5 Specializations **
- Diploma in Psychosexual Health

Fellowship
- Psychosexual Medicine/ Pain Medicine/ Neonatology/ Critical Care Medicine

B.Sc (Allied Health Sciences)
- Medical Laboratory Technology
- Medical Imaging Technology
- Anaesthesia & Operation Theatre Technology
- Renal Dialysis Technology
- Respiratory Therapy
- Cardiac Care Technology
- Perfusion Technology
- Emergency Medicine Technology
- Physician Assistant
- Optometry
- Forensic Sciences
- Medical Genetics & Counseling (Hon's)
- Bachelor of Occupational Therapy

MPH/ M.Phil/ M.Sc (Medical/ Biomedical)
- Medical Microbiology
- Medical Biochemistry
- Medical Physiology
- Medical Anatomy
- Medical Pharmacology
- Clinical Psychology
- Clinical Embryology
- Medical Genetics and Counseling
- Echocardiography
- Forensic Odontology
- Health Technologies and Data Sciences
- Respiratory Therapy
- Masters in Public Health (MPH)
- Masters in Occupational Therapy in Paediatrics
- Masters in Occupational Therapy in Neurology
- M.Phil Rehabilitation Psychology
- M.Phil Clinical Psychology

DENTISTRY
- BDS **
- MDS - 9 Specializations **

Diploma
- Diploma in Dental Mechatronics
- Dental Operating Room Assistant (DORA)

PHARMACY (MYSURU & OOTY CAMPUS)

Diploma/UG/PG Programmes
- D Pharm
- B Pharm
- B Pharm (Lateral Entry)
- Pharm D
- Pharm D (PB)

M.Pharm
- Pharmaceutics
- Pharmaceutical Quality Assurance
- Regulatory Affairs
- Industrial Pharmacy
- Pharmacy Practice
- Pharmacology
- Pharmaceutical Chemistry
- Pharmaceutical Analysis
- Pharmacognosy
- Pharmaceutical Biotechnology

Clinical Pharmacy Residency Programs
- Infectious Diseases/ Oncology/ Nephrology

Diploma / Certificate Programs

Pharma Diploma - 17 Programs

Certificate
- Medicine Information/ Herbal Drug Standardization/ Clinical Research/ Pharmaceutical Quality Assurance/ Telepharmacy/ GxP

HEALTH SYSTEM MANAGEMENT STUDIES
- BBA Hospital & Health System Management (Hon's)
- MBA Hospital Administration
- MBA Pharmacy Administration
- MBA Information Technology

YOGA
- B.Sc. Yoga
- M.Sc. Yoga
- Yoga Teachers Course (YTC) (3 months)

LIFE SCIENCES (MYSURU & OOTY CAMPUS)

B.Sc Courses (General - 3 Years/ Honours - 4 Years)
- Biotechnology
- Microbiology
- Environmental Sciences
- Food, Nutrition & Dietetics
- Psychology
- Biochemistry
- Statistics & Data Analytics
- Computational Biology & Bioinformatics

M.Sc Courses
- Cognitive Neuroscience
- Environmental Sciences
- Geoinformatics
- Nanoscience & Technology
- Nutrition & Dietetics
- Molecular Biology
- Biochemistry
- Microbiology
- Medical Statistics
- Bioinformatics
- Cosmetic Science
- Sports, Nutrition & Management
- Biotechnology
- Medical Physics
- Master of Library and Information Science (M.Lib & Info. Sc.)

Diploma
- Tissue Culture
- Nutraceutical Technology
- Environment, Health & Safety Management
- Industrial Safety

DISTANCE / ONLINE LEARNING PROGRAMS

Distance Learning
- Diploma in Environment Health & Safety Management
- Diploma in Tissue Culture
- Certificate Program in Statistical Methods & Research Methodology

Online Learning
- MBA Hospital Administration
- MBA Pharmacy Administration
- BBA Hospital and Health System Management
- B.Sc Psychology
- Certificate Programme in Dental Ethics & Jurisprudence
- Certificate Programme in Yoga Instructor
- Certificate program in Immunoinformatics and Vaccine Design

Diploma in
- Pharmacovigilance/ Quality Control/ Bioinformatics/ Regulatory Affairs/ Medical Devices

Ph.D
- Medicine / Dentistry / Pharmacy / Management Studies / Yoga / Life Sciences/ Biomedical Sciences

**Note: The guidance for counselling/ admissions will be given to UG/ PG Medical/ Dental Program. Candidates may apply to NEET entrance test and for online counselling/ seat allotment by Medical Counselling Committee (MCC) website @ www.mcc.nic.in. For more guidance, Please visit JSS AHER Campus or E-mail at - admissions@jssuni.edu.in.

JSS ACADEMY OF HIGHER EDUCATION & RESEARCH

Sri Shivarathreeshwara Nagara, Bannimantap, Mysuru- 570 015, Karnataka, India. | T:0821-2548416/ 400/ 014/ +91 99808 41859 E: admissions@jssuni.edu.in | W: www.jssuni.edu.in | FB: www.fb.com/jssuniversity

ಕಬ್ಬನ್ ಉದ್ಯಾನ: ಪಾರ್ಕಿಂಗ್‌ಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನಕ್ಕೆ ಭೇಟಿ ನೀಡುವ ಸಾರ್ವಜನಿಕರಿಗೆ ಪ್ರತಿ ಭಾನುವಾರ ಮತ್ತು ಹೈಕೋರ್ಟ್ ಕಾರ್ಯನಿರ್ವಹಿಸದೇ ಇರುವ ಶನಿವಾರಗಳಂದು ಹಳೆಯ ಕೆಜಿಐಡಿ ಕಟ್ಟಡದ ಪಕ್ಕದಲ್ಲಿರುವ ಪಾರ್ಕಿಂಗ್ ಪ್ರದೇಶದಲ್ಲಿ ವಾಹನಗಳನ್ನು ನಿಲುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಕಬ್ಬನ್ ಉದ್ಯಾನದ ಇತರೆ ಪಾರ್ಕಿಂಗ್ ಪ್ರದೇಶಗಳಿಗೆ ಅಸ್ತಿತ್ವದಲ್ಲಿರುವ ದರಗಳ ಪ್ರಕಾರ ಪಾವತಿ ಆಧಾರದ ಮೇಲೆ ವಾಹನಗಳನ್ನು ನಿಲುಗಡೆ ಮಾಡಬಹುದು. ಈ ಪ್ರದೇಶದಲ್ಲಿ ಬೆಳಿಗ್ಗೆ 6ರಿಂದ ಸಂಜೆ 6.30ರವರೆಗೆ ವಾಹನ ನಿಲುಗಡೆಗೆ ಅವಕಾಶ ನೀಡಲಾಗಿದೆ

ಕಬ್ಬನ್ ಉದ್ಯಾನಕ್ಕೆ ಭೇಟಿ ನೀಡುವವರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಉದ್ಯಾನಕ್ಕೆ ಹೋಗುವ ರಸ್ತೆಗಳಲ್ಲಿ ವಾಹನ ನಿಲುಗಡೆ ಮಾಡುವುದನ್ನು ತಪ್ಪಿಸಬೇಕು ಎಂದು ಸಂಚಾರ ವಿಭಾಗದ ಪೊಲೀಸರು ಕೋರಿದ್ದಾರೆ.

ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಅನ್ಸಾರಿ ನಗರ, ನವದೆಹಲಿ–110029

ಪರೀಕ್ಷಾ ವಿಭಾಗ

ಪ್ರವೇಶ ಪ್ರಕಟಣೆ ಸಂ. 141/2025

ಏಐಐಎಂಎಸ್, ನವದೆಹಲಿ–ಫೆಲೋಶಿಪ್ ಕಾರ್ಯಕ್ರಮ–ಜುಲೈ 2025ರ ಅವಧಿ

ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ನವದೆಹಲಿ ಇವರು ಜುಲೈ–2025ರ ಅವಧಿಯ ಫೆಲೋಶಿಪ್ ಕಾರ್ಯಕ್ರಮಕ್ಕೆ ಪ್ರವೇಶಾತಿಗಾಗಿ ಆನ್‌ಲೈನ್ (ಸಿಬಿಟಿ) ವಿಧಾನದ ಮೂಲಕ ಪ್ರವೇಶ ಪರೀಕ್ಷೆಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ವಿವರಗಳು ಕೆಳಗಿನಂತಿರುತ್ತವೆ:

ಅರ್ಜಿಗಳ ಆನ್‌ಲೈನ್ ನೋಂದಣಿ ದಿನಾಂಕ	
ನೋಂದಣಿಯ ಆರಂಭಿಕ ದಿನಾಂಕ	ನೋಂದಣಿಗೆ ಕೊನೆಯ ದಿನಾಂಕ
09.04.2025 (ಬುಧವಾರ)	23.04.2025 (ಬುಧವಾರ) (ಸಂಜೆ 5:00 ಗಂಟೆವರೆಗೆ)
ಪ್ರವೇಶ ಪರೀಕ್ಷೆಯ ದಿನಾಂಕ	
10.05.2025 (ಶನಿವಾರ)	ಬೆಳಗ್ಗೆ 10:00 ರಿಂದ 11:00 ಗಂಟೆ

ಮಹತ್ವದ ಸೂಚನೆ: ವಿವರಣಾ ಕೈಪಿಡಿ, ವಿವರವಾದ ಮಾಹಿತಿ ಇತ್ಯಾದಿಗಾಗಿ ದಯವಿಟ್ಟು www.aiimsexams.ac.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಇದಕ್ಕೆ ಸಂಬಂಧಿತ ಎಲ್ಲಾ ತಿದ್ದುಪಡಿ/ಮಾರ್ಪಾಡು/ಅಪ್‌ಡೇಟ್‌ಗಳನ್ನು ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುತ್ತದೆ, ಆದ್ದರಿಂದ ಎಲ್ಲಾ ಅರ್ಜಿದಾರರು ನಿಯಮಿತವಾಗಿ ಸದರಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಬೇಕು.

ಸಹಿ/–
ಸಹಾಯಕ ನಿಯಂತ್ರಕರು (ಪರೀಕ್ಷೆಗಳು)

CBC 17112/12/0003/2526

26–27ಕ್ಕೆ 'ಬಾರಹಮಾಸಿ' ಸಂಗೀತ

ಬೆಂಗಳೂರು: ಬೆಂಗಳೂರು ಕ್ರಿಯೇಟಿವ್ ಸರ್ಕಸ್ ಇದೇ 26 ಮತ್ತು 27ರಂದು 'ಬಾರಹಮಾಸಿ' ಶೀರ್ಷಿಕೆಯಡಿ ಸಂಗೀತ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ಅರೆ ಶಾಸ್ತ್ರೀಯ ಸಂಗೀತವನ್ನು ಕನಕಶ್ರೀ ಭಟ್ ಮತ್ತು ಸಾವ್ನಿ ಭಟ್ ಪ್ರಸ್ತುತ ಪಡಿಸಲಿದ್ದಾರೆ. 26ರಂದು ಸಂಜೆ 6 ಗಂಟೆಗೆ ಯಶವಂತಪುರದಲ್ಲಿರುವ ಬೆಂಗಳೂರು ಕ್ರಿಯೇಟಿವ್ ಸರ್ಕಸ್ ಕೇಂದ್ರದಲ್ಲಿ, 27ರಂದು ಬೆಳಿಗ್ಗೆ 11 ಗಂಟೆಗೆ ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

12 ವಿಭಿನ್ನ ಶೈಲಿಯನ್ನು ಈ ಸಂಗೀತ ಪ್ರಸ್ತುತಿ ಒಳಗೊಂಡಿದೆ. ಇಬ್ಬರೂ ಗಾಯಕಿಯರು ಸಂಗೀತದ ಹಿನ್ನೆಲೆಯ ಕುಟುಂಬಗಳಿಂದ ಬಂದವರಾಗಿದ್ದಾರೆ. ಕನಕಶ್ರೀ ಅವರು ದಿವಂಗತ ಪಂಡಿತ್ ಬಂಡುಭಯ್ಯಾ ಚೌಘುಲೆ ಅವರ ಮೊಮ್ಮಗಳಾಗಿದ್ದರೆ, ಕಥಕ್ ನರ್ತಕಿಯೂ ಆಗಿರುವ ಹಿನ್ನೆಲೆ ಗಾಯಕಿ ಸಾವ್ನಿ ಅವರು ಸಂಗೀತ ಸಂಯೋಜಕಿಯೂ ಆಗಿದ್ದಾರೆ.

ಕನಕಶ್ರೀ ಭಟ್ ಮತ್ತು ಸಾವ್ನಿ ಭಟ್

ತಬಲಾದಲ್ಲಿ ಅಕ್ಷಯ್ ಜಾಧವ್ ಮತ್ತು ಹಾರ್ಮೋನಿಯಂನಲ್ಲಿ ಪ್ರಸಾದ್ ಕಾಮತ್ ಸಾಥ್ ನೀಡಲಿದ್ದಾರೆ.

bookmyshow.com ಮತ್ತು bangaloreinternationalcentre.org ಯಲ್ಲಿ ಕಾರ್ಯಕ್ರಮದ ಟಿಕೆಟ್ ಲಭ್ಯ ಎಂದು ಪ್ರಕಟಣೆ ತಿಳಿಸಿದೆ.

ಪಿಯುಸಿ ಸಾಧಕರು: ಶ್ರೀ ವೆಂಕಟೇಶ್ವರ ಪಿ.ಯು. ಕಾಲೇಜು, ಕೆ.ಆರ್. ಪುರ

ಅರ್ಚನಾ ಪಿ.ಕೆ. (ಶೇ 96)

ಲಕ್ಷ್ಮಿ ಎನ್. (ಶೇ 95.50)

ತೇಜಸ್ವಿನಿ ಎಂ. (ಶೇ 94.83)

ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿಯಲ್ಲಿ ಉತ್ತಮ ಅಂಕ ಗಳಿಸಿದ ಪೌರಕಾರ್ಮಿಕರ ಮಕ್ಕಳನ್ನು ಗುರುವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಸನ್ಮಾನಿಸಲಾಯಿತು

ದುರುಪಯೋಗಕ್ಕೆ ಅವಕಾಶವಿಲ್ಲ: ಉಮಾಶಂಕರ್ ಭರವಸೆ

ಮೇ 1ಕ್ಕೆ ಪೌರಕಾರ್ಮಿಕರ ಕಾಯಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇರ ವೇತನ ಪೌರಕಾರ್ಮಿಕರಲ್ಲಿ 2,692 ಮಂದಿಯ ಸೇವೆಯನ್ನು ಕಾಯಂ ಮಾಡುವ ಪ್ರಕ್ರಿಯೆಯನ್ನು ದೂರು, ಮೋಸ, ಮತ್ತು ದುರುಪಯೋಗಗಳಿಲ್ಲದಂತೆ ನಡೆಸಲಾಗಿದೆ. ಬಹುತೇಕ ಅಂತಿಮ ಹಂತಕ್ಕೆ ಬಂದಿದ್ದು, ಮೇ 1ರಂದು ಆದೇಶ ಪತ್ರ ವಿತರಿಸಲಾಗುವುದು ಎಂದು ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ತಿಳಿಸಿದರು.

ಬಿಬಿಎಂಪಿ ಗುರುವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

30 ವರ್ಷಗಳ ಬಳಿಕ ದೊಡ್ಡ ಪ್ರಮಾಣದಲ್ಲಿ ಪೌರ ಕಾರ್ಮಿಕರ ಸೇವೆ ಕಾಯಂಗೊಳಿಸುವ ಪ್ರಕ್ರಿಯೆ ನಡೆಸಲಾಗುತ್ತಿದೆ. ಈ ಪೌರಕಾರ್ಮಿಕರು ಮುಂದಿನ ದಿನಗಳಲ್ಲಿ ನೆಮ್ಮದಿಯ ಜೀವನ ಸಾಗಿಸಲು ಅನುಕೂಲವಾಗುತ್ತದೆ ಎಂದು ಹೇಳಿದರು.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, 'ಸಮಾಜದಲ್ಲಿ ಎಲ್ಲಿಯವರೆಗೆ ಅಸಮಾನತೆ ಇರುತ್ತದೆಯೋ ಅಲ್ಲಿಯವರೆಗೆ ಸಂಘರ್ಷ ಇರುತ್ತದೆ' ಎಂದು ಪ್ರತಿಪಾದಿಸಿದರು.

ಅಂಬೇಡ್ಕರ್ ಕುರಿತ ಪುಸ್ತಕಗಳನ್ನು ಓದಿ, ಅರಿತುಕೊಳ್ಳಬೇಕು. ಅವರ ವ್ಯಕ್ತಿತ್ವವನ್ನು ಎಲ್ಲರಿಗೂ ಪರಿಚಯಿಸಬೇಕು ಎಂದು ಸಲಹೆ ನೀಡಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿಯಲ್ಲಿ ಉತ್ತಮ ಅಂಕ ಗಳಿಸಿದ ಪೌರಕಾರ್ಮಿಕರ 46 ಮಕ್ಕಳನ್ನು ಸನ್ಮಾನಿಸಿ 'ಬಿ.ಆರ್ ಅಂಬೇಡ್ಕರ್ ಅವರ ವಿಚಾರಗಳು' ಪುಸ್ತಕ ವಿತರಿಸಲಾಯಿತು. ಪಾಲಿಕೆಯ ಎಂಟು ವಲಯಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ 17 ಪೌರಕಾರ್ಮಿಕರನ್ನು ಗೌರವಿಸಲಾಯಿತು.

ಅಂಬೇಡ್ಕರ್ ಜಯಂತಿ ಪ್ರಯುಕ್ತ ಕಾಯಂ ಪೌರಕಾರ್ಮಿಕರಿಗೆ ₹22,000 ಹಾಗೂ ನೇರ ವೇತನ ಪೌರಕಾರ್ಮಿಕರಿಗೆ ₹ 8,000 ಬೋನಸ್ ನೀಡಲಾಯಿತು.

ವಿಶೇಷ ಆಯುಕ್ತರಾದ ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹಲೋತ್, ವಲಯ ಆಯುಕ್ತರಾದ ಸತೀಶ್, ಕರೀಗೌಡ, ಉಪ ಆಯುಕ್ತ ಮಂಜುನಾಥ ಸ್ವಾಮಿ, ಪೌರಕಾರ್ಮಿಕರು ಉಪಸ್ಥಿತರಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ–1, ಎನ್.ಆರ್. ಚೌಕ, ಬೆಂಗಳೂರು – 560002

ನಂ.: ಬಿಬಿಎಂಪಿ/ಮು.ಆಯುಕ್ತರು/ಪಿಎಸ್‌ಆರ್(ಜಿ)/97/2025–26 ದಿನಾಂಕ: 15.04.2025

ಸಾರ್ವಜನಿಕ ಪ್ರಕಟಣೆ

ಫಾರಂ–III (ನಿಯಮ–3ರ ಉಪನಿಯಮ(3)ನ್ನು ನೋಡಿ)

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ರಡಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, 30.00 ಮೀ.ಗಳ ಅಗಲಕ್ಕೆ ಮಾಸ್ಟರ್ ಪ್ಲಾನ್–2015ರ ಅನುಮೋದನೆಯ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು **ಕುಂದಲಹಳ್ಳಿ (ಹಳೇ ಏರ್‌ಪೋರ್ಟ್ ರಸ್ತೆ) ಯಿಂದ ಗುಂಜೂರು ಪಾಳ್ಯದವರೆಗೆ ಬಿಡಬ್ಲ್ಯುಎಸ್‌ಎಸ್‌ಬಿ ಟ್ರೀಟ್‌ಮೆಂಟ್ ಪ್ಲಾಂಟ್ (ಗುಂಜೂರು ಪಾಳ್ಯ ಮುಖ್ಯರಸ್ತೆ ವರೆಗಿನ ರಸ್ತೆ) ಮೂಲಕ 30.00 ಮೀಟರ್ ರಸ್ತೆ ಅಗಲೀಕರಣ ಮತ್ತು ನಿರ್ಮಾಣಕ್ಕಾಗಿ** ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಡೆಪ್ಯೂಟಿ ಕಮಿಷನರ್‌ರವರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲಿಕರ ಪಟ್ಟಿ

Name of the District: **Bengaluru Urban** — Name of the Taluk: **Bengaluru East** — Name of the Village: **Gunjuru**

Sl. No.	Sy. No. / Khata No.	Type of land: Vacant	Type of land: Built up	Nature of Land: Agriculture	Nature of Land: Converted undeveloped	Nature of Land: Approved layout / developed land Building Site	Dimension of the land / plot and extent in Sq.m: Dimension	Dimension of the land / plot and extent in Sq.m: Extent	Boundaries: North	Boundaries: South	Boundaries: East	Boundaries: West	Building Details: Extent in Sq.m	Building Details: Type of Construction and No. of floors	Building Details: Floor Area Ratio	Present activity on land / Building (Specify Specific activity such as shop, office, factory, apartment, individual house etc.,)	Market (guide lines) value of the land per Sq.m	Name and address of the owner of the plot / land for which DRC is to be issued.
1	Sy No: 117/1, BBMP KhathaSl No:10657, Municipal No.411	Vacant land			Converted A Khata Land		411.65 Sqm		Sy No.117/10	Sy No.110	Remaining Portion of Sy No.117/1	Road (Balagere Village Boundary)	None	None	None	Vacant	50.000/- per Sqm	Mr.P.B.Ramachandrappa S/o Late. Sri.Bisanna, Residing at No.34, 4th Cross, Near Maramma Temple, Gunjur Palya, Varthur Hobli, Bangalore-560087.

ಗಮನಿಸಿ: ಈ ಆಸ್ತಿಯ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯವನ್ನು ಸರ್ಕಾರಿ ಆದೇಶ ಸಂಖ್ಯೆ: ನಅಇ 137 ಎಂಎನ್‌ಯು 2024 (ಇ), ದಿನಾಂಕ:09.09.2024 ಮತ್ತು ಆದೇಶ ಸಂಖ್ಯೆ ಆಯುಕ್ತರು/ಪಿಎಸ್.ಆರ್/ಜಿ/1802/2024–25, ದಿನಾಂಕ: 21.09.2024ರ ಪ್ರಕಾರ ಶುಲ್ಕ ಪಾವತಿಯ ಷರತ್ತುಗಳಿಗೆ ಒಳಪಟ್ಟಿರುತ್ತದೆ ಎಂದು ಪರಿಗಣಿಸಲಾಗುತ್ತದೆ.

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು.

ವಿಭಾಗ / ಉಪ–ವಿಭಾಗ / ಶಾಖಾ ಕಛೇರಿಗಳ ಹೆಸರು ಮತ್ತು ವಿಳಾಸ	ಡೆಪ್ಯೂಟಿ ಕಮಿಷನರ್ ಭೂಸ್ವಾಧೀನ & ಟಿಡಿಆರ್, 2ನೇ ಮಹಡಿ, ಕೊಠಡಿ ಸಂ. 208, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560002

ಸಹಿ/–,
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಗರದಲ್ಲಿ ಇಂದು

'ವರನಟ ಡಾ. ರಾಜಕುಮಾರ್' ಪ್ರಶಸ್ತಿ ಪ್ರದಾನ: ಎಚ್.ಎಸ್. ರಾಘವೇಂದ್ರ ರಾವ್, ಪ್ರಶಸ್ತಿ ಸ್ವೀಕರಿಸುವವರು: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎಸ್.ವಿ. ರಾಜೇಂದ್ರಸಿಂಗ್ ಬಾಬು, ಅತಿಥಿ: ಕೆ. ಮೋಹನ್‌ರಾವ್, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ರಾಘವ ರಾಮ ಎಲ್. ಮತ್ತು ತಂಡ, ಪರಂಪರಾ ಜುಗಲಬಂದಿ: ವಿಶ್ವಮೋಹನ್ ಭಟ್, ಮೈಸೂರು ಮಂಜುನಾಥ್, ಸಲೀಲ್ ಭಟ್, ಸುಮಂತ್ ಮಂಜುನಾಥ್, ಯಲ್ಲಾ ವೆಂಕಟೇಶ್ವರ ರಾವ್, ಹಿಮಾಂಶು ಮಹಾಂತ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ, ಚಾಮರಾಜಪೇಟೆ, ಸಂಜೆ 5

ವಾದ್ಯ ವೈಭವ–2025: ಕೊಳಲು ವಾದನ: ಕುಲೂರ್ ರವಿಚಂದ್ರ, ಪಿಟೀಲು: ಸಿಂಧು ಸುಚೇತನ್, ಮೃದಂಗ: ಆರ್. ಅದಮ್ಯ, ಕಿ–ಬೋರ್ಡ್: ಪಾಲ್ಘಾಟ್ ಶ್ರೀರಾಮ್, ಪಿಟೀಲು: ಬಿ.ಕೆ. ರಘು, ಮೃದಂಗ: ಅನಿರುದ್ಧ ಭಟ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಸಂಜೆ 5.30ರಿಂದ

ಸಮ್ಮಿಲನ ಮಿಕ್ಸ್ ಮ್ಯೂಸಿಕ್: ಅತಿಥಿಗಳು: ವಿಲಾಸ್, ಸುಧೀಂದ್ರ, ಸುಶೀಲಾ ರಾವ್, ಭರತನಾಟ್ಯ ಪ್ರದರ್ಶನ: ಕ್ಷಿತಿಜ ಕಾಸರವಳ್ಳಿ, ಅಭ್ರೂಣಿ ಎಸ್. ಮೇಘನಾ ಎಂ., ಶ್ರೇಯಾ ಎಂ. ಪೂಜಾರಿ, ಭವ್ಯಾ ಮಂಜುನಾಥ್, ಅನುಷಾ, ವಿಭಾ, ಕಾವ್ಯ, ಅದಿತಿ, ಜಾಹ್ನವಿ, ದುರ್ವಿಕಾ, ಸಂಗಮಿತ್ರಾ, ಆಯೋಜನೆ: ಆರೋಹಣ, ಸ್ಥಳ: ಪ್ರಯೋಗ ಸ್ಟುಡಿಯೋ, ಥಿಯೇಟರ್, ಬನಶಂಕರಿ 3ನೇ ಹಂತ, ಸಂಜೆ 5.30

'ಭಕ್ತಿ ಮತ್ತು ಸಾಹಿತ್ಯ' ಉಪನ್ಯಾಸ: ಲಕ್ಷ್ಮೀಶ ತೋಳ್ಪಾಡಿ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 6

ದಿಯಾ

ನೃತ್ಯ ಪ್ರದರ್ಶನ: ದಿಯಾ ಉದಯ್, ಆಯೋಜನೆ ಮತ್ತು ಸ್ಥಳ: ವಿದ್ಯಾ ಗಣಪತಿ ದೇವಸ್ಥಾನ, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 7.45

'ಜಾತಿಗಣತಿ: ಸಿಎಂ ಹುಡುಗಾಟಿಕೆ'

ವಿಜಯಪುರ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಜಾತಿ ಗಣತಿ ಬಗ್ಗೆ ಪ್ರಾಮಾಣಿಕ ಕಳಕಳಿ ಇಲ್ಲ. ಹಿಂದುಳಿದ ಸಮುದಾಯಗಳಿಗೆ ನ್ಯಾಯ ಕೊಡಬೇಕು ಎಂಬ ಇಚ್ಛಾಶಕ್ತಿಯೂ ಇಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಇನ್ನೂ ನಾಲ್ಕು ವರ್ಷವಾದರೂ ಜಾತಿ ಗಣತಿ ವರದಿ ಬಗ್ಗೆ ಕಾಂಗ್ರೆಸ್ ಸರ್ಕಾರ ಯಾವುದೇ ತೀರ್ಮಾನ ಕೈಗೊಳ್ಳುವುದಿಲ್ಲ. ಸಿದ್ದರಾಮಯ್ಯ ಅವರು ತಮ್ಮ ಕುರ್ಚಿ ಭದ್ರ ಮಾಡಿಕೊಳ್ಳಲು ಜಾತಿ ಗಣತಿ ವಿಷಯದಲ್ಲಿ ಹುಡುಗಾಟಿಕೆ ನಡೆಸಿದ್ದಾರೆ. ಸಮಾಜಗಳ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡಿದ್ದಾರೆ. ಈ ರೀತಿ ಹುಡುಗಾಟಿಕೆ ಮಾಡುವುದನ್ನು ನಿಲ್ಲಿಸಬೇಕು' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಬ್ಲೂಗ್ರೀನ್ ಪ್ರಶಸ್ತಿಗೆ ಅರ್ಜಿ: ಅವಧಿ ವಿಸ್ತರಣೆ

ಬೆಂಗಳೂರು: ಸುಸ್ಥಿರತೆ ಮತ್ತು ಹವಾಮಾನ ಸ್ಥಿತಿ ಸ್ಥಾಪಕತ್ವಕ್ಕೆ ಅರ್ಥಪೂರ್ಣ ಕೊಡುಗೆ ನೀಡಿದವರಿಗೆ ಬೆಂಗಳೂರು ಹವಾಮಾನ ಕ್ರಿಯಾ ಕೋಶದಡಿ ನೀಡುವ 'ಬ್ಲೂ ಗ್ರೀನ್ ಪ್ರಶಸ್ತಿ ಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಏಪ್ರಿಲ್ 20ರವರೆಗೆ ವಿಸ್ತರಿಸಲಾಗಿದೆ ಎಂದು ಹವಾಮಾನ ಕ್ರಿಯಾಕೋಶದ ಅಧ್ಯಕ್ಷೆ ಪ್ರೀತಿ ಗೆಹಲೋತ್ ತಿಳಿಸಿದ್ದಾರೆ.

'ಬ್ಲೂ ಗ್ರೀನ್' ಪ್ರಶಸ್ತಿಗಳಿಗೆ ನಿರೀಕ್ಷೆಗಿಂತ ಕಡಿಮೆ ಅರ್ಜಿಗಳು ಬಂದಿವೆ. ಜೂನ್ 5ರಂದು ವಿಶ್ವ ಪರಿಸರ ದಿನಾಚರಣೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಹವಾಮಾನ ಕ್ರಿಯೆ ಕುರಿತು ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿ, ಸಮುದಾಯ, ಸಂಸ್ಥೆ, ಹವಾಮಾನ ಕ್ರಿಯೆಗೆ ಕೊಡುಗೆ ನೀಡುವ ಮಧ್ಯವರ್ತಿಗಳು https://forms.gle/LEeKpUuWP1eU8qyF6 ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದು. ಮೊದಲ ಸುತ್ತಿನಲ್ಲಿ ಅರ್ಜಿ ಸಲ್ಲಿಸಿದವರು ಮತ್ತೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಹವಾಮಾನ ಕ್ರಿಯಾ ಕೋಶದ ವೆಬ್‌ಸೈಟ್, ಸಾಮಾಜಿಕ ಮಾಧ್ಯಮ ಮತ್ತು ವಾಟ್ಸ್‌ಆ್ಯಪ್ ಗುಂಪುಗಳ ಮೂಲಕ ವಿವರಗಳನ್ನು ಹಂಚಿಕೊಳ್ಳಲಾಗುವುದು. ಮಾಹಿತಿಗಾಗಿ bbmpclimateactioncell@gmail.com ಇದಕ್ಕೆ ಮೇಲ್ ಮಾಡಬಹುದು ಎಂದು ತಿಳಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

TEACHERS WANTED
Teacher's wanted to Teach all Subjects For Englsh medium High School and LKG to 7 Std.
Qualification any Degree, DEd/ BEd/ CPEd/ BPEd With good fluency in English.
Contact immediately
NBN Vidyamandira,
Weavers Colony, Bannerugatta Road, Bengaluru- 560083.
9341247744

Graphic Designers

WANTED MALE Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 9845579620

REAL ESTATE SELLING

Industrial & Factory

Mysore Road

SALE INDUSTRIAL CONVERSION LAND 2.14 ACRES RAMANAGARA MYSORE ROAD HIGHWAY FACING 4.90Cr/ Acre Karthik 9741501616

Sites

Intl Airport Road

30x40 Converted Plots @ 2,50,000/-
208/- per sq.ft, 90 minutes Journey from Yelahanka
Clear Documents | Ready for Registration
9343510635 | 9010559539

Vishweshwariah Layout

BDA SITE SALE. Vishveshwarya Layout 6th Block, 40x60 N/F, 100% Vastu. Brokers Excuse. Genuine Buyers Contact: 8105688602.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, Sampradan Varma @ Samarpan Varma, residing at No.312/4, Near Henneshwara Swamy Temple, Chikkabidarakallu, Bengaluru North-560073, declare that the above names pertain to me only & henceforth I shall be known as SAMARPAN VARMA vide affidavit dated 03-03-2025, sworn before Notary T.V. Bhadravijaya, Bengaluru.

PROPERTY CORNER

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 89713-79031 / 96111-99900

CHANGE OF NAME
I, B.R. Vanishree, residing at No.448, 2nd Cross, Ist Block, 3rd Stage, Basveshwarnagar, Bengaluru - 560079, have changed my name to B.R. VANISREE vide affidavit dated 16-04-2025, sworn before Notary Renuka C, Bengaluru. Henceforth I shall be called B.R. VANISREE only

CHANGE OF NAME
I, CHIRANJEEVI S alias CHIRANJIVI S PUJARI, S/o Siddappa Pujari R/o No. 815, Kayvalya Marga, Siddhartha Nagar, Mysore-570011. I have changed my name from CHIRANJEEVI S alias CHIRANJIVI S PUJARI to CHIRRANJEEVI SIDDAPPA PUJARI vide affidavit dated 17-04-2025 Sworn before Notary S.V. Nagendra, Mysore.

I, ANDANAPPA BASAPPA KIRESUR R/a Flat.#427, 4th Floor Lotus Eden Blossom Apartments Lalbahadur Shastri Nagar Bengaluru 560083 have changed name ANAND KIRESUR vide affidavit 17.04.2025 before Notary Hemalatha, Bengaluru.

Lost

DOCUMENT LOST
I, K B VISHWANATH R/a House No.787 10th A main Road Shaktiganapathi Nagar ward. 4th Block, Basaveshwaranagar. Bengaluru -79 have lost the Original B.D.A sale deed, document No/ identification Registration No.3081 Book No.01 volume No 1298, Page No 41-42 dated 31-10-1991 while in transit. If found Please Contact : 9353999063

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact | ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com BOOK NOW
*Conditions apply
For more details contact:
+91 9731810277 | +91 9845114560 | +91 9900428036

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. SBC-GSU-ENGG-2025-01

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬಂಗಾರಪೇಟೆ – ಕುಪ್ಪಂ ವಿಭಾಗದ ನಡುವೆ ಗುಡುಪಲ್ಲೆಯಲ್ಲಿ ಕಿಮೀ. 259/900–260/000 ರಲ್ಲಿ ಎಲ್‌ಸಿ ನಂ. 103 ಕ್ಕೆ ಬದಲಾಗಿ ಲಿಮಿಟೆಡ್ ಹೈಟ್ ಸಬ್‌ವೇ (ಎಲ್‌ಹೆಚ್‌ಎಸ್) ನೊಂದಿಗೆ ಆರ್‌ಓಬಿ ಯ ನಿರ್ಮಾಣ.	ರೂ. 22,04,27,053.27

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.05.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಯೋಜನಾ ವ್ಯವಸ್ಥಾಪಕರು, ಗತಿ ಶಕ್ತಿ ಬೆಂಗಳೂರು

PUB/48/AAF/PRB/SWR/2025-26

South Western Railway - SWR | @SWRRLY | SWRRLY

ರಾಷ್ಟ್ರೀಯ ತೋಟಗಾರಿಕೆ ಮಂಡಳಿ

राष्ट्रीय बागवानी बोर्ड National Horticulture Board

ಕೃಷಿ ಮತ್ತು ಕೃಷಿಕರ ಕ್ಷೇಮಾಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ
85, ಇನ್‌ಸ್ಟಿಟ್ಯೂಷನಲ್ ಏರಿಯಾ, ಸೆಕ್ಟರ್–18, ಗುರುಗ್ರಾಮ–122015

ಮಲ್ಟಿ ಕೊಮೊಡಿಟಿ ಹೈ ವಾಲ್ಯೂ ಕ್ಲಸ್ಟರ್ ಅಂಡ್ ಪೆರಿ ಅರ್ಬನ್ ಕ್ಲಸ್ಟರ್ಸ್ ಪ್ರೊಗ್ರಾಮ್ ಅಡಿಯಲ್ಲಿ ಪ್ರಸ್ತಾವನೆಗಳಿಗಾಗಿ ಆಹ್ವಾನ ಪ್ರಕಟಣೆ

1. https://www.nhb.gov.in ನಲ್ಲಿ ಲಭ್ಯವಿರುವ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ, ಮಲ್ಟಿ ಕೊಮೊಡಿಟಿ ಹೈ ವಾಲ್ಯೂ ಕ್ಲಸ್ಟರ್ ಅಂಡ್ ಪೆರಿ ಅರ್ಬನ್ ಕ್ಲಸ್ಟರ್ಸ್ ಪ್ರೊಗ್ರಾಮ್ ಅಡಿಯಲ್ಲಿನ ಯೋಜನೆಗಳ ಸ್ಥಾಪನೆಗಾಗಿ, ಸಂಭಾವ್ಯ ಉದ್ಯಮಶೀಲರಿಂದ/ಅನುಷ್ಠಾನ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.
2. ವಿವರವಾದ ಇಓಐ ದಸ್ತಾವೇಜನ್ನು ಎನ್‌ಎಚ್‌ಬಿ'ರವರ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು (https://www.nhb.gov.in)
3. ಸಂಸ್ಥೆಗಳು ತಮ್ಮ ಅರ್ಜಿಗಳನ್ನು ಸಂಬಂಧಿತ ವಿವರಗಳ ಸಮೇತ ಇಲ್ಲಿ ಸಲ್ಲಿಸಬಹುದು https://www.nhb.gov.in/OnlineApplication/Online Registration Intermediate Page.aspx
4. ಖುದ್ದಾಗಿಯಾಗಲಿ ಅಥವಾ ಇನ್ನಿತರ ಯಾವುದೇ ರೀತಿಯಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
5. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15/05/2025.
6. 06/05/2025 ರಂದು ಹೈಬ್ರಿಡ್ ವಿಧಾನದಲ್ಲಿ ಬಿಡ್‌ಪೂರ್ವ ಸಭೆ ಹಮ್ಮಿಕೊಳ್ಳಲಾಗುತ್ತದೆ.
7. ಏಪ್ರಿಲ್ 2025ರ ಬಳಿಕ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಅಗತ್ಯವಾದ ಲಿಂಕ್ ಲಭ್ಯವಾಗುತ್ತದೆ ಮತ್ತು ಕ್ರಿಯಾಶೀಲವಾಗುತ್ತದೆ.
8. ಇನ್ನಿತರ ಯಾವುದೇ ಸ್ಪಷ್ಟೀಕರಣಗಳಿಗಾಗಿ, ಅರ್ಜಿದಾರರು ಈ ವಿಳಾಸಕ್ಕೆ ಬರೆಯಬಹುದು clusters.nhb@gov.in

(ಡಾ. ವಿಜಯ ಕುಮಾರ್ ದೊಹರೆ)
ಸಹಾಯಕ ವ್ಯವಸ್ಥಾಪಕ ನಿರ್ದೇಶಕರು
(ಪ್ರಭಾರಿ ಸಿಡಿಪಿ)

ದಿನಾಂಕ: 17.04.2025
ಸ್ಥಳ: ಗುರುಗ್ರಾಮ
cbc01113/12/0001/2526

IN THE HON'BLE 30th ADDL CITY CIVIL AND SESSIONS JUDGE AT BENGALURU

O S. No. 3669/2024 (CCH-31)

PLAINTIFF : Smt. Arokia Mary, aged about 58 years, W/o Late Shri Krishna Murthy, Residing at Flat No. FF-E 5, Akash Residency Apartment, Chellikere, Kalyan Nagar, Bengaluru-560043. **- V/s -**

DEFENDANTS: D1.M/s JABM One Source Pvt. Ltd, D2. Mr. Kadhiravan .M, D3. Smt. Sunitha Varghese.

NOTICE/SUMMONS TO THE DEFENDANTS 1to 3 U/O V RULE 20(1A) R/W SECTION 151 OF CPC

1. M/s JABM One Source Pvt. Ltd, 2nd Main Road, Nila Investment Layout Bettadasanapura, Electronic City Phase 1 Bengaluru, Karnataka-560100, PAN NO. AAECJ1794K, GSTIN 29AAECJ1794K1Z1, Rept By its General Manager. **2. Mr. Kadhiravan. M,** aged about 42 years, S/o Madhiyazagan Residing at No. 508, Periyar Nagar, BSA Road, Near Rama Temple, Bangalore, Karnataka- 560005. **3. Smt. Sunitha Varghese,** W/o Shankar Reddy, Residing at Akash Residency Apartment, Chellikere, Kalyan Nagar, Bangalore-560043.

Whereas, the Plaintiff above named have instituted a Suit Under Order VII Rule 1 Read with section 26 of the Civil Procedure Code-1908 seeking for Permanent injunction against the Defendants. Notice is hereby given to M/s Jabm One Source Pvt. Ltd, Kadhiravan and Sunitha Varghese the Defendants in the above case to appear in court in person or through an advocate at on **28-04-2025** at 11:00 A.M Failing wherein the said Suit will be heard and determined ex-parte

SCHEDULE PROPERTY

All that piece and parcel of the premises bearing Flat No. FF-E5, Akash Residency Apartments, Chellikere, Kalyannagar, Bengaluru, Karnataka 560043 consisting of one hall, one Kitchen, 3 bedrooms, toilet and bathroom attached with electricity and water facilities Bounded by: **East by:** Private Property, **West by**: 25 feet private Road, **North by:** Road, **South by**: Remaining position of Property,

Given under my hand and seal of the court on 03-04-2025.

By order of the Court, Senior Sheristedar, City Civil Court, Bengaluru.

JOSEPH ANIL KUMAR. A, Advocate

‘ಎಚ್‌ಡಿಕೆ ಚರಿತ್ರೆ ಇನ್ನೂ ಬಿಚ್ಚಿಟ್ಟಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್‌.ಡಿ. ಕುಮಾರಸ್ವಾಮಿ ಅವರ ಚರಿತ್ರೆಯನ್ನು ನಾನಿನ್ನೂ ಬಿಚ್ಚಿಡಲು ಶುರು ಮಾಡಿಲ್ಲ. ಅವರಂತೆ ನಾನು ಗೊಡ್ಡು ಬೆದರಿಕೆ ಹಾಕುವವನಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ವಿರುದ್ಧ ರಾಜ್ಯ ಕಾಂಗ್ರೆಸ್ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, ‘ಎಲ್ಲ ರೀತಿಯ ಬೆಲೆ ಏರಿಕೆಗೆ ಕೇಂದ್ರ ಸರ್ಕಾರವೇ ಕಾರಣ. ರಾಜ್ಯದ ಬಿಜೆಪಿ ಮತ್ತು ಜೆಡಿಎಸ್ ಸಂಸದರು ಈ ಬಗ್ಗೆ ಚಕಾರ ಎತ್ತುತ್ತಲೇ ಇಲ್ಲ. ಕೇಂದ್ರ ಸಚಿವ ಕುಮಾರಸ್ವಾಮಿಯಂತೂ ಮೋದಿ ಅವರಿಗೆ ಹೇಳಿ ಬೆಲೆ ಇಳಿಸುವ ಬದಲು ನನ್ನ ವಿರುದ್ಧ ಟನ್‌ಗಟ್ಟಲೆ ದಾಖಲೆಗಳನ್ನು ಬಿಡುಗಡೆ ಮಾಡುತ್ತಾರಂತೆ’ ಎಂದರು.

‘ಟನ್‌ಗಟ್ಟಲೆ ದಾಖಲೆಗಳನ್ನು ಇಟ್ಟುಕೊಂಡಿದ್ದರೆ, ಲಾರಿಗಳಲ್ಲಿ ರಾಜ್ಯಪಾಲರ ಬಳಿ ಕಳುಹಿಸುತ್ತಿಲ್ಲವೇಕೆ? ಮಿಸ್ಟರ್ ಕುಮಾರಸ್ವಾಮಿ, ಈ ಡಿ.ಕೆ. ಶಿವಕುಮಾರ್ ನಿನ್ನ ಹಾಗೂ ಬಿಜೆಪಿಯ ಗೊಡ್ಡು ಬೆದರಿಕೆಗೆ ಹೆದರುವ ಮಗ ಅಲ್ಲ. ನಮ್ಮ ಕಷ್ಟ, ನಮ್ಮ ಶ್ರಮ, ನಮ್ಮ ಬದುಕು, ನಾವು ಆಸ್ತಿ ಮಾಡಿಕೊಳ್ಳುತ್ತೇವೆ. ಅದರ ಸತ್ಯಾಸತ್ಯತೆ ಸರ್ಕಾರ ಪರಿಶೀಲನೆ ಮಾಡಲಿ. ನಾನು ನಿನ್ನ ಚರಿತ್ರೆಯನ್ನು ಇನ್ನೂ ಬಿಚ್ಚಿಲ್ಲ. ನಿಮ್ಮ ಅಣ್ಣ ತಮ್ಮಂದಿರ ಆಸ್ತಿ ಎಲ್ಲಿಂದ ಬಂತು ಎಂಬುದನ್ನು ನಾನಿನ್ನು ಬಿಚ್ಚಿಟ್ಟಿಲ್ಲ’ ಎಂದು ವಾಗ್ದಾಳಿ ನಡೆಸಿದರು.

ಶಿವಕುಮಾರ್

‘ಬಿಜೆಪಿಯ ಕೀಳು ವ್ಯಕ್ತಿಯೊಬ್ಬ ನನ್ನ ವಿರುದ್ಧ ರಾಜ್ಯಪಾಲರಿಗೆ ದೂರು ಕೊಟ್ಟಿದ್ದಾನೆ. ವಿಧಾನಸೌಧದಲ್ಲಿ ಅತ್ಯಾಚಾರ ಎಸಗಿದ ಸಂಬಂಧ ಆತನ ವಿರುದ್ಧ ಪ್ರಕರಣಗಳಿವೆ. ಎಲ್ಲವೂ ಸಾಬೀತಾಗುತ್ತಿವೆ. ಆತ ಆಡಿರುವ ಮಾತುಗಳು ಸಾಬೀತಾಗಿವೆ. ಇವರ ಆಟಗಳೆಲ್ಲಾ ನಡೆಯುವುದಿಲ್ಲ. 2028ಕ್ಕೆ ನಾವೇ ಅಧಿಕಾರಕ್ಕೆ ಬರುತ್ತೇವೆ’ ಎಂದರು.

ಜನಿವಾರಕ್ಕೆ ಕತ್ತರಿ ಹಾಕಿದ್ದಕ್ಕೆ ಖಂಡನೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಪರೀಕ್ಷಾ ಕೇಂದ್ರದಲ್ಲಿ ಸಿಇಟಿ ಬರೆಯುತ್ತಿದ್ದ ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರವನ್ನು ತಪಾಸಣೆಯ ನೆಪದಲ್ಲಿ ಕಿತ್ತುಹಾಕಿದ ಅಧಿಕಾರಿಗಳ ವರ್ತನೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಖಂಡಿಸಿದೆ.

ಜನಿವಾರ ಕಿತ್ತುಹಾಕಿದ ಅಧಿಕಾರಿಯನ್ನು ಅಮಾನತುಗೊಳಿಸಬೇಕು. ಬೇಷರತ್ ಕ್ಷಮೆಯಾಚಿಸಬೇಕು. ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್ ಒತ್ತಾಯಿಸಿದ್ದಾರೆ.

2,100 ಕುಂಡಗಳ ಹವನ ಯಾಗ ಇದೇ 20ರಂದು

ಬೆಂಗಳೂರು: ನಗರದ ಅಘನ್ಯ ಗುರುಕುಲ ಪ್ರತಿಷ್ಠಾನವು ಪ್ರಯಾಗರಾಜ್‌ನ ವಿಹಂಗಮ ಯೋಗ ಸಂಸ್ಥಾನದ ಸಹಯೋಗದೊಂದಿಗೆ ಏಪ್ರಿಲ್ 20ರಂದು 2,100 ಕುಂಡಗಳ ಹವನ ಯಾಗವನ್ನು ಹಮ್ಮಿಕೊಂಡಿದೆ.

ಯಾಗವು ಅಂದು ಸೂರ್ಯೋದಯದ ಸಮಯ 6.03ಕ್ಕೆ ಪ್ರಾರಂಭವಾಗಲಿದೆ.ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯನ್ನು ಒಂದುಗೂಡಿಸುವ ವಿಹಂಗಮ ಯೋಗವು ಈ ಕಾರ್ಯಕ್ರಮದ ಕೇಂದ್ರ ಬಿಂದು. ಧ್ಯಾನ, ನೈತಿಕ ಜೀವನ ಮತ್ತು ಆಳವಾದ ಆತ್ಮಾವಲೋಕನದ ಮೂಲಕ ವಿಹಂಗಮ ಯೋಗವು ಸಾಧಕರನ್ನು ಆತ್ಮಸಾಕ್ಷಾತ್ಕಾರ ಮತ್ತು ಬ್ರಹ್ಮಾಂಡದೊಂದಿಗೆ ಸಾಮರಸ್ಯದ ಸಹಬಾಳ್ವೆಯ ಕಡೆಗೆ ಮಾರ್ಗದರ್ಶನ ಮಾಡುತ್ತದೆ ಎಂದು ಸಂಘಟಕರು ತಿಳಿಸಿದ್ದಾರೆ.

'ಯುವ ನಿರ್ದೇಶಕರು ನಟರ ಅಗತ್ಯವಿದೆ

ಶ್ರೀ ಮುತ್ತು ಸಿನಿ ಸರ್ವೀಸ್ ಆ್ಯಂಡ್ ಪ್ರೊಡಕ್ಷನ್ಸ್‌ನಡಿ ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣ ಮಾಡಿರುವ 'ಫೈರ್‌ಫ್ಲೈ' ಸಿನಿಮಾ ಏ.24ರಂದು ಬಿಡುಗಡೆಯಾಗುತ್ತಿದೆ. ಚಿತ್ರಕ್ಕೆ ವಂಶಿ ಆ್ಯಕ್ಷನ್ ಕಟ್ ಹೇಳಿರುವುದರ ಜೊತೆಗೆ ನಾಯಕನಾಗಿಯೂ ನಟಿಸಿದ್ದಾರೆ. 'ಸಿನಿಮಾ ಪುರವಣಿ'ಯೊಂದಿಗೆ ಅವರು ಮಾತಿಗೆ ಸಿಕ್ಕಾಗ...

ಅಭಿಲಾಷ್ ಪಿ.ಎಸ್.

ಫೈರ್‌ಫ್ಲೈ
ವಂಶಿ

• ನಿಮ್ಮ ಹಿನ್ನೆಲೆ ಹಾಗೂ ಸಿನಿಮಾ ಪಯಣದ ಕುರಿತು...

ನಾನು ಕೋಲಾರದ ಹುಡುಗ. ಎಂಜಿನಿಯರಿಂಗ್ ಓದಲು ಬೆಂಗಳೂರಿಗೆ ಬಂದವನು. ಎಂ.ಎಸ್.ರಾಮಯ್ಯ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದುತ್ತಿರುವಾಗ ಕಿರುಚಿತ್ರಗಳು, ನಾಟಕದ ಬಗ್ಗೆ ಆಸಕ್ತಿ ಹುಟ್ಟಿತ್ತು. ಎಂಜಿನಿಯರಿಂಗ್ ಮಾಡಿದ ಮಗನನ್ನು ಸಿನಿಮಾ ಕ್ಷೇತ್ರಕ್ಕೆ ಬಿಡಲು ಅಪ್ಪ–ಅಮ್ಮನಿಗೆ ಇಷ್ಟವಿರಲಿಲ್ಲ. ಎಂ.ಟೆಕ್ ಮಾಡು ಎಂದರು. ಅದರ ಜೊತೆಗೆ ಬೇಕಿದ್ದರೆ ಸಿನಿಮಾ ಕೋರ್ಸ್ ಮಾಡಲು ಹೇಳಿದರು. ಎಂ.ಟೆಕ್ ಓದುತ್ತಾ ನಾನು ಸಿನಿಮಾ ಕ್ಷೇತ್ರವನ್ನು ಮರೆಯುತ್ತೇನೆ ಎಂದು ಅವರು ತಿಳಿದುಕೊಂಡಿದ್ದರು.

2016ರಲ್ಲಿ ಅದೇ ಕಾಲೇಜಿನಲ್ಲಿ ಎಂ.ಟೆಕ್ ಮಾಡುತ್ತಿರುವಾಗಲೇ ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟೆ. ನನ್ನ ಕಿರುಚಿತ್ರಗಳನ್ನು ನೋಡಿ 'ಮಾಯಾಬಜಾರ್' ಸಿನಿಮಾದಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಲು ನಿರ್ದೇಶಕರಾದ ರಾಧಾಕೃಷ್ಣ ಅವಕಾಶ ನೀಡಿದರು. ಬಳಿಕ ಗುರುದೇಶಪಾಂಡೆ ಅವರ 'ಪೆಂಟಗನ್' ಚಿತ್ರದಲ್ಲಿನ ಒಂದು ಕಥೆಯಲ್ಲಿ ಮುಖ್ಯಭೂಮಿಕೆಯಲ್ಲಿ ನಟಿಸಿದೆ. ಹೀಗೆ ಹಲವು ಸಿನಿಮಾಗಳಲ್ಲಿ ಕೆಲಸ ಮಾಡಿದೆ. ಇವುಗಳಲ್ಲಿ ಕೆಲವು ಬಿಡುಗಡೆ ಆಗಲೇ ಇಲ್ಲ.

• 'ಫೈರ್‌ಫ್ಲೈ' ಹುಟ್ಟಿಕೊಂಡಿದ್ದು ಹೇಗೆ?

ನಿವೇದಿತಾ ಶಿವರಾಜ್‌ಕುಮಾರ್ ಅವರು ವೆಬ್ ಸರಣಿಗೆ ಕಥೆಗಳನ್ನು ಹುಡುಕುತ್ತಿರುವುದು ಗೊತ್ತಾಯಿತು. ನನ್ನ ಬಳಿ ಇದ್ದ ಒಂದು ಕಥೆಯನ್ನು ಅವರ ಮುಂದೆ ಪ್ರಸ್ತುತಪಡಿಸಿದ್ದೆ. ಇದು ಅವರಿಗೆ ಒಪ್ಪಿಗೆ ಆಯಿತು. ಬಳಿಕ ಬರವಣಿಗೆ ಮಾಡಿಕೊಂಡು ಒಟಿಟಿ ವೇದಿಕೆಗಳ ಬಳಿ ತೆರಳಿದೆವು. ಹಲವು ಕಾರಣಗಳಿಂದ ಇದು ಚಿತ್ರೀಕರಣಗೊಳ್ಳಲಿಲ್ಲ. ಈ ನಡುವೆ 'ಗುರು ಶಿಷ್ಯರು' ನಿರ್ದೇಶಕರಾದ ಜಡೇಶ್ ಹಂಪಿ ಅವರ ಬಳಿ ಕೆಲಸ ಮಾಡುತ್ತಿದ್ದೆ. ಆ ವೇಳೆಯಲ್ಲಿ 'ಫೈರ್‌ಫ್ಲೈ' ಸಿನಿಮಾದ ಕಥೆ ಬರೆಯುತ್ತಿದ್ದೆ. ಒಂಟಿತನ ಹಾಗೂ ಖಿನ್ನತೆ ಎನ್ನುವುದು ಈಗಿನ ಯುವಜನತೆಯಲ್ಲಿ ಹೆಚ್ಚಿದೆ. ಒಂದು ವಿಷಯದಿಂದ ಹೊರಬರಲು ಬಹಳ ಸಮಯ ತೆಗೆದುಕೊಳ್ಳುತ್ತಾರೆ. ಅವರು ಬಹಳ ಸೂಕ್ಷ್ಮ. ಇದನ್ನು ಹಲವರಲ್ಲಿ ನೋಡಿದ್ದೆ. ಈ ವಿಷಯವನ್ನೇ ಇಟ್ಟುಕೊಂಡು ಮನರಂಜನಾತ್ಮಕವಾಗಿ ಕಥೆ ಬರೆದೆ. ನಮ್ಮೊಳಗೇ ಬೆಳಕಿದೆ. ಅದನ್ನು ಅರಿತುಕೊಳ್ಳುವುದು ಮುಖ್ಯ ಎನ್ನುವುದಕ್ಕೆ 'ಫೈರ್‌ಫ್ಲೈ'(ಮಿಂಚು ಹುಳ) ಎಂಬ ಶೀರ್ಷಿಕೆ ಇಟ್ಟೆ.

ಈ ಕಥೆಯನ್ನು ತೆಗೆದುಕೊಂಡು ಹಲವು ನಿರ್ಮಾಪಕರ ಬಳಿ ಹೋಗಿದ್ದೆ. ಆ ಮೇಲೆ ನಿವೇದಿತಾ ಶಿವರಾಜ್‌ಕುಮಾರ್ ಅವರಿಗೆ ಕಥೆ ಬರೆದಿರುವ ವಿಷಯ ತಿಳಿಸಿದೆ. ಅವರು ಮೂರು ವೆಬ್ ಸರಣಿಗಳನ್ನು ನಿರ್ಮಾಣ ಮಾಡಿ ಮಾರಾಟ ಮಾಡಿದ್ದರು. ಮೊದಲಿಗೆ ಅವರು ಸಿನಿಮಾ ನಿರ್ಮಾಣ ಮಾಡುವುದೇ ಇಲ್ಲ, ಏನಿದ್ದರೂ ವೆಬ್ ಸರಣಿಯಷ್ಟೇ ಎಂದಿದ್ದರು. ಕಥೆ ಕೇಳಿ ಇಷ್ಟವಾದರೆ ಬೇರೆ ನಿರ್ಮಾಪಕರಿಗೆ ರೆಫರ್ ಮಾಡಿ ಎಂದು ನಾನು ಅವರಲ್ಲಿ ಕೇಳಿಕೊಂಡೆ. ಅವರು ಕಥೆ ಕೇಳಿದ ಬಳಿಕ ಇಷ್ಟಪಟ್ಟು, ಶಿವರಾಜ್‌ಕುಮಾರ್ ಅವರಿಗೂ ಕಥೆ ಹೇಳಲು ತಿಳಿಸಿದರು. ಅವರೂ ಇಷ್ಟಪಟ್ಟರು. ಹೀಗೆ ಶುರುವಾಗಿದ್ದು 'ಫೈರ್‌ಫ್ಲೈ'.

• ಎಂಜಿನಿಯರಿಂಗ್ ಮಾಡಿದವರು ಸಿನಿಮಾ ಕ್ಷೇತ್ರಕ್ಕೆ...

ಈ ವಿಷಯದಲ್ಲಿ ನನಗೆ ನಟ ರಕ್ಷಿತ್ ಶೆಟ್ಟಿ ಸ್ಫೂರ್ತಿ. ನಟನೆಯ ಜೊತೆಗೆ ನಿರ್ದೇಶಕನಾಗಿಯೂ ಅವರು ಗುರುತಿಸಿಕೊಂಡಿದ್ದಾರೆ. ನಮ್ಮ ರೀತಿಯೇ ಆಲೋಚನೆಯುಳ್ಳವರು. ಎಂಜಿನಿಯರಿಂಗ್‌ಗೆ ಹೆಜ್ಜೆ ಇಟ್ಟ ಮೇಲೆ ಜೀವನದಲ್ಲಿ ಏನಾಗಬೇಕು? ಗುರಿ ಏನು ಎಂದು ನಿರ್ಧರಿಸಿದವರಲ್ಲಿ ನಾನೂ ಒಬ್ಬ.

• ಹೀರೊ ಆಗಿದ್ದು ಆಕಸ್ಮಿಕವೇ?

ಹೌದು. ಪ್ರಿಪ್ರೊಡಕ್ಷನ್ ಸಂದರ್ಭದಲ್ಲಿ ನಾಯಕ ಯಾರು ಎಂದು ನಾನು, ನಿವೇದಿತಾ ಅವರು ಹುಡುಕುತ್ತಿದ್ದೆವು. ನಮಗೊಂದು ಹೊಸಮುಖ ಬೇಕಿತ್ತು. 25–26 ವರ್ಷ ಯುವಕನ ಅಗತ್ಯ ನಮಗಿತ್ತು. ಇಂತವರು ಯಾರೂ ನಮಗೆ ಸಿಗಲಿಲ್ಲ. ಕೊನೆಯಲ್ಲಿ ನಾನೇ ಈ ಪಾತ್ರ ಮಾಡಬಹುದು ಎಂದು ಅವರಿಗೆ ಹೇಳಿದೆ. ಕಿರುಚಿತ್ರಗಳಲ್ಲಿ ನಟಿಸಿದ ಅನುಭವ ನನಗೆ ಇತ್ತು. ನಿವೇದಿತಾ ಅವರೂ ಒಪ್ಪಿಕೊಂಡರು. ಟೀಸರ್ ಮೂಲಕ ನನ್ನ ಮುಖವನ್ನು ಜನರಿಗೆ ಪರಿಚಯಿಸುವ ಕೆಲಸ ಮಾಡಿದೆವು. ಹೀಗಾಗಿ ಅಲ್ಲಿ ಪಾತ್ರವನ್ನೇ ಮುಖ್ಯವಾಗಿಟ್ಟುಕೊಂಡು ಸಂಕಲನ ಮಾಡಿದ್ದೆವು. ಟ್ರೇಲರ್‌ನಲ್ಲಿ ಸಿನಿಮಾದ ಹರಿವು ಹೇಗಿರುತ್ತದೆ ಎನ್ನುವುದನ್ನು ಪ್ರೇಕ್ಷಕರ ಎದುರಿಗೆ ಇಟ್ಟಿದ್ದೇವೆ.

• ಹೊಸಬರಾಗಿ ನಿಮಗೆ ಸಿಕ್ಕಿರುವ ಪ್ರೋತ್ಸಾಹದ ಬಗ್ಗೆ...

ನಮ್ಮಂತಹ ಹೊಸಬರಿಗೆ ಈ ರೀತಿಯ ನಿರ್ಮಾಣ ಸಂಸ್ಥೆ ಸಿಕ್ಕಿರುವುದು ಖುಷಿಯ ವಿಚಾರ. ಜವಾಬ್ದಾರಿಯೂ ಅಷ್ಟೇ ಇದೆ. ಹೊಸಬರ ಸಿನಿಮಾ ಗೆದ್ದರಷ್ಟೇ ಮತ್ತಷ್ಟು ಹೊಸಬರಿಗೆ ಸಿನಿಮಾ ನಿರ್ಮಾಣ ಮಾಡುವ ಧೈರ್ಯ ನಿರ್ಮಾಪಕರಿಗೆ ಬರುತ್ತದೆ. ಸಿನಿಮಾ ಹೆಚ್ಚು ಕಮ್ಮಿ ಆದರೆ ಲೆಕ್ಕಾಚಾರ ಶುರುವಾಗುತ್ತದೆ. ಚಿತ್ರರಂಗದ ಎಲ್ಲಾ ವಿಭಾಗಗಳಲ್ಲೂ ಪ್ರತಿಭಾವಂತರು ಇದ್ದು, ಅವರಿಗೆ ಸೂಕ್ತ ಅವಕಾಶ ಸಿಗಬೇಕು. ಇದರ ಜೊತೆಗೆ ನಿರ್ಮಾಪಕರ ಸಂಕಷ್ಟವನ್ನೂ ಅರಿಯುವುದು ಮುಖ್ಯ. ಹಿರಿಯ ನಿರ್ದೇಶಕ ಹೊಸ ನಾಯಕನ ಜೊತೆಗೂಡಿ ಅಥವಾ ಓರ್ವ ಸ್ಟಾರ್ ನಟ ಯುವ ನಿರ್ದೇಶಕನ ಸಿನಿಮಾ ಮಾಡುವುದು ಇಂದಿನ ಅಗತ್ಯ. ಇದು ಮಾರುಕಟ್ಟೆಗೆ ಉತ್ತೇಜನ ನೀಡಲಿದೆ. ಈ ಕಾಂಬಿನೇಷನ್‌ನಲ್ಲಿ ಎಲ್ಲರೂ ಸುರಕ್ಷಿತವಾಗಿರಬಹುದು.

• ಕನ್ನಡ ಚಿತ್ರರಂಗ ಸದ್ಯ ಹೇಗಿದೆ?

ನಾವೀಗ ಬಹಳ ಕಠಿಣ ಪರಿಸ್ಥಿತಿಯಲ್ಲಿ ಇದ್ದೇವೆ. ಕಳೆದ ನಾಲ್ಕು ತಿಂಗಳಿನಿಂದ ದೊಡ್ಡ ಹಿಟ್ ಬರಲಿಲ್ಲ. ಈ ಸಂದರ್ಭದಲ್ಲಿ ಸಿನಿಮಾ ಮಾಡುವುದನ್ನು ಬಿಟ್ಟರೆ ಕಳೆದೇ ಹೋಗುತ್ತೇವೆ. ಕೆಳಗೆ ಬಿದ್ದಾಗಷ್ಟೇ ಎದ್ದು ನಡೆಯಲು ಸಾಧ್ಯ. ಬಿದ್ದವರು ಏಳದೇ ಇದ್ದರೆ ಭವಿಷ್ಯ ಬಹಳ ಕಷ್ಟವಾಗಿರಲಿದೆ. ಗುಣಮಟ್ಟದ, ಒಳ್ಳೆಯ ಕಥೆಯುಳ್ಳ ಸಿನಿಮಾಗಳು ನಿರಂತರವಾಗಿ ಬರುತ್ತಿರಬೇಕು. ಇದರಿಂದ ಜನಕ್ಕೆ ನಂಬಿಕೆ ಬರಲಿದೆ. ಮಲಯಾಳ ಚಿತ್ರರಂಗದಲ್ಲಿ ಇದೇ ನಡೆಯುತ್ತಿದೆ. ಮುಖ ಪರಿಚಯವಿಲ್ಲದ ಹೀರೊಗಳ ಸಿನಿಮಾಗಳನ್ನೂ ಜನ ಎಲ್ಲೆಡೆ ನೋಡುತ್ತಿದ್ದಾರೆ. ನಮಗೆ ಯುವ ನಿರ್ದೇಶಕರು ಎಷ್ಟು ಅಗತ್ಯವೋ, ಯುವ ಕಲಾವಿದರ ಅಗತ್ಯವೂ ಅಷ್ಟೇ ಇದೆ. ❖

ಶಿವರಾಜ್‌ಕುಮಾರ್ ಹೆಸರು ಪ್ರಸ್ತಾಪಿಸಿದ್ದು ನಿವೇದಿತಾ

'ಶಿವರಾಜ್‌ಕುಮಾರ್ ಅವರು ಈಗ ನಿಭಾಯಿಸಿರುವ ಪಾತ್ರವನ್ನು ಕಥೆ ಬರೆಯುವಾಗಲೇ ಬರೆದಿದ್ದೆ. ಈ ಪಾತ್ರಕ್ಕೆ ಎಲ್ಲರೂ ಗುರುತಿಸಬಲ್ಲ ಮುಖ ಬೇಕಿತ್ತು. ಇದೊಂದು ಸಣ್ಣ ಅವಧಿಯ ಪಾತ್ರ. ಹಲವು ಆಯ್ಕೆಗಳು ಬಂದರೂ, ಒಮ್ಮೆ ನಿವೇದಿತಾ ಅವರು ಶಿವರಾಜ್‌ಕುಮಾರ್ ಅವರನ್ನೇ ಕೇಳೋಣ ಎಂದರು. 'ಶಿವರಾಜ್‌ಕುಮಾರ್ ಅವರು ಮಾಸ್ ಹೀರೋ, ನಾನು ಬರೆದಿರುವ ಪಾತ್ರ ಕೂಲ್ ಆಗಿ ಕೂಲಿಂಗ್ ಗ್ಲಾಸ್, ಹೆಡ್‌ಸೆಟ್ ಹಾಕಿಕೊಂಡು ಇರುವ ವ್ಯಕ್ತಿ. ಅದೂ ಸಣ್ಣ ಪಾತ್ರ' ಎಂದಿದ್ದೆ. ಪಾತ್ರವನ್ನು ವಿವರಿಸಲು ನಿವೇದಿತಾ ಹೇಳಿದರು. ನಾನು ವಿವರಿಸಿದಾಗ ಶಿವಣ್ಣ ಬಹಳ ಇಷ್ಟಪಟ್ಟು ಒಪ್ಪಿದರು. ಅವರ ಮಗಳ ಮೊದಲ ಸಿನಿಮಾದಲ್ಲಿ ನಟಿಸಬೇಕು ಎಂಬ ಆಸೆ ಅವರಿಗೆ ಒಳಗೊಳಗೇ ಇದ್ದಿರಬೇಕು. ಅದಕ್ಕಾಗಿ ಒಪ್ಪಿಕೊಂಡಿದ್ದರು ಎಂದು ನನಗೆ ಇಂದಿಗೂ ಅನಿಸುತ್ತದೆ. ಇದರಿಂದ ಸಿನಿಮಾಗೂ ಒಂದು ಎನರ್ಜಿ ಸಿಕ್ಕಿತು' ಎಂದಿದ್ದಾರೆ ವಂಶಿ

ಎಐನಲ್ಲಿ ಮೂಡಿಬಂದ 'ಭಾಗ್ಯಲಕ್ಷ್ಮಿ'ಯ ಹಾಡು

ಬೃಂದಾ ಆಚಾರ್ಯ



ದೀಕ್ಷಿತ್ ಶೆಟ್ಟಿ

ದೀಕ್ಷಿತ್ ಶೆಟ್ಟಿ ಮತ್ತು ಬೃಂದಾ ಆಚಾರ್ಯ ಜೋಡಿಯಾಗಿ ನಟಿಸಿರುವ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಚಿತ್ರದ 'ಹರ ಓಂ' ಹಾಡು ಇತ್ತೀಚೆಗೆ ಬಿಡುಗಡೆಗೊಂಡಿದೆ. 'ಚಾರ್ಲಿ' ಸೇರಿದಂತೆ ಕನ್ನಡದ ಪ್ರಮುಖ ಚಿತ್ರಗಳಿಗೆ ವಿಎಫ್‌ಎಕ್ಸ್ ಮಾಡಿರುವ ಅಭಿಷೇಕ್ ಎಂ. ಚೊಚ್ಚಲ ನಿರ್ದೇಶನದ ಚಿತ್ರವಿದು. ಲಹರಿ ವೇಲು ಹಾಡನ್ನು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ಈ ಚಿತ್ರದ ನಿರ್ಮಾಪಕ ಎಚ್.ಕೆ. ಪ್ರಕಾಶ್ 'ರಂಗಿತರಂಗ' ಚಿತ್ರದ ಮೂಲಕ ಚಿತ್ರೋದ್ಯಮಕ್ಕೆ ಬಂದವರು. ಅವರ ಆರನೇ ಚಿತ್ರವಿದು. ಹಿಂದಿನ ಸಿನಿಮಾಗಳಂತೆ ಈ ಚಿತ್ರವೂ ಸೂಪರ್ ಹಿಟ್ ಆಗಲಿ' ಎಂದರು ವೇಲು.

'ಹಾಡು ಬಹಳ ಸೊಗಸಾಗಿ ಮೂಡಿ ಬಂದಿದೆ. ಇದಕ್ಕೆ ಕಾರಣ ಸಂಗೀತ ನಿರ್ದೇಶಕ ಜ್ಯೂಡಾ ಸ್ಯಾಂಡಿ. ನಾಗಾರ್ಜುನ ಶರ್ಮಾ ಸಾಹಿತ್ಯ ಕೂಡ ಉತ್ತಮವಾಗಿದೆ. ನನಗೆ ಈ ಹಾಡು ಬಹಳ ವಿಶೇಷವಾದದ್ದು. ನನಗೆ ಪಾಠ ಮಾಡಿದ ಗುರುಗಳು ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಹಾಗೆಯೇ ನಾನು ಪಾಠ ಮಾಡಿದ ಹುಡುಗರೂ ಇಲ್ಲಿದ್ದಾರೆ. ಚಿತ್ರ ಪೂರ್ತಿಗೊಂಡು ಬಿಡುಗಡೆ ಹಂತಕ್ಕೆ ಬಂದಿದೆ. ಎಲ್ಲರ ಸಹಕಾರವಿರಲಿ' ಎಂದರು ನಾಯಕ ದೀಕ್ಷಿತ್.

'ಈ ಹಾಡನ್ನು ಎಐ ಬಳಸಿ ಮಾಡಿದ್ದೇವೆ. ಇವತ್ತಿನ ತಂತ್ರಜ್ಞಾನ ಬಳಸಿಕೊಂಡ ಲಿರಿಕಲ್ ವಿಡಿಯೊ ಮಾಡಿದ್ದೇವೆ. ಸ್ನೇಹಿತರು ಸೇರಿಕೊಂಡು ಸಿನಿಮಾ ಮಾಡಿದ್ದೇವೆ. ಬ್ಯಾಂಕ್ ದರೋಡೆಗೆ ಸಂಬಂಧಿಸಿದ ಹಾಸ್ಯಮಯ ಕಥೆ ಇದೆ. ಬೆಂಗಳೂರು, ತುಮಕೂರು ಸುತ್ತಮುತ್ತ 60 ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೇವೆ' ಎಂದರು ನಿರ್ದೇಶಕ ಅಭಿಷೇಕ್. ಅಭಿಷೇಕ್ ಜಿ. ಕಾಸರಗೋಡು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಅಚ್ಯುತ್ ಕುಮಾರ್, ಸಾಧು ಕೋಕಿಲ, ಅಶ್ವಿನ್ ರಾವ್ ಪಲ್ಲಕ್ಕಿ ಮೊದಲಾದವರು ಚಿತ್ರದಲ್ಲಿದ್ದಾರೆ. ❖

'ಸ್ಪಾರ್ಕ್'ನಲ್ಲಿ ಪ್ರೇಮ್

ಪ್ರೇಮ್

ನಟ ಉಪೇಂದ್ರ ಅಣ್ಣನ ಮಗ ನಿರಂಜನ್ ಸುಧೀಂದ್ರ ಅವರ ಹೊಸ ಪ್ರಾಜೆಕ್ಟ್ ಸೆಟ್ಟೇರಿದ್ದು, ಚಿತ್ರೀಕರಣ ನಡೆಯುತ್ತಿದೆ. ಇದೀಗ ನಟ 'ನೆನಪಿರಲಿ' ಪ್ರೇಮ್ ತಂಡ ಸೇರಿಕೊಂಡಿದ್ದು, ಸಿನಿಮಾದಲ್ಲಿ ವಿಶೇಷ ಪಾತ್ರವೊಂದನ್ನು ನಿಭಾಯಿಸುತ್ತಿದ್ದಾರೆ.

ಡಿ. ಮಹಾಂತೇಶ್ ಹಂದ್ರಾಳ್ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದಲ್ಲಿ ಪತ್ರಕರ್ತನಾಗಿ ನಿರಂಜನ್ ಬಣ್ಣ ಹಚ್ಚಿದ್ದಾರೆ. 'ಜೇಮ್ಸ್', 'ಭರಾಟೆ', 'ಕನಕ' ಸೇರಿದಂತೆ 15ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಸಹ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದ ಮಹಾಂತೇಶ್ ಈ ಚಿತ್ರದ ಮೂಲಕ ನಿರ್ದೇಶಕನಾಗಿ ಮೊದಲ ಹೆಜ್ಜೆ ಇಟ್ಟಿದ್ದಾರೆ. 'ಲವ್ಲಿ ಸ್ಟಾರ್'ಗೆ ವಿಶೇಷ ಪಾತ್ರವೊಂದನ್ನು ಬರೆದಿರುವ ಮಹಾಂತೇಶ್, ಹಿಂದೆಂದೂ ಕಾಣದ ಲುಕ್‌ನಲ್ಲಿ ಪ್ರೇಮ್ ಅವರನ್ನು ತೆರೆ ಮೇಲೆ ತರಲಿದ್ದಾರೆ. ನಟ ರಮೇಶ್ ಇಂದಿರಾ ಅವರೂ ಈ ಸಿನಿಮಾದಲ್ಲಿ ನಟಿಸುತ್ತಿದ್ದು, ಚಿತ್ರದ ನಾಯಕಿಯಾಗಿ ರಚನಾ ಇಂದರ್ ಬಣ್ಣಹಚ್ಚಿದ್ದಾರೆ.

ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಸ್ಪಾರ್ಕ್' ಚಿತ್ರವನ್ನು ಡಾ.ಗರಿಮಾ ಅವಿನಾಶ್ ವಸಿಷ್ಠ ನಿರ್ಮಾಣ ಮಾಡುತ್ತಿದ್ದಾರೆ. ಅಶ್ವಿನ್ ಕೆನಡಿ ಛಾಯಾಚಿತ್ರಗ್ರಹಣ, ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ, ಮಧು ಸಂಕಲನ ಚಿತ್ರಕ್ಕಿದೆ. ❖

ಮೇ 9ಕ್ಕೆ 'ಸೂತ್ರಧಾರಿ'

ಅಪೂರ್ವ, ಚಂದನ್ ಶೆಟ್ಟಿ

ಚಂದನ್ ಶೆಟ್ಟಿ ಹಾಗೂ ಅಪೂರ್ವ ನಟಿಸಿರುವ 'ಸೂತ್ರಧಾರಿ' ಸಿನಿಮಾ ಮೇ 9ರಂದು ತೆರೆಕಾಣಲಿದ್ದು, ಚಿತ್ರಕ್ಕೆ ಸೆನ್ಸಾರ್ ಮಂಡಳಿಯು 'ಯು/ಎ' ಪ್ರಮಾಣಪತ್ರ ನೀಡಿದೆ.

ನವರಸನ್ ತಮ್ಮ ಈಗಲ್ ಮೀಡಿಯಾ ಕ್ರಿಯೇಷನ್ಸ್ ಲಾಂಛನದಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಇದು ನವರಸನ್ ನಿರ್ಮಾಣದ ಐದನೇ ಚಿತ್ರವಾಗಿದೆ. 'ಡ್ಯಾಶ್' ಹಾಗೂ 'ಟ್ರೆಂಡಿಂಗ್‌ನಲ್ಲಿ ಬರ್ಬೇಕು ಅಂದ್ರೆ ಏನ್ ಮಾಡ್ಬೇಕು' ಎಂಬ ಎರಡು ಹಾಡುಗಳನ್ನು ಈಗಾಗಲೇ ಚಿತ್ರತಂಡ ಬಿಡುಗಡೆ ಮಾಡಿದೆ. ಚಂದನ್ ಶೆಟ್ಟಿ ಅವರೇ ಈ ಸಿನಿಮಾಗೆ ಸಂಗೀತ ನೀಡಿದ್ದಾರೆ. ಕ್ರೈಮ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಕಿರಣ್ ಕುಮಾರ್ ನಿರ್ದೇಶಿಸಿದ್ದಾರೆ. ಚಿತ್ರದಲ್ಲಿ ಚಂದನ್ ಅಂಡರ್‌ಕವರ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಪಿ.ಕೆ.ಎಚ್ ದಾಸ್ ಛಾಯಾಚಿತ್ರಗ್ರಹಣ, ಸತೀಶ್ ಚಂದ್ರಯ್ಯ ಸಂಕಲನ ಹಾಗೂ ಮೋಹನ್ ನೃತ್ಯ ನಿರ್ದೇಶನ ಚಿತ್ರಕ್ಕಿದೆ. ನಟಿ ಸಂಜನಾ ಆನಂದ್ ಚಿತ್ರದ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದಾರೆ. ❖

ಸದ್ಯದಲ್ಲೇ ತೆರೆಗೆ 'ಗ್ರೀನ್'

ಗೋಪಾಲಕೃಷ್ಣ ದೇಶಪಾಂಡೆ

ರಾಜ್ ವಿಜಯ್ ನಿರ್ಮಾಣ ಹಾಗೂ ನಿರ್ದೇಶನದ 'ಗ್ರೀನ್' ಚಿತ್ರ ತೆರೆಗೆ ಬರಲು ಸಜ್ಜಾಗಿದೆ. ಚಿತ್ರದ ಪ್ರಮುಖಪಾತ್ರದಲ್ಲಿ ಗೋಪಾಲಕೃಷ್ಣ ದೇಶಪಾಂಡೆ, ಬಾಲಾಜಿ ಮನೋಹರ್ ನಟಿಸಿದ್ದಾರೆ.

ಬಿ.ಎನ್.ಸ್ವಾಮಿ ಈ ಚಿತ್ರದ ನಿರ್ಮಾಣಕ್ಕೆ ಕೈಜೋಡಿಸಿದ್ದಾರೆ. ಈಗಾಗಲೇ ಹಲವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡಿರುವ ಈ ಸಿನಿಮಾ, ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಹೊಂದಿದೆ.

'ತನ್ನ ಇಡೀ ಜೀವನವನ್ನೇ ನಿಯಂತ್ರಿಸುತ್ತಿರುವ ತನ್ನೊಳಗಿನ ರಾಕ್ಷಸನಿಂದ ಬಿಡಿಸಿಕೊಳ್ಳಲು ಹೋರಾಡುವ ನಾಯಕನ ಕಥೆಯೇ ಗ್ರೀನ್' ಎಂದಿದ್ದಾರೆ ರಾಜ್ ವಿಜಯ್. ಆರ್.ಜೆ. ವಿಕ್ಕಿ, ವಿಶ್ವನಾಥ್ ಮಾಂಡಲಿಕ, ಶಿವ ಮಂಜು, ಡಿಂಪಿ ಫಧ್ಯಾ, ಮುರುಡಯ್ಯ, ರಾಮಚಂದ್ರ, ಗಿರೀಶ್ ಚಿತ್ರದ ತಾರಾಬಳಗದಲ್ಲಿದ್ದಾರೆ. ❖

'ಟಕಿಲಾ'ಗೆ ಶರಣ್ ದನಿ

ಧರ್ಮ ಕೀರ್ತಿರಾಜ್, ನಿಖಿತಾಸ್ವಾಮಿ ಜೋಡಿಯಾಗಿ ನಟಿಸಿರುವ 'ಟಕಿಲಾ' ಚಿತ್ರದ ಗೀತೆಗೆ ನಟ ಶರಣ್ ದನಿಯಾಗಿದ್ದಾರೆ. ವಿ.ನಾಗೇಂದ್ರಪ್ರಸಾದ್ ಸಾಹಿತ್ಯವಿರುವ ಈ ಚಿತ್ರದ ಶೀರ್ಷಿಕೆ ಗೀತೆಯನ್ನು ಶರಣ್ ಹಾಡಿದ್ದು, ಇತ್ತೀಚೆಗಷ್ಟೇ ಹಾಡಿನ ರೆಕಾರ್ಡಿಂಗ್ ಮುಗಿದಿದೆ.

ನಿರ್ದೇಶಕ ಕೆ.ಪ್ರವೀಣ್ ನಾಯಕ್ ಚಿತ್ರದ ಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಇವರು ಈ ಹಿಂದೆ ಕೆಲ ಸಿನಿಮಾಗಳನ್ನು ನಿರ್ದೇಶಿಸಿದ್ದರು. ಮರಡಿಹಳ್ಳಿ ನಾಗಚಂದ್ರ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 'ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಅಂತಿಮ ಹಂತದಲ್ಲಿವೆ. ವಿಶಿಷ್ಟ ಪ್ರೇಮಕಥೆಯನ್ನು ಹೊಂದಿರುವ ಚಿತ್ರವಿದು. ಶೀಘ್ರದಲ್ಲಿ ತೆರೆಗೆ ಬರಲಿದೆ' ಎಂದಿದ್ದಾರೆ ನಿರ್ದೇಶಕರು. ❖

6 ಚಿತ್ರಗಳು ತೆರೆಗೆ

ಚಂದನವನದ ತೆರೆಗಳಲ್ಲಿ (ಏ.18) ಆರು ಸಿನಿಮಾಗಳು ತೆರೆಕಾಣುತ್ತಿದೆ.

ಗರುಡರಾಮ್

ವೀರ ಚಂದ್ರಹಾಸ

'ಉಗ್ರಂ', 'ಕೆ.ಜಿ.ಎಫ್.', 'ಸಲಾರ್' ಸಿನಿಮಾ ಖ್ಯಾತಿಯ ಸಂಗೀತ ನಿರ್ದೇಶಕ ರವಿ ಬಸ್ರೂರು ಈ ಚಿತ್ರದ ಮೂಲಕ ಪೂರ್ಣ ಯಕ್ಷಗಾನವನ್ನು ಮೊದಲ ಬಾರಿಗೆ ಬೆಳ್ಳಿತೆರೆಗೆ ತಂದಿದ್ದಾರೆ. ಯಕ್ಷಗಾನ ಪ್ರಸಂಗ ಆಧಾರಿತ ಈ ಸಿನಿಮಾವನ್ನು ಎನ್.ಎಸ್. ರಾಜ್‌ಕುಮಾರ್ ನಿರ್ಮಾಣ ಮಾಡಿದ್ದು ಹೊಂಬಾಳೆ ಫಿಲ್ಮ್ಸ್ ಅರ್ಪಿಸುತ್ತಿದೆ. ಜೈಮಿನಿ ಭಾರತದ ಒಂದು ಭಾಗವಾದ ವೀರಚಂದ್ರಹಾಸನ ಕಥೆಯನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಈ ಸಿನಿಮಾಗಾಗಿ ಸುಮಾರು ₹10 ಕೋಟಿ ವೆಚ್ಚದಲ್ಲಿ ಸೆಟ್ ಹಾಕಲಾಗಿತ್ತು. 'ಹಲವು ವರ್ಷಗಳ ಕನಸು ಈ ಸಿನಿಮಾ. ಯಕ್ಷಗಾನವನ್ನು ವಿಶ್ವಮಾನ್ಯ ಮಾಡಲು ಈ ಚಿತ್ರ ಮಾಡಿದ್ದೇನೆ. 'ಚಂದ್ರಹಾಸ'ನಾಗಿ ಶಿಥಿಲ್ ಶೆಟ್ಟಿ, 'ದುಷ್ಟಬುದ್ಧಿ'ಯಾಗಿ ಪ್ರಸನ್ನ ಶೆಟ್ಟಿಗಾರ್ ನಟಿಸಿದ್ದಾರೆ. 400 ರಿಂದ 500 ಯಕ್ಷಗಾನ ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಸಿನಿಮಾದಲ್ಲಿ ಸೆಟ್‌ಲೈಟ್ ಬಳಸದೆ ನೈಜ ಬೆಳಕಲ್ಲೇ ಚಿತ್ರೀಕರಣ ನಡೆಸಿದ್ದೇವೆ' ಎಂದಿದ್ದಾರೆ ರವಿ ಬಸ್ರೂರು.

ಚಿತ್ರದಲ್ಲಿ ಸುಮಾರು 70 ಪದ್ಯಗಳಿದ್ದು, ಪ್ರಮೋದ್ ಮೊಗಬೆಟ್ಟು ಬರೆದಿದ್ದಾರೆ. ವೀರಕಾಳಗದ ವಿಜೇತರಿಗೆ ಪ್ರಶಸ್ತಿ ನೀಡುವ ಪಾತ್ರದಲ್ಲಿ ನಟ ಶಿವರಾಜ್‌ಕುಮಾರ್ ಬಣ್ಣಹಚ್ಚಿದ್ದಾರೆ. ಗಾಯಕ ಚಂದನ್ ಶೆಟ್ಟಿ, ನಟ ಗರುಡ ರಾಮ್ ಮತ್ತಿತರರು ತಾರಾಬಳಗದಲ್ಲಿದ್ದಾರೆ.

ಪ್ರೀತಿಯ ಹುಚ್ಚ

90ರ ದಶಕದಲ್ಲಿ ನಡೆದ ಪ್ರೇಮಕಥೆಯನ್ನಾಧರಿಸಿ ಈ ಚಿತ್ರದ ಕಥೆ ಹೆಣೆಯಲಾಗಿದೆ. ಕುಮಾರ್ ಮೂವೀಸ್ ಬ್ಯಾನರ್ ಅಡಿಯಲ್ಲಿ ಬಿ.ಜಿ.ನಂದಕುಮಾರ್ ಹಾಗೂ ವಿ.ಕುಮಾರ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. 'ಅರಸೀಕೆರೆ ಶ್ರವಣಬೆಳಗೊಳದ ಮಧ್ಯೆ ನಡೆದಂಥ ನೈಜ ಘಟನೆಯ ಕಥೆ ಇದಾಗಿದ್ದು, ದಲಿತ ಯುವತಿಯೊಬ್ಬಳನ್ನು ಪ್ರಬಲ ವರ್ಗದ ಮನೆಯವರು ಹೇಗೆ ನಡೆಸಿಕೊಳ್ಳುತ್ತಿದ್ದರು, ಮದುವೆಯ ಬಳಿಕ ದುಷ್ಟರ ಜಾಲಕ್ಕೆ ಸಿಕ್ಕ ಆ ಯುವತಿಗೆ ಏನಾಯಿತು, ಪತ್ನಿಯನ್ನು ಕಳೆದುಕೊಂಡ ನಾಯಕ ಯಾವ ಸ್ಥಿತಿ ತಲುಪಿದ ಎಂದು ಈ ಚಿತ್ರದಲ್ಲಿ ಹೇಳಲಾಗಿದೆ' ಎಂದು ನಿರ್ದೇಶಕ ವಿ.ಕುಮಾರ್ ಹೇಳಿದ್ದಾರೆ. ಚಿತ್ರದ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ಅವರೇ ಬರೆದಿದ್ದಾರೆ.

ಕೋರ

ಸುನಾಮಿ ಕಿಟ್ಟಿ ಅಭಿನಯದ ಈ ಚಿತ್ರವನ್ನು ಒರಟ ಶ್ರೀ ನಿರ್ದೇಶಿಸಿದ್ದಾರೆ. ರತ್ನಮ್ಮ ಮೂವೀಸ್ ಲಾಂಛನದಲ್ಲಿ ಪಿ.ಮೂರ್ತಿ ಈ ಚಿತ್ರ ನಿರ್ಮಿಸಿದ್ದಾರೆ. ಆ್ಯಕ್ಷನ್, ಥ್ರಿಲ್ಲರ್ ಹಾಗೂ ಭಾವನಾತ್ಮಕ ಅಂಶಗಳನ್ನು ಹೊಂದಿರುವ ಚಿತ್ರವಿದು. ಚಿತ್ರವು 40 ವರ್ಷಗಳ ಹಿಂದಿನ ಕಥೆಯನ್ನು ಹೊಂದಿದ್ದು ಹೆಚ್ಚಿನ ಭಾಗದ ಚಿತ್ರೀಕರಣ ಕಾಡಿನಲ್ಲೇ ನಡೆದಿದೆ ಎಂದಿದ್ದಾರೆ ನಿರ್ದೇಶಕ ಶ್ರೀ. ನಾಯಕಿಯಾಗಿ ಚರಿಷ್ಮಾ ನಟಿಸಿದ್ದಾರೆ.

ರಿಕ್ಷಾ ಚಾಲಕ

ಆಟೊ ಚಾಲಕರ ವೈಯಕ್ತಿಕ ಜೀವನದ ಕುರಿತಾದ ಸಿನಿಮಾ ಇದಾಗಿದೆ. ಚಿರಂತ್ ಈ ಚಿತ್ರದಲ್ಲಿ ರಿಕ್ಷಾ ಚಾಲಕನಾಗಿ ನಟಿಸಿದ್ದು, ನಂದಿನಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಆಯುಷ್ ಶಶಿಕುಮಾರ್ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರವನ್ನು ಶರಾವತಿ ಶಶಿಕುಮಾರ್ ನಿರ್ಮಿಸಿದ್ದಾರೆ. ಆಯುಷ್ ಅವರೇ ಚಿತ್ರಕಥೆ ಬರೆದಿದ್ದಾರೆ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಆಟೊ ಚಾಲಕರು ಎದುರಿಸಿದ ಸಂಕಷ್ಟ, ತೊಂದರೆಗಳನ್ನು ಈ ಸಿನಿಮಾ ಮೂಲಕ ಹೇಳಲಾಗಿದೆ. ಇದೊಂದು ಆ್ಯಕ್ಷನ್ ಫ್ಯಾಮಿಲಿ ಡ್ರಾಮಾ ಕಥೆ ಹೊಂದಿದ್ದು ದರ್ಶನ್, ಬಲ ರಾಜವಾಡಿ, ಚಂದ್ರಪ್ರಭ, ಮಿಮಿಕ್ರಿ ಗೋಪಿ, ರಜನಿ, ಹರೀಶ್, ಮುನಿಸ್ವಾಮಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಯುದ್ಧಕಾಂಡ



ಅಜಯ್ ರಾವ್

ಶ್ರೀಕೃಷ್ಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಲಾಂಛನದಲ್ಲಿ ಅಜಯ್ ರಾವ್ ನಿರ್ಮಿಸಿ, ನಾಯಕನಾಗಿ ನಟಿಸಿರುವ ಚಿತ್ರವಿದು. 'ಯುದ್ಧಕಾಂಡ' ಚಿತ್ರದಲ್ಲಿ 'ನಿವೇದಿತಾ' ಆಗಿ ನಟಿ ಅರ್ಚನಾ ಜೋಯಿಸ್ ನಟಿಸಿದ್ದಾರೆ. 'ಶ್ಯಾಮಿಲಿ' ಎಂಬ ಪುಟಾಣಿ ಮಗುವಿನ ತಾಯಿಯ ಪಾತ್ರ ಮಾಡಿದ್ದಾರೆ. ತನ್ನ ಮಗಳಿಗಾದ ಅನ್ಯಾಯದ ವಿರುದ್ಧ 'ನಿವೇದಿತಾ' ಹೇಗೆ ಹೋರಾಡುತ್ತಾಳೆ, ಸಿಡಿದೇಳುತ್ತಾಳೆ ಎಂಬುದೇ ಈ ಚಿತ್ರದ ಮುಖ್ಯಕಥೆ. ವಕೀಲರಾಗಿ ಅಜಯ್ ರಾವ್ ನಟಿಸಿದ್ದಾರೆ. 'ಚಿತ್ರದ ಕಥೆಯಲ್ಲಿ ಎಲ್ಲಾ ಪಾತ್ರಗಳೂ ಪ್ರಮುಖ ಪಾತ್ರಗಳೇ. ಇದು ನಾಯಕ ಪ್ರಧಾನ ಚಿತ್ರವಲ್ಲ. ಚಿತ್ರದ ಶೇಕಡ 35ರಷ್ಟು ಭಾಗದಲ್ಲಿ ಅಜಯ್ ರಾವ್ ಇರುವುದಿಲ್ಲ' ಎಂದಿದ್ದಾರೆ ನಿರ್ದೇಶಕ ಪವನ್ ಭಟ್. ನ್ಯಾಯಾಧೀಶರ ಪಾತ್ರದಲ್ಲಿ ಟಿ.ಎಸ್.ನಾಗಾಭರಣ ನಟಿಸಿದ್ದಾರೆ.

ಖದೀಮ

ಅನುಷಾ ಕೃಷ್ಣ

ಬಹುತೇಕ ಹೊಸಬರಿಂದಲೇ ಕೂಡಿರುವ ಈ ಚಿತ್ರವನ್ನು ಸಾಯಿ ಪ್ರದೀಪ್ ಕಥೆ ಬರೆದು ನಿರ್ದೇಶಿಸಿದ್ದಾರೆ. 'ಕಳ್ಳತನ ಮಾಡಿಕೊಂಡಿದ್ದ ಯುವಕನೊಬ್ಬ ಪ್ರೀತಿಯಲ್ಲಿ ಬಿದ್ದಾಗ, ಆತನ ಜೀವನದಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತವೆ. ಬಳಿಕ ಆತನಿಂದ ಯಾರಿಗೆಲ್ಲ ಒಳಿತಾಗುತ್ತದೆ, ಸಮಾಜಕ್ಕೆ ಏನು ಕೊಡುಗೆ ನೀಡುತ್ತಾನೆ ಎಂಬುದೇ ಚಿತ್ರದ ಕಥೆ' ಎಂದಿದ್ದಾರೆ ನಿರ್ದೇಶಕರು. ಶಿವೇಶು ಪ್ರೊಡಕ್ಷನ್ ಅಡಿಯಲ್ಲಿ ಟಿ.ಶಿವಕುಮಾರನ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ನಟ ಚಂದನ್‌ಗೆ ಅನುಷಾ ಕೃಷ್ಣ ಜೋಡಿಯಾಗಿದ್ದಾರೆ.

‘ಕೊಲೆಯಾಗಿದ್ದ’ ಮಹಿಳೆ ಮಲ್ಲಿಗೆ ಪತ್ತೆಯಾದ ಪ್ರಕರಣ • 23ರಂದು ಪ್ರಕಟವಾಗಲಿದೆ ಆದೇಶ

ಪೊಲೀಸರ ಕರ್ತವ್ಯ ಲೋಪ: ಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಮೈಸೂರು: ‘ಕೊಲೆಯಾಗಿದ್ದಾರೆ’ ಎಂದು ಸುದ್ದಿಯಾಗಿದ್ದ ಮಹಿಳೆಯು ಜೀವಂತವಾಗಿ, ಕೊಲೆ ಆರೋಪಿ ನಿರಪರಾಧಿಯಾಗಿ ಹಾಗೂ ಆರೋಪ ಹೊರಿಸಿದ್ದ ಪೊಲೀಸರೇ ಆರೋಪಿಗಳಾಗಿ ತಲೆತಗ್ಗಿಸಿ ಕಟಕಟೆಯ ಮುಂದೆ ನಿಂತು ವಿಚಾರಣೆ ಎದುರಿಸಿದ ಅಪರೂಪದ ಸನ್ನಿವೇಶಕ್ಕೆ ಇಲ್ಲಿನ 5ನೇ ಜಿಲ್ಲಾ ಹೆಚ್ಚುವರಿ ಮತ್ತು ಸೆಷನ್ಸ್ ನ್ಯಾಯಾಲಯವು ಗುರುವಾರ ಸಾಕ್ಷಿಯಾಯಿತು.

ಮಹಿಳೆ ಮಲ್ಲಿಗೆ ಪತ್ತೆಯಾದ ಪ್ರಕರಣದ ವಿಚಾರಣೆ ವೇಳೆ ನ್ಯಾಯಾಧೀಶ ಗುರುರಾಜ್ ಸೋಮಕ್ಕಳವರ್ ಪೊಲೀಸರ ಕರ್ತವ್ಯ ಲೋಪವನ್ನು ಕಟುವಾಗಿ ಖಂಡಿಸಿ ಪ್ರಾಸಿಕ್ಯೂಷನ್ ನಡೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಎರಡು ಗಂಟೆ ವಾದ ಆಲಿಸಿ ಇದೇ 23ಕ್ಕೆ ಆದೇಶ ಕಾಯ್ದಿರಿಸಿದರು.

ಗುರುರಾಜ್ ಸೋಮಕ್ಕಳವರ್

‘ಕೊಲೆ ಆರೋಪಿ ಸುರೇಶ್ ನಿರಪರಾಧಿಯಾಗಿದ್ದು, ಆತನನ್ನು ಗೌರವಯುತವಾಗಿ ಬಿಡುಗಡೆ ಮಾಡಬೇಕು. ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ಸೂಕ್ತ ಪರಿಹಾರ ದೊರಕಿಸಬೇಕು’ ಎಂದು ಪ್ರಾಸಿಕ್ಯೂಟರ್ ಬಿ.ಇ.ಯೋಗೇಶ್ವರ್ ಕೋರಿದರು.

ತನಿಖಾಧಿಕಾರಿಗೆ ತರಾಟೆ: ಮಹಿಳೆ ಪತ್ತೆಯಾದ ಬಳಿಕ, ಪ್ರಕರಣದ ಬಗ್ಗೆ ವಿವರಣೆ ನೀಡುವಂತೆ ಎಸ್‌ಪಿ ಎನ್.ವಿಷ್ಣುವರ್ಧನ್ ಅವರಿಗೆ ನ್ಯಾಯಾಲಯ ನಿರ್ದೇಶಿಸಿತ್ತು. ಅವರ ಪರ ಬೈಲಕುಪ್ಪೆ ಸಿಪಿಐ ದೀಪಕ್ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದರು.

‘ವರದಿಯಲ್ಲಿ ತನಿಖಾಧಿಕಾರಿ ತಾವು ಹಿಂದೆ ನ್ಯಾಯಾಲಯಕ್ಕೆ ಸಲ್ಲಿಸಿದ್ದ ದೋಷಾರೋಪ ಪಟ್ಟಿಯನ್ನು ಸಮರ್ಥಿಸಿಕೊಂಡಿದ್ದರು. ಈ ಬಗ್ಗೆ ನ್ಯಾಯಾಧೀಶರು ತನಿಖಾಧಿಕಾರಿಗಳಾದ, ಅಂದಿನ ಬೈಲಕುಪ್ಪೆ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಜಿ. ಪ್ರಕಾಶ್, ಬೆಟ್ಟದಪುರ ಪಿಎಸ್‌ಐ ಮಹೇಶ್ ಕುಮಾರ್, ಎಸ್‌ಐ ಪ್ರಕಾಶ್ ಎತ್ತಿಮನಿ ಅವರನ್ನು ಮೌಖಿಕವಾಗಿ ತರಾಟೆಗೆ ತೆಗೆದುಕೊಂಡರು.

‘ನೀವು ಸಲ್ಲಿಸಿರುವ ದೋಷಾರೋಪ ಪಟ್ಟಿ ಸುಳ್ಳೆಂದು ಸಾಬೀತಾಗಿದೆ. ಮಲ್ಲಿಗೆ ಕಾಣೆಯಾಗಿದ್ದಾಳೆ ಎಂದು ದೂರು ದಾಖಲಾದ 25 ದಿನದಲ್ಲಿ ಕೊಳೆತ ಮೃತದೇಹ ಪತ್ತೆಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದ್ದೀರಿ, ಅಷ್ಟು ಬೇಗ ದೇಹ ಕೊಳೆತು ಹೋಗಲು ಹೇಗೆ ಸಾಧ್ಯ? ಸ್ಥಳಕ್ಕೆ ತೆರಳಿ ತನಿಖೆ ನಡೆಸಿದವರು ಯಾರು? ಯಾರೋ ಕೆಳ ಹಂತದ ಸಿಬ್ಬಂದಿ ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಿದ್ಧಪಡಿಸಿದಂತಿದೆ. ಇಷ್ಟೊಂದು ಶೀಘ್ರವಾಗಿ ತನಿಖೆ ಮುಗಿಸುವ ಒತ್ತಡ ಏನಿತ್ತು’ ಎಂದು ನ್ಯಾಯಾಧೀಶರು ಅಸಹನೆ ವ್ಯಕ್ತಪಡಿಸಿದರು.

‘ಮೃತದೇಹವನ್ನು ಕಾಡುಪ್ರಾಣಿಗಳು ತಿಂದಿದ್ದವೆಂದು ವರದಿಯಲ್ಲಿದೆ. ಆದರೆ ಅಲ್ಲಿ ವಶಕ್ಕೆ ಪಡೆದಿರುವ ಬಟ್ಟೆಗಳಲ್ಲಿ ಅಂತಹ ಕುರುಹಿಲ್ಲ. ದೋಷಾರೋಪ ಪಟ್ಟಿಯಲ್ಲಿರುವ ಘಟನೆಗಳಿಗೆ, ಸಾಕ್ಷಿಗಳಿಗೆ ಏನು ಆಧಾರ’ ಎಂದು ಪ್ರಶ್ನಿಸಿದರು.

ಈ ವೇಳೆ ಮೌನವಾಗಿದ್ದ ಪೊಲೀಸ್ ಅಧಿಕಾರಿಗಳು, ‘ಮಲ್ಲಿಗೆಯ ತಾಯಿ ಗೌರಿ ನೀಡಿದ ದೂರು ಆಧರಿಸಿ ತನಿಖೆ ಮುಂದುವರಿಸಿದ್ದೇವೆ’ ಎಂದಷ್ಟೇ ಹೇಳಿದರು. ಆರೋಪಿ ಪರ ವಕೀಲ ಪಾಂಡು ಪೂಜಾರಿ, ‘ಯಾವುದೋ ಕೊಲೆ ಪ್ರಕರಣವನ್ನು ಮುಚ್ಚಿಹಾಕಲು ಪೊಲೀಸರು ಹಾಡಿ ಜನರನ್ನು ಗುರಿ ಮಾಡಿದ್ದಾರೆ. ಅಧಿಕಾರಿಗಳ ವಿರುದ್ಧ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಬೇಕು. ನನ್ನ ಕಕ್ಷಿದಾರರು ತಮಗಾದ ಅವಮಾನದಿಂದ ಊರಿನವರಿಗೆ ಮುಖ ತೋರಿಸಲಾಗದೆ ಬೆಳಿಗ್ಗೆ ಮನೆ ಬಿಟ್ಟು ರಾತ್ರಿ ಮನೆ ಸೇರುತ್ತಿದ್ದರು. ಅವರ ಮಕ್ಕಳಿಗೂ ತೊಂದರೆಯಾಗಿದೆ. ನ್ಯಾಯಾಲಯವು ಇದನ್ನು ಪರಿಗಣಿಸಬೇಕು’ ಎಂದು ಮನವಿ ಮಾಡಿದರು.

ನಾಲ್ಕು ವರ್ಷಗಳ ಹಿಂದೆ, ‘ಮಲ್ಲಿಗೆಯನ್ನು ಆಕೆಯ ಗಂಡ ಸುರೇಶ್ ಕೊಲೆ ಮಾಡಿದ್ದಾನೆ’ ಎಂದು ಆರೋಪಿಸಿ ಬೆಟ್ಟದಪುರ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಜಿಲ್ಲಾ ನ್ಯಾಯಾಲಯ ಆರೋಪಿಗೆ ಜೈಲು ಶಿಕ್ಷೆ ವಿಧಿಸಿತ್ತು. ನಂತರ ಅವರು ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದರು. ಏ.1ರಂದು ಮಲ್ಲಿಗೆಯು ತನ್ನ ಪ್ರಿಯತಮ ಗಣೇಶ್ ಜೊತೆ ಪತ್ತೆಯಾದ ಬಳಿಕ ಪ್ರಕರಣಕ್ಕೆ ಅನಿರೀಕ್ಷಿತ ತಿರುವು ಸಿಕ್ಕಿತ್ತು.

‘ಪೊಲೀಸ್ ವ್ಯವಸ್ಥೆಯ ದುರಂತ’

ವಿಚಾರಣೆ ವೇಳೆ, ಪೊಲೀಸರು ಈಚೆಗೆ ನಡೆಸುತ್ತಿರುವ ಕರ್ತವ್ಯ ಲೋಪದ ಬಗ್ಗೆ ನ್ಯಾಯಾಧೀಶ ಗುರುರಾಜ್ ಸೋಮಕ್ಕಳವರ ಬೆಳಕು ಚೆಲ್ಲಿದರು. ಕಾನೂನು ಕಾಪಾಡಬೇಕಾದ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಿದರು.

- ಈಚೆಗೆ ಪೊಲೀಸರು ಸಲ್ಲಿಸುತ್ತಿರುವ ದೋಷಾರೋಪ ಪಟ್ಟಿ ಲೋಪದೋಷಗಳಿಂದ ಕೂಡಿರುವುದು ಪೊಲೀಸ್ ವ್ಯವಸ್ಥೆಯ ದುರಂತ. ಇದರಿಂದ ಅಪರಾಧಿಗಳು ಕಾನೂನಿನಿಂದ ತಪ್ಪಿಸಿಕೊಳ್ಳುವಂತಾಗಿದೆ. ಮಲ್ಲಿಗೆ ಪ್ರಕರಣದಲ್ಲಿನ ಲೋಪದೋಷ ಎಲ್ಲರಿಗೂ ಕಾಣಿಸಿದೆ. ಆದರೆ ನ್ಯಾಯಾಲಯಕ್ಕೆ ಬರುವ ಹೆಚ್ಚಿನ ಪ್ರಕರಣಗಳು ಇದೇ ರೀತಿಯ ಸಮಸ್ಯೆಗಳಿಂದ ಕೂಡಿರುತ್ತವೆ.
- ಸಿನಿಮಾ ತಯಾರಿಸುವಾಗ ಪೊಲೀಸ್ ತನಿಖೆ ಕುರಿತು ನಿರ್ದೇಶಕರು ಕಾನೂನಿನ ಅಂಶಗಳನ್ನು ಸರಿಯಾಗಿ ತಿಳಿದುಕೊಂಡು, ಸನ್ನಿವೇಶಗಳನ್ನು ಜೋಡಿಸಿರುತ್ತಾರೆ. ಆದರೆ ತರಬೇತಿ ಪಡೆದ ಪೊಲೀಸರಿಂದಲೇ ಈ ರೀತಿಯ ತಪ್ಪುಗಳಾಗುತ್ತಿರುವುದು ದುರಂತ.
- ಅನೇಕ ಪ್ರಕರಣಗಳಲ್ಲಿ ಪೊಲೀಸರ ತಪ್ಪಿನಿಂದ ಸಾಮಾನ್ಯರು ಬಲಿಪಶುಗಳಾಗುತ್ತಿದ್ದಾರೆ. ನಿರಪರಾಧಿಯೊಬ್ಬ ಜೈಲು ಸೇರಿ, ಆತನ ಕುಟುಂಬ ಬೀದಿಪಾಲಾದರೆ ಆ ಜವಾಬ್ದಾರಿಯನ್ನು ಪೊಲೀಸರು ತೆಗೆದುಕೊಳ್ಳುತ್ತಾರೆಯೇ?
- ಅಪರಾಧಿಗಳಿಗೆ ಪೊಲೀಸರ ಕುರಿತು ಭಯವೇ ಇಲ್ಲದಂತಾಗಿದೆ. ಇದೇ ಕಾರಣದಿಂದ ಕೃತ್ಯ ಎಸಗುವಾಗ ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಡುವ ಪರಿಸ್ಥಿತಿ ಬಂದಿದೆ. ‘ನಿಮಗೆ ಏನು ಸಾಧ್ಯವೋ ಅದನ್ನು ಮಾಡಿಕೊಳ್ಳಿ, ಹೇಗೆ ಬಚಾವಾಗಬೇಕೆಂದು ನಮಗೆ ಗೊತ್ತಿದೆ’ ಎಂದು ಪೊಲೀಸರಿಗೆ ಅವರು ಸವಾಲು ಹಾಕುವಂತಿದೆ.
- ಪೊಲೀಸರು ಕಣ್ಣೀರು ಬರಿಸುತ್ತಾರೆ, ಒರೆಸುವುದಿಲ್ಲ ಎಂಬ ಮಾತು ಜನರಲ್ಲಿದೆ. ಹೊರಗೆ ರಾಕ್ಷಸರು ಓಡಾಡುತ್ತಿದ್ದಾರೆ. ಕಾನೂನು ವ್ಯವಸ್ಥೆ ಕಠಿಣಗೊಳಿಸದೆ, ಹಣಕ್ಕಾಗಿ ಆಸೆ ಪಟ್ಟರೆ ಮುಂದಿನ ಪೀಳಿಗೆಗೆ ಕೆಟ್ಟ ಸಮಾಜವನ್ನು ನೀಡುತ್ತೇವೆ.

ಸುರೇಶ್ ಅವರಿಗೆ ಕಾನೂನು ಸೇವೆಗಳ ಪ್ರಾಧಿಕಾರದಿಂದ ಪರಿಹಾರ ದೊರಕಿಸುವ ಬದಲು, ಜೈಲುವಾಸ ಅನುಭವಿಸುವಂತೆ ಮಾಡಿ ಕರ್ತವ್ಯ ಲೋಪ ಎಸಗಿದ ಪೊಲೀಸರಿಂದಲೇ ಪರಿಹಾರ ಕೊಡಿಸಬೇಕು

ಪಿ.ಜಿ.ರಾಘವೇಂದ್ರ, ವಕೀಲ

ಖಾಲಿ ಹುದ್ದೆ: ತನಿಖೆಗೆ ‘ಲೋಕಾ’ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಾಭಿವೃದ್ಧಿ ಇಲಾಖೆಯ ಅಧೀನದ ಪೌರಾಡಳಿತ ಇಲಾಖೆಯಲ್ಲಿ ಶೇ 50ರಷ್ಟು ಹುದ್ದೆಗಳು ಖಾಲಿ ಇದ್ದು, ಅಧಿಕಾರಿಗಳನ್ನು ಅನಗತ್ಯವಾಗಿ ಸ್ಥಳ ನಿರೀಕ್ಷಣೆಯಲ್ಲಿ ಇರಿಸಿರುವ ಬಗ್ಗೆ ತನಿಖೆ ನಡೆಸುವಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಆದೇಶಿಸಿದ್ದಾರೆ.

ಮಂಡ್ಯದ ಜಗದೀಶ್.ಎಂ.ಎಸ್ ಅವರು ಸಲ್ಲಿಸಿದ್ದ ದೂರನ್ನು ಪರಿಶೀಲಿಸಿ, ತನಿಖೆಗೆ ಆದೇಶಿಸಲಾಗಿದೆ ಎಂದು ಲೋಕಾಯುಕ್ತವು ತಿಳಿಸಿದೆ.

ಖಾಲಿ ಹುದ್ದೆಗಳಿಗೆ ನಿಯೋಜನೆ ಮಾಡಲು ಪೌರಾಡಳಿತ ಇಲಾಖೆಯಲ್ಲಿ ಅರ್ಹ ಅಧಿಕಾರಿ ಮತ್ತು ಸಿಬ್ಬಂದಿ ಇದ್ದರೂ, ಅವರನ್ನು ಕಡ್ಡಾಯ ನಿರೀಕ್ಷಣೆಯಲ್ಲಿ ಇರಿಸಲಾಗಿದೆ. ಒಂದು ವರ್ಷದಿಂದ ಅವರಿಂದ ಯಾವುದೇ ಕೆಲಸ ಮಾಡಿಸಿಕೊಳ್ಳದೆ, ವೇತನ ಪಾವತಿ ಮಾಡಲಾಗಿದೆ ಎಂಬುದು ಪ್ರಾಥಮಿಕ ತನಿಖೆಯ ವೇಳೆ ಗೊತ್ತಾಗಿದೆ ಎಂದು ಲೋಕಾಯುಕ್ತ ತಿಳಿಸಿದೆ.

ಹಿರಿಯ ಶ್ರೇಣಿಯ ಅಧಿಕಾರಿಗಳು ಲಭ್ಯವಿದ್ದರೂ ಅವರನ್ನು ಸ್ಥಳ ನಿರೀಕ್ಷಣೆಯಲ್ಲಿರಿಸಿ, ಕಿರಿಯ ಶ್ರೇಣಿಯ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗಿದೆ. ಈ ಸಂಬಂಧ ಜಾರಿಯಲ್ಲಿರುವ ಸರ್ಕಾರದ ನಿರ್ಬಂಧಗಳನ್ನು ಉಲ್ಲಂಘಿಸಲಾಗಿದೆ. ಅಧಿಕಾರಿ ಮತ್ತು ಸಿಬ್ಬಂದಿ ಕರ್ತವ್ಯ ನಿರ್ವಹಣೆ ಮಾಡದೇ ಇರುವ ಕಾರಣ ಬೀದಿ ದೀಪ ನಿರ್ವಹಣೆ, ಕಸ ವಿಲೇವಾರಿ, ನೀರು ಸರಬರಾಜು ಮತ್ತಿತರ ಕರ್ತವ್ಯಗಳಿಗೆ ತೊಡಕಾಗಿದೆ ಎಂದು ಲೋಕಾಯುಕ್ತ ತಿಳಿಸಿದೆ.

‘ಈ ಸಂಬಂಧ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ವರದಿ ತರಿಸಿಕೊಳ್ಳಿ. ಇಲಾಖೆಯ ಕಾರ್ಯದರ್ಶಿ ಮತ್ತು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರಿಂದ ಆಕ್ಷೇಪಣೆಯನ್ನೂ ಪಡೆದುಕೊಳ್ಳಿ’ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ನಿರ್ದೇಶನ ನೀಡಿದ್ದಾರೆ ಎಂದಿದೆ.

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

ಸೂಚನೆ
ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರಗಳು, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು, 2016 (‘ನಿಯಮಾವಳಿಗಳು’) ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇದರ ಅನ್ವಯ ಕೋರಿಕೆ ಬಾರದೆ ಏಳು ವರ್ಷಗಳವರೆಗೆ ಉಳಿದ, ಆರ್ಥಿಕ ವರ್ಷ 2017–18ರಲ್ಲಿ ಘೋಷಿಸಲಾದ ಅಂತಿಮ ಮತ್ತು ವಿಶೇಷ ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಮೇಲೆ ಹೇಳಲಾದ ನಿಯಮಾವಳಿಗನುಸಾರವಾಗಿ ಐಇಪಿಎಫ್ ಖಾತೆಗೆ ದಿನಾಂಕ **ಜುಲೈ 24, 2025** ರಂದು ವರ್ಗಾಯಿಸಲಾಗುವುದು ಎಂದು ಷೇರುದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ನಿಯಮಾವಳಿಗನುಸಾರವಾಗಿ ಕಂಪನಿಯು ಯಾರ ಷೇರುಗಳು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿವೆಯೋ ಅಂತಹ ಷೇರುದಾರರಿಗೆ ಸೂಚನಾ ಪತ್ರಗಳನ್ನು ವೈಯಕ್ತಿಕವಾಗಿ ಕಳುಹಿಸಲಾಗುತ್ತಿದೆ. ಅಂತಹ ಷೇರುದಾರರ ಪೂರ್ಣವಿವರಗಳನ್ನು ಕಂಪನಿಯ ಜಾಲತಾಣದಲ್ಲಿ ಒದಗಿಸಲಾಗಿದೆ:https://www.infosys.com/investors/shareholder-services/Pages/transfer-equity-shares.aspx.

ಈ ಸಂಬಂಧವಾಗಿ ಕೆಳಕಂಡ ಅಂಶಗಳನ್ನು ದಯಮಾಡಿ ಗಮನಿಸಿ:

1) **ಷೇರುಗಳನ್ನು ನೀವು ಭೌತಿಕ ರೂಪದಲ್ಲಿ ಹೊಂದಿದ್ದರೆ:** ಷೇರುಗಳ ದ್ವಿಪ್ರತಿ(ಗಳನ್ನು)ಯನ್ನು ನೀಡಿ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ನಿಮ್ಮ ಹೆಸರಿನಲ್ಲಿ(ರುಗಳಲ್ಲಿ) ನೋಂದಾಯಿಸಲ್ಪಟ್ಟಿದ್ದ ಮೂಲ ಷೇರುಪತ್ರ(ಗಳು) ಸ್ವಯಂರದ್ದಾಗುತ್ತವೆ.

2) **ಷೇರುಗಳನ್ನು ನೀವು ವಿದ್ಯುನ್ಮಾನ ರೂಪದಲ್ಲಿ ಹೊಂದಿದ್ದಿರೆ:** ಐಇಪಿಎಫ್ ಖಾತೆಗೆ ವರ್ಗವಾಗಲು ಅರ್ಹವಾದ ನಿಮ್ಮ ಷೇರುಗಳನ್ನು ನಿಮ್ಮ ಡಿಮ್ಯಾಟ್ ಖಾತೆಯಿಂದ ವರ್ಗಾವಣೆ ಮಾಡಲಾಗುವುದು.

ಒಂದು ವೇಳೆ ದಿನಾಂಕ **ಜುಲೈ 18, 2025**ರ ಒಳಗೆ ಕ್ರಮಬದ್ಧ ಕೋರಿಕೆ ಬರದಿದ್ದಲ್ಲಿ, ಕಂಪನಿಯು ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವ ಪ್ರಕ್ರಿಯೆಯನ್ನು, ಯಾವುದೇ ಸೂಚನೆ ಕೊಡದೆ ಜಾರಿಯಾಗುತ್ತದೆ. ನಿಯಮಾವಳಿಗನುಸಾರ ಐಇಪಿಎಫ್‌ಗೆ ವರ್ಗಾವಣೆಯಾದ ಕೋರಿಕೆ ಬಾರದ ಲಾಭಾಂಶದ ಹಣ/ತತ್ಸಂಬಂಧಿತ ಷೇರುಗಳ ಕುರಿತಾಗಿ ಕಂಪನಿಗೆ ಯಾವುದೇ ಬಾಧ್ಯತೆಯಿರುವುದಿಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಸದರಿ ಷೇರುದಾರರು ತಮ್ಮ ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ನಿಂದ ಮರಳಿ ಪಡೆಯುಲು ಕಂಪನಿಯಿಂದ ಹಕ್ಕು ಪತ್ರ ಪಡೆದ ನಂತರ ಐಇಪಿಎಫ್‌ಗೆ ನಿಗದಿತ ಐಇಪಿಎಫ್–5 ನಮೂನೆಯಲ್ಲಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಿ ತಮ್ಮ ಷೇರುಗಳು ಹಾಗೂ ಲಾಭಾಂಶವನ್ನು ಪಡೆಯಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ವಿಚಾರಣೆಗಳಿದ್ದಲ್ಲಿ ಷೇರುದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಶ್ರೀಮತಿ ಶೋಭಾ ಆನಂದ್, ಉಪಾಧ್ಯಕ್ಷರು, ಮೆ॥ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ವಿಭಾಗ: ಇನ್‌ಫೋಸಿಸ್ ಲಿಮಿಟೆಡ್, ಸೆಲೇನಿಯಮ್ ಬಿಲ್ಡಿಂಗ್, ಟವರ್ ಬಿ, ಪ್ಲಾಟ್ ನಂ. 31–32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್, ರಂಗಾರೆಡ್ಡಿ, ತೆಲಂಗಾಣ, ಭಾರತ – 500032. ದೂರವಾಣಿ: +91 40 6716 2222 ಅಥವಾ ಇ ಅಂಚೆ: einward.ris@kfintech.com ಸಂಪರ್ಕಿಸಲು ಕೋರಲಾಗಿದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಏಪ್ರಿಲ್ 17, 2025
ಬೆಂಗಳೂರು, ಭಾರತ

ಬೆಂಗಳೂರಿನಲ್ಲಿ ನಡೆದ ‘ಅನಿಮೆ, ಮಂಗಾ’ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಬೆಂಬಲದೊಂದಿಗೆ ಭಾರತೀಯ ಮಾಧ್ಯಮ ಮತ್ತು ಮನರಂಜನಾ ಸಂಘವು ಆಯೋಜಿಸಿದ್ದ ‘ವ್ಯಾಮ್’ (ಅನಿಮೆ ಮತ್ತು ಮಂಗಾ) ಸ್ಪರ್ಧೆಯು ಬೆಂಗಳೂರಿನ ಬಸವನಗುಡಿಯಲ್ಲಿರುವ ವಿವಿಎನ್ ಪದವಿ ಕಾಲೇಜಿನಲ್ಲಿ ಇತ್ತೀಚೆಗೆ ನಡೆಯಿತು.

ಸಚಿವಾಲಯವು ‘ವೇವ್ಸ್’ (ಡಬ್ಲ್ಯುಎವಿಇಎಸ್– ವಿಶ್ವ ವಾಕ್, ಚಿತ್ರ ಮನರಂಜನಾ ಶೃಂಗಸಭೆ) ಅನ್ನು ಪ್ರತಿವರ್ಷವೂ ಆಯೋಜಿಸುತ್ತದೆ. ವ್ಯಾಮ್ ಸ್ಪರ್ಧೆಯು ಈ ಶೃಂಗಸಭೆಯ ಭಾಗವೇ ಆಗಿದೆ. ಈ ಸ್ಪರ್ಧೆಯನ್ನು ಇದೇ ಮೊದಲ ಬಾರಿಗೆ ಆಯೋಜಿಸಲಾಗಿದೆ.

ರಾಷ್ಟ್ರಮಟ್ಟದ ‘ವೇವ್ಸ್ 2025’ ಸ್ಪರ್ಧೆಗೆ ಅರ್ಹತಾ ಸುತ್ತು ಇದಾಗಿತ್ತು. 9 ವರ್ಷದಿಂದ ಹಿಡಿದು ವಿವಿಧ ವಯೋಮಾನದವರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ರಾಯಪುರ, ಚೆನ್ನೈನಿಂದಲೂ ಸ್ಪರ್ಧಿಗಳು ಆಗಮಿಸಿದ್ದರು.

ಏನು ಸ್ಪರ್ಧೆ?: ಜಪಾನ್‌ನ ಅನಿಮೆ (ಅನಿಮೇಷನ್ ಸಿನಿಮಾ), ಮಂಗಾ (ಕಾಮಿಕ್ ಕಾದಂಬರಿಗಳು, ಕಥೆಗಳು), ದಕ್ಷಿಣ ಕೊರಿಯಾದ ವೆಬ್‌ಟೂನ್ (ಕಾರ್ಟೂನ್‌ಗಳು ಅಥವಾ ಕಾರ್ಟೂನ್ ಸರಣಿಗಳು) ಮತ್ತು ಛದ್ಮವೇಷ ಸ್ಪರ್ಧೆಗಳನ್ನು ಈ ವ್ಯಾಮ್ ಒಳಗೊಂಡಿತ್ತು.

ಇದೇ ವೇಳೆ ‘ಅನಿಮೆ ಬೆಂಗಳೂರು ಕ್ಲಬ್’ ಉದ್ಘಾಟಿಸಲಾಯಿತು. ‘ಇನ್ನು ಮುಂದೆ ಈ ಕ್ಲಬ್ ನಿಯಮಿತವಾಗಿ ಸಭೆ ಸೇರಲಿದೆ. ವರ್ಷವಿಡೀ ವಿವಿಧ ಕಾರ್ಯಚಟುವಟಿಕೆಗಳನ್ನು ಆಯೋಜಿಸಲಿದೆ’ ಎಂದು ಕ್ಲಬ್‌ನ ಸ್ಥಾಪಕ ಮುಖ್ಯಸ್ಥ ಸಯಂತನ್ ಘೋಷ್ ಹೇಳಿದರು.

ಸ್ಪರ್ಧೆಯಲ್ಲಿ ವಿಜೇತರಾದವರು ಆಯೋಜಕರ ಜತೆಗೆ ಸಂಭ್ರಮಿಸಿದರು

ಬೆಂಗಳೂರು ನಗರವು ಭವಿಷ್ಯದ ಕ್ರಿಯಾಶೀಲರ ಕೇಂದ್ರವಾಗಲಿದೆ ಎಂಬುದನ್ನು ಈ ಸ್ಪರ್ಧೆಯು ಸಾಬೀತುಪಡಿಸಿತು

ಅಂಕುರ್ ಭಾಸಿನ್, ಕಾರ್ಯದರ್ಶಿ, ಭಾರತೀಯ ಮಾಧ್ಯಮ ಮತ್ತು ಮನರಂಜನಾ ಸಂಘ

ವಿಜೇತರು

- **ಮಂಗಾ (ವಿದ್ಯಾರ್ಥಿ ವಿಭಾಗ):** ರೋಹಿತ್ ಶರ್ಮಾ
- **ಮಂಗಾ (ವೃತ್ತಿನಿರತರ ವಿಭಾಗ):** ಮುಕುಂದ್ ಕೆ.
- **ವೆಬ್‌ಟೂನ್:** ವಿಶಾಲ್ ಮಾರವಿ
- **ಅನಿಮೆ:** ಗಣೇಶ್
- **ಛದ್ಮವೇಷ:** ಪುನೀತ್ ವಿ.
- **ಡಬ್ಬಿಂಗ್:** ಪೂನಂ ತ್ರಿಪಾಠಿ

* ವೇವ್ಸ್ 2025ರಲ್ಲಿ ವಿಜೇತರಾದವರಿಗೆ 2026ರಲ್ಲಿ ಜಪಾನ್‌ನ ಟೋಕಿಯೊದಲ್ಲಿ ನಡೆಯಲಿರುವ ‘ಅನಿಮೆ ಜಪಾನ್ 2026’ ಭಾಗವಹಿಸುವ ಅವಕಾಶ ನೀಡಲಾಗುವುದು

ಎಲ್‌ಪಿಜಿ, ಇಂಧನ ಬೆಲೆ ಇಳಿಸಲು ಆಗ್ರಹ • ಬಿಜೆಪಿ ವಿರುದ್ಧ ಆಕ್ರೋಶ • ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಭಾಗಿ

ಕೇಂದ್ರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ₹50, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸೆಸ್ ಅನ್ನು ಪ್ರತಿ ಲೀಟರ್‌ಗೆ ₹2ರಷ್ಟು ಹೆಚ್ಚಿಸಿದ ಕೇಂದ್ರ ಸರ್ಕಾರದ ವಿರುದ್ಧ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ನೇತೃತ್ವದಲ್ಲಿ ಗುರುವಾರ ಬೃಹತ್ ಪ್ರತಿಭಟನಾ ಸಭೆ ನಡೆಯಿತು.

ಇಲ್ಲಿನ ಸ್ವಾತಂತ್ರ್ಯ ಉದ್ಯಾನದ ಹೊರ ಆವರಣದಲ್ಲಿ ಆಯೋಜಿಸಲಾಗಿದ್ದ ಪ್ರತಿಭಟನಾ ಸಭೆಯಲ್ಲಿ ಪಕ್ಷದ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಭಾಗಿಯಾಗಿದ್ದರು. ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು, ಶಾಸಕರು, ಕಾರ್ಯಕರ್ತರು ತೋಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಬೆಲೆ ಏರಿಕೆಯನ್ನು ಖಂಡಿಸಿದರು. ಅಡುಗೆ ಅನಿಲದ ಖಾಲಿ ಸಿಲಿಂಡರ್‌ಗಳಿಗೆ ಹೂವಿನ ಹಾರ ಹಾಕಿ, ಹೆಗಲ ಮೇಲೆ ಹೊತ್ತು ಪ್ರತಿಭಟನಾ ಸಭೆಯ ವೇದಿಕೆಯಲ್ಲೇ ಮೆರವಣಿಗೆ ನಡೆಸಲಾಯಿತು.

'ಮೋದಿ ಫುಲ್ ಜಾಲಿ ಜಾಲಿ, ಜನರ ಜೇಬು ಖಾಲಿ ಖಾಲಿ', 'ಬೇಡಪ್ಪಾ, ಬೇಡಪ್ಪಾ ಬಿಜೆಪಿ ಸರ್ಕಾರ ಬೇಡಪ್ಪಾ', 'ಇಳಿಸಿ, ಇಳಿಸಿ ಎಲ್‌ಪಿಜಿ ಬೆಲೆ ಇಳಿಸಿ', 'ದುಬಾರಿ ದುಬಾರಿ, ಬಿಜೆಪಿಯಿಂದಲೇ ದುಬಾರಿ', ಎಂದು ಘೋಷಣೆ ಕೂಗಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 'ಇದು, ಕೇಂದ್ರ ಸರ್ಕಾರದ ವಿರುದ್ಧದ ಹೋರಾಟದ ಪ್ರಾರಂಭವಷ್ಟೇ. ರಾಜ್ಯದ ಉದ್ದಕ್ಕೂ, ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಪ್ರತಿಭಟನಾ ಸಭೆಗಳನ್ನು ನಡೆಸುತ್ತೇವೆ' ಎಂದರು.

ಪಕ್ಷದ ಕಾರ್ಯಕರ್ತರು ಬಂದಿದ್ದ ವಾಹನಗಳನ್ನು ಶೇಷಾದ್ರಿ ರಸ್ತೆ, ಅರಮನೆ ರಸ್ತೆ, ರೇಸ್‌ಕೋರ್ಸ್ ರಸ್ತೆ, ಕಾಳಿದಾಸ ರಸ್ತೆಗಳಲ್ಲಿ ನಿಲುಗಡೆ ಮಾಡಿದ್ದರಿಂದ ಅಲ್ಲೆಲ್ಲಾ ಭಾರಿ ಸಂಚಾರ ದಟ್ಟಣೆ ಉಂಟಾಗಿತ್ತು.

ಬೆಲೆ ಏರಿಕೆ ಖಂಡಿಸಿ ಬೆಂಗಳೂರಿನಲ್ಲಿ ಕಾಂಗ್ರೆಸ್ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಜನರು –ಪ್ರಜಾವಾಣಿ ಚಿತ್ರ

'₹30 ಲಕ್ಷ ಕೋಟಿ ಸುಂಕ ವಸೂಲಿ'

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಇಳಿಕೆಯ ಲಾಭವನ್ನು ಜನ ಸಾಮಾನ್ಯರಿಗೆ ವರ್ಗಾಯಿಸಬೇಕು ಎಂದು ಯುಪಿಎ ಸರ್ಕಾರವು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪರಿಷ್ಕರಿಸುವ ವ್ಯವಸ್ಥೆ ಜಾರಿಗೆ ತಂದಿತು. ಆ ವ್ಯವಸ್ಥೆಯನ್ನು ಮೋದಿ ಅವರ ಸರ್ಕಾರ ಸಂಪೂರ್ಣ ಹಾಳು ಮಾಡಿದೆ. ಕಚ್ಚಾತೈಲದ ಬೆಲೆ ಇಳಿದಾಗೆಲ್ಲಾ ಎಕ್ಸೈಸ್ ಸುಂಕ ಮತ್ತು ಸೆಸ್ ದರ ಹೆಚ್ಚಿಸಿ, ತಾನು ಲಾಭ ಮಾಡಿಕೊಳ್ಳುತ್ತಿದೆ. ಮೋದಿ ಅವರು ಅಧಿಕಾರಕ್ಕೆ ಬಂದ ನಂತರ ಈವರೆಗೆ ಪೆಟ್ರೋಲ್-ಡೀಸೆಲ್ ಮೇಲೆ ₹30 ಲಕ್ಷ ಕೋಟಿ ಸುಂಕ ಸಂಗ್ರಹಿಸಿದೆ.

ಮನಮೋಹನ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ಎಲ್‌ಪಿಜಿಗಾಗಿ ₹52,000 ಕೋಟಿ ಸಹಾಯಧನ ನೀಡುತ್ತಿದ್ದರು. ಮೋದಿ ಅವರು ಅದನ್ನು ₹10,600 ಕೋಟಿಗೆ ಇಳಿಸಿದ್ದಾರೆ. ಈ ಕಾರಣದಿಂದಲೇ, ಯುಪಿಎ ಅಧಿಕಾರದ ಅವಧಿಯಲ್ಲಿ ₹415 ಇದ್ದ ಸಿಲಿಂಡರ್ ಬೆಲೆ ಈಗ ₹850ಕ್ಕೆ ಏರಿಕೆಯಾಗಿದೆ. ಎಲ್‌ಪಿಜಿ ಸಿಲಿಂಡರ್ ದರ ₹50 ಏರಿಕೆ ಮಾಡಿದ್ದರಿಂದ ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿಯಾಗಿ ₹9,500 ಕೋಟಿ ಸಂಗ್ರಹವಾಗಲಿದೆ.

ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಕರ್ನಾಟಕ ಉಸ್ತುವಾರಿ

'ಇದೇ ಅಚ್ಛೇ ದಿನವಾ?'

ನರೇಂದ್ರ ಮೋದಿ ಅವರು 2014ರ ಲೋಕಸಭಾ ಚುನಾವಣೆಗೂ ಮುನ್ನ 'ಅಚ್ಛೇ ದಿನಗಳನ್ನು ತರುತ್ತೇನೆ' ಎಂದು ಘೋಷಿಸಿದ್ದರು. ಆ ಒಳ್ಳೆಯ ದಿನಗಳು ಬಂದವಾ? ಎಲ್ಲದರ ಬೆಲೆಯನ್ನು ಏರಿಕೆ ಮಾಡಿ, ಇದ್ದ ಒಳ್ಳೆಯ ದಿನಗಳನ್ನೂ ಓಡಿಸಿದರು. ಮನಮೋಹನ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ಪ್ರತಿ 10 ಗ್ರಾಂ ಚಿನ್ನದ ಬೆಲೆ ₹28,000ದಷ್ಟಿತ್ತು. ಮೋದಿ ಅವರ ಈ ಕಾಲದಲ್ಲಿ ಅದರ ಬೆಲೆ ₹96,000ಕ್ಕೆ ಏರಿಕೆಯಾಗಿದೆ. ಯುಪಿಎ ಸರ್ಕಾರದ ಅವಧಿಯಲ್ಲಿ ಪ್ರತಿ ಡಾಲರ್‌ನ ಎದುರು ರೂಪಾಯಿ ಮೌಲ್ಯ ₹56ರಷ್ಟಿತ್ತು, ತಾವು ಅಧಿಕಾರಕ್ಕೆ ಬಂದರೆ, ಡಾಲರ್ ಎದುರು ರೂಪಾಯಿ ಮೌಲ್ಯ ₹1ಕ್ಕೆ ಇಳಿಸುತ್ತೇನೆ ಎಂದು ಮೋದಿ ಹೋದಲ್ಲೆಲ್ಲಾ ಘೋಷಿಸಿಕೊಂಡಿದ್ದರು. ಆದರೆ ಈಗ ಡಾಲರ್ ಬೆಲೆ ₹87ದಾಟಿದೆ. 50 ಕೆ.ಜಿ ಸಿಮೆಂಟ್ ಚೀಲದ ಬೆಲೆ ₹250ರಿಂದ ₹450ಕ್ಕೆ, ಗೊಬ್ಬರದ ಬೆಲೆ ₹1,350ಕ್ಕೆ ಏರಿಕೆಯಾಗಿದೆ. ಪ್ರತಿಯೊಂದರ ಬೆಲೆಯೂ ಏರಿಕೆಯಾಗಿ ಜನರು ಹೈರಾಣಾಗಿ ಹೋಗಿದ್ದಾರೆ. ಮೋದಿ ಅವರು ಹೇಳಿದ್ದ ಒಳ್ಳೆಯ ದಿನ ಇದೇನಾ?

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಎಲ್ಲದಕ್ಕೂ ಮೋದಿಯೇ ಕಾರಣ'

ದೇಶದಲ್ಲಿನ ಎಲ್ಲ ಬೆಲೆ ಏರಿಕೆಗೂ ನರೇಂದ್ರ ಮೋದಿ ಮತ್ತು ಅವರ ಸರ್ಕಾರವೇ ನೇರ ಕಾರಣ. ಕೇಂದ್ರವು ಡೀಸೆಲ್ ಬೆಲೆ ಏರಿಕೆ ಮಾಡಿದ್ದರಿಂದ ಸಾರಿಗೆ ವೆಚ್ಚ, ವಿದ್ಯುತ್ ದರ, ಕೃಷಿ ವೆಚ್ಚ, ತರಕಾರಿ-ದಿನಸಿ ಬೆಲೆ, ಸಿಮೆಂಟ್-ಕಬ್ಬಿಣದಂತಹ ನಿರ್ಮಾಣ ಸಾಮಗ್ರಿಗಳ ವೆಚ್ಚ ವಿಪರೀತ ಏರಿಕೆಯಾಗಿದೆ. ಅವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಒಂದು ಕೋಳಿಯ ಮೊಟ್ಟೆ ಬೆಲೆ ₹1.50-₹2ರಷ್ಟು ಇತ್ತು, ಈಗ ಒಂದು ಮೊಟ್ಟೆಗೆ ಜನ ಸಾಮಾನ್ಯ ₹7 ತೆರಬೇಕಿದೆ. ಗೊಬ್ಬರದ ಬೆಲೆ ಏರಿಕೆ, ಕೋಳಿ ಮೇವಿನ ಬೆಲೆ ಏರಿಕೆ, ಎಲ್ಲದರ ಮೇಲೂ ವಿಪರೀತ ಜಿಎಸ್‌ಟಿ ಹೇರಿದ ಕಾರಣಕ್ಕೆ ಪ್ರತಿ ವಸ್ತುಗಳೂ ದುಬಾರಿಯಾಗಿವೆ. ಬಿಜೆಪಿ ಮತ್ತು ಜೆಡಿಎಸ್ ನಾಯಕರು ನ್ಯಾಯವಾಗಿ ಮೋದಿ ಅವರ ಸರ್ಕಾರದ ವಿರುದ್ಧ ಹೋರಾಡಬೇಕು. ಆದರೆ ಅವರು ನಾಚಿಕೆಬಿಟ್ಟು, ರಾಜ್ಯ ಸರ್ಕಾರದ ವಿರುದ್ಧ ಜನಾಕ್ರೋಶ ಯಾತ್ರೆ ನಡೆಸುತ್ತಿದ್ದಾರೆ.

ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಸುದ್ದಿ 2 ನಿಮಿಷ

ಎರಡು ರೈಲುಗಳಿಗೆ ಶೀಘ್ರ ಆಧುನಿಕ ಎಲ್‌ಎಚ್‌ಬಿ ಬೋಗಿ

ಬೆಂಗಳೂರು: ಬೆಂಗಳೂರು-ಮುರುಡೇಶ್ವರ ಮತ್ತು ಬೆಂಗಳೂರು-ಕಣ್ಣೂರು ಎಕ್ಸ್‌ಪ್ರೆಸ್ ರೈಲುಗಳಿಗೆ ಆಧುನಿಕ ಎಲ್‌ಎಚ್‌ಬಿ (ಲಿಂಕ್ ಹಾಫ್ಮನ್ ಬುಶ್) ಬೋಗಿಗಳನ್ನು ಅಳವಡಿಸಲು ನೈರುತ್ಯ ರೈಲ್ವೆ ಸಜ್ಜಾಗಿದೆ.

ಪ್ರಯಾಣಿಕರ ಸುರಕ್ಷತೆ ಮತ್ತು ಸೌಕರ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ರೈಲುಗಳ ಸಾಂಪ್ರದಾಯಿಕ ಬೋಗಿಗಳನ್ನು ಬದಲಾಯಿಸಿ ಅತ್ಯಾಧುನಿಕ ಎಲ್‌ಎಚ್‌ಬಿ ಬೋಗಿ ಅಳವಡಿಸಲಾಗುವುದು ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಎಂವಿಟಿ ಬೆಂಗಳೂರು-ಮುರುಡೇಶ್ವರ ಎಕ್ಸ್‌ಪ್ರೆಸ್ ರೈಲು ಮೇ 5ರಿಂದ ಎಲ್‌ಎಚ್‌ಬಿ ಬೋಗಿಗಳೊಂದಿಗೆ ಸಂಚಾರ ನಡೆಸಲಿದೆ. ಮುರುಡೇಶ್ವರದಿಂದ ಬೆಂಗಳೂರಿಗೆ ಬರುವ ರೈಲಿನಲ್ಲಿ ಮೇ 6ರಿಂದ ಹೊಸ ಬೋಗಿ ಇರಲಿವೆ. ಕೆಎಸ್‌ಆರ್ ಬೆಂಗಳೂರು-ಕಣ್ಣೂರು ಎಕ್ಸ್‌ಪ್ರೆಸ್ ಮೇ 7ರಿಂದ ಹಾಗೂ ಕಣ್ಣೂರು-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಮೇ 8ರಿಂದ ಎಲ್‌ಎಚ್‌ಬಿ ಬೋಗಿಗಳೊಂದಿಗೆ ಸಂಚಾರ ನಡೆಸಲಿವೆ.

ಈ ಹಿಂದೆ 22 ಬೋಗಿಗಳನ್ನು ಹೊಂದಿದ್ದ 'ಐಸಿಎಫ್ ರೇಕ್'ನ ಬದಲಿಗೆ ಇನ್ನು ಮುಂದೆ 20 ಬೋಗಿಗಳ 'ಎಲ್‌ಎಚ್‌ಬಿ ರೇಕ್' ಇರಲಿದೆ.

ಮೈಸೂರು ವಿಶ್ವವಿದ್ಯಾಲಯ–ಶಾರದಾ ಪೀಠ ಒಪ್ಪಂದ

ಮೈಸೂರು: ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ಪ್ರಾಚ್ಯವಿದ್ಯಾ ಸಂಶೋಧನಾಲಯವು (ಒಆರ್‌ಐ) ಶೃಂಗೇರಿಯ ಶಂಕರಾಚಾರ್ಯ ಮಹಾಸಂಸ್ಥಾನ ಶಾರದಾ ಪೀಠದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಅಪ್ರಕಟಿತ ಹಸ್ತಪ್ರತಿಗಳಲ್ಲಿರುವ ಕೃತಿಗಳ ಅಧ್ಯಯನ ಈ ಒಪ್ಪಂದದ ಉದ್ದೇಶ.

ಅಂದಾಜು 13 ಸಾವಿರ ಅಪ್ರಕಟಿತ ಹಸ್ತಪ್ರತಿಗಳಲ್ಲಿರುವ ಕೃತಿಗಳ ವರ್ಣನಾತ್ಮಕಸೂಚಿಯನ್ನು (ಕ್ಯಾಟಲಾಗ್) ಸಿದ್ಧಪಡಿಸಲಾಗುವುದು. ಆಯ್ದ ಕೃತಿಗಳನ್ನು ಪುಸ್ತಕರೂಪದಲ್ಲಿ ಮುದ್ರಿಸಲಾಗುವುದು. ವಿವರಗಳನ್ನು ಸುಲಭವಾಗಿ ಹುಡುಕಲು ಸಹಕಾರಿಯಾಗುವಂತೆ ಡಿಜಿಟಲೀಕರಣ ಮಾಡಲಾಗುವುದು.

₹ 92.40 ಲಕ್ಷ ಮೊತ್ತದ ಯೋಜನೆಯ ಒಪ್ಪಂದಕ್ಕೆ ಕುಲಸಚಿವೆ ಎಂ.ಕೆ.ಸವಿತಾ ಹಾಗೂ ಶೃಂಗೇರಿ ಶಾರದಾ ಪೀಠದ ಆಡಳಿತಾಧಿಕಾರಿ ಪಿ.ಎ.ಮುರಳಿ ಗುರುವಾರ ಸಹಿ ಹಾಕಿದರು. ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹಾಗೂ ಒಆರ್‌ಐ ನಿರ್ದೇಶಕ ಡಿ.ಪಿ. ಮಧುಸೂದನಾಚಾರ್ಯ ಪಾಲ್ಗೊಂಡಿದ್ದರು.

ಭೋವಿ ನಿಗಮದ ಅಕ್ರಮ ಲೀಲಾವತಿ ಬಂಧನ

ಪ್ರಜಾವಾಣಿ ವಾರ್ತೆ

ಆರ್‌.ಲೀಲಾವತಿ

ಬೆಂಗಳೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ, ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕಿ ಆರ್. ಲೀಲಾವತಿ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಬಂಧಿಸಿದೆ.

2018–2023ರ ನಡುವೆ ನಿಗಮದ ವಿವಿಧ ಕಲ್ಯಾಣ ಕಾರ್ಯಕ್ರಮಗಳಡಿ ಫಲಾನುಭವಿಗಳ ಹೆಸರಿನಲ್ಲಿ ಮತ್ತು ಗುತ್ತಿಗೆ ಪಡೆದ ಕಂಪನಿಗಳ ಹೆಸರಿನಲ್ಲಿ ನಕಲಿ ಖಾತೆಗಳನ್ನು ತೆರೆದು ₹97 ಕೋಟಿಯನ್ನು ವರ್ಗಾವಣೆ ಮಾಡಲಾಗಿತ್ತು. ಆ ಅವಧಿಯಲ್ಲಿ ನಿಗಮದ ಪ್ರಧಾನ ವ್ಯವಸ್ಥಾಪಕರಾಗಿದ್ದ ಬಿ.ಕೆ.ನಾಗರಾಜಪ್ಪ ಮತ್ತು ಆರ್. ಲೀಲಾವತಿ ಅಕ್ರಮದಲ್ಲಿ ನೇರವಾಗಿ ಭಾಗಿಯಾಗಿದ್ದಾರೆ ಎಂಬುದಕ್ಕೆ ಹಲವು ಸಾಕ್ಷ್ಯಗಳು ಲಭ್ಯವಾಗಿವೆ ಎಂದು ಇ.ಡಿ ತಿಳಿಸಿದೆ.

ನಾಗರಾಜಪ್ಪ ಅವರನ್ನು 14 ದಿನದ ಕಸ್ಟಡಿಗೆ ಪಡೆಯಲಾಗಿದೆ. ನಾಗರಾಜಪ್ಪ, ಲೀಲಾವತಿ ಮತ್ತು ನಿಗಮದ ಸಿಬ್ಬಂದಿ ಸುಬ್ಬಪ್ಪ ಅವರು ಸಂಚು ಮಾಡಿ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ಅಕ್ರಮ ಪುಷ್ಟೀಕರಿಸುವ ಹಲವು ದಾಖಲೆಗಳಿವೆ ಎಂದು ಇ.ಡಿ ಹೇಳಿದೆ.

ಲೀಲಾವತಿ ಅವರು ಸೋದರಿ ಮಂಗಳಾ ರಾಮು ಅವರ ಖಾತೆಗೆ ನಿಗಮದ ಹಣ ವರ್ಗಾವಣೆ ಮಾಡಿಸಿದ್ದಾರೆ. ಆ ಖಾತೆಯಿಂದ ಸ್ನೇಹಿತರು, ಸಂಬಂಧಿಗಳ ಖಾತೆಗೆ ಹಣ ವರ್ಗಾವಣೆ ಮಾಡಿಸಿ ಕೊಂಡಿದ್ದಾರೆ. ನಂತರ ಕೆಲವರಿಂದ ನಗದು ಪಡೆದಿದ್ದಾರೆ ಮತ್ತು ಸ್ವಲ್ಪ ಹಣವನ್ನು ತಮ್ಮ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎಂದು ಇ.ಡಿ ಮಾಹಿತಿ ನೀಡಿದೆ.

ಬ್ಯಾಂಕ್ ಖಾತೆ ವಹಿವಾಟುಗಳು, ಚೆಕ್ ವಹಿವಾಟು, ಲೆಕ್ಕದ ಪುಸ್ತಕ ಸೇರಿ ಹಲವು ದಾಖಲೆ ವಶಕ್ಕೆ ಪಡೆಯಲಾಗಿದೆ. ಲೀಲಾವತಿ ಅವರನ್ನು ಆರ್ಥಿಕ ಅಪರಾಧಗಳ ವಿಶೇಷ ಕೋರ್ಟ್‌ಗೆ ಹಾಜರುಪಡಿಸಿ, ಏಳು ದಿನ ಅವಧಿಗೆ ಕಸ್ಟಡಿ ಪಡೆಯಲಾಗಿದೆ ಎಂದು ವಿವರ ನೀಡಿದೆ.

ಪ್ರಜ್ಞೆ ತಪ್ಪಿಸಿ ಸಾಮೂಹಿಕ ಅತ್ಯಾಚಾರ

ತಡರಾತ್ರಿ ನೀರು ಕೇಳಿ ಪ್ರಜ್ಞೆ ತಪ್ಪಿದ ಬಂಗಾಳದ ಯುವತಿ • ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಉಳ್ಳಾಲ ಠಾಣೆ ವ್ಯಾಪ್ತಿಯ ಮುನ್ನೂರು ಗ್ರಾಮದ ನಿರ್ಜನ ಪ್ರದೇಶದಲ್ಲಿ ಪಶ್ಚಿಮ ಬಂಗಾಳದ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ. ಈ ಸಂಬಂಧ ರಿಕ್ಷಾ ಚಾಲಕ, ಆತನ ಇಬ್ಬರು ಸ್ನೇಹಿತರನ್ನು ಪೊಲೀಸರು ಬಂಧಿಸಿದ್ದಾರೆ.

'ಗುರುವಾರ ನಸುಕಿನಲ್ಲಿ ನೀರು ಕೇಳುತ್ತ ಯುವತಿ ಮುನ್ನೂರು ಗ್ರಾಮದ ಮನೆಯೊಂದರ ಬಾಗಿಲು ಬಡಿದಿದ್ದಳು. ಮೈತುಂಬ ಗಾಯಗೊಂಡಿದ್ದ ಆಕೆ ಸ್ವಲ್ಪಹೊತ್ತಿನಲ್ಲೆ ಪ್ರಜ್ಞೆ ತಪ್ಪಿದ್ದಳು. ಚಿಕಿತ್ಸೆ ಬಳಿಕ ಪೊಲೀಸರಿಗೆ ಹೇಳಿಕೆ ನೀಡಿರುವ ಆಕೆ, ರಿಕ್ಷಾ ಚಾಲಕನೊಬ್ಬ ಆಹಾರದಲ್ಲಿ ಮತ್ತು ಬರುವ ಪದಾರ್ಥ ಸೇರಿಸಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಇನ್ನಿಬ್ಬರು ಸ್ನೇಹಿತರ ಜೊತೆ ಸೇರಿ ಕಾರಿನಲ್ಲಿ ಅತ್ಯಾಚಾರ ನಡೆಸಿರುವ ಶಂಕೆ ಇದೆ ಎಂದು ತಿಳಿಸಿದ್ದಾಳೆ' ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

ಪ್ರಭುರಾಜ್


ಮಿಥುನ್

ರಿಕ್ಷಾ ಚಾಲಕ, ಮೂಲ್ಕಿ ಕಾರ್ನಾಡು ಲಿಂಗಪ್ಪಯ್ಯಕಾಡಿನ ಕೆ.ಎಸ್.ರಾವ್ ನಗರದ ನಿವಾಸಿ ಪ್ರಭುರಾಜ್ (38), ಕೋಟೆಕಾರು ಕುಂಪಲದ ಚಿತ್ರಾಂಜಲಿ ನಗರದ ನಿವಾಸಿ ಮಿಥುನ್ (37) ಹಾಗೂ ಮಂಗಳೂರಿನ ಪಡೀಲ್ ಕೋಡಕ್ಕಲ್ ನಿವಾಸಿ ಮನೀಶ್ (30) ಅವರನ್ನು ಬಂಧಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

'ಸುಮಾರು 20 ವರ್ಷ ವಯಸ್ಸಿನ ಸಂತ್ರಸ್ತೆ ಪಶ್ಚಿಮ ಬಂಗಾಳದ ಕೂಚ್ ಬಿಹಾರ್‌ನವಳು. ಕೇರಳದ ಪ್ಲೈವುಡ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಹೊಸ ಕೆಲಸ ಅರಸುತ್ತಾ ಗೆಳೆಯನ ಜೊತೆ ಮಂಗಳೂರಿಗೆ ಬಂದಿದ್ದಳು. ಬಳಿಕ ಆಕೆ ಮತ್ತು ಗೆಳೆಯನಿಗೆ ಜಗಳವಾಗಿತ್ತು. ಈ ಮಧ್ಯೆ ಆಕೆಯ ಮೊಬೈಲ್ ಹಾನಿಗೊಂಡಿತ್ತು. ಆಕೆ ಆಟೊರಿಕ್ಷಾ ಹತ್ತಿದ್ದಳು. ಚಾಲಕ ಆಕೆಯನ್ನು ಮೊಬೈಲ್ ದುರಸ್ತಿ ಅಂಗಡಿಗೆ ಕರೆದೊಯ್ದಿದ್ದ. ಮೊಬೈಲ್ ದುರಸ್ತಿ ಬಳಿಕ ಯುವತಿ, ಬಂಗಾಳಕ್ಕೆ ತೆರಳಲು ಸಮೀಪದ ರೈಲು ನಿಲ್ದಾಣಕ್ಕೆ ತನ್ನನ್ನು ಬಿಡುವಂತೆ ರಿಕ್ಷಾ ಚಾಲಕನಲ್ಲಿ ಕೋರಿದ್ದಳು' ಎಂದು ಅವರು ಮಾಹಿತಿ ನೀಡಿದ್ದಾರೆ.

ಯುವತಿ ಗುರುವಾರ ನಸುಕಿನಲ್ಲಿ ಮುನ್ನೂರು ಕೊಟ್ಟಾರಿಮೂಲೆ ಬಂಗುಲೆ ನೇತ್ರಾವತಿ ನದಿ ತೀರ ಸಮೀಪದ ಮನೆಯೊಂದರ ಬಾಗಿಲು ಬಡಿದು ನೀರು ಕೇಳಿದ್ದಳು. ಮನೆಯವರು ಬಾಗಿಲು ತೆಗೆದ ಸ್ವಲ್ಪ ಹೊತ್ತಿನಲ್ಲೇ ಆಕೆ ಪ್ರಜ್ಞೆ ತಪ್ಪಿದ್ದಳು. ಈ ವೇಳೆ ಅವರು ಪೊಲೀಸ್ ಸಹಾಯವಾಣಿಗೆ (112) ಕರೆ ಮಾಡಿ ವಿಷಯ ತಿಳಿಸಿದ್ದರು. ಸ್ಥಳಕ್ಕೆ ಧಾವಿಸಿದ ಪೊಲೀಸರು ಸಂತ್ರಸ್ತೆಯನ್ನು ಆಸ್ಪತ್ರೆಗೆ ದಾಖಲಿಸಿದ್ದರು.

'ರಿಕ್ಷಾ ಚಾಲಕ ಆಹಾರದಲ್ಲಿ ಮತ್ತು ಬರುವ ಪದಾರ್ಥ ಬೆರೆಸಿದ್ದರಿಂದ ಪ್ರಜ್ಞೆ ಕಳೆದುಕೊಂಡಿದ್ದೆ. ಪ್ರಜ್ಞೆ ಮರಳಿದಾಗ ಕಾರೊಂದರಲ್ಲಿ ಆಟೊಚಾಲಕ ಸೇರಿ ಮೂವರು ಯುವಕರ ಜೊತೆ ಇದ್ದೆ. ಕಿರುಚಾಡಿದಾಗ ನನ್ನನ್ನು ರಸ್ತೆ ಬದಿಗೆ ಬಿಟ್ಟು ಪರಾರಿಯಾದರು. ನಾನು ಪ್ರಜ್ಞಾಹೀನಗೊಂಡಿದ್ದಾಗ ಮೂವರು ನನ್ನ ಮೇಲೆ ಅತ್ಯಾಚಾರ ನಡೆಸಿರಬಹುದು ಎಂದು ಯುವತಿ ಹೇಳಿಕೆ ನೀಡಿದ್ದಾಳೆ' ಎಂದು ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

'ಸಾಕಷ್ಟು ಸಾಂತ್ವನದ ಬಳಿಕ ಯುವತಿ ನಡೆದ ಘಟನೆಯ ಬಗ್ಗೆ ತಿಳಿಸಿದ್ದಾಳೆ. ಈ ಪ್ರಕರಣದ ತನಿಖೆ ಮುಂದುವರಿದಿದೆ' ಎಂದು ಹೇಳಿದ್ದಾರೆ.

ಆರೋಪಿಗಳ ವಿರುದ್ಧ ಉಳ್ಳಾಲ ಠಾಣೆಯಲ್ಲಿ ಬಿಎನ್‌ಎಸ್‌ನ ವಿವಿಧ ಸೆಕ್ಷನ್ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ರಿಕ್ಷಾದ ದೃಶ್ಯ ಸೆರೆ

ಮುನ್ನೂರು ಗ್ರಾಮದ ನಿರ್ಜನ ಪ್ರದೇಶಕ್ಕೆ ಆಟೊ ರಿಕ್ಷಾವೊಂದು ಮಧ್ಯರಾತ್ರಿ ತೆರಳಿದ್ದ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದಾಖಲಾಗಿದ್ದವು. ಈ ದೃಶ್ಯಗಳು ಆರೋಪಿಗಳ ಪತ್ತೆಗೆ ನೆರವಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿ: ಮುಖ್ಯ ಪರೀಕ್ಷೆಯ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ 384 ಹುದ್ದೆಗಳಿಗೆ ನೇಮಕಾತಿಗೆ ಮೇ 3, 5, 7 ಮತ್ತು 9ರಂದು ಮುಖ್ಯ ಪರೀಕ್ಷೆ ನಡೆಸಲು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಿರ್ಧರಿಸಿದ್ದು, ಪರೀಕ್ಷಾ ವೇಳಾಪಟ್ಟಿಯನ್ನು ಗುರುವಾರ ಪ್ರಕಟಿಸಿದೆ.

ಅರ್ಹತಾ ಪರೀಕ್ಷೆ ಕನ್ನಡ ಮೇ 3ರಂದು ಬೆಳಿಗ್ಗೆ 10ರಿಂದ 12 ಗಂಟೆಯವರೆಗೆ, ಇಂಗ್ಲಿಷ್ ಪರೀಕ್ಷೆ ಅದೇ ದಿನ ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ನಡೆಯಲಿದೆ.

ಪತ್ರಿಕೆ- 1 (ಪ್ರಬಂಧ) ಮೇ 5ರಂದು ಬೆಳಿಗ್ಗೆ 10ರಿಂದ 1, ಪತ್ರಿಕೆ 2 (ಸಾಮಾನ್ಯ ಅಧ್ಯಯನ- 1) ಮೇ 7ರಂದು ಬೆಳಿಗ್ಗೆ 9ರಿಂದ 12, ಪತ್ರಿಕೆ 3 (ಸಾಮಾನ್ಯ ಅಧ್ಯಯನ–2) ಮೇ 7ರಂದು ಮಧ್ಯಾಹ್ನ 2ರಿಂದ 5, ಪತ್ರಿಕೆ 4 (ಸಾಮಾನ್ಯ ಅಧ್ಯಯನ–3) ಮೇ 9ರಂದು ಬೆಳಿಗ್ಗೆ 9ರಿಂದ 12, ಪತ್ರಿಕೆ 5 (ಸಾಮಾನ್ಯ ಅಧ್ಯಯನ–4) ಮೇ 9ರಂದು ಮಧ್ಯಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ನಡೆಯಲಿದೆ. ವೇಳಾ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ರಮಣದೀಪ್ ಚೌಧರಿ ತಿಳಿಸಿದ್ದಾರೆ.

₹ 50 ಕೋಟಿ ನಾಯಿ; ಇ.ಡಿ ಬೇಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವ್ಯಕ್ತಿಯೊಬ್ಬರು ₹50 ಕೋಟಿ ಕೊಟ್ಟು ಜಗತ್ತಿನ ಅತ್ಯಂತ ದುಬಾರಿ ನಾಯಿಯೊಂದನ್ನು ಖರೀದಿಸಿದ್ದಾರೆ' ಎಂದು ಕೆಲವು ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಈಚೆಗೆ ಪ್ರಕಟವಾಗಿದ್ದ ವರದಿಯು, ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳನ್ನೇ ಬೇಸ್ತು ಬೀಳಿಸಿದೆ.

ನಾಯಿ ಖರೀದಿಯಲ್ಲಿ ಹವಾಲಾ ವಹಿವಾಟು ನಡೆದಿದೆ ಎಂದು ಶಂಕಿಸಿ ಇ.ಡಿ ಅಧಿಕಾರಿಗಳು ಪರಿಶೀಲಿಸಿದಾಗ, ಅದರ ಬೆಲೆ ₹1 ಲಕ್ಷದಷ್ಟೂ ಇಲ್ಲ ಎಂಬುದು ಗೊತ್ತಾಗಿದೆ.

ಬೆಂಗಳೂರಿನ ಜೆ.ಪಿ. ನಗರದ ನಿವಾಸಿಯಾದ ಎಸ್. ಸತೀಶ್ ಅವರು ಇದೇ ಜನವರಿಯಲ್ಲಿ ತೋಳ-ಕಕೇಷಿಯನ್ ಶೆಫರ್ಡ್ ನಾಯಿಯ ಸಮ್ಮಿಲನದಿಂದ ಹುಟ್ಟಿದ ವಾಲ್ಫ್‌ಡಾಗ್ ಖರೀದಿಸಿದ್ದಾರೆ. ಅದಕ್ಕಾಗಿ ಅವರು ₹50 ಕೋಟಿ ಪಾವತಿಸಿದ್ದಾರೆ ಎಂದು ಇದೇ ಫೆಬ್ರುವರಿಯಲ್ಲಿ ವರದಿಗಳು ಪ್ರಕಟವಾಗಿದ್ದವು.

ಸಾಮಾಜಿಕ ಜಾಲತಾಣಗಳಲ್ಲೂ ಸತೀಶ್ ಮತ್ತು ವಾಲ್ಫ್‌ಡಾಗ್‌ನ ಚಿತ್ರ-ವಿಡಿಯೊಗಳು ಭಾರಿ ಸಂಖ್ಯೆಯಲ್ಲಿ ಹಂಚಿಕೆಯಾದವು. ಸತೀಶ್ ಅವರು ಈ ಹಿಂದೆ ₹ 28 ಕೋಟಿ ಕೊಟ್ಟು ನಾಯಿಯೊಂದನ್ನು ಖರೀದಿಸಿದ್ದರು ಎಂಬ ಸುದ್ದಿಯೂ ಮುನ್ನೆಲೆಗೆ ಬಂತು. ವಾಲ್ಫ್‌ಡಾಗ್‌ನ ಜನಪ್ರಿಯತೆ ಹೆಚ್ಚಿದಂತೆಯೇ, ಬೆಂಗಳೂರಿನ ವ್ಯಕ್ತಿಯೊಬ್ಬರು ಈ ಬಗ್ಗೆ ಇ.ಡಿಗೆ ಪತ್ರ ಬರೆದಿದ್ದರು.

'ನಾಯಿಯ ಹರಾಜು, ಅದನ್ನು ಭಾರತಕ್ಕೆ ಆಮದು ಮಾಡಿಕೊಂಡ ಬಗ್ಗೆ ಮತ್ತು ಹಣ ಪಾವತಿಯಾದ ಕುರಿತು ಯಾವುದೇ ಮಾಹಿತಿಗಳು ಲಭ್ಯವಿಲ್ಲ. ನಾಯಿಯ ಮೌಲ್ಯ ₹ 50 ಕೋಟಿ ಆಗಿದ್ದರೆ ಹವಾಲಾ ಮೂಲಕ ಹಣ ಸಾಗಣೆ ಆಗಿರಬಹುದು. ಅನುಮತಿ ಇಲ್ಲದೆ ಆ ನಾಯಿಯನ್ನು, ಕಳ್ಳಸಾಗಣೆ ಮೂಲಕ ಭಾರತಕ್ಕೆ ತಂದಿರಬಹುದು. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಆ ವ್ಯಕ್ತಿ ಪತ್ರದಲ್ಲಿ ಕೋರಿದ್ದರು. ಪತ್ರದ ಆಧಾರದಲ್ಲಿ ಇ.ಡಿ ಅಧಿಕಾರಿಗಳು ಗುರುವಾರ ಬೆಳಿಗ್ಗೆ, ಸತೀಶ್ ಅವರ ಮನೆ ಬಾಗಿಲು ಬಡಿದರು. ₹50 ಕೋಟಿ ನಾಯಿಯ ಬಗ್ಗೆ ಮಾಹಿತಿ ಕೇಳಿದರು.

'ಮೊದಲಿಗೆ ನಾಯಿ ಸ್ನೇಹಿತನ ಬಳಿ ಇದೆ ಎಂದು ವಾದಿಸಿದ ಸತೀಶ್, ಅಂತಹ ನಾಯಿಯನ್ನು ತಾನು ಖರೀದಿಸಿಲ್ಲ ಎಂಬುದನ್ನು ಒಪ್ಪಿಕೊಂಡರು. ಚಿತ್ರ ಮತ್ತು ವಿಡಿಯೊದಲ್ಲಿ ಇದ್ದ ನಾಯಿಯ ಬಗ್ಗೆ ಪ್ರಶ್ನಿಸಿದಾಗ, ಪಕ್ಕದ ಮನೆಗೆ ಕರೆದೊಯ್ದರು. ಅಲ್ಲಿದ್ದ ನಾಯಿಯನ್ನು ತೋರಿಸಿದರು. ಅದು ಕಕೇಷಿಯನ್ ಶೆಫರ್ಡ್ ತಳಿಯ ನಾಯಿಯಷ್ಟೇ ಆಗಿತ್ತು. ಅದರ ಬೆಲೆ ₹1 ಲಕ್ಷಕ್ಕಿಂತ ಕಡಿಮೆ ಇರಬಹುದು ಎಂಬುದು ಪತ್ತೆಯಾಯಿತು' ಎಂದು ಇ.ಡಿ ಮೂಲಗಳು ತಿಳಿಸಿವೆ ಎಂದು ಪಿಟಿಐ ವರದಿ ಮಾಡಿದೆ.

'ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯತೆಗಾಗಿ ಸುಳ್ಳು ಹೇಳಿ ನಾಯಿಯ ಚಿತ್ರ ಮತ್ತು ವಿಡಿಯೊವನ್ನು ಹಾಕಲಾಗಿದೆ. ಅದನ್ನು ಪರಿಶೀಲಿಸದೆ ಮಾಧ್ಯಮಗಳು ವರದಿ ಮಾಡಿವೆ. ಮತ್ತೆ ಈ ರೀತಿಯ ಸುಳ್ಳು ಮತ್ತು ತಪ್ಪು ಮಾಹಿತಿಯನ್ನು ನೀಡಿ, ಪೋಸ್ಟ್ ಮಾಡಬೇಡಿ ಎಂದು ಅವರಿಗೆ ಎಚ್ಚರಿಕೆ ನೀಡಲಾಗಿದೆ' ಎಂದು ಇ.ಡಿ ಮೂಲಗಳು ಖಚಿತಪಡಿಸಿವೆ.

ನಾಯಿಯ ಹಿಂದೆ ಇರಬಹುದಾದ ಕಳ್ಳಸಾಗಣೆ–ಹವಾಲಾ ಜಾಲದ ಪತ್ತೆಗೆ ಹೋಗಿದ್ದ ಇ.ಡಿ ಅಧಿಕಾರಿಗಳು, ಬರಿಗೈಯಲ್ಲಿ ಮರಳಿದ್ದಾರೆ.

ಇ–ಸ್ವತ್ತು ಸುಧಾರಣೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶಗಳ ಆಸ್ತಿಗಳಿಗೆ ಇ-ಸ್ವತ್ತು ದಾಖಲೆ ವಿತರಣೆಯಲ್ಲಿನ ಸಮಸ್ಯೆಗಳ ಕುರಿತು ಅಧ್ಯಯನ ನಡೆಸಿ, ಪರಿಹಾರ ಸೂಚಿಸಲು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ 12 ಸದಸ್ಯರ ಸಮಿತಿಯನ್ನು ನೇಮಿಸಿ ಪಂಚಾಯತ್ ರಾಜ್ ಆಯುಕ್ತೆ ಅರುಂಧತಿ ಚಂದ್ರಶೇಖರ್ ಗುರುವಾರ ಆದೇಶ ಹೊರಡಿಸಿದ್ದಾರೆ.

ಇ-ಸ್ವತ್ತು ಮತ್ತು ಗ್ರಾಮೀಣ ಆಸ್ತಿಗಳ ತೆರಿಗೆ ನಿಗದಿಗೆ ಸಂಬಂಧಿಸಿದ ವಿಷಯ ತಜ್ಞರೂ ಆಗಿರುವ ಪಂಚಾಯತ್ ರಾಜ್ ಆಯುಕ್ತಾಲಯದ ನಿವೃತ್ತ ಉಪ ನಿರ್ದೇಶಕ ಕೆ.ಜಿ. ಜಗದೀಶ ಅವರನ್ನು ವಿಶೇಷ ಆಹ್ವಾನಿತ ಸದಸ್ಯರನ್ನಾಗಿ ನೇಮಿಸಲಾಗಿದೆ.

ಪಂಚಾಯತ್ ರಾಜ್ ಆಯುಕ್ತಾಲಯದ ಅಭಿವೃದ್ಧಿ ವಿಭಾಗದ ನಿರ್ದೇಶಕರು, ವಿಜಯಪುರ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ವಿಜಯ ಅಜೂರೆ, ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಸದಸ್ಯ ಶಿವಶಂಕರ್ ಪಿ., ಶಹಪುರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜು ಶರಬಯ್ಯ, ನ್ಯಾಮತಿ ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕಿ ಆಶಾ ಎಂ.ಜೆ., ಆನೇಕಲ್ ತಾಲ್ಲೂಕಿನ ಹೆನ್ನಾಗರ ಗ್ರಾಮ ಪಂಚಾಯಿತಿಯ ಪಿಡಿಒ ಸಿದ್ದರಾಜು, ಖಾನಾಪುರ ತಾಲ್ಲೂಕಿನ ಶಿಂಧೋಳಿ ಪಿಡಿಒ ಪ್ರಭಾಕರ್ ಎನ್.ಭಟ್., ಚಿಕ್ಕಮಗಳೂರು ತಾಲ್ಲೂಕಿನ ಕೆ.ಬಿ.ಹಾಳ್ ಪಿಡಿಒ ಚಾಲುಕ್ಯ ಭಾರವಿ ಮತ್ತು ಕಡಬ ತಾಲ್ಲೂಕಿನ ಶಿರಾಡಿ ಪಿಡಿಒ ಯಶವಂತ ಬೆಳ್ಚಡ ಅವರನ್ನು ಸಮಿತಿ ಸದಸ್ಯರಾಗಿ ನೇಮಿಸಲಾಗಿದೆ. ಪಂಚಾಯತ್ ರಾಜ್ ಆಯುಕ್ತಾಲಯದ ಅಭಿವೃದ್ಧಿ ವಿಭಾಗದ ಉಪ ನಿರ್ದೇಶಕರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ–1993ರ ಸೆಕ್ಷನ್ 199ಕ್ಕೆ ಇ-ಸ್ವತ್ತು ವಿಷಯಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ತರಲು ಸಮಿತಿ ಸಲಹೆಗಳನ್ನು ನೀಡಬೇಕಿದೆ. ಇ-ಸ್ವತ್ತು ವಿತರಣೆಯಲ್ಲಿನ ಸಮಸ್ಯೆಗಳನ್ನು ಅಧ್ಯಯನ ನಡೆಸಿ, ಪರಿಹಾರ ಸೂಚಿಸಬೇಕು. ಇ-ಸ್ವತ್ತು ತಂತ್ರಾಂಶದಲ್ಲಿ ಅಗತ್ಯ ಬದಲಾವಣೆಗಳಿಗೂ ಸಮಿತಿ ಸಲಹೆ ನೀಡಬೇಕಿದೆ. ವರದಿ ಸಲ್ಲಿಸಲು ಎರಡು ತಿಂಗಳ ಗಡುವು ನೀಡಲಾಗಿದೆ.

'ತುಂಗಭದ್ರಾ: 19ನೇ ಗೇಟ್ ಅಳವಡಿಕೆ ಶೀಘ್ರ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯಲ್ಲಿ ಕಳೆದ ವರ್ಷ ಆಗಸ್ಟ್‌ನಲ್ಲಿ ಕೊಚ್ಚಿಹೋಗಿದ್ದ 19ನೇ ಕ್ರಸ್ಟ್‌ಗೇಟ್ ಇದ್ದ ಸ್ಥಳದಲ್ಲಿ ಕಾಯಂ ಕ್ರಸ್ಟ್‌ಗೇಟ್ ಅಳವಡಿಸುವ ಗುತ್ತಿಗೆ ಅಹಮದಾಬಾದ್‌ನ ಹಾರ್ಡ್‌ವೇರ್ ಟೂಲ್ಸ್ ಆ್ಯಂಡ್ ಮಷಿನರಿ ಪ್ರಾಜೆಕ್ಟ್ ಕಂಪನಿಗೆ ಸಿಕ್ಕಿದೆ.

'₹1.98 ಕೋಟಿ ವೆಚ್ಚದಲ್ಲಿ ಒಂದು ಕ್ರಸ್ಟ್‌ಗೇಟ್ ಅಳವಡಿಸಲು ಕಂಪನಿ ಒಪ್ಪಿದ್ದು, ಶೀಘ್ರವೇ ಕೆಲಸ ಆರಂಭವಾಗಲಿದೆ. ಶಿಥಿಲಗೊಂಡಿದೆ ಎಂದು ಹೇಳಲಾದ ಇತರ ಕ್ರಸ್ಟ್‌ಗೇಟ್‌ಗಳನ್ನು ಬದಲಿಸುವ ಬಗ್ಗೆ ಸದ್ಯ ಯಾವುದೇ ನಿರ್ಧಾರವಾಗಿಲ್ಲ' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸಿಇಟಿ: ನಕಲಿ ಅಭ್ಯರ್ಥಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಗುರುವಾರ ಸಿಇಟಿ ಪರೀಕ್ಷೆ ಬರೆಯಲು ಬಂದಿದ್ದ ನಕಲಿ ಅಭ್ಯರ್ಥಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪತ್ತೆ ಮಾಡಿದೆ.

ಮಲ್ಲೇಶ್ವರದ ಸಿಲ್ವರ್ ವ್ಯಾಲಿ ಪಬ್ಲಿಕ್ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಗಣಿತ ವಿಷಯದ ಪರೀಕ್ಷೆ ಬರೆಯಲು ಬಂದಿದ್ದ ಅಭ್ಯರ್ಥಿ ಮುಖಚಹರೆಯನ್ನು ಆ್ಯಪ್ ಮೂಲಕ ಪರಿಶೀಲಿಸಿದಾಗ ನಕಲಿ ಅಭ್ಯರ್ಥಿ ಎನ್ನುವುದು ದೃಢಪಟ್ಟಿದೆ.

ಮಹಿಳಾ ಅಭ್ಯರ್ಥಿಯೊಬ್ಬರು ಶೌಚಾಲಯಕ್ಕೆ ಹೋಗಿ, ಒಂದು ಗಂಟೆಯಾದರೂ ಹೊರ ಬಂದಿರಲಿಲ್ಲ. ಪರೀಕ್ಷೆ ಆರಂಭವಾಗುವ ವೇಳೆ ಬಂದು ಕ್ಯೂಆರ್ ಕೋಡ್ ಇರುವ ಪ್ರವೇಶ ಪತ್ರ ತೋರಿಸಿ, ಒಳಹೋಗಲು ಪ್ರಯತ್ನಿಸಿದರು. ಮುಖ ಚಹರೆ ಪತ್ತೆ ಆ್ಯಪ್ ಮೂಲಕ ಅವರ ಭಾವಚಿತ್ರ ತೆಗೆದಾಗ ನಕಲಿ ಎಂಬುದು ಗೊತ್ತಾಯಿತು. ತಕ್ಷಣ ಈ ವಿಷಯವನ್ನು ಪ್ರಾಂಶುಪಾಲರ ಗಮನಕ್ಕೆ ತರಲಾಗಿದೆ. ಅಷ್ಟರಲ್ಲಿ ಅಭ್ಯರ್ಥಿ ತಪ್ಪಿಸಿಕೊಂಡು ಹೋಗಿದ್ದಾರೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್ .ಪ್ರಸನ್ನ ಮಾಹಿತಿ ನೀಡಿದರು.

ಪ್ರಕರಣ ಕುರಿತು ವಿಡಿಯೊ ದೃಶ್ಯ ಸಮೇತ ವರದಿ ನೀಡಲು ಕಾಲೇಜಿನ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ. ಪರಿಶೀಲನೆಯ ನಂತರ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

ಪರಿಶೀಲನೆ: ಪರೀಕ್ಷಾ ಕೇಂದ್ರಕ್ಕೆ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ, ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಭೇಟಿ ನೀಡಿ ಪರಿಶೀಲಿಸಿದರು.

ಶೇ 92.93 ವಿದ್ಯಾರ್ಥಿಗಳು ಹಾಜರು

ಎರಡನೇ ದಿನ ನಡೆದ ಗಣಿತ ಹಾಗೂ ಜೀವ ವಿಜ್ಞಾನ ಪರೀಕ್ಷೆಗೆ ಶೇ 92.93ರಷ್ಟು ಅಭ್ಯರ್ಥಿಗಳು ಹಾಜರಾದರು. ಎಲ್ಲಡೆ ಪರೀಕ್ಷೆ ಸುಗಮವಾಗಿ ನಡೆದಿದೆ. ಸಮಸ್ಯೆಗಳಾಗಿಲ್ಲ. ಕ್ಯೂಆರ್ ಕೋಡ್ ಆಧಾರಿತ ಮುಖಚಹರೆ ಪತ್ತೆ ವ್ಯವಸ್ಥೆ ಮೂಲಕವೇ ಎಲ್ಲಡೆ ಅಭ್ಯರ್ಥಿಗಳನ್ನು ತಪಾಸಣೆ ಮಾಡಲಾಗಿದೆ ಎಂದು ಕೆಇಎ ಹೇಳಿದೆ.

ಎ.29ಕ್ಕೆ ಕೂಡಲಸಂಗಮ ತಲುಪಲಿರುವ ಯಾತ್ರೆ

ಅನುಭವ ಮಂಟಪ ರಥಯಾತ್ರೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವಣ್ಣ ಅವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಸ್ವೀಕರಿಸಿದ್ದೇವೆ. ಅವರ ವಚನಗಳನ್ನು ರಾಜ್ಯದ ಜನರಿಗೆ ತಲುಪಿಸುವ ಉದ್ದೇಶದಿಂದ ಅನುಭವ ಮಂಟಪ-ಬಸವಾದಿ ಶರಣರ ವೈಭವ ರಥ ಯಾತ್ರೆ'ಯನ್ನು ಆಯೋಜಿಸಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಇದೇ 30ರಂದು ಕೂಡಲ ಸಂಗಮದಲ್ಲಿ 'ಬಸವ ಜಯಂತಿ' ಆಯೋಜಿಸಲಾಗಿದೆ. ಅದರ ಭಾಗವಾಗಿ, ವಿಧಾನಸೌಧದ ಎದುರು ಗುರುವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರು ಯಾತ್ರೆಯ ಲಾಂಛನ ಬಿಡುಗಡೆ ಮಾಡಿ ಮತ್ತು ರಥಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು.

ರಥಯಾತ್ರೆಗೆ ಚಾಲನಾ ಕಾರ್ಯಕ್ರಮದಲ್ಲಿ ಕಲಾವಿದರು ನಂದಿಕೋಲು, ಡೊಳ್ಳು ಕುಣಿತ, ಯಕ್ಷಗಾನ ಪ್ರದರ್ಶಿಸಿದರು

'ಬಸವಣ್ಣನವರು ಸಮಾಜದ ಬದಲಾವಣೆಗಾಗಿ ತಾವು ಬದುಕಿರುವವರೆಗೂ ಪ್ರಯತ್ನಿಸಿದರು. ಅವರ ಅನುಭವ ಮಂಟಪ ಪರಿಕಲ್ಪನೆಯ ಮೂಲಕ 12ನೇ ಶತಮಾನದಲ್ಲಿಯೇ ಪ್ರಜಾಪ್ರಭುತ್ವದ ಸ್ಥಾಪನೆಯಾಗಿತು. ಇಲ್ಲಿ ಚರ್ಚೆ ಮತ್ತು ಅದಕ್ಕೆ ಪರಿಹಾರವನ್ನು ಕಂಡುಹಿಡಿದು ಅದನ್ನು ಜಾರಿ ಮಾಡುತ್ತಿದ್ದರು. ರಥಯಾತ್ರೆಯು ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಲಿದೆ' ಎಂದರು.

ಬೈಲೂರು ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿ, ಸಚಿವರಾದ ಶಿವರಾಜ ಎಸ್.ತಂಗಡಗಿ, ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಕೆ.ಜೆ.ಜಾರ್ಜ್, ಎಂ.ಬಿ.ಪಾಟೀಲ, ಶರಣ ಪ್ರಕಾಶ ಪಾಟೀಲ, ಸಾಹಿತಿ ಹಂಪ ನಾಗರಾಜಯ್ಯ, ಬಿ.ಟಿ.ಲಲಿತಾ ನಾಯಕ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ರಥದಲ್ಲಿ ಏನಿದೆ...

'ಅನುಭವ ಮಂಟಪ-ಬಸವಾದಿ ಶರಣರ ವೈಭವ ರಥ'ದಲ್ಲಿ ಬಸವಣ್ಣ ಅವರೊಂದಿಗೆ ಬಿ.ಆರ್.ಅಂಬೇಡ್ಕರ್, ಭಗವಾನ್ ಬುದ್ಧ, ಅಕ್ಕಮಹಾದೇವಿ, ಸಂತ ಶಿಶುನಾಳ ಶರೀಫ, ಗುರುನಾನಕ್, ಭಗವಾನ್ ಮಹಾವೀರ, ನಾರಾಯಣಗುರು, ಯೇಸು ಕ್ರಿಸ್ತರ ಪ್ರತಿಮೆಗಳು ಇವೆ.

ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು, ತುಮಕೂರು, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಕಲಬುರಗಿ, ವಿಜಯಪುರ ಸೇರಿ 15 ಜಿಲ್ಲೆಗಳಲ್ಲಿ ಒಟ್ಟು 1,177 ಕಿ.ಮೀ. ಸಂಚರಿಸಿ ಏಪ್ರಿಲ್ 29ಕ್ಕೆ ಕೂಡಲ ಸಂಗಮ ತಲುಪಲಿದೆ.

ಸಂಕ್ಷಿಪ್ತ ಸುದ್ದಿ

ಗುಡ್ಡ ಕುಸಿದು ಸಾವು

ಸವದತ್ತಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಯಡ್ರಾವಿ ಗ್ರಾಮದಲ್ಲಿ ಬುಧವಾರ ರಾತ್ರಿ ಅಕ್ರಮವಾಗಿ ಮರುಂ (ಗರಸು) ತೆಗೆಯುತ್ತಿದ್ದ ವೇಳೆ ಗುಡ್ಡ ಕುಸಿದು, ಗ್ರಾಮದ ಅರ್ಜುನ ಚುಳಕಿ (48) ಮಣ್ಣಿನಡಿ ಸಿಲುಕಿ ಮೃತಪಟ್ಟರು. ಗುರುವಾರ ಬೆಳಿಗ್ಗೆ ಅವರ ದೇಹ ಹೊರತೆಗೆಯಲಾಯಿತು. ಒಂದು ಜೆಸಿಬಿ ಮತ್ತು ಟ್ರ್ಯಾಕ್ಟರ್ ಸಂಪೂರ್ಣ ನಜ್ಜುಗುಜ್ಜಾಗಿವೆ.

ಅರ್ಜುನ ಚುಳಕಿ

'ಅರ್ಜುನ ಚುಳಕಿ ಅವರ ಮನೆಯ ಹಿಂಬದಿಯಲ್ಲಿ ತಗ್ಗು ಇದ್ದು, ಅದರಲ್ಲಿ ಮಳೆ ನೀರು ಸಂಗ್ರಹ ಆಗುತ್ತಿತ್ತು. ನೀರು ನಿಲ್ಲದಂತೆ ಮಾಡಲು ಮರುಂನಿಂದ ತಗ್ಗು ಮುಚ್ಚಲು ಮುಂದಾಗಿದ್ದರು. ಬುಧವಾರ ರಾತ್ರಿ ಟ್ರ್ಯಾಕ್ಟರ್‌ನಲ್ಲಿ ಎರಡು ಟ್ರಿಪ್ ಮರುಂ ತಂದು ಹಾಕಿದ್ದರು. ಮೂರನೇ ವೇಳೆ ಗುಡ್ಡದ ಬೃಹತ್ ಬಂಡೆಗಳು, ಮಣ್ಣು ಕುಸಿಯಿತು. ಗುಡ್ಡ ಕತ್ತರಿಸುತ್ತಿದ್ದ ಜೆಸಿಬಿ, ಮರುಂ ತುಂಬುತ್ತಿದ್ದ ಟ್ರ್ಯಾಕ್ಟರ್ ಮೂರು ತುಂಡಾದವು. ಜೆಸಿಬಿ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದು, ಟ್ರ್ಯಾಕ್ಟರ್‌ನಲ್ಲಿದ್ದ ಅರ್ಜುನ ಸ್ಥಳದಲ್ಲೇ ಕೊನೆಯುಸಿರೆಳೆದರು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಅರ್ಜುನ ಅವರಿಗೆ ತಾಯಿ, ಪತ್ನಿ, ಪುತ್ರಿ ಹಾಗೂ ಪುತ್ರ ಇದ್ದಾರೆ. ಏಪ್ರಿಲ್ 19ರಂದು ಅವರ ಸಹೋದರನ ಇಬ್ಬರು ಮಕ್ಕಳ ಮದುವೆ ನಿಗದಿಯಾಗಿತ್ತು. ಮನೆ ಮುಂದೆ ಪೆಂಡಾಲು ಹಾಕಲಾಗಿದೆ. ಮನೆಯಲ್ಲಿ ಈಗ ಶೋಕ ಮಡುಗಟ್ಟಿದೆ.

ಮಳೆ: 50 ಎಕರೆ ಭತ್ತ ಹಾನಿ

ಹೊಸಪೇಟೆ (ವಿಜಯನಗರ): ಹೂವಿನಹಡಗಲಿ ತಾಲ್ಲೂಕಿನ ಅಂಗೂರು, ಬ್ಯಾಲಹುಣ್ಸಿ ಗ್ರಾಮಗಳಲ್ಲಿ ಬುಧವಾರ ರಾತ್ರಿ ಸುರಿದ ಗಾಳಿ ಸಹಿತ ಮಳೆಯಿಂದ 50 ಎಕರೆ ಭತ್ತದ ಬೆಳೆ ಹಾನಿಗೀಡಾಗಿದೆ. ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.ಕೂಡ್ಲಿಗಿ ತಾಲ್ಲೂಕಿನ ಸಾಸಲವಾಡ ಗ್ರಾಮದಲ್ಲಿ ಭಾರಿ ಗಾಳಿ, ಮಳೆಯಿಂದ ಗೋಡೆ ಕುಸಿದು ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ. ಸಾಸಲವಾಡ, ಈಚಲಬೊಮ್ಮನಹಳ್ಳಿ, ಕುಪ್ಪಿನಕೆರೆ ಗ್ರಾಮಗಳಲ್ಲಿ ಗಾಳಿಯಿಂದ 9 ಎಕರೆಗೂ ಹೆಚ್ಚು ವೀಳ್ಯದೆಲೆ ತೋಟ ಮತ್ತು 10 ಎಕರೆಗೂ ಹೆಚ್ಚು ಪಪ್ಪಾಯಿ ತೋಟ ನೆಲಕಚ್ಚಿ ದೆ.

ವಿಜಯಪುರ: 43 ಡಿಗ್ರಿ ಉಷ್ಣಾಂಶ

ವಿಜಯಪುರ: ವಿಜಯಪುರದಲ್ಲಿ ಗುರುವಾರ 43 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ದಿನದಿಂದ ದಿನಕ್ಕೆ ಉಷ್ಣಾಂಶದ ಪ್ರಮಾಣ ಹೆಚ್ಚುತ್ತಿದ್ದು, ಬಿಸಿ ಗಾಳಿ ಬೀಸುತ್ತಿದೆ. ಜನರು, ಪ್ರಾಣಿ, ಪಕ್ಷಿಗಳು ಬಸವಳಿದಿವೆ. ಮಧ್ಯಾಹ್ನದ ವೇಳೆ ಜನರ ಓಡಾಟ ವಿರಳವಾಗಿದೆ.

'ಪ್ರಮುಖ ವೃತ್ತಗಳಲ್ಲಿ ನೆರಳಿನ ವ್ಯವಸ್ಥೆ ಮಾಡಲಾಗಿದೆ. ಜನರು ಬಿಸಿಲಿನಲ್ಲಿ ಅನಗತ್ಯ ಓಡಾಡಬಾರದು ' ಎಂದು ಜಿಲ್ಲಾಡಳಿತ ತಿಳಿಸಿದೆ.

ಯೇಸು ಸ್ಮರಣೆಯ ಶುಭ ಶುಕ್ರವಾರ

• ಸಿ. ಮರಿಜೋಸೆಫ್



ನಾಗರಿಕ ಸಮಾಜದಲ್ಲಿ ಬದುಕಬೇಕಾದರೆ ಕೆಲವು ಕಟ್ಟಳೆಗಳನ್ನು ಅನುಸರಿಸಬೇಕು – ಎಂದು ಯೆಹೂದ್ಯರಿಗೆ ಹೇಳಿದ ದೇವರು ಅವರಿಗೆ ಅಂಥ ಹತ್ತು ಕಟ್ಟಳೆಗಳನ್ನು ನೀಡಿದರು. 'ಕಳಬೇಡ ಕೊಲ ಬೇಡ ಹುಸಿಯ ನುಡಿಯಲು ಬೇಡ' ಮುಂತಾದ ಮೂಲಭೂತ ಕಟ್ಟಳೆಗಳವು. ಈ ಕಟ್ಟಳೆಗಳನ್ನು ಕಲ್ಲಿನ ಫಲಕಗಳ ಮೇಲೆ ಕೆತ್ತಿಕೊಂಡ ಯೆಹೂದ್ಯರು ಅವನ್ನು ಪವಿತ್ರ ಮಂಜೂಷದಲ್ಲಿಟ್ಟು ಗೌರವ ಸಲ್ಲಿಸಿದರು; ದೈವಪ್ರೇರಣೆಯಲ್ಲಿ ಅವನ್ನು ವ್ಯಾಖ್ಯಾನಿಸತೊಡಗಿದರು. ಕಾಲಕ್ರಮದಲ್ಲಿ ವ್ಯಾಖ್ಯಾನಿಸುವವರ ಸಂಖ್ಯೆಯೂ ಬೆಳೆಯಿತು. ಅವರನ್ನು 'ಫರಿಸಾಯರು', ಎಂದರೆ 'ಧರ್ಮಸಂಹಿತೆಗಳ ಪಾರಂಗತರು' ಎಂದು ಬಣ್ಣಿಸಲಾಯಿತು.

ಕಾಲದಿಂದ ಕಾಲಕ್ಕೆ ಹತ್ತು ಕಟ್ಟಳೆಗಳಿಗೆ ಇನ್ನೊಂದಿಷ್ಟು ಮತ್ತೊಂದಿಷ್ಟು ಉಪಕಾನೂನುಗಳನ್ನು ಸೇರಿಸಿಕೊಂಡು ಬಂದ ಫರಿಸಾಯರು ಯೇಸುಕ್ರಿಸ್ತರ ಕಾಲಕ್ಕೆ ಅವನ್ನು ಆರುನೂರು ಮೀರುವಂತೆ ಮಾಡಿಬಿಟ್ಟಿದ್ದರು. ಈ ಕಠಿಣ ಕಾನೂನುಗಳಿಂದ ಬಡಪಾಯಿ ಜನ ಬಾಗಿ ಬಸವಳಿದು ಹೋಗಿದ್ದರು. ಒಂದೆಡೆ ರೋಮನ್ ಚಕ್ರಾಧಿಪತ್ಯದ ಕಂದಾಯ ವಸೂಲಿಗಾರರ ದಬ್ಬಾಳಿಕೆ, ಇನ್ನೊಂದೆಡೆ ಹಾದಿಬೀದಿಯಲ್ಲೆಲ್ಲಾ ಕಾಡುವ ಧರ್ಮರಕ್ಷಕರ ಉಪಟಳ. ಇವನ್ನು ಕಂಡ ಯೇಸು ನಾಡಿನಲ್ಲೆಲ್ಲ ಸುತ್ತಾಡಿ ಫರಿಸಾಯರನ್ನು ಖಂಡಿಸಿದರು. ಅವರ ಡಂಭಾಚಾರ ಮತ್ತು ಕೊಳಕು ಮನಸ್ಸುಗಳನ್ನು ರಸ್ತೆಯ ಚೌಕಗಳಲ್ಲಿ ತೊಳೆದರು; ಜನರ ಮನಸ್ಸುಗಳಲ್ಲಿ ಪ್ರೀತಿಯ ಸುಧೆ ಹರಿಸಿದರು. 'ಪ್ರೀತಿಯಲ್ಲೇ ಮಾನವನ ವಿಮೋಚನೆ ಅಡಗಿದೆ' ಎಂದು ಸಾರಿದರು.

ಫರಿಸಾಯರು ಸುಮ್ಮನೆ ಬಿಟ್ಟಾರೆಯೇ? 'ನಮ್ಮನ್ನೆಲ್ಲ ಪ್ರಶ್ನಿಸಲು ನಿನಗೇನು ಅಧಿಕಾರ?' ಎಂದು ಜಂಕಿಸಿದರವರು. ಅದಕ್ಕೆ ಯೇಸುವಿನ ಉತ್ತರ: 'ದೇವರಾತ್ಮ ನನ್ನಲ್ಲಿದೆ, ನಿಮ್ಮಲ್ಲಿ ಒಳ್ಳೆಯ ಮನಸ್ಸಿದ್ದರೆ ಸರ್ವಶಕ್ತ ದೇವರ ಬಲಪಾರ್ಶ್ವದಲ್ಲಿ ನಾನು ಕುಳಿತಿರುವುದನ್ನು ಕಾಣಬಲ್ಲಿರಿ'. ಪದೇ ಪದೇ ದೇವರ ಹೆಸರು ಎತ್ತಿ ಅದನ್ನು ಸವಕಲುಗೊಳಿಸುವುದು, ಮತ್ತು ತನ್ನನ್ನು ತಾನೇ ದೇವರಿಗೆ ಸರಿಸಮನಾಗಿ ಹೋಲಿಸಿಕೊಳ್ಳುವುದು ದೇವರ ಮೊತ್ತಮೊದಲ ಕಟ್ಟಳೆಗೆ ವಿರುದ್ಧವಾದುದು ಎಂದು ಹರಿಹಾಯ್ದ ಫರಿಸಾಯರು ಯೇಸುವಿಗೆ 'ಮರಣವೇ ಶಿಕ್ಷೆ' ಎಂದು ತೀರ್ಪಿತ್ತರು.

ಯೆಹೂದ್ಯರ ಪ್ರಕಾರ, ದೇವರ ಕಟ್ಟಳೆ ಮೀರಿದವರನ್ನು ಮೂರು ದಾರಿಗಳು ಕೂಡುವೆಡೆಯಲ್ಲಿ ನಿಲ್ಲಿಸಿ ಆಳಿಗೊಂದು ಕಲ್ಲನ್ನು ಬೀಸಿ ಕೊಲ್ಲಲಾಗುತ್ತಿತ್ತು. ರೋಮನ್ ಸಮಾಜದಲ್ಲಿ ಮರಣದಂಡನೆಯ ಶಿಕ್ಷೆಯೇ ಬೇರೆ. ಮರದ ತೊಲೆಗಳನ್ನು ಶಿಲುಬೆಯಾಗಿ ಮಾಡಿ ಅದರ ಮೇಲೆ ಶಿಕ್ಷಿತನನ್ನು ಅಂಗಾತ ಮಲಗಿಸಿ ಕೈಕಾಲುಗಳಿಗೆ ದೊಡ್ಡ ಕಬ್ಬಿಣದ ಮೊಳೆಗಳನ್ನು ಜಡಿದು ಶಿಲುಬೆಯನ್ನು ನೇರ ನಿಲ್ಲಿಸಿಬಿಡುವುದು. ಅದಕ್ಕೂ ಮುನ್ನ ಅಪರಾಧಿಯನ್ನು ಹೊಡೆದು ಬಡಿದು ಉಪವಾಸ ಕೆಡವಿ ನಿತ್ರಾಣಗೊಳಿಸಿರುತ್ತಾರೆ. ನ್ಯಾಯದ ಕಟಕಟೆಯಿಂದ ವಧಾಸ್ಥಾನದವರೆಗೆ ಅಪರಾಧಿಯೇ ಬಲುಭಾರದ ಶಿಲುಬೆಯನ್ನು ಹೊತ್ತು ತಂದಿರುತ್ತಾನೆ. ಶಿಲುಬೆಗೇರಿಸಿದ ಒಂದೆರಡು ಗಂಟೆಗಳಲ್ಲಿ ಆತ ಸಾಯದಿದ್ದರೆ ಎದೆಭಾಗಕ್ಕೆ ಈಟಿಯಿಂದ ತಿವಿದು ಕೊನೆಯ ರಕ್ತವನ್ನು ಬಸಿಯಲಾಗುತ್ತಿತ್ತು.

ಯೆಹೂದ್ಯರಿಗೆ ಪವಿತ್ರವಾದ ಪಾಸ್ಕ ಹಬ್ಬ ಸಮೀಪಿಸುತ್ತಿದಂತೆ ಯೇಸುವು ಜರು ಜಲೀಂ ಪಟ್ಟಣವನ್ನು ಪ್ರವೇಶಿಸಿದ. ವಿವಿಧ ದೇಶ ಪ್ರದೇಶಗಳಿಂದ ಆಗಮಿಸಿದ್ದ ಜನರು ಯೇಸುವನ್ನು ಕಂಡು ಸಂಭ್ರಮಿಸಿ, 'ಅವನೇ ನಮ್ಮ ರಾಜ' – ಎಂದು ಘೋಷಿಸಿದರು. ಆ ಕ್ಷಣವೇ ಫರಿಸಾಯರು ಒಂದು ಪ್ರತಿತಂತ್ರ ಹೂಡಿದರು. ಯೇಸುವಿನ ಶಿಷ್ಯರಲ್ಲೊಬ್ಬನಾದ ಜುದಾಸನಿಗೆ ಲಂಚಕೊಟ್ಟು ಯೇಸುವನ್ನು ರಾತ್ರಿಯಲ್ಲಿ ಬಂಧಿಸಿದರು. ರಾತ್ರಿಯೆಲ್ಲ ಕಪಟ ವಿಚಾರಣೆಯನ್ನು ನಡೆಸಿ, ಮರುದಿನ ಶುಕ್ರವಾರ ಕಲ್ವಾರಿ ಬೆಟ್ಟದೆಡೆಗೆ ಯೇಸುವನ್ನು ಎಳೆತಂದು, ಶಿಲುಬೆಗೇರಿಸಿ ಕ್ರೂರವಾಗಿ ಕೊಂದರು.

ಶಿಲುಬೆಯೇರಿದ ಯೇಸುಕ್ರಿಸ್ತ ಆಡಿದ ಕೊನೆಯ ಮಾತು: 'ದೇವರೇ ಇವರನ್ನು ಕ್ಷಮಿಸು'. ಅದೇ ವೇಳೆ ಯೇಸುವನ್ನು ಬಹುವಾಗಿ ಹಿಂಸಿಸಿದ್ದ ರೋಮನ್ ಸೈನಿಕನಿಗೆ ಅನ್ನಿಸಿದ್ದು: 'ನಿಜವಾಗಿಯೂ ಈತ ಒಳ್ಳೆಯವ'. ❖

ಜಾತಿ ಗಣತಿ ಸೋರಿಕೆ ಮಾಡಿದವರ್ಯಾರು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ಗಣತಿ ವರದಿಯನ್ನು ಬಹಿರಂಗ ಮಾಡುವ ಮೊದಲೇ ಅದರ ದತ್ತಾಂಶಗಳನ್ನು ಸೋರಿಕೆ ಮಾಡಿದವರು ಯಾರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕುಮಾರಸ್ವಾಮಿ, ಅದನ್ನು ಸಿದ್ದರಾಮಯ್ಯಗೆ ಟ್ಯಾಗ್ ಮಾಡಿದ್ದಾರೆ.

'ಅದು ಜಾತಿ ಸಮೀಕ್ಷೆ ಅಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಹಾಗಾದರೆ, ಹಾದಿಬೀದಿಯಲ್ಲಿ ತೇಲಾಡುತ್ತಿರುವ, ಬಿದ್ದು ಹೊರಳಾಡುತ್ತಿರುವ ಅಂಕಿ ಸಂಖ್ಯೆಗಳು ಯಾವುವು? ಸೋರಿಕೆ ಆಗಿರುವ ದತ್ತಾಂಶ ಮತ್ತು ಮುಖ್ಯಮಂತ್ರಿ ಹೇಳಿದ ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ ದತ್ತಾಂಶವು ಎರಡೂ ಒಂದೇನಾ?' ಎಂದು ಪ್ರಶ್ನಿಸಿದ್ದಾರೆ.

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ

ಶ್ರೀ ಹೆಚ್. ಬಸವಯ್ಯ, ಐಎಎಸ್ (ನಿ)

ಜುಲೈ 10, 1934 - ಏಪ್ರಿಲ್ 09, 2025

ಶ್ರೀ ಹೆಚ್. ಬಸವಯ್ಯ ಅವರು ದಿನಾಂಕ 09, ಏಪ್ರಿಲ್ 2025, ಬುಧವಾರ ಸಂಜೆ 6.30 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಶ್ರೀ ಹೆಚ್. ಬಸವಯ್ಯ ಅವರು ನಿವೃತ್ತರಾಗುವವರೆಗೂ ಸುಮಾರು 3 ದಶಕಗಳಿಗೂ ಹೆಚ್ಚು ಕಾಲ ಐಎಎಸ್ ಅಧಿಕಾರಿಯಾಗಿ ಕರ್ನಾಟಕ ರಾಜ್ಯಕ್ಕೆ ವಿಶಿಷ್ಟ ಸೇವೆಯನ್ನು ಸಲ್ಲಿಸಿದರು. ಅವರ ದಕ್ಷ ಆಡಳಿತ ಸೇವೆ, ವಿನಮ್ರತೆ ಹಾಗೂ ವಿಶಿಷ್ಟ ಶಕ್ತಿಯನ್ನು ಜನರು ಸದಾ ನೆನಸುವರು. ಅವರ ಕುಟುಂಬ, ಸ್ನೇಹಿತರು ಮತ್ತು ಸಹೋದ್ಯೋಗಿಗಳು ಅವರನ್ನು ಚಿರಸ್ಮರಿಸುತ್ತಾರೆ.

ತತ್ಸಂಬಂಧ ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರಲು **ಉತ್ತರ ಕ್ರಿಯಾದಿ ಕೈಂಕರ್ಯಗಳು** ಭಾನುವಾರ, ಏಪ್ರಿಲ್ 20, 2025ರಂದು ಮಧ್ಯಾಹ್ನ 12.00 ಗಂಟೆಗೆ ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕು, ಹೊನ್ನೂರು ಗ್ರಾಮದಲ್ಲಿರುವ ನಮ್ಮ ಸ್ವಗೃಹದಲ್ಲಿ ನಡೆಯಲಿದೆ.

ಶ್ರೀಮತಿ ರಾಜಮ್ಮ
ಶ್ರೀಮತಿ ರಾಧಾ ಮತ್ತು ಶ್ರೀ ಬಿ.ಎಂ. ರಾಜಶೇಖರ್, ಶ್ರೀಮತಿ ಡಾ. ಮೀನ ಮತ್ತು ಶ್ರೀ ಎನ್.ರಮೇಶ್, ಶ್ರೀಮತಿ ಸುಧಾ ಮತ್ತು ಶ್ರೀ ಬಿ.ಎಸ್. ಗುರುಸ್ವಾಮಿ, ಶ್ರೀಮತಿ ತೇಜಸ್ವಿನಿ ಮತ್ತು ಶ್ರೀ ಬಿ. ಚಂದ್ರಶೇಖರ್, ಶ್ರೀಮತಿ ಅರುಂಧತಿ ಮತ್ತು ಶ್ರೀ ರಾಹುಲ್ ಖರ್ಗೆ ಮತ್ತು ಮೊಮ್ಮಕ್ಕಳು

ಸಂಪರ್ಕಿಸಿ: 8197273401, 9845409172 meenahb17@gmail.com

'ಸುಪ್ರೀಂ'ನಿಂದ ಅಣ್ವಸ್ತ್ರ ಕ್ಷಿಪಣಿ

ಒಂದನೇ ಪುಟದಿಂದ...

ರಾಜ್ಯಸಭೆಯ ತರಬೇತಿನಿರತರನ್ನು ಉದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಜ್ಯಪಾಲರು ರಾಷ್ಟ್ರಪತಿಯವರ ಪರಿಶೀಲನೆಗೆ ಕಳುಹಿಸುವ ಮಸೂದೆಗಳ ವಿಚಾರವಾಗಿ ಮೂರು ತಿಂಗಳಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಕೆಲವೇ ದಿನಗಳಲ್ಲಿ ಈ ಮಾತು ಬಂದಿದೆ.

'ಕಾನೂನು ರೂಪಿಸುವ, ಕಾರ್ಯಾಂಗದ ಕೆಲಸಗಳನ್ನು ಮಾಡುವ, ಸಂಸತ್ತಿಗಿಂತ ಮಿಗಿಲಾಗಿ ವರ್ತಿಸುವ ಮತ್ತು ಯಾವ ಉತ್ತರದಾಯಿತ್ವವೂ ಇರದ ನ್ಯಾಯಮೂರ್ತಿಗಳನ್ನು ನಾವು ಹೊಂದಿದ್ದೇವೆ. ಏಕೆಂದರೆ ದೇಶದ ಕಾನೂನು ಅವರಿಗೆ ಅನ್ವಯವಾಗುವುದಿಲ್ಲ' ಎಂದು ಧನಕರ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ವಿಶೇಷ ಅಧಿಕಾರ ಒದಗಿಸುವ ಸಂವಿಧಾನದ 142ನೆಯ ವಿಧಿಯನ್ನು ಧನಕರ್ ಅವರು, 'ನ್ಯಾಯಾಂಗಕ್ಕೆ ಪ್ರಜಾತಾಂತ್ರಿಕ ಶಕ್ತಿಗಳ ವಿರುದ್ಧ ಪ್ರಯೋಗಿಸಲು ಸದಾ ಸಿಗುವ ಅಣ್ವಸ್ತ್ರ ಕ್ಷಿಪಣಿ' ಎಂದು ವ್ಯಾಖ್ಯಾನಿಸಿದ್ದಾರೆ.

ತನ್ನೆದುರು ಬಂದ ಯಾವುದೇ ಪ್ರಕರಣದಲ್ಲಿ 'ಪರಿಪೂರ್ಣ ನ್ಯಾಯವನ್ನು ನೀಡಲು' ಆದೇಶ ಹೊರಡಿಸುವ ಅಧಿಕಾರವನ್ನು ಈ ವಿಧಿಯು ಸುಪ್ರೀಂ ಕೋರ್ಟ್‌ಗೆ ನೀಡುತ್ತದೆ.

'ಈಚಿನ ತೀರ್ಪೊಂದರಲ್ಲಿ ರಾಷ್ಟ್ರಪತಿಯವರಿಗೆ ಒಂದು ನಿರ್ದೇಶನ ಇದೆ. ನಾವು ಎತ್ತ ಸಾಗುತ್ತಿದ್ದೇವೆ? ದೇಶದಲ್ಲಿ ಏನಾಗುತ್ತಿದೆ? ನಾವು ಬಹಳ ಸೂಕ್ಷ್ಮವಾಗಿ ಇರಬೇಕು. ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಬೇಕೋ ಬೇಡವೋ ಎಂಬ ಪ್ರಶ್ನೆ ಇದಲ್ಲ. ಈ ಬಗೆಯ ಪ್ರಜಾತಂತ್ರವನ್ನು ನಾವು ಯಾವತ್ತೂ ಬಯಸಿರಲಿಲ್ಲ...' ಎಂದು ಹೇಳಿದ್ದಾರೆ.

'ರಾಷ್ಟ್ರಪತಿಯವರ ಸ್ಥಾನವು ಬಹಳ ಉನ್ನತವಾದುದು. ರಾಷ್ಟ್ರಪತಿಯವರು ಸಂವಿಧಾನವನ್ನು ರಕ್ಷಿಸಲು ಪ್ರತಿಜ್ಞೆ ಸ್ವೀಕರಿಸಿರುತ್ತಾರೆ. ಸಚಿವರು, ಉಪ ರಾಷ್ಟ್ರಪತಿ, ಸಂಸದರು ಮತ್ತು ನ್ಯಾಯಮೂರ್ತಿಗಳು ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಪ್ರತಿಜ್ಞೆ ಸ್ವೀಕರಿಸಿರುತ್ತಾರೆ' ಎಂದಿದ್ದಾರೆ.

ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗದ ಅಧಿಕಾರ ವ್ಯಾಪ್ತಿಯನ್ನು ಪ್ರತ್ಯೇಕಿಸುವ ತತ್ವದ ಬಗ್ಗೆಯೂ ಉಲ್ಲೇಖಿಸಿರುವ ಧನಕರ್, 'ಸಂಸತ್ತಿನಲ್ಲಿ ನೀವು ಪ್ರಶ್ನಿಸಬಹುದು... ಆದರೆ ನ್ಯಾಯಾಂಗವು ಕಾರ್ಯಾಂಗದ ಆಡಳಿತ ನಡೆಸಿದರೆ ನೀವು ಪ್ರಶ್ನೆ ಹೇಗೆ ಕೇಳುತ್ತೀರಿ? ಚುನಾವಣೆಗಳಲ್ಲಿ ಯಾರನ್ನು ಹೊಣೆ ಮಾಡುವಿರಿ?' ಎಂದಿದ್ದಾರೆ.

ಎಫ್‌ಐಆರ್ ದಾಖಲಿಸದಿರುವುದಕ್ಕೆ ಪ್ರಶ್ನೆ

ಒಂದನೇ ಪುಟದಿಂದ...

ನ್ಯಾಯಾಂಗದ ಸ್ವಾತಂತ್ರ್ಯ ಎಂಬುದು ತನಿಖೆ, ವಿಚಾರಣೆಗಳಿಗೆ 'ಅಭೇದ್ಯ ಕವಚ' ಅಲ್ಲ. ತನಿಖೆಗಳಿಂದ ಸಂಪೂರ್ಣ ವಿನಾಯಿತಿ ಒದಗಿಸುವುದು ವ್ಯವಸ್ಥೆಯೊಂದನ್ನು ಅಥವಾ ವ್ಯಕ್ತಿಯೊಬ್ಬನನ್ನು ಹಾಳುಮಾಡಲು ಇರುವ ಖಚಿತವಾದ ಮಾರ್ಗ ಎಂದಿದ್ದಾರೆ.

ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನಿವಾಸದಲ್ಲಿ ನೋಟಿನ ಕಂತೆಗಳು ಸುಟ್ಟ ಸ್ಥಿತಿಯಲ್ಲಿ ಪತ್ತೆಯಾದವು ಎನ್ನಲಾದ ಪ್ರಕರಣದ ಬಗ್ಗೆ ಆಂತರಿಕ ವಿಚಾರಣೆಗೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಆಂತರಿಕ ವಿಚಾರಣೆ ನಡೆಸುತ್ತಿರುವ ಮೂವರು ನ್ಯಾಯಮೂರ್ತಿಗಳ ಸಮಿತಿಯ ಅಧಿಕಾರವನ್ನು ಧನಕರ್ ಪ್ರಶ್ನಿಸಿದ್ದಾರೆ. 'ತನಿಖೆಯನ್ನು ನಡೆಸುವುದು ಕಾರ್ಯಾಂಗದ ಪರಿಧಿಯಲ್ಲಿನ ಅಧಿಕಾರವೇ ವಿನಾ ನ್ಯಾಯಾಂಗದ್ದಲ್ಲ' ಎಂದಿದ್ದಾರೆ.

'ಸಮಿತಿಯು ಏನು ಮಾಡಬಹುದು? ಅದು ಶಿಫಾರಸು ಮಾಡಬಹುದಷ್ಟೆ. ಯಾರಿಗೆ ಶಿಫಾರಸು? ಯಾಕಾಗಿ ಶಿಫಾರಸು? ನ್ಯಾಯಮೂರ್ತಿಗಳ ವಿಚಾರವಾಗಿ ಇರುವ ವ್ಯವಸ್ಥೆಯ ಪ್ರಕಾರ, ಸಂಸತ್ತು ಮಾತ್ರ ಅಂತಿಮ ಕ್ರಮ ಕೈಗೊಳ್ಳಬಹುದು' ಎಂದಿದ್ದಾರೆ. 'ಏಳು ದಿನಗಳವರೆಗೆ ಯಾರಿಗೂ ಘಟನೆಯ ಬಗ್ಗೆ ಗೊತ್ತೇ ಇರಲಿಲ್ಲ... ವಿಳಂಬವನ್ನು ವಿವರಿಸಲು ಸಾಧ್ಯವೇ? ಅದನ್ನು ಕ್ಷಮಿಸಬಹುದೇ' ಎಂದೂ ಕೇಳಿದ್ದಾರೆ.

'ದೇಶದ ಕಾನೂನಿನ ಪ್ರಕಾರ ಗಂಭೀರ ಸ್ವರೂಪದ ಎಲ್ಲ ಪ್ರಕರಣಗಳನ್ನು ಪೊಲೀಸರಿಗೆ ವರದಿ ಮಾಡಬೇಕು, ಅದನ್ನು ವರದಿ ಮಾಡದೆ ಇರುವುದೂ ಅಪರಾಧ. ಹೀಗಾಗಿ, ಎಫ್‌ಐಆರ್ ಏಕೆ ಆಗಿಲ್ಲ ಎಂದು ನೀವು ಕೇಳಿಕೊಂಡಿರಬಹುದು' ಎಂದಿದ್ದಾರೆ.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂ ಸಂ: 080–29557021, e-mail : pdksaps@gmail.com

ಸಂಖ್ಯೆ: ಕೆ.ಎಸ್.ಎ.ಪಿ.ಎಸ್/ಪಿಆರ್‌ಸಿ/01/2025–26 ದಿನಾಂಕ: 15.04.2025

ಇ–ಸಂಗ್ರಹಣ ವೇದಿಕೆ ಮೂಲಕ ಅಲ್ಪಾವಧಿ ಟೆಂಡರ್ (ದ್ವಿ–ಲಕೋಟೆ) ಆಹ್ವಾನ ಪ್ರಕಟಣೆ

ವಿವಿಧ ಬಗೆಯ ಎಆರ್‌ವಿ ಮಾತ್ರೆ Abacavir 300 mg IP Tablets (Single Pill) & (Tab Dolutegravir 50 mg) ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ (ದ್ವಿ ಲಕೋಟೆ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02/05/2025. ಸಮಯ ಸಂಜೆ 5.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : https://kppp.karnataka.gov.in .

ಸಹಿ/– ಯೋಜನಾ ನಿರ್ದೇಶಕರು,
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು
DIPR/CP/233/Zen/2025-26

Infosys® Navigate your next

Infosys Limited
Regd. office : Electronics City, Hosur Road, Bengaluru 560 100, India.

CIN : L85110KA1981PLC013115
Website : www.infosys.com
Email : investors@infosys.com
Telephone : 91 80 2852 0261
Fax : 91 80 2852 0362

Q4 FY 25 Financial Results

Extract of the consolidated audited financial results of Infosys Limited and its subsidiaries for the quarter and year ended March 31, 2025 prepared in compliance with the Indian Accounting Standards (Ind-AS)

(in ₹ crore, except per equity share data)

Particulars	Quarter ended March 31, 2025	Year ended March 31, 2025	Quarter ended March 31, 2024
Revenue from operations	**40,925**	**162,990**	**37,923**
Profit before tax (1)	9,663	37,608	10,240
Profit for the period (1)	7,038	26,750	7,975
Total comprehensive income for the period (comprising profit for the period after tax and other comprehensive income after tax)	7,313	27,209	7,823
Profit attributable to:			
Owners of the Company	7,033	26,713	7,969
Non-controlling interests	5	37	6
	7,038	**26,750**	**7,975**
Total comprehensive income attributable to:			
Owners of the Company	7,304	27,167	7,821
Non-controlling interest	9	42	2
	7,313	**27,209**	**7,823**
Paid-up share capital (par value ₹5/- each fully paid)	2,073	2,073	2,071
Other equity #	93,745	93,745	86,045
Earnings per share (par value ₹5/- each)*			
Basic (in ₹ per share)	16.98	64.50	19.25
Diluted (in ₹ per share)	16.94	64.34	19.22

* EPS is not annualized for the quarter ended March 31, 2025 and quarter ended March 31, 2024

\# Excludes non-controlling interest

(1) During the quarter and year ended March 31, 2025, a decline in the revenue estimates led to the carrying value of the customer related intangibles assets recognized on business combination exceeding the estimated recoverable amount. Consequently, the Company has recognized ₹188 crore as the excess of carrying value over the estimated recoverable value for the quarter and year ended March 31, 2025 as a part of depreciation and amortization expenses.

1. Notes

a) The audited interim consolidated financial statements for the quarter and year ended March 31, 2025 have been taken on record by the Board of Directors at its meeting held on April 17, 2025. **The statutory auditors, Deloitte Haskins & Sells LLP have expressed an unmodified audit opinion.** The information presented above is extracted from the audited interim condensed consolidated financial statements. These interim condensed consolidated financial statements are prepared in accordance with the Indian Accounting Standards (Ind-AS) as prescribed under Section 133 of the Companies Act, 2013 read with Rule 3 of the Companies (Indian Accounting Standards) Rules, 2015 and relevant amendment rules thereafter.

b) **Update on McCamish Cybersecurity incident**

In November 2023, certain systems of Infosys McCamish Systems LLC ("McCamish"), a subsidiary of Infosys BPM Limited (a wholly owned subsidiary of Infosys Limited), were encrypted by ransomware, resulting in the non-availability of certain applications and systems. McCamish initiated its incident response and engaged cybersecurity and other specialists to assist in its investigation of and response to the incident and remediation and restoration of impacted applications and systems. By December 31, 2023, McCamish, with external specialists' assistance, substantially remediated and restored the affected applications and systems. Actions taken by McCamish included investigative analysis conducted by a third-party cybersecurity firm to determine, among other things, whether and the extent to which customer data was subject to unauthorized access or exfiltration. McCamish also engaged a third-party eDiscovery vendor in assessing the extent and nature of such data. McCamish in coordination with its third-party eDiscovery vendor has identified corporate customers and individuals whose information was subject to unauthorized access and exfiltration. McCamish processed personal data on behalf of its corporate customers.

From March 6, 2024 through July 25, 2024, six actions were filed in the U.S. District Court for the Northern District of Georgia against McCamish. The actions arise out of the cybersecurity incident at McCamish initially disclosed on November 3, 2023. All six actions have since been consolidated, and the consolidated class action complaint was filed on November 7, 2024, purportedly on behalf of all persons residing in the United States whose personally identifiable information was compromised in the incident, including all who were sent a notice of the incident. On December 20, 2024, the Court granted the parties' joint motion to stay proceedings pending the parties' efforts to resolve the lawsuit through mediation. On March 13, 2025, McCamish and the plaintiffs engaged in mediation, resulting in an in-principle agreement that sets forth the terms of a proposed settlement of the class action lawsuits against McCamish, as well as seven class action lawsuits arising out of the incident that have been filed against McCamish's customers. Under the settlement terms, McCamish has agreed to pay $17.5 million (approximately ₹150 crore) into a fund to settle these matters. The agreed terms are subject to finalization of the terms of the settlement agreement, and preliminary and final court approval. If approved, the settlement will resolve all allegations made in the class action lawsuits without admission of any liability. McCamish has recorded an accrual of US$17.5 million (approximately ₹150 crore) related to the settlement. McCamish has recognized an insurance reimbursement receivable of US$17 million (approximately ₹145 crore) which has been offset against the settlement expense of US$17.5 million (approximately ₹150 crore) in the Statement of Profit and Loss. McCamish may incur additional costs including from indemnities or damages/claims, which are indeterminable at this time.

c) **Update on orders received from the Indian Income Tax Department**

During the quarter ending March 31, 2025, the Company received orders under Section 250 of the Income-tax Act, 1961, from the Income Tax authorities in India for the assessment years, 2016-17 and 2019-20. These orders confirmed the Company's position with respect to tax treatment of certain disputed matters. As a result interest income (pre-tax) of ₹327 crore (included in other income as mentioned in point (d) below) was recognized and provision for income tax aggregating ₹183 crore was reversed with a corresponding credit to the Statement of Profit and Loss. Also, upon resolution of the disputes, an amount aggregating to ₹1,068 crore has been reduced from contingent liabilities.

d) Other income includes interest on income tax refund of ₹328 crore and ₹1,916 crore for the quarter ended March 31, 2025 and March 31, 2024 respectively, and ₹343 crore for the year ended March 31, 2025.

e) **Proposed acquisitions**

i) On April 17, 2025, Infosys Singapore Pte Ltd., a wholly-owned step down subsidiary of Infosys Limited, entered into a definitive agreement to acquire 100% of the equity share capital of The Missing Link, a leading Cybersecurity service provider headquartered in Australia, for a consideration including earn-outs amounting up to AUD 98 million (approximately ₹527 crore), excluding management incentives and retention bonus, subject to customary closing adjustments. To consummate this transaction, Infosys Singapore Pte Ltd will set up a wholly-owned subsidiary in Australia.

ii) On April 17, 2025, Infosys Nova Holdings LLC, a wholly-owned step down subsidiary of Infosys Limited, entered into a definitive agreement to acquire 100% of the partnership interests of MRE Consulting Ltd, a leading energy consulting company, headquartered in the US, for a consideration including earn-outs amounting up to $36 million (approximately ₹308 crore), excluding management incentives and retention bonus, subject to customary closing adjustments. To consummate this transaction, Infosys Nova Holdings LLC has simultaneously incorporated an entity Infosys Energy Consulting Services LLC.

f) **Update on employee stock grants**

i) **Grants to CEO & MD**

The Board, on April 17, 2025, based on the recommendations of the Nomination and Remuneration Committee, approved the following annual grants to Salil Parekh, CEO and MD as per his employment agreement approved by shareholders:

i) The grant of annual performance-based stock incentives (Annual Performance Equity Grant) in the form of Restricted Stock Units (RSU's) covering the Company's equity shares having a market value of ₹34.75 crore as on the date of the grant under the 2015 Stock Incentive Compensation Plan ("the 2015 Plan"), which shall vest 12 months from the date of grant subject to achievement of performance targets as determined by the Board.

ii) The grant of annual performance-based stock incentives (Annual performance equity ESG grant) in the form of RSU's covering Company's equity shares having a market value of ₹2 crore as on the date of the grant under the 2015 Plan, which shall vest 12 months from the date of the grant subject to the Company's achievement of certain environment, social and governance milestones as determined by the Board.

iii) The grant of annual performance-based stock incentives (annual performance equity TSR grant) in the form of RSU's covering the Company's equity shares having a market value of ₹5 crore as on the date of the grant under the 2015 Plan, which shall vest on or after March 31, 2027 subject to the Company's performance on cumulative relative TSR for the two year cumulative period and as determined by the Board.

iv) The grant of annual performance-based stock incentives (2019 Annual Performance Equity Grant) in the form of Restricted Stock Units (RSU's) covering the Company's equity shares having a market value of ₹10 crore as on the date of the grant under the Infosys Expanded Stock Ownership Program-2019 ("the 2019 Plan"), which shall vest 12 months from the date of the grant subject to the Company's achievement of certain performance criteria as laid out in the 2019 Plan.

The above RSUs will be granted effective May 2, 2025 and the number of RSU's will be calculated based on the market price at the close of trading on May 2, 2025.

ii) **Grants to other employees**

The Board, on April 17, 2025, based on the recommendations of the Nomination and Remuneration Committee, approved grant of 5,000 RSUs to eligible employees under the 2015 Plan effective May 2, 2025. The RSUs would vest equally over a period of four years and the exercise price will be equal to the par value of the share.

2. Information on dividends for the quarter and year ended March 31, 2025

For financial year 2025, the Board recommended a final dividend of ₹22/- (par value of ₹5/- each) per equity share. This payment is subject to the approval of shareholders in the Annual General Meeting (AGM) of the Company to be held on June 25, 2025. The record date for the purpose of the payment of final dividend is May 30, 2025. The dividend will be paid on June 30, 2025.

For the financial year ended 2024, the Company declared a final dividend of ₹20/- (par value of ₹5/- each) per equity share and additionally a special dividend of ₹8/- (par value of ₹5/- each) per equity share.

The Board of Directors (in it's meeting held on October 17, 2024) declared an interim dividend of ₹21/- per equity share. The record date for the payment was October 29, 2024 and the same was paid on November 8, 2024. The interim dividend declared in the previous year was ₹18/- per equity share.

(in ₹)

Particulars	Quarter ended March 31, 2025	Year ended March 31, 2025	Quarter ended March 31, 2024
Dividend per share (par value ₹5/- each)			
Interim dividend	–	21.00	–
Final dividend	22.00	22.00	20.00
Special dividend	–	–	8.00

3. Audited financial results of Infosys Limited (Standalone information)

(in ₹ crore)

Particulars	Quarter ended March 31, 2025	Year ended March 31, 2025	Quarter ended March 31, 2024
Revenue from operations	34,136	136,592	32,001
Profit before tax	9,061	35,441	10,414
Profit for the period	6,628	25,568	8,480

The above is an extract of the detailed format of Quarterly audited financial results filed with Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of the Quarterly Audited Financial Results are available on the Stock Exchange websites, www.nseindia.com and www.bseindia.com, and on the Company's website, www.infosys.com.

Bengaluru, India
April 17, 2025

Sd/-
Salil Parekh
Chief Executive Officer and Managing Director

Certain statements in this release concerning our future growth prospects, our future financial or operating performance, the McCamish cybersecurity incident and the related review and notification process are forward looking statements intended to qualify for the 'safe harbor' under the Private Securities Litigation Reform Act of 1995, which involve a number of risks and uncertainties that could cause actual results or outcomes to differ materially from those in such forward-looking statements. The risks and uncertainties relating to these statements include, but are not limited to, risks and uncertainties regarding the execution of our business strategy, increased competition for talent, our ability to attract and retain personnel, increase in wages, investments to reskill our employees, our ability to effectively implement a hybrid working model, economic uncertainties and geo-political situations, technological disruptions and innovations such as Generative AI, the complex and evolving regulatory landscape including immigration regulation changes, our ESG vision, our capital allocation policy and expectations concerning our market position, future operations, margins, profitability, liquidity, capital resources, our corporate actions including acquisitions, the amount of any additional costs, including indemnities or damages or claims, resulting directly or indirectly from the McCamish cybersecurity incident and the outcome and effect of pending litigation. Important factors that may cause actual results or outcomes to differ from those implied by the forward-looking statements are discussed in more detail in our US Securities and Exchange Commission filings including our Annual Report on Form 20-F for the fiscal year ended March 31, 2024. These filings are available at https://www.sec.gov/. Infosys may, from time to time, make additional written and oral forward-looking statements, including statements contained in the Company's filings with the Securities and Exchange Commission and our reports to shareholders. The Company does not undertake to update any forward-looking statements that may be made from time to time by or on behalf of the Company unless it is required by law.

‘ಲೋಕೋ ಪೈಲಟ್‌ಗಳದ್ದು ಕರುಣಾಜನಕ ಸ್ಥಿತಿ’



ರಾಹುಲ್ ಗಾಂಧಿ

ನವದೆಹಲಿ: ‘ಭಾರತೀಯ ರೈಲ್ವೆ ಇಲಾಖೆಯ ಲೋಕೊ ಪೈಲಟ್‌ಗಳು ಅಮಾನವೀಯ ಪರಿಸ್ಥಿತಿಯಲ್ಲಿ ಕೆಲಸ ಮಾಡುವಂತಹ ಸನ್ನಿವೇಶವನ್ನು ಕೇಂದ್ರಸರ್ಕಾರ ಸೃಷ್ಟಿಸಿದೆ. ಈ ಮೂಲಕ ಲೋಕೊ ಪೈಲಟ್‌ಗಳಿಗೆ ಅನ್ಯಾಯ ಮಾಡುತ್ತಿರುವುದು ಮಾತ್ರವಲ್ಲದೇ, ಕೋಟ್ಯಂತರ ಪ್ರಯಾಣಿಕರ ಜೀವದ ಜತೆಗೂ ಆಟವಾಡುತ್ತಿದೆ’ ಎಂದು ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

8 ಗಂಟೆಯ ಪಾಳಿ ಹಾಗೂ ವಿಶ್ರಾಂತಿಗೆ ಸಮಯ ನೀಡುವಂತೆ ಕೋರಿ ಲೋಕೊ ಪೈಲಟ್‌ಗಳು ಮಾಡಿದ್ದ ಮನವಿಯನ್ನು ರೈಲ್ವೆ ಇಲಾಖೆ ತಿರಸ್ಕರಿಸಿದೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿದ್ದವು.

ಆ ವರದಿಗಳನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿರುವ ರಾಹುಲ್, ‘14 ಗಂಟೆ ಅವಧಿಯ ಕೆಲಸ, ನಿರಂತರ ರಾತ್ರಿ ಪಾಳಿ, ಊಟದ ವಿರಾಮವೂ ಇರದಂತಹ ಸ್ಥಿತಿಯನ್ನು ಲೋಕೊ ಪೈಲಟ್‌ಗಳು ಎದುರಿಸುತ್ತಿದ್ದಾರೆ’ ಎಂದಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣ: ಕಾಂಗ್ರೆಸ್ ನಾಯಕರ ವಿರುದ್ಧ ಗೌರವ್ ಭಾಟಿಯಾ ವಾಗ್ದಾಳಿ

ಭ್ರಷ್ಟರು ಜೈಲಿಗೆ: ಬಿಜೆಪಿ ತಿರುಗೇಟು

ನವದೆಹಲಿ (ಪಿಟಿಐ): ಭ್ರಷ್ಟಾಚಾರ ವಿಷಯದಲ್ಲಿ ಗಾಂಧಿ ಕುಟುಂಬದ ವಿರುದ್ಧ ಬಿಜೆಪಿ ವಾಗ್ದಾಳಿ ಮುಂದುವರಿಸಿದ್ದು, ‘ಭ್ರಷ್ಟಾಚಾರದಲ್ಲಿ ತೊಡಗಿರುವ ಮತ್ತು ರೈತರ ಭೂಮಿಯನ್ನು ಕಬಳಿಸಿದವರನ್ನು ಪ್ರಧಾನಿ ನರೇಂದ್ರ ಮೋದಿ ಸರ್ಕಾರವು ಜೈಲಿಗೆ ದಬ್ಬಲಿದೆ’ ಎಂದು ಗುರುವಾರ ಪ್ರತಿಪಾದಿಸಿದೆ.

‘ಭ್ರಷ್ಟಾಚಾರ ನಿರ್ಮೂಲನೆ ಮಾಡುವುದು ಮತ್ತು ಭೂಮಿ ಕಳೆದುಕೊಂಡಿರುವ ರೈತರಿಗೆ ಅದನ್ನು ಹಿಂದಿರುಗಿಸುವುದು ಮೋದಿ ಸರ್ಕಾರದ ಸಂಕಲ್ಪವಾಗಿದೆ’ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಅವರು ಪಕ್ಷದ ಪ್ರಧಾನ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹಣದ ಅಕ್ರಮ ವರ್ಗಾವಣೆ ಆರೋಪ ಹೊರಿಸಿ ಜಾರಿ ನಿರ್ದೇಶನಾಲಯವು (ಇ.ಡಿ) ಮಂಗಳವಾರ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಹರಿಯಾಣದ ಭೂ ವ್ಯವಹಾರದ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಉದ್ಯಮಿ ರಾಬರ್ಟ್ ವಾದ್ರಾ ಅವರು ಸತತ ಮೂರನೇ ದಿನವಾದ ಗುರುವಾರ ಕೂಡ ವಿಚಾರಣೆಗಾಗಿ ಇ.ಡಿ ಮುಂದೆ ಹಾಜರಾದರು.

‘ತಾನು ಈ ದೇಶದ ಕಾನೂನಿಗಿಂತ ಮೇಲೆ ಇದ್ದೇನೆ ಎಂದು ವಾದ್ರಾ ಭಾವಿಸುತ್ತಾರೆ. ಕೇಂದ್ರದಲ್ಲಿರುವುದು ಮೋದಿ ನೇತೃತ್ವದ ಪ್ರಾಮಾಣಿಕ ಸರ್ಕಾರ ಎಂಬುದು ಅವರಿಗೆ ಮನವರಿಕೆಯಾಗಿಲ್ಲ. ಬಿಜೆಪಿ ಸರ್ಕಾರದಡಿ ತನಿಖಾ ಸಂಸ್ಥೆಗಳು ಪಂಜರದ ಗಿಳಿಗಳಲ್ಲ. ಭ್ರಷ್ಟಾಚಾರ ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಹೊರಗೆ ಇರುವವರನ್ನು ಜೈಲಿಗೆ ಕಳುಹಿಸುವ ಕೆಲಸವನ್ನು ತನಿಖಾ ಸಂಸ್ಥೆಗಳು ಮಾಡಲಿವೆ’ ಎಂದರು.

‘ರಾಬರ್ಟ್ ವಾದ್ರಾ ಭೂಮಿಯನ್ನು ಕಬಳಿಸಿದರೆ, ರಾಹುಲ್ ಗಾಂಧಿ ಹೆಸರು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ, ಸೋನಿಯಾ ಗಾಂಧಿ ಹೆಸರು ವಿವಿಐಪಿ ಹೆಲಿಕಾಪ್ಟರ್ ಹಗರಣದಲ್ಲಿ ಕೇಳಿಬಂದಿದ್ದರೆ, ರಾಜೀವ್ ಗಾಂಧಿ ಹೆಸರು ಬೊಫೋರ್ಸ್ ಹಗರಣದಲ್ಲಿ ಕೇಳಿಬಂದಿತ್ತು. ಗಾಂಧಿ ಕುಟುಂಬವು ಭ್ರಷ್ಟ ಮತ್ತು ಕಳ್ಳ’ ಎಂದು ಆರೋಪಿಸಿದರು.

ನಾಳೆ ಕಾಂಗ್ರೆಸ್ ಮಹತ್ವದ ಸಭೆ

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇ.ಡಿ (ಜಾರಿ ನಿರ್ದೇಶನಾಲಯ) ಸಲ್ಲಿಸಿರುವ ದೋಷಾರೋಪ ಪಟ್ಟಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿ ನಡೆಸಿದ ಕ್ರಮ ಎಂದು ಕಾಂಗ್ರೆಸ್ ಆರೋಪಿಸಿದೆ. ಇ.ಡಿ ಕ್ರಮ ಖಂಡಿಸಿ ಪ್ರತಿಭಟನೆ ನಡೆಸಲು ರೂಪುರೇಷೆ ಸಿದ್ಧಪಡಿಸುವ ಕುರಿತು ಶನಿವಾರ (ಏಪ್ರಿಲ್ 19) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು, ಉಸ್ತುವಾರಿಗಳು ಮತ್ತು ತನ್ನ ಮುಂಚೂಣಿ ಸಂಸ್ಥೆಗಳ ಮುಖ್ಯಸ್ಥರ ಸಭೆ ಕರೆದಿದೆ.

ಶನಿವಾರ ಸಂಜೆ 4 ಗಂಟೆಗೆ ನವದೆಹಲಿಯ ಇಂದಿರಾ ಗಾಂಧಿ ಭವನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಸಭೆ ನಡೆಯಲಿದೆ. ಪ್ರತಿಭಟನೆ ಮತ್ತು ಮುಂದಿನ ಹೋರಾಟದ ಕಾರ್ಯತಂತ್ರಗಳನ್ನು ಸಭೆಯಲ್ಲಿ ನಿರ್ಧರಿಸಲಾಗುತ್ತದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಮೋದಿ ಸರ್ಕಾರದಿಂದ ನರೇಗಾ ಕಾರ್ಮಿಕರ ಮೇಲೆ ದಬ್ಬಾಳಿಕೆ’

ಮಲ್ಲಿಕಾರ್ಜುನ ಖರ್ಗೆ

‘ಬಡವರ ವಿರೋಧಿಯಾದ ಕೇಂದ್ರ ಸರ್ಕಾರವು ಉದ್ಯೋಗ ಖಾತರಿ ಯೋಜನೆಯ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸುತ್ತಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗುರುವಾರ ಆರೋಪಿಸಿದ್ದಾರೆ. ದಿನದ ಕೂಲಿಯನ್ನು ₹400ಕ್ಕೆ ಏರಿಸಬೇಕು ಹಾಗೂ ವರ್ಷದಲ್ಲಿ ಕೆಲಸದ ದಿನಗಳನ್ನು 150ಕ್ಕೆ ಹೆಚ್ಚಿಸಬೇಕು ಎಂಬ ಪಕ್ಷದ ಬೇಡಿಕೆಯನ್ನು ಪುನರುಚ್ಚರಿಸಿದ್ದಾರೆ.

‘ಉದ್ಯೋಗ ಖಾತರಿ ಅಡಿಯಲ್ಲಿ ಕೂಲಿ ಏರಿಕೆ, ದಿನಗಳ ಏರಿಕೆ ಮಾಡುವಂತೆ ಎರಡು ಸಮಿತಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿವೆ. ಹೀಗಿದ್ದರೂ ಕೇಂದ್ರ ಸರ್ಕಾರ ನಿರ್ಧಾರ ಕೈಗೊಳ್ಳಲು ಹಿಂದೇಟು ಹಾಕುತ್ತಿದೆ’ ಎಂದು ಖರ್ಗೆ ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಗಾಂಧಿ ಕುಟುಂಬವು ಜನರ ಹಣದಿಂದ ತನ್ನ ಖಜಾನೆಯನ್ನು ತುಂಬಿದ್ದರೆ, ಪ್ರತಿಯೊಂದು ಪೈಸೆಯನ್ನೂ ಅವರಿಂದ ವಸೂಲಿ ಮಾಡಲಾಗುತ್ತದೆ

ಗೌರವ್ ಭಾಟಿಯಾ, ಬಿಜೆಪಿ ರಾಷ್ಟ್ರೀಯ ವಕ್ತಾರ

ಸೋನಿಯಾ ಮತ್ತು ರಾಹುಲ್ ವಿರುದ್ಧ ಇ.ಡಿ ದೋಷಾರೋಪ ಪಟ್ಟಿ ಸಲ್ಲಿಕೆಯು ರಾಷ್ಟ್ರ ವ್ಯಾಪಿ ಜಾತಿ ಗಣತಿ ತಡೆಯುವ ‘ಪಿತೂರಿ’ಯ ಭಾಗವಾಗಿದೆ

ಭಟ್ಟಿ ವಿಕ್ರಮಾರ್ಕ, ತೆಲಂಗಾಣ ಉಪ ಮುಖ್ಯಮಂತ್ರಿ

ಸುದ್ದಿ 2 ನಿಮಿಷ

ಅಲಿಗಢಕ್ಕೆ ಇಂದು ಭಾಗವತ್ ಭೇಟಿ

ಅಲಿಗಢ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಾ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಗುರುವಾರದಿಂದ ಐದು ದಿನಗಳವರೆಗೆ ಅಲಿಗಢ ಭೇಟಿ ಕೈಗೊಂಡಿದ್ದು, ಈ ವೇಳೆಯಲ್ಲಿ ಬ್ರಜ್ ಪ್ರದೇಶದಲ್ಲಿನ ಸಂಘದ ಹಿರಿಯ ಕಾರ್ಯಕರ್ತರ ಜತೆ ಸಭೆ, ಸಮಾಲೋಚನೆ ನಡೆಸಲಿದ್ದಾರೆ.

ವಿಜಯದಶಮಿ ವೇಳೆ ಪ್ರಾರಂಭ ಆಗಲಿರುವ ಸಂಘದ ಶತಮಾನೋತ್ಸವ ಆಚರಣೆಗೆ ಪೂರಕವಾಗಿ ಸಂಘವನ್ನು ಸನ್ನದ್ಧಗೊಳಿಸಲು ಈ ಸಭೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಭಾಗವತ್ ಅವರು 14 ವರ್ಷಗಳಲ್ಲಿ ಇದೇ ಮೊದಲಿಗೆ ಅಲಿಗಢಕ್ಕೆ ಭೇಟಿ ನೀಡುತ್ತಿದ್ದು, ಬಿಗಿ ಬಂದೋಬಸ್ತ್ ಕಲ್ಪಿಸಲಾಗಿದೆ.

ಕೇರಳ ಸಿಎಂ ವಿರುದ್ಧ ಸಿಬಿಐ ತನಿಖೆ ಕೋರಿ ಪಿಐಎಲ್

ಕೊಚ್ಚಿ (ಪಿಟಿಐ): ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಖಾಸಗಿ ಗಣಿ ಕಂಪನಿ ಸಿಎಂಆರ್‌ಎಲ್‌ನಿಂದ ಕಿಕ್‌ಬ್ಯಾಕ್ ಪಡೆದಿದ್ದಾರೆಂದು ಆರೋಪಿಸಿ, ಸಿಬಿಐ ತನಿಖೆಗೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ವಿಚಾರಣೆ ನಡೆಸಿದ ಕೇರಳ ಹೈಕೋರ್ಟ್, ಕೇಂದ್ರ ಸರ್ಕಾರ ಮತ್ತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ನೋಟಿಸ್ ನೀಡಿ, ಪ್ರತಿಕ್ರಿಯೆ ಕೇಳಿದೆ.

ಪತ್ರಕರ್ತ ಎಂ.ಆರ್.ಅಜಯನ್ ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಅಮಿತ್ ರಾವಲ್ ಮತ್ತು ಪಿ.ಎಂ.ಮನೋಜ್ ಅವರಿದ್ದ ಪೀಠವು ವಿಚಾರಣೆ ನಡೆಸಿತು. ಮುಖ್ಯಮಂತ್ರಿ ಪುತ್ರಿ ವೀಣಾ ವಿಜಯನ್, ಸದ್ಯ ಕಾರ್ಯಸ್ಥಗಿತಗೊಂಡಿರುವ ಅವರ ಐಟಿ ಕಂಪನಿ ಎಕ್ಸಾಲಾಜಿಕ್, ಖಾಸಗಿ ಗಣಿ ಕಂಪನಿ ಸಿಎಂಆರ್‌ಎಲ್ ವ್ಯವಸ್ಥಾಪಕ ನಿರ್ದೇಶಕರಾದ ಶಶಿಧರನ್ ಕಾರ್ತ, ಅವರ ಪುತ್ರ, ಪುತ್ರಿ, ಅಳಿಯ ಮತ್ತು ಸೆಬಿ ಸೇರಿದಂತೆ ಹಲವರಿಗೂ ಕೋರ್ಟ್ ನೋಟಿಸ್ ನೀಡಿದೆ.

ಸಿಎಂಆರ್‌ಎಲ್‌ನ(ಕೊಚಿನ್ ಮಿನರಲ್ಸ್ ಅಂಡ್ ರುಟೈಲ್ ಲಿಮಿಟೆಡ್) ಆದಾಯ ತೆರಿಗೆ ಪ್ರಕ್ರಿಯೆಯಲ್ಲಿ ನಮೂದಿಸಿದ್ದವರ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ‘ಮಧ್ಯಂತರ ಇತ್ಯರ್ಥ ಮಂಡಳಿ’ಗೂ ಸೂಚಿಸಿ, ವಿಚಾರಣೆಯನ್ನು ಮೇ 27ಕ್ಕೆ ಮುಂದೂಡಿತು.

ಮುರ್ಶಿದಾಬಾದ್‌ಗೆ ಭೇಟಿ ಶೀಘ್ರ ಪ.ಬಂಗಾಳ ರಾಜ್ಯಪಾಲ ಬೋಸ್



ಸಿ.ವಿ.ಆನಂದ ಬೋಸ್

ಕೋಲ್ಕತ್ತ: ಹಿಂಸಾಚಾರ ಪೀಡಿತ ಮುರ್ಶಿದಾಬಾದ್‌ಗೆ ಭೇಟಿ ನೀಡಿ, ಅಲ್ಲಿನ ಪರಿಸ್ಥಿತಿ ಅವಲೋಕಿಸುವುದಾಗಿ ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಗುರುವಾರ ಹೇಳಿದ್ದಾರೆ. ಮುರ್ಶಿದಾಬಾದ್‌ಗೆ ರಾಜ್ಯಪಾಲರು ಸದ್ಯಕ್ಕೆ ಭೇಟಿ ನೀಡದಂತೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮನವಿ ಮಾಡಿದ್ದರೂ ರಾಜ್ಯಪಾಲರು ಭೇಟಿ ನೀಡುತ್ತಿರುವುದು ಮಹತ್ವ ಪಡೆದಿದೆ.

ಮಾಧ್ಯಮಗಳೊಂದಿಗೆ ರಾಜಭವನದಲ್ಲಿ ಮಾತನಾಡಿದ ಬೋಸ್, ‘ಮುರ್ಶಿದಾಬಾದ್‌ಗೆ ಖುದ್ದು ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಬೇಕಿದೆ. ಇದು ಎಲ್ಲಾ ಆಯಾಮಗಳಲ್ಲೂ ಉನ್ನತ ಮಟ್ಟದಲ್ಲಿ ಪರೀಕ್ಷಿಸಬೇಕಾದ ವಿಚಾರ. ಸಹಜಸ್ಥಿತಿ ಮರುಸ್ಥಾಪನೆಯಾಗಿದ್ದರೆ ಸಂತಸವಾಗುತ್ತದೆ. ಅದೇ ಆಧಾರದಲ್ಲಿ ನಾನು ವರದಿ ನೀಡುತ್ತೇನೆ’ ಎಂದಿದ್ದಾರೆ. ಈ ಮೂಲಕ ಕೇಂದ್ರಕ್ಕೆ ವರದಿ ಸಲ್ಲಿಸುವ ಸುಳಿವನ್ನು ಅವರು ನೀಡಿದ್ದಾರೆ.

ಮಮತಾ ಅವರ ಮನವಿ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿ, ‘ಮುಖ್ಯಮಂತ್ರಿಗಳ ಮನವಿಯನ್ನು ಪರಿಗಣಿಸಲಾಗಿತ್ತು. ಆದರೆ, ಮುರ್ಶಿದಾಬಾದ್‌ನ ಸಂತ್ರಸ್ತರನ್ನು ಭೇಟಿಯಾದ ಬಳಿಕ ವಿಶೇಷವಾಗಿ ಮಹಿಳಾ ಸಂತ್ರಸ್ತರ ಮಾತುಗಳನ್ನು ಆಲಿಸಿದ ಬಳಿಕ ನಾನೇ ಭೇಟಿ ನೀಡಲು ನಿರ್ಧರಿಸಿದೆ’ ಎಂದೂ ಹೇಳಿದ್ದಾರೆ.

ಮಮತಾ ಮನವಿ: ಮುರ್ಶಿದಾಬಾದ್‌ನಲ್ಲಿ ಸಹಜ ಸ್ಥಿತಿ ಮರುಸ್ಥಾಪಿಸಲಾಗುತ್ತಿದೆ. ಈ ಸಂದರ್ಭದಲ್ಲಿ ರಾಜ್ಯಪಾಲರು ಭೇಟಿ ನೀಡದೆ, ತಮ್ಮ ಭೇಟಿಯನ್ನು ಮುಂದೂಡಬೇಕು ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮನವಿ ಮಾಡಿದ್ದಾರೆ.

‘ಅವಳಿ ಹತ್ಯೆ: ಆರೋಪಿ ಬಂಧನ

ವಕ್ಫ್ ಕಾಯ್ದೆ ವಿರೋಧಿಸಿ ನಡೆದ ಹಿಂಸಾಚಾರದ ವೇಳೆ ಮುರ್ಶಿದಾಬಾದ್‌ನ ಜಾಫರಾಬಾದ್‌ನಲ್ಲಿ ತಂದೆ–ಮಗನನ್ನು ಕೊಲ್ಲಲಾಗಿದ್ದ ಪ್ರಕರಣದ ಪ್ರಮುಖ ಆರೋಪಿಯನ್ನು ಪಶ್ಚಿಮ ಬಂಗಾಳ ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ಇನ್ಜಾಮುಲ್ ಹಕ್ ಎಂದು ಗುರುತಿಸಲಾಗಿದೆ. ಈತ ಹತ್ಯೆಯ ಪ್ರಮುಖ ಸಂಚುಕೋರ ಮಾತ್ರನಲ್ಲದೇ, ವಿದ್ಯುತ್ ವ್ಯತ್ಯಯಗೊಳಿಸಿ, ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಹಾಳು ಮಾಡುವ ಮೂಲಕ ಸಾಕ್ಷ್ಯನಾಶಕ್ಕೆ ನಡೆದ ಪ್ರಯತ್ನದಲ್ಲೂ ಪ್ರಮುಖ ಪಾತ್ರ ವಹಿಸಿದ್ದನೆಂದು ಪೊಲೀಸರು ಹೇಳಿದ್ದಾರೆ.

ಮರಿಗಳ ಚಿನ್ನಾಟ ರಾಜಸ್ಥಾನದ ಜೈಪುರದಲ್ಲಿರುವ ನಾಹರಗಢ ಜೈವಿಕ ಉದ್ಯಾನದಲ್ಲಿ ಬೆಂಗಾಲ ಟೈಗರ್ ಗಂಡು ಮರಿ ಭೀಮ ಹಾಗೂ ಹೆಣ್ಣು ಮರಿ ಸ್ಕಂದಿ, ಬಿಸಿಲ ಬೇಗೆಯಿಂದ ಪಾರಾಗಲು ನೀರಿನಲ್ಲಿ ಚಿನ್ನಾಟವಾಡುತ್ತಿದ್ದ ದೃಶ್ಯ ಗುರುವಾರ ಕಂಡುಬಂತು –ಪಿಟಿಐ ಚಿತ್ರ

ಛತ್ತೀಸಗಢದಲ್ಲಿ 22 ನಕ್ಸಲರ ಬಂಧನ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯ ಮೂರು ಸ್ಥಳಗಳಲ್ಲಿ 22 ನಕ್ಸಲರನ್ನು ಬಂಧಿಸಲಾಗಿದೆ. ಬಂಧಿತರಿಂದ ಸ್ಫೋಟಕ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಕೋಬ್ರಾ ಕಮಾಂಡೊಗಳು ಮತ್ತು ಸ್ಥಳೀಯ ಪೊಲೀಸರ ಜಂಟಿ ತಂಡವು ಮಂಗಳವಾರ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಉಸೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 7 ಮಂದಿ, ಜಂಗ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 6 ಮತ್ತು ನೆಲ್ಸನಾರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 9 ಮಂದಿ ನಕ್ಸಲರನ್ನು ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು

‘ಕಳಂಕ ರಹಿತ’ರ ಸೇವೆ ಮುಂದುವರಿಕೆ

ಪಶ್ಚಿಮ ಬಂಗಾಳ: ಡಿ. 31ರವರೆಗೆ ಶಿಕ್ಷಕರ ಸೇವೆ ವಿಸ್ತರಿಸಿದ ಸುಪ್ರೀಂ ಕೋರ್ಟ್

ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ‘ಕಳಂಕ ಇಲ್ಲದವರು’ ಎಂದು ಸಿಬಿಐ ಹೇಳಿರುವ ಶಿಕ್ಷಕರ ಸೇವೆಯನ್ನು ಸುಪ್ರೀಂ ಕೋರ್ಟ್ ಡಿಸೆಂಬರ್ 31ರವರೆಗೆ ವಿಸ್ತರಿಸಿದೆ.

ಪಶ್ಚಿಮ ಬಂಗಾಳದ ವಿವಿಧ ಶಾಲೆಗಳಿಗೆ ನಡೆದ 25,753 ಶಿಕ್ಷಕರು ಮತ್ತು ಇತರ ಸಿಬ್ಬಂದಿಯ ಇಡೀ ನೇಮಕಾತಿ ಪ್ರಕ್ರಿಯೆಯು ಕಳಂಕಿತವಾಗಿದೆ ಎಂದು ಹೇಳಿದ್ದ ಕೋರ್ಟ್, ಅಷ್ಟೂ ನೇಮಕಾತಿಗಳನ್ನು ಈಚೆಗೆ ಅಸಿಂಧುಗೊಳಿಸಿತ್ತು.

ರಾಜ್ಯದ ಹಲವು ಶಾಲೆಗಳಲ್ಲಿ ಬೋಧನೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಿದೆ, ಹೊಸದಾಗಿ ಶಿಕ್ಷಕರ ನೇಮಕ ಮಾಡಲು ಸಮಯ ಬೇಕಾಗುತ್ತದೆ ಎಂದು ಪಶ್ಚಿಮ ಬಂಗಾಳ ಸರ್ಕಾರ ನೀಡಿದ ವಿವರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು ದಾಖಲಿಸಿಕೊಂಡಿತು.

ಆದರೆ, ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ‘ಸಿ’ ಮತ್ತು ‘ಡಿ’ ದರ್ಜೆ ನೌಕರರ ಸೇವೆಯನ್ನು ವಿಸ್ತರಿಸಲು ಪೀಠವು ಒಪ್ಪಲಿಲ್ಲ.

ಸುಪ್ರೀಂ ಕೋರ್ಟ್ ತೀರ್ಪಿನ ಪರಿಣಾಮವಾಗಿ ಉದ್ಯೋಗ ಕಳೆದುಕೊಂಡ ಶಿಕ್ಷಕರು ಮತ್ತು ಇತರ ಸಿಬ್ಬಂದಿ ಪಶ್ಚಿಮ ಬಂಗಾಳದ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಿದ್ದರು.

‘ಕೋರ್ಟ್ ಆದೇಶದಿಂದಾಗಿ ನಮಗೆ ಸಂತಸವಾಗಿದೆ... ಸಮಾಧಾನ ಆಗಿದೆ. ಚಿಂತೆ ಬೇಡ ಎಂದು ನಾನು ಶಿಕ್ಷಕರಿಗೆ ಮನವಿ ಮಾಡುತ್ತಿದ್ದೇನೆ, ಸಮಸ್ಯೆ ಪರಿಹಾರವಾಗುತ್ತದೆ’ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

‘ಜಾತಿ ಜನಗಣತಿ ಕಾದು ನೋಡುವ ತೀರ್ಮಾನ’

ಪ್ರಜಾವಾಣಿ ವಾರ್ತೆ

ಕೋಟ ಶ್ರೀನಿವಾಸ ಪೂಜಾರಿ

ಉಡುಪಿ: ರಾಜ್ಯ ಸರ್ಕಾರದ ಜಾತಿ ಜನಗಣತಿ ವರದಿಯ ಬಗ್ಗೆ ಬಿಜೆಪಿ ಕಾದು ನೋಡುವ ತೀರ್ಮಾನ ಮಾಡಿದೆ. ಈಗಾಗಲೇ ವರದಿಯ ಅಂಗೀಕಾರ, ಸ್ವೀಕಾರ ವಿಚಾರದಲ್ಲಿ ಸರ್ಕಾರ ತಪ್ಪು ಮಾಡಿದೆ. ಮುಖ್ಯಮಂತ್ರಿ ಅವರು ತಮಗೆ ಎದುರಾಗಿರುವ ಗಂಡಾಂತರದಿಂದ ಪಾರಾಗಲು ಜಾತಿ ಜನಗಣತಿಯನ್ನು ಮುನ್ನೆಲೆಗೆ ತಂದಿದ್ದಾರೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಆರೋಪಿಸಿದರು.

ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ವರದಿಗಾಗಿ ಸಿದ್ದರಾಮಯ್ಯ ಅವರೇ ಕಾಂತರಾಜ್ ಅವರನ್ನು ನೇಮಿಸಿದ್ದು, ಅವರೇ ಅದಕ್ಕಾಗಿ ಹಣ ಬಿಡುಗಡೆ ಮಾಡಿದ್ದರು. ನಾವಂತೂ ಹಿಂದುಳಿದ ವರ್ಗಗಳ ಪರವಾಗಿದ್ದೇವೆ. ನಾವು ಸಭೆ ಸೇರಿ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದರು.

‘ಅಲ್ಪಸಂಖ್ಯಾತರನ್ನು ಒಂದೇ ಜಾತಿ ಎಂದು ಪರಿಗಣಿಸಲಾಗಿದೆ. ಆದರೆ ಲಿಂಗಾಯತರು ಒಕ್ಕಲಿಗರನ್ನು ವಿಂಗಡಿಸಿ ಸಮಾಜ ಒಡೆಯಲಾಗಿದೆ. ವಿಶ್ವಕರ್ಮರು, ಈಡಿಗರು, ಬಲಿಜಿಗರು ನಾವು 30 - 35 ಲಕ್ಷ ಇದ್ದೇವೆ ಎನ್ನುತ್ತಾರೆ. ಆದರೆ ವರದಿ 11-12 ಲಕ್ಷ ಎನ್ನುತ್ತಿದೆ, ಬಹುದೊಡ್ಡ ಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಖಂಡರು ಜಾತಿ ಆಧಾರದಲ್ಲಿ ನಮ್ಮನ್ನು ವಿಭಜನೆ ಮಾಡಿದ್ದಾರೆ ಎನ್ನುತ್ತಿದ್ದಾರೆ’ ಎಂದರು.

ಎಸ್‌ಸಿಗೆ ಒಳ ಮೀಸಲಾತಿ: ಆಂಧ್ರದಿಂದ ಸುಗ್ರೀವಾಜ್ಞೆ

ಅಮರಾವತಿ (ಪಿಟಿಐ): ರಾಜ್ಯದಲ್ಲಿ ಶಿಕ್ಷಣ ಮತ್ತು ಉದ್ಯೋಗ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿಯವರನ್ನು (ಎಸ್‌ಸಿ) ಮೂರು ಉಪ ವರ್ಗಗಳಾಗಿ ವರ್ಗೀಕರಿಸಿ ಒಳ ಮೀಸಲಾತಿ ನೀಡಲು ಆಂಧ್ರ ಪ್ರದೇಶ ಸರ್ಕಾರವು ಗುರುವಾರ ಸುಗ್ರೀವಾಜ್ಞೆ ಹೊರಡಿಸಿದೆ.

‘ಆಂಧ್ರ ಪ್ರದೇಶ ಪರಿಶಿಷ್ಟ ಜಾತಿ (ಉಪ-ವರ್ಗೀಕರಣ) ಸುಗ್ರೀವಾಜ್ಞೆ-2025 ಅನ್ನು ಗೆಜೆಟ್‌ನಲ್ಲಿ ಇಂಗ್ಲಿಷ್, ತೆಲುಗು ಮತ್ತು ಉರ್ದು ಭಾಷೆಗಳಲ್ಲಿ ಆಂಧ್ರಪ್ರದೇಶ ಸುಗ್ರೀವಾಜ್ಞೆ 2025ರ ನಂ. 2 ಎಂದು ಪ್ರಕಟಿಸಲಾಗಿದೆ’ ಎಂದು ಕಾನೂನು ಇಲಾಖೆ ಆದೇಶದಲ್ಲಿ ತಿಳಿಸಿದೆ.

ಏ. 15ಕ್ಕೆ ಪರಿಶಿಷ್ಟ ಜಾತಿಗಳನ್ನು ಒಟ್ಟು ಶೇ 15ರಷ್ಟು ಮೀಸಲಾತಿಗೆ ಒಳಪಟ್ಟಂತೆಯೇ 3 ಗುಂಪುಗಳಾಗಿ ಉಪ ವರ್ಗೀಕರಣ ಮಾಡುವ ಸುಗ್ರೀವಾಜ್ಞೆಯ ಪ್ರಸ್ತಾಪವನ್ನು ಸಚಿವ ಸಂಪುಟ ಅನುಮೋದಿಸಿತ್ತು.

ಎಸ್‌ಸಿ ಪಟ್ಟಿಯಲ್ಲಿರುವ 59 ಜಾತಿಗಳನ್ನು 3 ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಚಂಡಾಲ, ಪಾಕಿ, ರೆಲ್ಲಿ, ಡೋಮ್ ಹಾಗೂ ಇನ್ನಿತರ 12 ಜಾತಿಗಳು ವರ್ಗ–1ರಲ್ಲಿದ್ದು, ಇವುಗಳಿಗೆ ಶೇ 1ರಷ್ಟು ಒಳಮೀಸಲು ನೀಡಲಾಗುವುದು ಎಂದು ರಾಜ್ಯ ಸರ್ಕಾರ ಈ ಹಿಂದೆ ಹೇಳಿತ್ತು.

ಆತಂಕ ನಿವಾರಿಸಿ ಅನುಷ್ಠಾನ

ಒಂದನೇ ಪುಟದಿಂದ...

ವೀರಶೈವ–ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು, ರಾಷ್ಟ್ರೀಯ ಅಧ್ಯಕ್ಷರಾದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಮಗ, ತೋಟಗಾರಿಕೆ ಸಚಿವ ಎಸ್. ಎಸ್. ಮಲ್ಲಿಕಾರ್ಜುನ ಅವರು, ‘ಸಮೀಕ್ಷೆಯಲ್ಲಿ ವೀರಶೈವ–ಲಿಂಗಾಯತರ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ. ಹಿಂದೆಲ್ಲ ಶೇ 14–16ರಷ್ಟಿರುತ್ತಿದ್ದ ಸಂಖ್ಯೆ ಈಗ ಶೇ 12ಕ್ಕೆ ಇಳಿದಿದ್ದು ಹೇಗೆ’ ಎಂದು ಪ್ರಶ್ನಿಸಿದರು. ‘ಮೀಸಲಾತಿಯ ಸೌಲಭ್ಯ ಪಡೆಯಲು ಕೆಲವರು ಹಿಂದೂ ಸಾದರ (2 ಎ) ಎಂದು ಸೇರಿಸಿದ್ದರಿಂದಾಗಿ ಸಾದರ ಲಿಂಗಾಯತರ ಸಂಖ್ಯೆ ಕಡಿಮೆಯಾಗಿರಬಹುದು’ ಎಂದು ಮಲ್ಲಿಕಾರ್ಜುನ ಅವರೇ ಸ್ಪಷ್ಟನೆಯನ್ನು ಕೊಟ್ಟರು. ಬೇಡುವ ಜಂಗಮರು (ವೀರಶೈವ–ಲಿಂಗಾಯತ) ಬೇಡ ಜಂಗಮ (ಪರಿಶಿಷ್ಟ ಜಾತಿ) ಎಂದು ಹೇಳಿಕೊಂಡಿರುವುದು ತಮ್ಮ ಸಮುದಾಯದ ಸಂಖ್ಯೆ ಇಳಿಕೆಯಾಗಲು ಕಾರಣವಾಗಿರಬಹುದು ಎಂದು ಖಂಡ್ರೆ ವಿವರಣೆ ನೀಡಿದರು ಎಂದು ಗೊತ್ತಾಗಿದೆ.

‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬಿಟ್ಟರೆ, ಒಕ್ಕಲಿಗ ಸಮುದಾಯದ ಯಾವುದೇ ಸಚಿವರೂ ಸಭೆಯಲ್ಲಿ ಮಾತನಾಡಲಿಲ್ಲ. ಪಕ್ಷಕ್ಕೆ ಹಾನಿಯಾಗದೇ ಅನುಕೂಲವಾಗಬೇಕು ಹಾಗೂ ವಿರೋಧ ಪಕ್ಷಗಳ ಕೈಗೆ ಅಸ್ತ್ರವಾಗದಂತೆ ಯಾವುದೇ ತೀರ್ಮಾನ ತೆಗೆದುಕೊಂಡರೂ ತಮ್ಮ ಸಮ್ಮತಿ ಇದೆ ಎಂದು ಶಿವಕುಮಾರ್ ಅವರು ಸಭೆಯಲ್ಲಿ ಹೇಳಿದರು’ ಎಂದು ಮೂಲಗಳು ತಿಳಿಸಿವೆ.

‘ಇನ್ನಷ್ಟು ಅಧ್ಯಯನ ಮಾಡಬೇಕಾಗಿದೆ ಹಾಗೂ ಆಯೋಗದ ವರದಿಯ ಬಗ್ಗೆ ಮತ್ತಷ್ಟು ವಿವರಣೆಯೂ ಬೇಕಿದೆ’ ಎಂದು ಕೆಲವು ಸಚಿವರು ಮನವಿ ಮಾಡಿದರು’ ಎಂದು ಮೂಲಗಳು ಹೇಳಿವೆ.

ಲಾಡ್ ಸಲಹೆ–ಎಲ್ಲರೂ ಮೌನ: ಸಮೀಕ್ಷೆಯ ದತ್ತಾಂಶದ ಬಗ್ಗೆ ಸಚಿವರು ಅನುಮಾನ ವ್ಯಕ್ತಪಡಿಸಿದಾಗ ಮಧ್ಯ ಪ್ರವೇಶಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು, ‘ಸಮೀಕ್ಷೆ ನಡೆಸಿದ ಬಗ್ಗೆ ಡಿಜಿಟಲ್ ದಾಖಲೆಗಳು ಸರ್ಕಾರದ ಬಳಿ ಇವೆ. ತಾಲ್ಲೂಕು ಹಾಗೂ ವಿಧಾನಸಭಾ ಕ್ಷೇತ್ರವಾರು ವಿವರಗಳನ್ನೂ ಆಯೋಗ ಪ್ರತ್ಯೇಕವಾಗಿ ಸಂಗ್ರಹಿಸಿಟ್ಟಿದೆ. ತಾಲ್ಲೂಕು ಕೇಂದ್ರಗಳಲ್ಲಿ ಈ ದಾಖಲೆಗಳು ಸಾರ್ವಜನಿಕರಿಗೆ ಲಭ್ಯವಾಗುವಂತೆ ವ್ಯವಸ್ಥೆ ಮಾಡಬಹುದು. ತಮ್ಮ ವಿವರವನ್ನೇ ಸೇರಿಸಿಲ್ಲ ಎಂದು ನಿಜವಾಗಿಯೂ ಆತಂಕ ಇದ್ದವರಿಗೆ ಅವಕಾಶ ಕೊಡಬಹುದು. ಅದನ್ನು ಮಾಡೋಣವೇ’ ಎಂದು ಪ್ರಶ್ನಿಸಿದರು. ಅದಕ್ಕೆ ಯಾವುದೇ ಸಚಿವರು ಪ್ರತಿಕ್ರಿಯಿಸಲಿಲ್ಲ ಎಂದು ಗೊತ್ತಾಗಿದೆ.

ಗೊಂದಲ ತಪ್ಪಿಸಲು ಪಂಚಮಸಾಲಿ ಸಮುದಾಯದ ಸಭೆ ರದ್ದು

ಪ್ರಜಾವಾಣಿ ವಾರ್ತೆ

ಎಚ್.ಎಸ್. ಶಿವಶಂಕರ್

ದಾವಣಗೆರೆ: ‘ಪಂಚಮಸಾಲಿ ಸಮುದಾಯದಲ್ಲಿ ಗೊಂದಲ ಮೂಡಿಸಲು ನಾಯಕರು ಏಪ್ರಿಲ್ 19 ಹಾಗೂ 20ರಂದು ಪ್ರತ್ಯೇಕ ಸಭೆ ಕರೆದಿದ್ದಾರೆ. ಇಂತಹ ಗೊಂದಲಗಳಿಗೆ ಆಸ್ಪದ ನೀಡಬಾರದು ಎಂಬ ಉದ್ದೇಶದಿಂದ ಈ ಎರಡೂ ಸಭೆಗಳನ್ನು ರದ್ದು ಮಾಡಲಾಗಿದೆ’ ಎಂದು ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಹೇಳಿದರು.

‘ಪಂಚಮಸಾಲಿ ಸಮುದಾಯದ 2 ‘ಎ’ ಮೀಸಲಾತಿ ಹೋರಾಟ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಲು ಏಪ್ರಿಲ್ 20ರಂದು ಕೂಡಲಸಂಗಮದಲ್ಲಿ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಸಭೆ ಕರೆಯಲಾಗಿತ್ತು. ಇದಕ್ಕೆ ಪ್ರತಿಯಾಗಿ ಶಾಸಕ ವಿಜಯಾನಂದ ಕಾಶಪ್ಪನವರ ಅವರೂ ಏಪ್ರಿಲ್ 19ರಂದು ಸಮುದಾಯದ ಮುಖಂಡರ ಸಭೆ ಕರೆದಿದ್ದರು. ಸಮಾಜದ ಸಭೆಗಳನ್ನು ನಡೆಸುವುದರಿಂದ, ವೈಯಕ್ತಿಕವಾಗಿ ಹೇಳಿಕೆ ನೀಡುವುದರಿಂದ ಸಮಸ್ಯೆ, ಗೊಂದಲ ಬಗೆಹರಿಯುವುದಿಲ್ಲ. ಈ ಕಾರಣಕ್ಕೆ ಸ್ವಾಮೀಜಿ ಹಾಗೂ ಕಾಶಪ್ಪನವರೊಂದಿಗೆ ಮಾತನಾಡಿ ಸದ್ಯ ಎರಡೂ ಸಭೆ ರದ್ದು ಮಾಡಿದ್ದೇವೆ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪಂಚಮ ಸಾಲಿ ಸಮುದಾಯಕ್ಕೆ 2 ‘ಎ’ ಮೀಸಲಾತಿ ಕೊಡಬೇಕು ಎನ್ನುವುದು ನಮ್ಮ ಪ್ರಮುಖ ಬೇಡಿಕೆ. ಸದ್ಯ ಅದಕ್ಕೆ ಆದ್ಯತೆ. ಶಾಸಕ ವಿಜಯಾನಂದ ಕಾಶಪ್ಪನವರ ಅವರು ಬಸವಜಯ ಮೃತ್ಯುಂಜಯ ಸ್ವಾಮೀಜಿ ಬಗ್ಗೆ ಇಲ್ಲಸಲ್ಲದ ಹೇಳಿಕೆ ನೀಡಿದ್ದಾರೆ. ಇದು ಸರಿಯಲ್ಲ. ಇದರಿಂದ ಸಮುದಾಯದವರಿಗೆ ನೋವಾಗಿದೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಉಚ್ಚಾಟನೆ ಬಿಜೆಪಿಗೆ ಸಂಬಂಧಿಸಿದ್ದು. ಇಂತಹ ವಿಷಯದಲ್ಲಿ ಒಬ್ಬರ ಅಥವಾ ಪಕ್ಷಕ್ಕೆ ಬೆಂಬಲ ನೀಡುವುದು ಸರಿಯಲ್ಲ ಎಂದು ಸ್ವಾಮೀಜಿಗೂ ತಿಳಿಸಿದ್ದೇನೆ’ ಎಂದು ಹೇಳಿದರು.

‘ಮಾಜಿ ಸಚಿವ ಮುರುಗೇಶ ನಿರಾಣಿ, ಯತ್ನಾಳ, ಕಾಶಪ್ಪನವರ ಬೇರೆ ಬೇರೆಯಾಗಿದ್ದಾರೆ. ಇದರಿಂದ ಸಂಘಟನೆಗೆ ಹಿನ್ನಡೆಯಾಗಿದೆ. ಎಲ್ಲರನ್ನೂ ಒಂದೇ ವೇದಿಕೆಗೆ ತರಲು ಮಾಜಿ ಸಚಿವ ಎ.ಬಿ.ಪಾಟೀಲ ನೇತೃತ್ವದಲ್ಲಿ ಸಭೆ ನಡೆಸಲಿದ್ದೇವೆ’ ಎಂದು ಹೇಳಿದರು.

ಒಳಮೀಸಲು: ಮೇ 24ಕ್ಕೆ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಬಳಿ ಇರುವ ದತ್ತಾಂಶಗಳನ್ನು ಪರಿಗಣಿಸಿ, ವಿಳಂಬ ನೀತಿ ಅನುಸರಿಸದೇ ಒಳ ಮೀಸಲಾತಿಯನ್ನು ಜಾರಿಗೊಳಿಸುವಂತೆ ಆಗ್ರಹಿಸಿ ಮೇ 24ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಸಂವಿಧಾನ ಜಾಗೃತಿ ಸಮಾವೇಶವನ್ನು ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ಆದಿಜಾಂಬವ, ಮಾದಿಗ, ಪೌರಕಾರ್ಮಿಕ ಸಂಘಟನೆಗಳ ಒಕ್ಕೂಟ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಮಾಜಿ ಸಚಿವ ಆಲ್ಕೋಡ್ ಹನುಮಂತಪ್ಪ, ‘ಪರಿಶಿಷ್ಟ ಜಾತಿಯ ಮಾದಿಗ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಜಾರಿಗೊಳಿಸಬೇಕು. ಅಧಿಕಾರಕ್ಕೆ ಬಂದರೆ 24 ಗಂಟೆಯೊಳಗೆ ಒಳ ಮೀಸಲಾತಿ ಜಾರಿಗೊಳಿಸುವ ಭರವಸೆಯನ್ನು ಕಾಂಗ್ರೆಸ್ ನೀಡಿತ್ತು. ಈಗ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳಾದರೂ ಜಾರಿಗೊಳಿಸಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಮಾದಿಗ ಸಮುದಾಯದ ಮೂಗಿಗೆ ತುಪ್ಪ ಸವರುವ ಕೆಲಸವನ್ನು ಕಾಂಗ್ರೆಸ್ ಮತ್ತು ಬಿಜೆಪಿ ಮಾಡುತ್ತಿವೆ. ಚುನಾವಣೆ ಸಂದರ್ಭದಲ್ಲಿ ಮಾದಿಗರ ಎಲ್ಲ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿ, ಅಧಿಕಾರಕ್ಕೆ ಬಂದ ನಂತರ ಮೌನ ವಹಿಸುತ್ತವೆ. ಈ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ದಲಿತರಿಗೆ, ಶೋಷಿತ ವರ್ಗದವರಿಗೆ ಅನ್ಯಾಯ ಮಾಡಲಾಗುತ್ತಿದೆ’ ಎಂದು ಆರೋಪಿಸಿದರು.

‘ದಲಿತರ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನವನ್ನು ಗ್ಯಾರಂಟಿ ಯೋಜನೆ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಕೆ ಮಾಡಿರುವುದು ಖಂಡನೀಯ’ ಎಂದರು.

ಒಕ್ಕೂಟದ ಕಾರ್ಯಾಧ್ಯಕ್ಷ ಜಂಬೂದ್ವೀಪ ಸಿದ್ಧರಾಜು, ಉಪಾಧ್ಯಕ್ಷರಾದ ರಾಜು ಕಡ್ಯಾಳ, ಪರಶುರಾಮ ರೋಣಿಹಾಳ, ಪ್ರಧಾನ ಕಾರ್ಯದರ್ಶಿ ಸಿ.ವಿ. ರಮೇಶ್ ಕುಮಾರ್, ಕಲಬುರಗಿ ಜಿಲ್ಲಾ ಸಮಿತಿ ಕಾರ್ಯಾಧ್ಯಕ್ಷ ಶ್ರೀಕಾಂತ ಮಶಾಳ್ಕರ್ ಸುದ್ದಿಗೋಷ್ಠಿಯಲ್ಲಿದ್ದರು.

ಜೈನರ ಗಣತಿಗೆ ರಾಜ್ಯದಾದ್ಯಂತ ಪಾದಯಾತ್ರೆ: ಗುಣಧರನಂದಿ ಶ್ರೀ



ಗುಣಧರನಂದಿ ಮಹಾರಾಜ

ಹುಬ್ಬಳ್ಳಿ: ‘ರಾಜ್ಯದಲ್ಲಿನ ಜೈನ ಸಮಾಜದವರ ಸಮೀಕ್ಷೆ ಮಾಡಿ, ಜನಸಂಖ್ಯೆ ಕುರಿತು ನಿಖರ ಮಾಹಿತಿಯುಳ್ಳ ವರದಿಯನ್ನು ರಾಜ್ಯ ಸರ್ಕಾರಕ್ಕೆ ಜೂನ್ 8ರಂದು ನೀಡುತ್ತೇವೆ. ಇದಕ್ಕಾಗಿ ಗುರುವಾರದಿಂದ ನಾನು ಸೇರಿ ವಿವಿಧ ಜೈನ ಸ್ವಾಮೀಜಿಗಳು ರಾಜ್ಯದಾದ್ಯಂತ ಪಾದಯಾತ್ರೆ ಕೈಗೊಂಡಿದ್ದೇವೆ’ ಎಂದು ವರೂರಿನ ನವಗ್ರಹ ತೀರ್ಥಕ್ಷೇತ್ರದ ಗುಣಧರನಂದಿ ಮಹಾರಾಜರು ಹೇಳಿದರು.

‘ನಮ್ಮ ವರದಿಯನ್ನು ಸರ್ಕಾರ ಸ್ವೀಕರಿಸದಿದ್ದರೆ, ಸಮಾಜದವರೆಲ್ಲ ಸಭೆ ಸೇರಿ ಮುಂದಿನ ಹೋರಾಟದ ಬಗ್ಗೆ ನಿರ್ಧರಿಸುತ್ತೇವೆ. ರಾಜ್ಯಪಾಲರು, ರಾಷ್ಟ್ರಪತಿ ಮೊರೆ ಹೋಗುತ್ತೇವೆ. ಕಾನೂನು ಹೋರಾಟವೂ ಮಾಡುತ್ತೇವೆ’ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಹಾರಾಷ್ಟ್ರದ ರತ್ನಗಿರಿಯ ಕಡಲತೀರದಲ್ಲಿ ಪತ್ತೆ

4 ವರ್ಷಗಳಲ್ಲಿ 3,600 ಕಿ.ಮೀ ಆಮೆ ಪಯಣ

ಕೇಂದ್ರಪಾರ (ಒಡಿಶಾ) (ಪಿಟಿಐ): ಒಡಿಶಾದ ಗಹಿರ್ಮಾಥ ಸಮುದ್ರ ಜೀವಿಧಾಮದಲ್ಲಿ 2021ರ ಮಾರ್ಚ್ 18ರಂದು ‘ಟ್ಯಾಗ್’ ಮಾಡಲಾದ ಆಲಿವ್ ರಿಡ್ಲೆ ಹೆಣ್ಣು ಆಮೆಯೊಂದು ಬಂಗಾಳ ಕೊಲ್ಲಿಯ ಮೂಲಕ ಮಹಾರಾಷ್ಟ್ರದ ರತ್ನಗಿರಿಯ ಕಡಲತೀರದಲ್ಲಿ ಪತ್ತೆಯಾಗಿದೆ ಎಂದು ಭಾರತೀಯ ಪ್ರಾಣಿಶಾಸ್ತ್ರೀಯ ಸಮೀಕ್ಷೆ (ಝಡ್‌ಎಸ್‌ಐ) ವಿಜ್ಞಾನಿ ವಾಸುದೇವ್ ತ್ರಿಪಾಠಿ ತಿಳಿಸಿದ್ದಾರೆ.

ಸಾಮಾನ್ಯವಾಗಿ ಒಡಿಶಾದಲ್ಲಿ ಅಧ್ಯಯನಕ್ಕಾಗಿ ‘ಟ್ಯಾಗ್’ ಮಾಡಿದ ಆಮೆಗಳ ವಲಸೆ ನಡವಳಿಕೆ ನೋಡಿದರೆ, ಇಷ್ಟು ದೂರ ಆಮೆಯೊಂದು ಪ್ರಯಾಣಿಸಿರುವುದು ಇದೇ ಮೊದಲು ಎಂದು ತ್ರಿಪಾಠಿ ತಿಳಿಸಿದರು.

‘ಈ ಹಿಂದೆ ಒಡಿಶಾದ ಗಹಿರ್ಮಾಥ ಸಮುದ್ರ ಜೀವಿಧಾಮದಲ್ಲಿ ‘ಟ್ಯಾಗ್’ ಮಾಡಲಾದ ಆಲಿವ್ ರಿಡ್ಲೆ ಆಮೆಯು ಒಂದು ತಿಂಗಳಲ್ಲಿ ಸುಮಾರು 1000 ಕಿ.ಮೀ. ದೂರ ಕ್ರಮಿಸಿತ್ತು. ಆದರೆ, ಅದು ಅಲ್ಲಿ ಮೊಟ್ಟೆ ಇಟ್ಟಿರಲಿಲ್ಲ. ಆಮೆಗಳ ನಡವಳಿಕೆಯ ಹೆಚ್ಚಿನ ಅಧ್ಯಯನಕ್ಕೆ ‘ಟ್ಯಾಗ್’ ಮಾಡುವುದು ಅಗತ್ಯವಾಗಿದೆ’ ಎಂದು ಅವರು ಹೇಳಿದರು.

‘ಟ್ಯಾಗಿಂಗ್’ ಅಧ್ಯಯನಗಳ ಪ್ರಕಾರ, ಆಲಿವ್ ರಿಡ್ಲೆ ಆಮೆಗಳಿಗೆ ಮೊಟ್ಟೆ ಇಡಲು ಒಡಿಶಾ ನೆಚ್ಚಿನ ತಾಣ. ಆಲಿವ್ ರಿಡ್ಲೆ ಆಮೆಗಳು ‘ಅರಿಬಾಡಾ’ ಎಂದು ಹೆಸರಾದ ವಿಶಿಷ್ಟ ಸಾಮೂಹಿಕ ಗೂಡುಕಟ್ಟುವ ನಡವಳಿಕೆಗೆ ಹೆಸರುವಾಸಿಯಾಗಿವೆ.

ಒಡಿಶಾ ಅರಣ್ಯ ಇಲಾಖೆಯು 1999ರಲ್ಲಿ ಆಮೆಗಳ ಅಧ್ಯಯನಕ್ಕಾಗಿ ‘ಟ್ಯಾಗಿಂಗ್’ ಮಾಡಲು ಪ್ರಾರಂಭಿಸಿತು. ಸುಮಾರು 1000 ಆಮೆಗಳನ್ನು ‘ಟ್ಯಾಗ್’ ಮಾಡಿತು. ಅವುಗಳಲ್ಲಿ ಎರಡು ಶ್ರೀಲಂಕಾದಲ್ಲಿ ಪತ್ತೆಯಾದವು. ‘ಟ್ಯಾಗ್’ ವ್ಯವಸ್ಥೆಯನ್ನು 2021ರಲ್ಲಿ ಝಡ್‌ಎಸ್‌ಐ ಮತ್ತೆ ಪುನರಾರಂಭಿಸಿತು. 2020ರಿಂದ 2024ರವರೆಗೆ ರುಶಿಕುಲ್ಯ, ಗಹಿರ್ಮಾಥ ಕಡಲ ತೀರಗಳಲ್ಲಿ ಸುಮಾರು 12000 ಆಮೆಗಳಿಗೆ ‘ಟ್ಯಾಗ್’ ಮಾಡಲಾಗಿದೆ ಎಂದು ಅಧಿಕೃತ ಮಾಹಿತಿ ತಿಳಿಸಿವೆ.

‘ವಕ್ಫ್: ಡಿನೋಟಿಫೈ ಸದ್ಯಕ್ಕಿಲ್ಲ’

ಒಂದನೇ ಪುಟದಿಂದ...

ವಕ್ಫ್ ತಿದ್ದುಪಡಿ ಕಾಯ್ದೆಗೆ ಪರೋಕ್ಷವಾಗಿ ತಡೆ ನೀಡುವ ಮೂಲಕ ನ್ಯಾಯಪೀಠವು ಕಠಿಣ ನಿಲುವು ತಾಳಬಾರದು ಎಂದು ಅವರು ಮನವಿ ಮಾಡಿದರು.

ಕಾಯ್ದೆಯ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಗಳಿಗೆ ಕೇಂದ್ರ ಸರ್ಕಾರವು ಏಳು ದಿನಗಳಲ್ಲಿ ಪ್ರಾಥಮಿಕ ಪ್ರತಿಕ್ರಿಯೆ ಸಲ್ಲಿಸಲಿದೆ ಮತ್ತು ಮುಂದಿನ ದಿನಾಂಕದವರೆಗೆ ಕಾಯ್ದೆಯ ಸೆಕ್ಷನ್ 9 ಹಾಗೂ 14ರ ಅಡಿಯಲ್ಲಿ ಪರಿಷತ್ ಅಥವಾ ಮಂಡಳಿಗಳಿಗೆ ಯಾವುದೇ ನೇಮಕಾತಿ ನಡೆಯುವುದಿಲ್ಲ ಎಂದು ಅವರು ತಿಳಿಸಿದರು. ‘ಈ ಮಸೂದೆಯನ್ನು ಸಂಸತ್ತಿನಲ್ಲಿ ಅಗತ್ಯ ಚರ್ಚೆ, ಪ್ರಕ್ರಿಯೆ ನಂತರವೇ ಅನುಮೋದಿಸಲಾಗಿದೆ. ಆದ್ದರಿಂದ, ಸರ್ಕಾರದ ವಾದ ಆಲಿಸದೆ ತಡೆಯಾಜ್ಞೆ ನೀಡಬಾರದು’ ಎಂದು ಮನವಿ ಮಾಡಿದರು.

ಸರ್ಕಾರ ಪ್ರತಿಕ್ರಿಯೆ ಸಲ್ಲಿಸಿದ ಬಳಿಕ ಐದು ದಿನಗಳೊಳಗೆ ಅರ್ಜಿದಾರರು ಸ್ಪಷ್ಟೀಕರಣ ಸಲ್ಲಿಸಲು ನ್ಯಾಯಾಲಯ ಅವಕಾಶ ನೀಡಿತು. ಪ್ರಕರಣದ ವಿಚಾರಣೆಯನ್ನು ಮೇ 5ರಂದು ನಡೆಸಲು ನ್ಯಾಯಪೀಠ ನಿರ್ಧರಿಸಿತು.

‘ಹಿಂದಿನ 1995ರ ಕಾಯ್ದೆಯ ಅಡಿಯಲ್ಲಿ ಯಾವುದೇ ವಕ್ಫ್ ಆಸ್ತಿಯ ನೋಂದಣಿಯಾಗಿದ್ದಲ್ಲಿ, ಅಂತಹ ಆಸ್ತಿಯನ್ನು ಮುಂದಿನ ವಿಚಾರಣೆಯವರೆಗೆ ಡಿನೋಟಿಫೈ ಮಾಡುವಂತಿಲ್ಲ’ ಎಂದು ಸಿಜೆಐ ಸ್ಪಷ್ಟಪಡಿಸಿದರು.

ವಕ್ಫ್ ಆಸ್ತಿಗಳನ್ನು ಡಿನೋಟಿಫೈ ಮಾಡಬಾರದು ಎಂಬುದು ಸೇರಿದಂತೆ ಕೆಲವು ಪ್ರಸ್ತಾವವನ್ನು ನ್ಯಾಯಪೀಠವು ಕೇಂದ್ರ ಸರ್ಕಾರದ ಮುಂದೆ ಬುಧವಾರ ಇರಿಸಿತ್ತು.

ನ್ಯಾಯಪೀಠವು ಕೆಲವೊಂದು ಸೆಕ್ಷನ್‌ಗಳನ್ನು ಮೇಲ್ನೋಟಕ್ಕೆ ಓದಿಕೊಂಡು ಕಾಯ್ದೆಗೆ ತಡೆ ನೀಡಬಹುದೇ ಎಂಬ ಪ್ರಶ್ನೆಯನ್ನು ಗುರುವಾರ ಮುಂದಿರಿಸಿದ ಮೆಹ್ತಾ, ‘ಶಾಸನಬದ್ಧ ನಿಯಮಕ್ಕೆ ನ್ಯಾಯಾಲಯ ತಡೆ ನೀಡಲು ಮುಂದಾದಲ್ಲಿ, ಅದು ಅಪರೂಪದಲ್ಲಿ ಅಪರೂಪದ ಪ್ರಕರಣವಾಗಲಿದೆ. ನಾವು ಆಗ ಶಾಸನದ ಇತಿಹಾಸ ಮತ್ತು ತಿದ್ದುಪಡಿಗಳ ಕುರಿತು ನ್ಯಾಯಪೀಠಕ್ಕೆ ಮಾಹಿತಿ ಒದಗಿಸಬೇಕಾಗುತ್ತದೆ’ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ನಾವು ಈ ಪ್ರಕರಣದಲ್ಲಿ ಅಂತಿಮ ತೀರ್ಮಾನ ಕೈಗೊಳ್ಳುತ್ತಿಲ್ಲ’ ಎಂದು ಸ್ಪಷ್ಟನೆ ನೀಡಿತು.

‘ವರದಿ ತಿರಸ್ಕರಿಸಿ’

ರಘುನಾಥ್

ಬೆಂಗಳೂರು: ‘ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಜಾತಿ ಜನಗಣತಿ ವರದಿಯು ಅವೈಜ್ಞಾನಿಕವಾಗಿದ್ದು, ಅದನ್ನು ತಿರಸ್ಕರಿಸಬೇಕು’ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್. ರಘುನಾಥ್ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

‘ಆಯೋಗದ ವರದಿಯಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಅನ್ಯಾಯವಾಗಿದೆ. ಅದರಲ್ಲಿ ಬ್ರಾಹ್ಮಣರ ಸಂಖ್ಯೆ 15.64 ಲಕ್ಷವೆಂದು ನಮೂದಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ನಮ್ಮ ಮಾಹಿತಿ ಪ್ರಕಾರ, ಜಾತಿ ಜನಗಣತಿ ವೈಜ್ಞಾನಿಕವಾಗಿ ನಡೆದಿಲ್ಲ. ಅನೇಕ ಮನೆಗಳನ್ನು ಸಂಪರ್ಕಿಸಿಲ್ಲ’ ಎಂದು ಹೇಳಿದ್ದಾರೆ.

ಗರ್ಡರ್ ಉರುಳಿ ಆಟೊ ಚಾಲಕ ಮೃತಪಟ್ಟ ಪ್ರಕರಣ: ಟ್ರಕ್ ಚಾಲಕನ ಬಂಧನ

ಮೂವರ ವಿರುದ್ಧ ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಕಾಮಗಾರಿಗಾಗಿ ಸಾಗಿಸುತ್ತಿದ್ದ ಗರ್ಡರ್ (ತೊಲೆ) ಬಿದ್ದು ಆಟೊ ಚಾಲಕ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಮೃತ ಖಾಸೀಂ ಸಾಬ್ ಅವರ ಮಾವ ಸೈಯದ್ ಖಾದರ್ ಅವರ ದೂರು ಆಧರಿಸಿ ಟ್ರಕ್ ಚಾಲಕ ನವೀನ್ ಕುಮಾರ್, ಎನ್‌ಸಿಸಿ ಕಂಪನಿ ಮತ್ತು ಗುತ್ತಿಗೆದಾರನ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 281 (ಸಾರ್ವಜನಿಕ ರಸ್ತೆಯಲ್ಲಿ ಅಪಾಯಕಾರಿಯಾಗಿ ವಾಹನ ಚಾಲನೆ) ಹಾಗೂ 106ರ (ನಿರ್ಲಕ್ಷ್ಯತನದಿಂದ ಸಾವಿಗೆ ಕಾರಣರಾಗುವುದು) ಅಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಲಾರಿ ಚಾಲಕನನ್ನು ಬಂಧಿಸಿ, ವಾಹನ ಜಪ್ತಿ ಮಾಡಲಾಗಿದೆ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ನಮ್ಮ ಮೆಟ್ರೊ ನೀಲಿ ಮಾರ್ಗದ ಕಾಮಗಾರಿಗೆ ಬಳಸಲು ಟ್ರಕ್‌ನಲ್ಲಿ ಗರ್ಡರ್ ಸಾಗಿಸುತ್ತಿದ್ದ ವೇಳೆ ಉರುಳಿ ಬಿದ್ದು ಆಟೊ ಚಾಲಕ ಮೃತಪಟ್ಟ ಘಟನೆ ಕೋಗಿಲು ಕ್ರಾಸ್ ಬಳಿ ಮಂಗಳವಾರ ರಾತ್ರಿ ನಡೆದಿತ್ತು.

'ಗರ್ಡರ್ ಸಾಗಿಸುತ್ತಿದ್ದ ಟ್ರಕ್‌ಗೆ ವಾಹನವೊಂದು ಏಕಾಏಕಿ ಅಡ್ಡಬಂದಿತ್ತು. ಆ ವಾಹನಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಚಾಲಕ ಹಠಾತ್ತನೆ ಬ್ರೇಕ್ ಹಾಕಿದ ಕಾರಣ ಗರ್ಡರ್ ಉರುಳಿ ಆಟೊ ಮೇಲೆ ಬಿದ್ದಿದೆ. ಈ ವೇಳೆ ಆಟೊದಲ್ಲಿದ್ದ ಪ್ರಯಾಣಿಕರೊಬ್ಬರು ಅಪಾಯದ ಮುನ್ಸೂಚನೆ ಅರಿತು ಕೂಡಲೇ ಕೆಳಗಿಳಿದಿದ್ದರು. ಆದರೆ, ಖಾಸೀಂ ಸಾಬ್ ವಾಹನದಿಂದ ಇಳಿಯುವಷ್ಟರಲ್ಲಿ ಗರ್ಡರ್ ಆಟೊ ಮೇಲೆ ಬಿದ್ದಿತ್ತು' ಎಂದು ಯಲಹಂಕ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

150 ಅಡಿ ಉದ್ದದ ಗರ್ಡರ್ ಸುಮಾರು 70 ಟನ್ ತೂಕವಿದೆ. ವಾಡಿಯಾರ್‌ಪುರ ಕಾಸ್ಟಿಂಗ್ ಯಾರ್ಡ್‌ನಿಂದ 18 ಚಕ್ರಗಳ ಟ್ರಕ್‌ನಲ್ಲಿ ಗರ್ಡರ್ ಸಾಗಿಸಲಾಗುತ್ತಿತ್ತು.

ಈವರೆಗೆ 38 ಸಾವು

2007ರಲ್ಲಿ ಆರಂಭವಾದ ಮೆಟ್ರೊ ಕಾಮಗಾರಿಯಿಂದ ಈವರೆಗೆ 38 ಮಂದಿ ಮೃತಪಟ್ಟು, 50 ಜನರು ಗಾಯಗೊಂಡಿದ್ದಾರೆ. 2023ರ ಜನವರಿಯಲ್ಲಿ ನಿರ್ಮಾಣ ಹಂತದ ಮೆಟ್ರೊ ಕಾಮಗಾರಿಯ ಪಿಲ್ಲರ್ ಕುಸಿದು ಐ.ಟಿ ಉದ್ಯೋಗಿ ತೇಜಸ್ವಿನಿ (29) ಹಾಗೂ ಅವರ ಪುತ್ರ ವಿಹಾನ್ ಮೃತಪಟ್ಟಿದ್ದರು.

'ಸಾವಿನ ಆಡಿಟ್ ಮಾಡಿಸಿ'

ಅವಘಡಕ್ಕೆ ಬಿಎಂಆರ್‌ಸಿಎಲ್ ಸಂಪೂರ್ಣ ಹೊಣೆ ಹೊರಬೇಕು. ಕಾಮಗಾರಿಯ ಗುತ್ತಿಗೆ ಪಡೆದವರ ವಿರುದ್ಧ ಪ್ರಕರಣ ದಾಖಲಿಸಿ ಅಮಾನತುಪಡಿಸಬೇಕು. ನಮ್ಮ ಮೆಟ್ರೊದಿಂದ ಸಂಭವಿಸುತ್ತಿರುವ ಅವಘಡಗಳ ಬಗ್ಗೆ ಆಡಿಟ್ ಮಾಡಿಸಬೇಕು ಎಂದು ಸಂಸದ ಪಿ.ಸಿ.ಮೋಹನ್ ಅವರು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಅಪರಾಧ ಸುದ್ದಿಗಳು

ಕಟ್ಟಡದಲ್ಲಿ ದಂಪತಿ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಮೆಹಬೂಬ್

ಪರ್ವಿನ್

ಬೆಂಗಳೂರು: ಸಂಜಯ್ ನಗರದ ಡಾಲರ್ಸ್ ಕಾಲೊನಿಯ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಯಾದಗಿರಿ ತಾಲ್ಲೂಕಿನ ಮೆಹಬೂಬ್ (45) ಮತ್ತು ಪರ್ವಿನ್ (35) ದಂಪತಿಯ ಶವ ಪತ್ತೆಯಾಗಿದೆ. ಅನುಮಾನಸ್ಪದ ಸಾವಿನ ಬಗ್ಗೆ ಸಂಜಯ್ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮೆಹಬೂಬ್ ಅವರು ಮೇಸ್ತ್ರಿ ಕೆಲಸ ಮತ್ತು ಪರ್ವಿನ್ ಅವರು ಗಾರೆ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಈದ್ ಉಲ್ ಫಿತ್ರ್ ಹಬ್ಬದ ಅಂಗವಾಗಿ ಊರಿಗೆ ಹೋಗಿ ದಂಪತಿ ವಾಪಸ್ ಬಂದಿದ್ದರು. ಕಟ್ಟಡದಿಂದ ದುರ್ವಾಸನೆ ಬರುತ್ತಿರುವುದನ್ನು ಗಮನಿಸಿ ಅಕ್ಕಪಕ್ಕದ ನಿವಾಸಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದರು.

ಪೊಲೀಸರು ಸ್ಥಳ ಪರಿಶೀಲಿಸಿದಾಗ, ಮೆಹಬೂಬ್ ಅವರ ಶವ ನೆಲದ ಮೇಲೆ ಕಂಡು ಬಂದರೆ, ಪರ್ವಿನ್ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಕಂಡು ಬಂದಿದೆ. ಮೆಹಬೂಬ್ ದೇಹದ ಮೇಲೆ ಗಾಯದ ಗುರುತುಗಳಿವೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಎಲ್ಲಾ ಆಯಾಮಗಳಿಂದ ತನಿಖೆ ನಡೆಸುತ್ತಿದ್ದಾರೆ.

'ಒಂದು ವರ್ಷದಿಂದ ದಂಪತಿ ಕಟ್ಟಡದಲ್ಲಿ ಕೆಲಸ ಮಾಡಿಕೊಂಡಿದ್ದರು. ಮೂರು ದಿನಗಳ ಹಿಂದೆ ದಂಪತಿ ಜಗಳವಾಡಿ ಹೊಡೆದಾಡಿಕೊಂಡು ಮೆಹಬೂಬ್ ಮೃತಪಟ್ಟಿರಬಹುದು. ನಂತರ ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ ಅಥವಾ ದುಷ್ಕರ್ಮಿಗಳು ಮೆಹಬೂಬ್‌ನನ್ನು ಕೊಲೆ ಮಾಡಿ, ಬಳಿಕ ಪತ್ನಿಯನ್ನು ನೇಣು ಹಾಕಿ ಪರಾರಿಯಾಗಿರಬಹುದು ಎಂಬ ಶಂಕೆ ಇದೆ. ಕಟ್ಟಡದಲ್ಲಿ ಕೆಲಸ ಮುಗಿಸಿ ಕಾರ್ಮಿಕರು ತೆರಳಿದ ಬಳಿಕ ಈ ಘಟನೆ ನಡೆದಿರಬಹುದು' ಎಂದು ಪೊಲೀಸರು ತಿಳಿಸಿದರು.

ಕುಟುಂಬದ ಸದಸ್ಯರಿಗೆ ಮಾಹಿತಿ ನೀಡಲಾಗಿದ್ದು, ಅವರು ಬಂದ ಬಳಿಕ ಮತ್ತಷ್ಟು ಮಾಹಿತಿ ದೊರೆಯಲಿದೆ. ಮರಣೋತ್ತರ ಪರೀಕ್ಷೆಗಾಗಿ ಮೃತದೇಹಗಳನ್ನು ರಾಮಯ್ಯ ಆಸ್ಪತ್ರೆಗೆ ರವಾನಿಸಲಾಗಿದೆ. ಸ್ಥಳಕ್ಕೆ ಬೆರಳಚ್ಚು ತಜ್ಞರು, ಶ್ವಾನದಳ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಕಾರಣ ಗೊತ್ತಾಗಲಿದೆ ಎಂದು ಹೇಳಿದರು.

ಕಾಲು ನೋವು: ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಕನ್ನಂಗಿ

ಬೆಂಗಳೂರು: ಕಾಲು ನೋವು ತಾಳಲಾರದೆ ವೃದ್ಧೆಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶಿವಾಜಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಶಿವಾಜಿನಗರದ ಚಿಕ್ಕ ಬಜಾರ್ ಬೀದಿಯಲ್ಲಿ ವಾಸವಾಗಿದ್ದ ಕನ್ನಂಗಿ (64) ಆತ್ಮಹತ್ಯೆ ಮಾಡಿಕೊಂಡ ಮಹಿಳೆ. ಪತಿ ನೀಡಿದ ದೂರು ಆಧರಿಸಿ ಅಸಹಜ ಸಾವಿನಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಕನ್ನಂಗಿಯು ಪತಿ ಹಾಗೂ ಇಬ್ಬರು ಹೆಣ್ಣು ಮಕ್ಕಳೊಂದಿಗೆ ವಾಸವಾಗಿದ್ದರು. ಪತಿ ಹೋಟೆಲ್‌ವೊಂದರಲ್ಲಿ ಬಾಣಸಿಗನಾಗಿ ಕೆಲಸ ಮಾಡುತ್ತಿದ್ದರು. ಹೆಣ್ಣುಮಕ್ಕಳ ಪೈಕಿ ಒಬ್ಬರಿಗೆ ಮದುವೆಯಾಗಿದೆ. ಎರಡು ವರ್ಷಗಳ ಹಿಂದೆ ನಡೆದ ಅಪಘಾತದಲ್ಲಿ ಕಾಲಿಗೆ ಪೆಟ್ಟಾಗಿತ್ತು. ಇದರಿಂದ ನಡೆಯಲು ಕನ್ನಂಗಿ ಅವರಿಗೆ ಕಷ್ಟವಾಗುತಿತ್ತು. ರಾತ್ರಿ ಮನೆಯಲ್ಲಿ ಯಾರೂ ಇಲ್ಲದಿರುವಾಗ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬುಧವಾರ ಬೆಳಿಗ್ಗೆ ನಸುಕಿನ ಜಾವ ಪತಿ ಮನೆಗೆ ಬಂದಾಗ ಪತ್ನಿ ಮೃತಪಟ್ಟಿರುವುದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಹಲ್ಲೆಗೊಳಗಾಗಿದ್ದ ಬಿಬಿಎಂಪಿ ಕಸದ ಲಾರಿ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಕೊಂಡಯ್ಯ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಬಾಲಕ ಸಾವಿಗೀಡಾದ ಕಾರಣಕ್ಕೆ ಉದ್ರಿಕ್ತ ಗುಂಪಿನಿಂದ ಹಲ್ಲೆಗೊಳಗಾಗಿದ್ದ ಬಿಬಿಎಂಪಿ ಘನ ತ್ಯಾಜ್ಯ ಸಾಗಿಸುವ ಕಾಂಪ್ಯಾಕ್ಟರ್ ಚಾಲಕ ಕೊಂಡಯ್ಯ (55) ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ.

ಮಾರ್ಚ್ 29ರಂದು ಥಣಿಸಂದ್ರದ ರೈಲ್ವೆ ಟ್ರ್ಯಾಕ್ ಬಳಿ ಕಸದ ಲಾರಿ ಹಾಗೂ ಸ್ಕೂಟರ್ ಮಧ್ಯೆ ಅಪಘಾತ ಸಂಭವಿಸಿ, ಬಾಲಕ ಐಮಾನ್ (10) ಮೃತಪಟ್ಟಿದ್ದ. ಬಾಲಕನ ತಂದೆ ಅಬ್ದುಲ್ ಖಾದರ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು.

ರಸ್ತೆ ಅಪಘಾತದ ಬಳಿಕ ಸ್ಥಳೀಯರ ಉದ್ರಿಕ್ತ ಗುಂಪು ಲಾರಿಗೆ ಬೆಂಕಿ ಹಚ್ಚಿತ್ತು. ಚಾಲಕ ಕೊಂಡಯ್ಯ ಅವರನ್ನು ಥಳಿಸಿತ್ತು. ಪೊಲೀಸರು ಚಾಲಕನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದರು. ಹಲ್ಲೆಯಿಂದ ಅವರ ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿ ಗಂಭೀರ ಸ್ಥಿತಿ ತಲುಪಿದ್ದರು. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕೊಂಡಯ್ಯ ಸಾವಿಗೀಡಾಗಿದ್ದಾರೆ ಎಂದು ಅವರ ಕುಟುಂಬ ಸದಸ್ಯರು ಮಾಹಿತಿ ನೀಡಿದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಹೆಣ್ಣೂರು ಸಂಚಾರ ಠಾಣೆ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಪರಿಸ್ಥಿತಿ ತಿಳಿಗೊಳಿಸಿದ್ದರು. ಲಾರಿ ಚಾಲಕನನ್ನು ಥಳಿಸಿದ್ದ ಆರೋಪದಡಿ ನಾಲ್ವರು ಆರೋಪಿಗಳನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದರು.

'ಕೊಂಡಯ್ಯ ಕರ್ತವ್ಯದ ಅಧಿಯಲ್ಲಿ ನಡೆದ ಹಲ್ಲೆಯಿಂದ ಮೃತಪಟ್ಟಿದ್ದಾರೆ. ಅವರ ಕುಟುಂಬಕ್ಕೆ ₹1 ಕೋಟಿ ಪರಿಹಾರ ನೀಡಬೇಕು. ಕುಟುಂಬದ ಒಬ್ಬರಿಗೆ ಅನುಕಂಪದ ಆಧಾರದಲ್ಲಿ ಸರ್ಕಾರಿ ಉದ್ಯೋಗ ನೀಡಬೇಕು' ಎಂದು ಪೌರಕಾರ್ಮಿಕರ ಸಂಘಟನೆ ಅಧ್ಯಕ್ಷ ಸಿ.ಎನ್.ಆನಂದ್ ಒತ್ತಾಯಿಸಿದರು.

ಕೊಂಡಯ್ಯ ಮೃತಪಟ್ಟಿರುವುದರಿಂದ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗುವುದು ಎಂದು ಸಂಪಿಗೆಹಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಕೂದಲು ಕಳವು ಆರೋಪಿ ಬಂಧನ



ಬೆಂಗಳೂರು: ಗೋದಾಮಿನ ಬೀಗ ಮುರಿದು ₹25 ಲಕ್ಷ ಮೌಲ್ಯದ ಕೂದಲು ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಾರ್ಚ್ 1ರಂದು ಐದು ಜನರ ತಂಡ ಗೋದಾಮಿನ ಬೀಗ ಮುರಿದು 400 ಕೆ.ಜಿ. ತೂಕದ ಕೂದಲು ಕದ್ದು, ಸರಕು ಸಾಗಣೆ ವಾಹನದಲ್ಲಿ ತುಂಬಿಸಿಕೊಂಡು ಪರಾರಿಯಾಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ಐದು ಮಂದಿಯ ಪೈಕಿ ಯಲ್ಲಪ್ಪ ಗೊಲ್ಲರ ಅವರನ್ನು ಬಂಧಿಸಿದ್ದಾರೆ. ಉಳಿದ ನಾಲ್ವರಿಗೆ ಶೋಧ ಆರಂಭಿಸಿದ್ದಾರೆ.

'ಆರೋಪಿಗಳು ಕದ್ದ ಕೂದಲನ್ನು ಚೀನಾ, ಬರ್ಮಾ ಮತ್ತು ಹಾಂಕಾಂಗ್‌ಗೆ ರಫ್ತು ಮಾಡುತ್ತಿದ್ದರು. ಅಲ್ಲದೇ ಕದ್ದ ಕೂದಲನ್ನು ಚನ್ನರಾಯಪಟ್ಟಣ ಮತ್ತು ಆಂಧ್ರಪ್ರದೇಶಗಳಿಗೆ ಸಾಗಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ರಜತ್ ಕಿಶನ್‌ಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರುತೆರೆಯ ನಟ ರಜತ್ ಕಿಶನ್ ಅವರಿಗೆ 24ನೇ ಎಸಿಜೆಎಂ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ರಜತ್ ಬಿಡುಗಡೆಯಾಗಿದ್ದಾರೆ.

ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿ ಅದನ್ನು ಇನ್‌ಸ್ಟಾಗ್ರಾಂನ 'ಬುಜ್ಜಿ' ಹೆಸರಿನ ಖಾತೆಯಲ್ಲಿ ಹಾಕಿದ್ದ ರಜತ್ ಹಾಗೂ ವಿನಯ್ ಗೌಡ ಅವರನ್ನು ಮಾ.25ರಂದು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದರು. ಬಳಿಕ ಪ್ರಕರಣದಲ್ಲಿ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದ್ದ ನ್ಯಾಯಾಲಯ, ವಿಚಾರಣೆಯ ಸಂದರ್ಭದಲ್ಲಿ ಖುದ್ದು ಹಾಜರಿರುವಂತೆ ಷರತ್ತು ವಿಧಿಸಿತ್ತು.

ವಿಚಾರಣೆಗೆ ಹಾಜರಾಗದ ರಜತ್ ಅವರನ್ನು ಬಸವೇಶ್ವರ ನಗರ ಪೊಲೀಸರು ಗುರುವಾರ ವಶಕ್ಕೆ ಪಡೆದು, ಕೋರ್ಟ್‌ಗೆ ಹಾಜರುಪಡಿಸಿದ್ದರು. ಜಾಮೀನು ಷರತ್ತು ಉಲ್ಲಂಘಿಸಿದ ಆರೋಪದಡಿ ರಜತ್ ಅವರಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಿತ್ತು.

ಯುವಕರ ಮೇಲೆ ಹಲ್ಲೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ಯುವಕರ ಗುಂಪೊಂದು ಬಿಹಾರದ ಇಬ್ಬರು ಯುವಕರ ಮೇಲೆ ಹಲ್ಲೆ ಮಾಡಿದೆ.

ಬಂಡೇಪಾಳ್ಯ ಠಾಣಾ ವ್ಯಾಪ್ತಿಯ ಹೊಸಪಾಳ್ಯ ಬಸ್ ನಿಲ್ದಾಣದಲ್ಲಿರುವ ನಂದಿನಿ ಹಾಲಿನ ಕೇಂದ್ರದ ಬಳಿ ಏಪ್ರಿಲ್ 15ರ ತಡರಾತ್ರಿ ಘಟನೆ ನಡೆದಿದೆ. ಹಲ್ಲೆಗೊಳಗಾದ ಸುನಿಲ್ ನೀಡಿದ ದೂರಿನ ಮೇರೆಗೆ ರಾಹುಲ್ ಹೆಸರಿನ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಮತ್ತಿಬ್ಬರು ಆರೋಪಿಗಳಿಗಾಗಿ ಶೋಧ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

'ಬಿಹಾರದ ಸುನಿಲ್ ಮತ್ತು ಅಭಿಷೇಕ್ ಬೈಕ್‌ನಲ್ಲಿ ಹೊಸಪಾಳ್ಯ ಬಸ್ ನಿಲ್ದಾಣದಿಂದ ತಮ್ಮ ಮನೆಗೆ ಹೋಗುತ್ತಿದ್ದರು. ರಸ್ತೆ ಮಧ್ಯೆ ನಾಲ್ವರು ಯುವಕರು ನಿಂತುಕೊಂಡಿದ್ದರು. ದಾರಿ ಬಿಡುವಂತೆ ಹೇಳಿದ್ದಾರೆ. ಮದ್ಯ ಸೇವಿಸಿದ್ದ ಯುವಕರು, ಹತ್ತಿರ ಬಂದು, 'ಗೊತ್ತಿಲ್ಲದ ಭಾಷೆಯಲ್ಲಿ ಮಾತನಾಡುತ್ತೀರಾ' ಎಂದು ಹೇಳಿ ಬೈಕ್ ತಳ್ಳಿದ್ದಾರೆ. ಕೆಳಗೆ ಬಿದ್ದ ಇಬ್ಬರು, ಬೈಕ್ ಅನ್ನು ಅಲ್ಲಿಯೇ ಬಿಟ್ಟು ಬಸ್ ನಿಲ್ದಾಣ ಸಮೀಪದ ನಂದಿನಿ ಹಾಲಿನ ಕೇಂದ್ರದ ಕಡೆಗೆ ಓಡಿದ್ದಾರೆ. ಅವರನ್ನು ಹಿಂಬಾಲಿಸಿಕೊಂಡ ಬಂದ ಆರೋಪಿಗಳು ದೊಣ್ಣೆಯಿಂದ ಹಲ್ಲೆ ನಡೆಸಿದ್ದಾರೆ' ಎಂದರು. ಕೂಡಲೇ ನಂದಿನಿ ಬೂತ್ ಮಾಲೀಕ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ್ದು, ಸ್ಥಳಕ್ಕೆ ಬಂದ ಪೊಲೀಸರು ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದಾರೆ.

ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು

ಬೊಮ್ಮನಹಳ್ಳಿ: ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಪ್ರತಿಭಟನೆ ನಡೆಸಿದರು.

'ದೇಶದ ಸಂಪತ್ತನ್ನು ಅಂಬಾನಿ - ಅದಾನಿಗೆ ಅಡಮಾನ ಇಟ್ಟಿರುವ ಮೋದಿ ಸರ್ಕಾರ, ಸಾಮಾನ್ಯ ಜನರ ಮೇಲೆ ಬೆಲೆ ಏರಿಕೆಯ ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡಿದೆ' ಎಂದು ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ ಆರೋಪಿಸಿದರು.

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿಕೆಯಾಗಿದೆ. ಆದರೂ ಬೆಲೆ ಏರಿಕೆ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಬಂಡವಾಳದಾರರ ಹಿತ ಕಾಯುತ್ತಿದ್ದಾರೆ' ಎಂದು ದೂರಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಾಸುದೇವರೆಡ್ಡಿ ಮಾತನಾಡಿ, 'ದರ ಏರಿಕೆ ಪರಿಣಾಮ ಜನರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಮೋದಿ ಸರ್ಕಾರ ಜನಸಾಮಾನ್ಯರಿಗೆ ಸಹಾಯ ಮಾಡುವ ಬದಲು ಬಂಡವಾಳದಾರರ ₹16 ಲಕ್ಷ ಕೋಟಿ ಸಾಲ ಮನ್ನಾ ಮಾಡಿದೆ. ಇದು ಜನ ವಿರೋಧಿ ಸರ್ಕಾರ' ಎಂದು ಹೇಳಿದರು.

ಟ್ರಂಪ್‌ಗೆ ಹೆದರಿ ಅಮೆರಿಕದ ಆಮದು ಸರಕುಗಳ ಮೇಲಿನ ಸುಂಕವನ್ನು ಮೋದಿ ಕಡಿಮೆ ಮಾಡಿದ್ದಾರೆ. ಆದರೆ ಭಾರತದ ಸರಕುಗಳ ಮೇಲೆ ಸುಂಕ ಏರಿಸುತ್ತಿರುವ ಟ್ರಂಪ್ ವಿರುದ್ಧ ಮಾತನಾಡುವ ಧೈರ್ಯ ಇಲ್ಲ ಎಂದು ದೂರಿದರು.

ಕೆಪಿಸಿಸಿ ಸದಸ್ಯ ಕೆ. ವಾಸುದೇವ, ಪದವಿದರರ ವಿಭಾಗದ ಜಿಲ್ಲಾಧ್ಯಕ್ಷ ಅನಿಲ್ ರೆಡ್ಡಿ, ವಾರ್ಡ್ ಅಧ್ಯಕ್ಷ ಜಯರಾಂ ರೆಡ್ಡಿ, ಮಂಜುನಾಥ್, ಕಾರ್ಯಕರ್ತರು ಭಾಗವಹಿಸಿದ್ದರು.

ಬೆಲೆ ಏರಿಕೆ ಖಂಡಿಸಿ ಎಎಪಿ ಅಭಿಯಾನ

ಬೆಲೆ ಏರಿಕೆ ಖಂಡಿಸಿ ಶಾಂತಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಎಪಿ ಕಾರ್ಯಕರ್ತರು ಗುರುವಾರ ಜಾಗೃತಿ ಅಭಿಯಾನ ನಡೆಸಿದರು

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೆಲೆ ಏರಿಕೆ ನೀತಿಯನ್ನು ವಿರೋಧಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ಶಾಂತಿನಗರ ವಿಧಾನಸಭಾ ಕ್ಷೇತ್ರದ ವಿವಿಧ ಭಾಗಗಳಲ್ಲಿ 'ತುಘಲಕ್ ತೆರಿಗೆ ದರೋಡೆ ಅಭಿಯಾನ'ವನ್ನು ನಡೆಸಿದರು.

ಎಎಪಿ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಹಾಗೂ ಬೆಂಗಳೂರು ನಗರ ಮಾಧ್ಯಮ ಉಸ್ತುವಾರಿ ಅನಿಲ್ ನಾಚಪ್ಪ ನೇತೃತ್ವದಲ್ಲಿ ಬ್ರಿಗೇಡ್ ರಸ್ತೆ, ನೀಲಸಂದ್ರ, ವನ್ನಾರ್ ಪೇಟೆ, ಎಲ್.ಆರ್. ನಗರ, ದೊಮ್ಮಲೂರು ಸೇರಿದಂತೆ ಜನನಿಬಿಡ ಪ್ರದೇಶಗಳಲ್ಲಿ ಅಭಿಯಾನವನ್ನು ನಡೆಸಿದರು. ಶಾಂತಿನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಪಕ್ಷದ ಸಾವಿರಾರು ಕಾರ್ಯಕರ್ತರಿಗೆ ಬೆಲೆ ಏರಿಕೆ ಕುರಿತ ಕರಪತ್ರವನ್ನು ನೀಡುವ ಮೂಲಕ ಪಕ್ಷದ ಜನಾಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಸೀತಾರಾಮ್ ಗುಂಡಪ್ಪ ಕರೆ ನೀಡಿದರು.

'ಜನಸಾಮಾನ್ಯರ ಧ್ವನಿಯಾಗಿ ಎಎಪಿ ಹೋರಾಡುತ್ತದೆ. ನೀಚ ಸರ್ಕಾರಗಳು ಬೆಲೆ ಇಳಿಸುವ ತನಕ ನಮ್ಮ ಹೋರಾಟ ಮುಂದುವರೆಯುತ್ತದೆ' ಎಂದು ಅನಿಲ್ ನಾಚಪ್ಪ ತಿಳಿಸಿದರು. ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಸರಾವ್, ಶಿವಕುಮಾರ್ ನಾಯ್ಡು, ಸರವಣ ಉಪಸ್ಥಿತರಿದ್ದರು.

ನಗರದ ಎಂಟನೇ ಮೈಲಿ ಬಳಿಯ ಮೇಲ್ಸೇತುವೆಯಲ್ಲಿ ಲಾರಿ ಹೊತ್ತಿ ಉರಿದಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು

ಹೊತ್ತಿ ಉರಿದ ಲಾರಿ: ಚಾಲಕ ಪಾರು

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: ಎಂಟನೇ ಮೈಲಿ ಬಳಿ ಚಲಿಸುತ್ತಿದ್ದ ಲಾರಿಯ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡು ರಸ್ತೆ ಮಧ್ಯೆಯೇ ಹೊತ್ತಿ ಉರಿಯಿತು. ಲಾರಿ ಚಾಲಕ ಎಂಜಿನ್ ಆಫ್ ಮಾಡಿ ಕೆಳಗಿಳಿದು ಪಾರಾಗಿದ್ದಾರೆ.

ತುಮಕೂರಿನಿಂದ ಕೋಲಾರಕ್ಕೆ ತೆರಳುತ್ತಿದ್ದ ಲಾರಿಯ ಎಂಜಿನ್‌ನಲ್ಲಿ ಹೊಗೆ ಕಾಣಿಸಿಕೊಂಡಿತು. ಲಾರಿ ನಿಲ್ಲಿಸಿ ಚಾಲಕ ಇಳಿಯುತ್ತಿದ್ದಂತೆ ಬೆಂಕಿ ಕಾಣಿಸಿಕೊಂಡು ಕ್ಷಣಾರ್ಧದಲ್ಲಿ ಲಾರಿ ಬೆಂಕಿಗೆ ಆಹುತಿಯಾಯಿತು. ಇದರಿಂದ ಫ್ಲೈಓವರ್‌ನಲ್ಲಿ ವಾಹನಗಳ ಸಂಚಾರಕ್ಕೆ ತೊಡಕು ಉಂಟಾಗಿ ಸಾಲಾಗಿ ನಿಂತಿದ್ದವು. ಸರಾಗ ಸಂಚಾರಕ್ಕೆ ಅನುವು ಮಾಡಿಕೊಟ್ಟು ವಾಹನ ದಟ್ಟಣೆ ತೆರವುಗೊಳಿಸಲು ಪೀಣ್ಯ ಸಂಚಾರ ಪೊಲೀಸರು ಹರಸಾಹಸ ಪಟ್ಟರು.

ಪೀಣ್ಯ ಅಗ್ನಿಶಾಮಕ ಘಟಕದ ಎರಡು ವಾಹನಗಳಲ್ಲಿ ಬಂದ ಸಿಬ್ಬಂದಿ ಬೆಂಕಿ ನಂದಿಸಿದರು. ಅಗ್ನಿ ಅವಘಡಕ್ಕೆ ಕಾರಣ ಇನ್ನಷ್ಟೇ ಪತ್ತೆಯಾಗಬೇಕಿದೆ ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಚಿದಾನಂದ ಮೂರ್ತಿ ತಿಳಿಸಿದ್ದಾರೆ.

ತುಮಕೂರು– ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ 12 ಚಕ್ರದ ಲಾರಿಯಲ್ಲಿ ಬೆಂಕಿ ಕಾಣಿಸಿಕೊಂಡ ಬಗ್ಗೆ ಮಾಹಿತಿ ಬಂದ ಮೇಲೆ ಪೀಣ್ಯ ಮತ್ತು ಯಶವಂತಪುರ ಅಗ್ನಿಶಾಮಕ ಠಾಣೆಯಿಂದ ನಮ್ಮ ಅಧಿಕಾರಿಗಳು, ಸಿಬ್ಬಂದಿ ತೆರಳಿ ಬೆಂಕಿ ನಂದಿಸಿದ್ದಾರೆ ಎಂದು ಅಗ್ನಿಶಾಮಕ ಠಾಣಾಧಿಕಾರಿ ಮಲ್ಲಿಕಾರ್ಜುನ ಝಳಕಿ ಮಾಹಿತಿ ನೀಡಿದರು.

ರಸ್ತೆ ಅಪಘಾತ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಕೂಟರ್‌ನಲ್ಲಿ ಚಲಿಸುತ್ತಿದ್ದಾಗ ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ಪ್ಲಂಬರ್ ಗಂಭೀರವಾಗಿ ಗಾಯಗೊಂಡು ಮೃತಪಟ್ಟ ಘಟನೆ ಮಡಿವಾಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ನಡೆದಿದೆ.

ಆಡುಗೋಡಿಯ ರಾಜೇಂದ್ರ ನಗರದ ನಿವಾಸಿ ಮನೋಜ್ ಕುಮಾರ್ (42) ಮೃತ ವ್ಯಕ್ತಿ.

ಮನೋಜ್ ಅವರು ಇತ್ತೀಚೆಗೆ ಹೊಸ ಸ್ಕೂಟರ್ ಖರೀದಿಸಿದ್ದರು. ರಾತ್ರಿ ಕೆಲಸದ ನಿಮಿತ್ತ ಸ್ಕೂಟರ್‌ನಲ್ಲಿ ಹೊಸೂರಿಗೆ ಹೋಗಿದ್ದರು. ವಾಪಸ್ ಬರುವಾಗ ಹೊಸೂರು ರಸ್ತೆಯ ಆಕ್ಸ್‌ಫರ್ಡ್ ಕಾಲೇಜು ಮುಂಭಾಗ ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ತೀವ್ರವಾಗಿ ಗಾಯಗೊಂಡರು. ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆದಲ್ಲಿಯೇ ಮೃತಪಟ್ಟರು.

ಮಡಿವಾಳ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ನಗರದಲ್ಲಿ ತಣ್ಣಗೆ ಸುರಿದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲವು ಪ್ರದೇಶಗಳಲ್ಲಿ ಗುರುವಾರ ರಾತ್ರಿ ತಣ್ಣಗೆ ಮಳೆ ಸುರಿಯಿತು.

ಶ್ರೀರಾಮಪುರ, ನವರಂಗ್ ವೃತ್ತ, ರಾಜಾಜಿನಗರ, ಮಹಾಲಕ್ಷ್ಮಿ ಬಡಾವಣೆ, ಯಶವಂತಪುರ ಸುತ್ತಮುತ್ತ ಉತ್ತಮ ಮಳೆಯಾಗಿದೆ.

ರಾತ್ರಿ 10 ಗಂಟೆಯ ನಂತರ ಗುಡುಗು, ಸಿಡಿಲುಗಳ ಆರ್ಭಟ ಇಲ್ಲದೇ, ಗಾಳಿಯ ರಭಸವಿಲ್ಲದೆ ಮಳೆ ಸುರಿಯಿತು.

ಅಶೋಕ, ವಿಜಯೇಂದ್ರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಆರ್‌.ಅಶೋಕ

ವಿಜಯೇಂದ್ರ

ಬೆಂಗಳೂರು: ಬೆಳಗಾವಿಯಲ್ಲಿ ನಡೆದ ಜನಾಕ್ರೋಶ ಯಾತ್ರೆಯಲ್ಲಿ ದ್ವೇಷ ಭಾಷಣ ಮಾಡಿರುವ ಆರೋಪದಡಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹಾಗೂ ಬಿ.ವೈ.ವಿಜಯೇಂದ್ರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರಿಗೆ ಕಾಂಗ್ರೆಸ್ ವಕ್ತಾರ ಎಲ್. ಸೂರ್ಯ ಮುಕುಂದರಾಜ್ ಪತ್ರ ಬರೆದಿದ್ದಾರೆ.

'ಅಶೋಕ ಅವರು ತಮ್ಮ ಭಾಷಣದಲ್ಲಿ 'ಮುಸ್ಲಿಮರನ್ನು ಓಲೈಸುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕವನ್ನು ಮಿನಿ ಪಾಕಿಸ್ತಾನ ಮಾಡಲು ಮುಂದಾಗಿದ್ದಾರೆ. ಅದಕ್ಕೆ ಎಲ್ಲಾ ಜಾತಿಗಳನ್ನು ಒಡೆದು ಹಾಕಿದ್ದಾರೆ' ಎಂದು ಹೇಳಿದ್ದಾರೆ.

'ವಿಜಯೇಂದ್ರ ಅವರು ವಿದೇಶಕ್ಕೆ ಶಿಕ್ಷಣಕ್ಕಾಗಿ ಹೋಗುವ ಮುಸ್ಲಿಂ ವಿದ್ಯಾರ್ಥಿಗಳಿಗೆ ₹30 ಲಕ್ಷ ನೆರವು ಹಿಂದೂ ವಿದ್ಯಾರ್ಥಿಗಳಿಗೆ ಏಕಿಲ್ಲ? ಎಂದು ಹೇಳುವ ಮೂಲಕ ಧರ್ಮಗಳ ನಡುವೆ ದ್ವೇಷ ಮೂಡಿಸುವ ಹೇಳಿಕೆ ನೀಡಿದ್ದಾರೆ. ಹಾಗಾಗಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಇಬ್ಬರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಲು ಸಂಬಂಧಿಸಿದ ಠಾಣೆಯ ಅಧಿಕಾರಿಗಳಿಗೆ ಸೂಚನೆ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಭಾರತೀಯ ಸೇನೆಯ ಪ್ಯಾರಾಚೂಟ್ ರೆಜಿಮೆಂಟ್ ಕೇಂದ್ರದಲ್ಲಿ ಅಗ್ನಿವೀರರು ನಿರ್ಗಮನ ಪಥಸಂಚಲನ ನಡೆಸಿದರು

'ಅಗ್ನಿವೀರ': ನಿರ್ಗಮನ ಪಥಸಂಚಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ನಿವೀರರ ಐದನೇ ತಂಡದ ನಿರ್ಗಮನ ಪಥಸಂಚಲನವು ಭಾರತೀಯ ಸೇನೆಯ ಪ್ಯಾರಾಚೂಟ್ ರೆಜಿಮೆಂಟ್ ಕೇಂದ್ರದಲ್ಲಿ ಗುರುವಾರ ನಡೆಯಿತು.

440 ಅಗ್ನಿವೀರರು ಈ ತಂಡದಲ್ಲಿ ತರಬೇತಿ ಪಡೆದಿದ್ದಾರೆ. ದೇಶದ ವಿವಿಧ ಭಾಗಗಳಿಂದ ಆಯ್ಕೆಯಾಗಿದ್ದ ಅವರಿಗೆ 24 ವಾರಗಳ ಕಠಿಣ ತರಬೇತಿ ನೀಡಲಾಗಿದೆ. ಭಾರತೀಯ ಸೇನೆಯ ವಿವಿಧ ವಿಶೇಷ ಪಡೆಗಳ ಘಟಕಗಳಲ್ಲಿ ಅವರನ್ನು ನಿಯೋಜಿಸಲಾಗುತ್ತದೆ.

ಆಕರ್ಷಕ ಪಥಸಂಚಲನವನ್ನು ಏರ್ ಮಾರ್ಷಲ್ ತೇಜ್‌ಬೀರ್ ಸಿಂಗ್ ವೀಕ್ಷಿಸಿದರು. ಬಳಿಕ ಅಗ್ನಿವೀರರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಯೋಧರು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಳ್ಳಬೇಕು. ನಿಷ್ಠೆ ಹಾಗೂ ಶೌರ್ಯವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಮಾದರಿ ಯೋಧರಾಗಿ ಬದುಕಬೇಕು. ಭಾರತೀಯ ಸೇನೆಯಲ್ಲಿ ಪ್ಯಾರಾಚೂಟ್ ರೆಜಿಮೆಂಟ್ ಹಲವಾರು ಸಾಧನೆ ಮಾಡಿದ ಕೀರ್ತಿ ಹೊಂದಿದೆ' ಎಂದು ಹೇಳಿದರು.

ಮಹಾರಾಷ್ಟ್ರದ ಮೆಹರ್ಷ್ ಸುನಿಲ್ ಘರತ್ ಅವರು ಪಥಸಂಚಲನದ ನೇತೃತ್ವ ವಹಿಸಿದ್ದರು. ಅತ್ಯುತ್ತಮ ಸಾಧಕ ಅಭ್ಯರ್ಥಿಯಾಗಿ ಹಿಮಾಂಶು ಅವರು 'ಗಿಲ್' ಪದಕ ಪಡೆದರು. ಕಮಾಂಡೆಂಟ್‌ನ ಸಹಿಷ್ಣುತೆ ಪದಕವನ್ನು ಸಾಹಿಲ್ ಸಂದೀಪ್ ಸ್ವೀಕರಿಸಿದರು.

ಅತ್ಯುತ್ತಮ ಶಸ್ತ್ರಾಸ್ತ್ರ ತರಬೇತಿಗಾಗಿ ನೀಡುವ 'ಫಾಡ್ಗೆ' ಪದಕವನ್ನು ಲವ ಕುಮಾರ್, ದೈಹಿಕ ತರಬೇತಿ ವಿಭಾಗದಲ್ಲಿ ಅತ್ಯುತ್ತಮ ಅಭ್ಯರ್ಥಿಯಾಗಿ ಆಯ್ಕೆಯಾದ ಸೂರಜ್ ಉತ್ತಮ್ ಅವರಿಗೆ 'ಚೀಮಾ' ಪದಕವನ್ನು ಪ್ರದಾನ ಮಾಡಲಾಯಿತು. ಡ್ರಿಲ್ ವಿಭಾಗದಲ್ಲಿ ಮೆಹರ್ಷ್ ಸುನಿಲ್ ಘರತ್ ಅವರು 'ಛೆಟ್ರಿ' ಪದಕ ಸ್ವೀಕರಿಸಿದರು.

ನಾಳೆಯಿಂದ ವ್ಯಂಗ್ಯಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವ್ಯಂಗ್ಯ ಚಿತ್ರಕಾರರ ಸಂಘವು ಇದೇ 19ರಿಂದ ಮೇ 5ರವರೆಗೆ ಎಂ.ಜಿ. ರಸ್ತೆಯಲ್ಲಿರುವ ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯಲ್ಲಿ ವಾರ್ಷಿಕ ವ್ಯಂಗ್ಯಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ.

ಇದೇ 19ರಂದು ನಡೆಯಲಿರುವ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಅವರು 'ಕರ್ನಾಟಕದ ಕಾರ್ಟೂನಿಸ್ಟರು' ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ವ್ಯಂಗ್ಯಚಿತ್ರಕಾರ ಜಿ.ಎಸ್. ನಾಗನಾಥ್ ಅವರು ಸಂಪಾದಿಸಿರುವ ಈ ಪುಸ್ತಕ, ರಾಜ್ಯದ ವ್ಯಂಗ್ಯಚಿತ್ರಕಾರರ ಕುರಿತ ಮಾಹಿತಿ ಒಳಗೊಂಡಿದೆ ಎಂದು ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷ ವಿ.ಸಿ.ಆರ್. ಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ನಿರ್ಬಂಧಿಸಿ ಪ್ರತಿಭಟಿಸುವಂತಿಲ್ಲ: ಹೈಕೋರ್ಟ್

'ವಕ್ಫ್: ಪ್ರತಿಭಟನೆಗೆ ಅನುಮತಿ ಕಡ್ಡಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಪ್ರತಿಭಟನೆ ನಡೆಸಲು ರಾಜ್ಯ ಸರ್ಕಾರದಿಂದ ಅನುಮತಿ ಪಡೆದಿರಬೇಕು. ಯಾವುದೇ ಕಾರಣಕ್ಕೂ ರಸ್ತೆ ನಿರ್ಬಂಧಿಸಿ ಪ್ರತಿಭಟಿಸುವಂತಿಲ್ಲ. ಅನುಮತಿ ನೀಡಿರುವ ನಿರ್ದಿಷ್ಟ ಸ್ಥಳದಲ್ಲಿ ಮಾತ್ರವೇ ಪ್ರತಿಭಟನೆ ನಡೆಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

'ಇದೇ 18ರಂದು ಮಧ್ಯಾಹ್ನ 12ರಿಂದ ರಾತ್ರಿ 9ರವರೆಗೆ ರಾಷ್ಟ್ರೀಯ ಹೆದ್ದಾರಿ 72ರಲ್ಲಿ ಮಂಗಳೂರಿನಿಂದ ಪಡೀಲ್ ಮಾರ್ಗವಾಗಿ ಬಿ.ಸಿ.ರೋಡ್‌ಗೆ ಸಂಚಾರ ನಿರ್ಬಂಧಿಸಿ ಮಂಗಳೂರು ಪೊಲೀಸ್ ಕಮಿಷನರ್ ಹೊರಡಿಸಿರುವ ಸುತ್ತೋಲೆ ರದ್ದುಗೊಳಿಸಬೇಕು' ಎಂದು ಪ್ರಶ್ನಿಸಿ ದಕ್ಷಿಣ ಕನ್ನಡ ಜಿಲ್ಲೆ ಫರಂಗಿಪೇಟೆಯ ಎ.ರಾಜೇಶ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಡಿ.ಆರ್. ರವಿಶಂಕರ್, 'ಉದ್ದೇಶಿತ ಪ್ರತಿಭಟನೆಗೆ ರಾಜ್ಯ ಸರ್ಕಾರವೇ ಅನುಮತಿ ನೀಡುತ್ತಿದೆ' ಎಂದು ಆಕ್ಷೇಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಅನುಮತಿ ಇಲ್ಲದೇ ಹೋದರೆ ಪ್ರತಿಭಟನೆ ನಡೆಸುವಂತಿಲ್ಲ. ಅಂತೆಯೇ, ಸರ್ಕಾರ ಪ್ರತಿಭಟನೆ ನಡೆಸಲು ಅನುಮತಿ ನೀಡುವುದಕ್ಕೂ ಮುನ್ನ ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದೆ ಎಂಬುದನ್ನು ಗಮನದಲ್ಲಿ ಇರಿಕೊಳ್ಳಬೇಕು' ಎಂದು ಎಚ್ಚರಿಸಿದೆ.

10 ವರ್ಷ ಸೇವೆ: ಕಾಯಂಗೆ ಅರ್ಹತೆ

ಬೆಂಗಳೂರು: ದಿನಗೂಲಿ ಆಧಾರದಲ್ಲಿ ಸತತ 30 ವರ್ಷಗಳ ಕಾಲ ಅರಣ್ಯ ವೀಕ್ಷಕ ಮತ್ತು ಚಾಲಕನಾಗಿ ಕಾರ್ಯ ನಿರ್ವಹಿಸಿದ್ದ ದಿನಗೂಲಿ ನೌಕರರೊಬ್ಬರ ಸೇವೆಯನ್ನು ಕಾಯಂಗೊಳಿಸಲು ರಾಜ್ಯ ಸರ್ಕಾರಕ್ಕೆ ಆದೇಶಿಸಿರುವ ಹೈಕೋರ್ಟ್, 'ಮಂಜೂರಾತಿ ಹುದ್ದೆಯಲ್ಲಿ 10 ವರ್ಷಗಳ ಕಾಲ ನಿರಂತರವಾಗಿ ಕೆಲಸ ಮಾಡಿದ ಉದ್ಯೋಗಿಯು ಸೇವೆಯ ಕಾಯಮಾತಿಗೆ ಅರ್ಹನಾಗಿರುತ್ತಾನೆ' ಎಂದು ಸ್ಪಷ್ಟಪಡಿಸಿದೆ.



'ಸೇವೆ ಕಾಯಂಗೊಳಿಸಲು ನಿರಾಕರಿಸಿ ಅರಣ್ಯ ಇಲಾಖೆ ನೀಡಿದ್ದ ಹಿಂಬರಹ ಮತ್ತು ಈ ಹಿಂಬರಹವನ್ನು ಮಾನ್ಯ ಮಾಡಿರುವ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಆದೇಶ ರದ್ದುಪಡಿಸಬೇಕು' ಎಂದು ಕೋರಿ ಆನೇಕಲ್ ವಲಯದ ಅರಣ್ಯ ವೀಕ್ಷಕ ಪಿ.ಜುಂಜಪ್ಪ (53) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಮತ್ತು ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮಂಜೂರಾತಿ ಹುದ್ದೆಯಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿರುವುದನ್ನು ದೃಢಪಡಿಸಲು ಅರ್ಜಿದಾರರು ಯಾವುದೇ ಔಪಚಾರಿಕ ನೇಮಕಾತಿ ಪತ್ರ ಹಾಜರುಪಡಿಸಿಲ್ಲ. ಅಂತೆಯೇ, ಅರಣ್ಯ ಇಲಾಖೆಗೆ ಸಂಬಂಧಿಸಿದ ನೇಮಕಾತಿಗಳನ್ನು ನಿಗದಿತ ಆಯ್ಕೆ ಪ್ರಕ್ರಿಯೆಯ ಮೂಲಕವೇ ನಡೆಸಬೇಕು' ಎಂಬ ಸರ್ಕಾರದ ವಾದವನ್ನು ನ್ಯಾಯಪೀಠ ತಳ್ಳಿ ಹಾಕಿದೆ.

ತೇಜಸ್ವಿ ಕುರಿತು ಪ್ರಬಂಧ ಮಂಡನೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ಣಚಂದ್ರ ಕನ್ನಡ ಸಾಂಸ್ಕೃತಿಕ ಅಧ್ಯಯನ ಕೇಂದ್ರದ ಉದ್ಘಾಟನಾ ಸಮಾರಂಭವನ್ನು ಇದೇ 27 ಮತ್ತು 28ಕ್ಕೆ ಹಮ್ಮಿಕೊಳ್ಳಲಾಗಿದ್ದು, ಈ ಸಮಾರಂಭದಲ್ಲಿ ಪೂರ್ಣಚಂದ್ರ ತೇಜಸ್ವಿ ಅವರ ಆಸಕ್ತಿ ಕ್ಷೇತ್ರಗಳ ಬಗ್ಗೆ ಪ್ರಬಂಧ ಮಂಡಿಸಲು ಅವಕಾಶ ನೀಡಲಾಗಿದೆ.

ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆಯಲ್ಲಿರುವ ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರದ ಆವರಣದಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ಎರಡು ದಿನಗಳು ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ತೇಜಸ್ವಿ ಅವರ ಆಸಕ್ತಿಯ ಕ್ಷೇತ್ರಗಳಿಗೆ ಸಂಬಂಧಿಸಿದ ಚರ್ಚೆ, ಸಂವಾದಗಳನ್ನು ಒಳಗೊಂಡ ಅಧ್ಯಯನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಕವಿಗೋಷ್ಠಿ, ನಾಟಕ ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ.

ಪ್ರಬಂಧ ಮಂಡಿಸುವವರು 9448900999ಕ್ಕೆ ಸಾರಲೇಖವನ್ನು ಕಳುಹಿಸಬೇಕಿದೆ. ನೋಂದಣಿ ಮಾಡಿಸಿದವರಿಗೆ ಮಾತ್ರ ಸ್ಮರಣಿಕೆ ಮತ್ತು ಪ್ರಮಾಣ ಪತ್ರವನ್ನು ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಚೆನ್ನಾಗಿ ಹಸಿವಾಗಿದ್ದರೆ ಊಟ ಚೆನ್ನಾಗಿಯೇ ಇರುತ್ತದೆ.
-ಬೀಚಿ

ಯುಪಿಐ ವ್ಯವಸ್ಥೆಯಲ್ಲಿ ಅಡಚಣೆ ಗಳಿಸಿರುವ ಖ್ಯಾತಿಗೆ ಚ್ಯುತಿ ಆಗಬಾರದು

ದೇಶದಲ್ಲಿ ಜನಪ್ರಿಯವಾಗಿರುವ ಏಕೀಕೃತ ಪಾವತಿ ವ್ಯವಸ್ಥೆಯು (ಯುಪಿಐ) ಈ ತಿಂಗಳಲ್ಲಿ ಮೂರು ಬಾರಿ ಕೈಕೊಟ್ಟಿತ್ತು. ಇದರ ಪರಿಣಾಮವಾಗಿ, ಹಣ ಪಾವತಿ ಮಾಡುವ ಸಂದರ್ಭದಲ್ಲಿ ಜನಸಾಮಾನ್ಯರು, ವರ್ತಕರು ಫಜೀತಿಗೆ ಒಳಗಾಗಿದ್ದರು. ಸಣ್ಣ ವ್ಯಾಪಾರ ಮಳಿಗೆಗಳಲ್ಲಿ ಗೊಂದಲವು ಹೆಚ್ಚು ತೀವ್ರವಾಗಿತ್ತು. ಹಣ ಪಾವತಿ ಸಾಧ್ಯವಾಗದೆ ವರ್ತಕರು ಮತ್ತು ಗ್ರಾಹಕರು ಕೆಲವು ತಾಸುಗಳವರೆಗೆ ಸಮಸ್ಯೆಗೆ ಸಿಲುಕಿದ್ದರು. ಹಿಂದಿನ ವರ್ಷದಲ್ಲಿ ಯುಪಿಐ ವ್ಯವಸ್ಥೆಯಲ್ಲಿ ಆರು ಬಾರಿ, ಕಳೆದ ಐದು ವರ್ಷಗಳಲ್ಲಿ 21 ಬಾರಿ ಸಮಸ್ಯೆ ಎದುರಾಗಿತ್ತು. ಯುಪಿಐ ವ್ಯವಸ್ಥೆಯನ್ನು ನಿರ್ವಹಣೆ ಮಾಡುವ ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಕೆಲವೇ ತಾಸುಗಳಲ್ಲಿ ಸಮಸ್ಯೆಯನ್ನು ಪರಿಹರಿಸಿತಾದರೂ ಲಕ್ಷಾಂತರ ಮಂದಿ ಬಳಕೆದಾರರಿಗೆ ತೊಂದರೆ ಆಗಿತ್ತು. ಯುಪಿಐ ವ್ಯವಸ್ಥೆಯನ್ನು ಬಳಸಿ ಪ್ರತಿದಿನ 60 ಕೋಟಿ ವಹಿವಾಟುಗಳು ನಡೆಯುತ್ತಿವೆ ಎಂಬ ಅಂದಾಜು ಇದೆ. ವಹಿವಾಟುಗಳ ಸಂಖ್ಯೆಯು ಸ್ಥಿರ ಪ್ರಮಾಣದಲ್ಲಿ ಏರಿಕೆ ಕಾಣುತ್ತಿದೆ. ಹೀಗಾಗಿ, ಈ ವ್ಯವಸ್ಥೆಯಲ್ಲಿ ತೊಡಕುಗಳು ಎದುರಾದಾಗ ಉಂಟಾಗುವ ಸಮಸ್ಯೆಯ ಪ್ರಮಾಣವೂ ದೊಡ್ಡದಾಗಿಯೇ ಇರುತ್ತದೆ. ದೇಶದ ಆನ್‌ಲೈನ್ ಪಾವತಿ ವಹಿವಾಟುಗಳ ಬೆನ್ನೆಲುಬಿನಂತೆ ಯುಪಿಐ ಬೆಳೆದು ನಿಂತಿದೆ. ಆನ್‌ಲೈನ್ ವಹಿವಾಟಿನಲ್ಲಿ ಶೇ 65ರಷ್ಟು ಈ ವ್ಯವಸ್ಥೆಯ ಮೂಲಕವೇ ಆಗುತ್ತಿದೆ. ಮಾರ್ಚ್ ತಿಂಗಳಲ್ಲಿ ಈ ವ್ಯವಸ್ಥೆಯ ಮೂಲಕ 1,800 ಕೋಟಿಗೂ ಹೆಚ್ಚು ವಹಿವಾಟುಗಳು ನಡೆದಿವೆ. ಇದು ಹಿಂದಿನ ತಿಂಗಳಲ್ಲಿ ಆಗಿದ್ದ ವಹಿವಾಟಿನ ಸಂಖ್ಯೆಗೆ ಹೋಲಿಸಿದರೆ ಶೇಕಡ 14ರಷ್ಟು ಹೆಚ್ಚು.

ವಿಶ್ವದರ್ಜೆಯ ಪಾವತಿ ವ್ಯವಸ್ಥೆ ಎನಿಸಿಕೊಂಡಿರುವ ಯುಪಿಐ ಬಳಕೆ ಸುಲಭವಾಗಿರಬೇಕು, ವ್ಯವಸ್ಥೆಯಲ್ಲಿ ಲೋಪಗಳು ಇರಬಾರದು

2016ರಲ್ಲಿ ಆರಂಭವಾದ ಯುಪಿಐ, ಭಾರತವು ಹೆಮ್ಮೆಯಿಂದ ಹೇಳಿಕೊಳ್ಳುವ ವ್ಯವಸ್ಥೆಗಳಲ್ಲಿ ಒಂದು. ನೋಟು ರದ್ದತಿಯ ಸಂದರ್ಭದ ಸವಾಲುಗಳು, ಕೋವಿಡ್ ಸಾಂಕ್ರಾಮಿಕ ತೀವ್ರವಾಗಿದ್ದ ಅವಧಿಯ ಸಮಸ್ಯೆಗಳು ಈ ವ್ಯವಸ್ಥೆಯು ಜನಪ್ರಿಯವಾಗಲು ಕಾರಣವಾಗಿ ಒದಗಿಬಂದವು. ಸ್ಮಾರ್ಟ್‌ಫೋನ್‌ಗಳ ಬಳಕೆ ಹೆಚ್ಚಾಗಿದ್ದು ಹಾಗೂ ಡಿಜಿಟಲ್ ಅರಿವು ಹೆಚ್ಚಾಗಿದ್ದು ಈ ವ್ಯವಸ್ಥೆಯ ಬೆಳವಣಿಗೆಗೆ ಪೂರಕವಾದವು. ಈ ವ್ಯವಸ್ಥೆಯಲ್ಲಿ ಲೋಪಗಳು ಇಲ್ಲದಂತೆ ಎನ್‌ಪಿಸಿಐ ನಿಗಾ ವಹಿಸಬೇಕು. ಸಮಸ್ಯೆಯ ಬೇರು ಎಲ್ಲಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ ಎಂದು ಎನ್‌ಪಿಸಿಐ ಹೇಳಿದೆ. ವಹಿವಾಟುಗಳು ಇದ್ದಕ್ಕಿದ್ದಂತೆ ಭಾರಿ ಪ್ರಮಾಣದಲ್ಲಿ ಏರಿಕೆ ಆಗಿದ್ದುದು ಸಮಸ್ಯೆಗೆ ಕಾರಣವಾಯಿತು ಎಂದು ಭಾವಿಸಲಾಗಿದೆ. ಆದರೆ ವಹಿವಾಟುಗಳ ಸಂಖ್ಯೆಯು ಹೆಚ್ಚಳವಾಗುವ ಸೂಚನೆ ಇದ್ದಾಗ ಪರಿಸ್ಥಿತಿಯನ್ನು ನಿಭಾಯಿಸಲು ಎನ್‌ಪಿಸಿಐ ಸಿದ್ಧತೆ ಮಾಡಿಕೊಂಡಿರಬೇಕಿತ್ತು. ಸಮಸ್ಯೆಗಳನ್ನು ಕಡಿಮೆ ಮಾಡುವ ಯತ್ನದ ಭಾಗವಾಗಿ, ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಮತ್ತು ಹೊಸತನಕ್ಕೆ ಉತ್ತೇಜನ ನೀಡಲು ಡಿಜಿಟಲ್ ಪಾವತಿ ವಲಯದಲ್ಲಿ ಹೊಸ ಸಂಸ್ಥೆಯೊಂದನ್ನು ಕಟ್ಟಬೇಕು ಎಂಬ ಸಲಹೆಗಳಿವೆ. ಸಮಸ್ಯೆಗಳು ಮತ್ತೆ ಮತ್ತೆ ಎದುರಾಗದಿದ್ದರೂ ಅವು ವ್ಯವಸ್ಥೆಯ ಮೇಲಿನ ವಿಶ್ವಾಸಕ್ಕೆ ಪೆಟ್ಟು ಕೊಡುತ್ತವೆ.

ವಂಚನೆಯ ಪ್ರಕರಣಗಳು ಹೆಚ್ಚಾಗುತ್ತಿರುವುದು ಇನ್ನೊಂದು ಸಮಸ್ಯೆ. 2022–23ರಲ್ಲಿ ಯುಪಿಐ ವ್ಯವಸ್ಥೆಯಲ್ಲಿ ದಾಖಲಾದ ವಂಚನೆ ಪ್ರಕರಣಗಳಲ್ಲಿನ ಹಣದ ಮೊತ್ತವು ₹573 ಕೋಟಿ ಇತ್ತು. ಆದರೆ ಅದು 2023–24ರಲ್ಲಿ ₹1,087 ಕೋಟಿಗೆ ಹೆಚ್ಚಳವಾಗಿದೆ. ಇದು ಕಳವಳಕಾರಿ ಸಂಗತಿ. ಬಳಕೆದಾರರ ಗುರುತನ್ನು ತಾಳೆ ಮಾಡುವ, ದೃಢೀಕರಿಸುವ ಬಲವಾದ ಪ್ರಕ್ರಿಯೆಗಳನ್ನು ಎನ್‌ಪಿಸಿಐ ಜಾರಿಯಲ್ಲಿ ತಂದಿದೆ. ಕೃತಕ ಬುದ್ಧಿಮತ್ತೆ, ಮೆಷಿನ್ ಲರ್ನಿಂಗ್ ಮತ್ತು ಇತರ ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ವ್ಯವಸ್ಥೆಯನ್ನು ದೃಢವಾಗಿಸಲು ಅದು ಶ್ರಮಿಸಿದೆ. ತಂತ್ರಜ್ಞಾನವನ್ನು ಇನ್ನಷ್ಟು ಮೇಲ್ದರ್ಜೆಗೆ ಏರಿಸಿ ಮತ್ತು ಮೇಲ್ವಿಚಾರಣೆಯನ್ನು ಬಿಗಿಗೊಳಿಸಿ ಅದು ವಂಚನೆಯ ಸಾಧ್ಯತೆಯನ್ನು ಕಡಿಮೆ ಮಾಡಬೇಕು. ವಿಶ್ವದರ್ಜೆಯ ಪಾವತಿ ವ್ಯವಸ್ಥೆ ಎಂದು ಯುಪಿಐ ಗಳಿಸಿಕೊಂಡಿರುವ ಖ್ಯಾತಿಯು ಉಳಿಯಬೇಕು, ಬಳಕೆಯು ಸುಲಭವಾಗಿರಬೇಕು, ವ್ಯವಸ್ಥೆಯಲ್ಲಿ ಲೋಪಗಳು ಇರಬಾರದು. ಆಗ ಇದು ಸಾಧ್ಯವಾಗುತ್ತದೆ.

ದಿನದ ಟ್ವೀಟ್

ಬೇಕಾಗಿದೆ ತ್ಯಾಜ್ಯಮುಕ್ತ ನಗರ

...ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡಲಾಗದೇ ಇದ್ದರೆ ನಮ್ಮಿಂದ ನೀವು ತ್ಯಾಜ್ಯ ತೆರಿಗೆ ಸಂಗ್ರಹಿಸುವುದೇಕೆ? ನಮಗೆ ತ್ಯಾಜ್ಯಮುಕ್ತ ಬೆಂಗಳೂರು ಬೇಕಾಗಿದೆ.

ಧನಂಜಯ ಪದ್ಮನಾಭಾಚಾರ್

ಕಿಡಿನುಡಿ

ಈ ರೀತಿಯ ಆವಾಜ್‌ಗಳನ್ನು ಕಡಿಮೆ ಮಾಡುವುದಕ್ಕಾಗಿಯೇ ನಮಗೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿಯ ಶಿಫಾರಸುಗಳು ಜಾರಿ ಆಗಬೇಕಾಗಿರುವುದು.

(ರಾಜ್ಯದಲ್ಲಿ ವೀರಶೈವ ಲಿಂಗಾಯತರು ಹಾಗೂ ಒಕ್ಕಲಿಗರನ್ನು ಎದುರು ಹಾಕಿಕೊಂಡು ರಾಜ್ಯಭಾರ ಮಾಡುವುದು ಅಸಾಧ್ಯ ಎಂದು, ಜಾತಿ ಜನಗಣತಿ ವರದಿಗೆ ಸಂಬಂಧಿಸಿದಂತೆ ಶಾಸಕ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ಎಚ್ಚರಿಕೆ ನೀಡಿರುವುದಕ್ಕೆ ಪ್ರತಿಕ್ರಿಯೆ)

ನಟರಾಜ

25 ವರ್ಷಗಳ ಹಿಂದೆ

ಮಂಗಳವಾರ, 18-4-2000

● **ವಕೀಲರಿಗೆ ಮುಷ್ಕರದ ಹಕ್ಕಿಲ್ಲ ದೆಹಲಿ ಹೈಕೋರ್ಟ್ ತೀರ್ಪು**

ನವದೆಹಲಿ, ಏ. 17 (ಪಿಟಿಐ, ಯುಎನ್‌ಐ)– ವಕೀಲರ ಮೇಲೆ ದೆಹಲಿ ಪೊಲೀಸರು ನಡೆಸಿದ ದೌರ್ಜನ್ಯ ಖಂಡಿಸಿ ವಕೀಲರು ಇಲ್ಲಿ ಕಳೆದ 55 ದಿನಗಳಿಂದ ನಡೆಸುತ್ತಿರುವ ಮುಷ್ಕರ ‘ಕಾನೂನುಬಾಹಿರ’ ಎಂಬ ಮಹತ್ವದ ತೀರ್ಪನ್ನು ದೆಹಲಿ ಹೈಕೋರ್ಟ್ ನೀಡಿದೆ.

ವಕೀಲರು ನಡೆಸುವ ಮುಷ್ಕರದಿಂದ ಕಕ್ಷಿದಾರರ ಮೂಲಭೂತ ಹಕ್ಕನ್ನು ಭಂಗ ಮಾಡಿದಂತೆ, ವೃತ್ತಿಪರತೆಯನ್ನು ತೊರೆದಂತೆ ಮತ್ತು ಗುತ್ತಿಗೆಯನ್ನು ಮುರಿದಂತೆ ಆಗುತ್ತದೆ ಎಂದು ಕೋರ್ಟ್ ಹೇಳಿದೆ.

ಕೇಂದ್ರ ಸರ್ಕಾರವು ನಾಗರಿಕ ಕಾನೂನು ಕ್ರಮಗಳ ಸಂಹಿತೆಗೆ (ಸಿವಿಲ್ ಪ್ರೊಸೀಜರ್ ಕೋಡ್) ತಿದ್ದುಪಡಿ ತಂದಿರುವುದನ್ನು ಮತ್ತು ಭಾರತದ ನ್ಯಾಯಾಲಯಗಳಲ್ಲಿ ವಿದೇಶಿ ವಕೀಲರು ವಾದ ಮಂಡಿಸುವುದಕ್ಕೆ ಅವಕಾಶ ನೀಡುವ ಉದ್ದೇಶಿತ ವಕೀಲರ ಕಾಯ್ದೆ ತಿದ್ದುಪಡಿಗಳನ್ನು ವಿರೋಧಿಸಿ, ಫೆ. 24ರಂದು ದೇಶದಾದ್ಯಂತದಿಂದ ಬಂದಿದ್ದ ವಕೀಲರು ಸಂಸತ್ ಭವನದತ್ತ ಮೆರವಣಿಗೆ ಹೊರಟ ಸಂದರ್ಭದಲ್ಲಿ ಪೊಲೀಸರು ಲಾಠಿಚಾರ್ಜ್ ನಡೆಸಿದ್ದರು.

● **ಶಾಸಕರಿಗೂ ಪಂಚಿಂಗ್?**

ಬೆಂಗಳೂರು, ಏ. 17– ವಿಧಾನಸಭೆಯ ಅಧಿವೇಶನದಲ್ಲಿ ಶಾಸಕರು ನಿರೀಕ್ಷಿತ ಸಂಖ್ಯೆಯಲ್ಲಿ ಮತ್ತು ಸಮಯಕ್ಕೆ ಸರಿಯಾಗಿ ಹಾಜರಾಗದೇ ಇರುವುದರಿಂದ ಶಾಸಕರಿಗೂ ಪಂಚಿಂಗ್ ಪದ್ಧತಿ ಜಾರಿಗೆ ತರುವುದಕ್ಕೆ ಪರಿಶೀಲಿಸುತ್ತಿರುವುದಾಗಿ ವಿಧಾನಸಭಾಧ್ಯಕ್ಷ ಎಂ.ವಿ. ವೆಂಕಟಪ್ಪ ಅವರು ತಿಳಿಸಿದರು.

ಸದಸ್ಯರ ಕೋರಂ ಇಲ್ಲದೇ ಇಂದು ವಿಳಂಬವಾಗಿ ಕಲಾಪ ಪ್ರಾರಂಭವಾದ ಬಗ್ಗೆ ನೊಂದು ನುಡಿದ ವೆಂಕಟಪ್ಪನವರು, ಶಾಸಕರನ್ನು ಜನರು ಸದನಕ್ಕೆ ಯಾಕೆ ಆರಿಸಿ ಕಳಿಸುತ್ತಾರೆ ಎಂಬುದನ್ನು ಮೊದಲು ಅರಿತು ಅವರು ಕರ್ತವ್ಯ ನಿರ್ವಹಿಸಬೇಕು ಎಂದು ಎಚ್ಚರಿಕೆ ನೀಡಿದರು.

ಸದಸ್ಯರಿಗೆ ಪಂಚಿಂಗ್ ಪದ್ಧತಿ ಜಾರಿಗೊಳಿಸುವುದು ಅವರಿಗೆ ಗೌರವ ತರುವ ವಿಷಯವಲ್ಲದಿದ್ದರೂ, ಆ ರೀತಿ ಮಾಡುವುದು ಅನಿವಾರ್ಯವಾಗಿದೆ. ಆದರೆ ಈ ಬಗ್ಗೆ ಖಚಿತ ನಿಲುವು ತೆಗೆದುಕೊಳ್ಳುವುದಕ್ಕಿಂತಲೂ ಮುಂಚೆ ಸದಸ್ಯರ ಅನುಮತಿ ಪಡೆದುಕೊಳ್ಳುವುದಾಗಿ ವೆಂಕಟಪ್ಪ ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 18-4-1975

● **ರಾಷ್ಟ್ರ ಗೌರವದೊಡನೆ ರಾಧಾಕೃಷ್ಣನ್ ಅಂತ್ಯಕ್ರಿಯೆ**

ಮದರಾಸ್, ಏ. 17– ಬುಧವಾರ ಮಧ್ಯರಾತ್ರಿ ಇಲ್ಲಿ ನಿಧನರಾದ ಮಾಜಿ ರಾಷ್ಟ್ರಪತಿ ಎಸ್. ರಾಧಾಕೃಷ್ಣನ್ ಅವರ ಅಂತ್ಯಕ್ರಿಯೆ ಇಂದು ಸಂಜೆ ಮೈಲಾಪುರ ರುದ್ರಭೂಮಿಯಲ್ಲಿ ಪೂರ್ಣ ಸರ್ಕಾರಿ ಗೌರವದೊಡನೆ ನಡೆಯಿತು.

ರಾಧಾಕೃಷ್ಣನ್ ಅವರ ಪುತ್ರ ಎಸ್. ಗೋಪಾಲ್ ಅವರು ಚಿತೆಗೆ ಸಂಜೆ 5.10ರಲ್ಲಿ ಅಗ್ನಿಸ್ಪರ್ಶ ಮಾಡಿದರು.

ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹ್ಮದ್ ಮತ್ತು ಪ್ರಧಾನಿ ಇಂದಿರಾ ಗಾಂಧಿ ಪರವಾಗಿ ಅವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛ ಅರ್ಪಿಸಿ ಗೌರವ ಸಲ್ಲಿಸಲಾಯಿತು.

ಕೇಂದ್ರ ಸರ್ಕಾರದ ಪರವಾಗಿ, ಸಚಿವರಾದ ಸಿ. ಸುಬ್ರಹ್ಮಣ್ಯಂ, ಉಮಾಶಂಕರ ದೀಕ್ಷಿತ್ ಪಾಲ್ಗೊಂಡಿದ್ದರು.

● **1975–76ರಲ್ಲಿ ಭಾರತದ ಸಾಲ ಬಾಕಿ ಏರಿಕೆ**

ನವದೆಹಲಿ, ಏ. 17– ಭಾರತದ ಸಾಲ ಮರುಪಾವತಿ ಬಾಕಿ 1975–76ನೇ ಸಾಲಿನಲ್ಲಿ 1975ರ ಮಾರ್ಚ್ 31ರಂದು ಇದ್ದುದಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ಇರುತ್ತದೆ ಎಂದು ವಿಶ್ವಬ್ಯಾಂಕ್ ಅಂದಾಜು ಮಾಡಿದೆ.

ಅಲ್ಲದೆ, ಭಾರತಕ್ಕೆ 150 ಕೋಟಿ ಡಾಲರಿಗೆ ಕಡಿಮೆ ಇಲ್ಲದಂತೆ ಹೊಸ ಸಾಲ ನೀಡುವ ಒಪ್ಪಂದ ಮಾಡಿಕೊಳ್ಳಲು ನೆರವು ನೀಡುವ ರಾಷ್ಟ್ರಗಳಿಗೆ ಶಿಫಾರಸು ಮಾಡಲಿದೆ.

ಭಾರತಕ್ಕೆ ನೆರವು ನೀಡುವ ರಾಷ್ಟ್ರಗಳು ಜೂನ್ 25 ಮತ್ತು 26ರಂದು ಪ್ಯಾರಿಸ್‌ನಲ್ಲಿ ಸಭೆ ಸೇರಲಿವೆ.

ವ್ಯಕ್ತಿಗಳ ಅಂತರಂಗದ ಬೆಳಕು ಸಂಘಟಿತ ಸ್ವರೂಪದಲ್ಲಿ ಪ್ರಕಟವಾಗಬೇಕಿದೆ

ವೈರಾಗ್ಯ ಮತ್ತು ಹೋರಾಟ!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ದೂರದಿಂದ ನೋಡಿದಾಗ ತೀರಾ ಸಾಮಾನ್ಯ ವ್ಯಕ್ತಿಯಂತೆ ಕಾಣಿಸುವ ಹಾವೇರಿಯ ಮಾಲತೇಶ ಅಂಗೂರ ಅವರ ಹತ್ತಿರ ಹೋದರೆ ಅವರ ಪರಿಸರ ಕಾಳಜಿಯ ಹಲವು ಕಿಟಕಿಗಳು ನಿಧಾನವಾಗಿ ತೆರೆದುಕೊಳ್ಳುತ್ತವೆ. ಕೊನೆಗೆ ಪರಿಸರ ಮಾಹಿತಿಗಳ ಬೆಟ್ಟ ಹತ್ತಿದ ಅನುಭವ ಉಂಟಾಗುತ್ತದೆ.

‘ರಾಜ್ಯದ ಎರಡನೇ ಅತಿ ದೊಡ್ಡ ಕೆರೆಯಾದ ಹಾವೇರಿಯ ಹೆಗ್ಗೆರೆಗೆ ದೂರದ ದೇಶಗಳಿಂದ ವಲಸೆ ಬರುವ ಅಪರೂಪದ ಪ್ರಾಣಿ-ಪಕ್ಷಿಗಳು ಬೇಟೆಗಾರರಿಗೆ ಬಲಿಯಾಗುತ್ತಿವೆ’ ಎಂಬ ಆತಂಕ ಅವರದು. ಹೋದ ವರ್ಷದ ಆಗಸ್ಟ್ 30ರಂದು ಹೆಗ್ಗೆರೆಗೆ ಬಾಗಿನ ಅರ್ಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಐತಿಹಾಸಿಕ ಕೆರೆಯನ್ನು ಪಕ್ಷಿಧಾಮವನ್ನಾಗಿ ಘೋಷಿಸಿ ಅಭಿವೃದ್ಧಿ ಮಾಡುವುದಾಗಿ ನೀಡಿದ್ದ ಭರವಸೆ ಹುಸಿಯಾಗಿದೆ ಎಂದು ಮಾಲತೇಶ ವಿಷಾದಿಸುತ್ತಾರೆ.

ಶಿರಸಿ ಬಳಿಯ ಕಾನ್ಮನೆಯ ಶಿವಾನಂದ ಕಳವೆ ಅವರಿಗಿರುವ ಕೆರೆಕಟ್ಟೆಗಳ ಬಗೆಗಿನ ಜ್ಞಾನ ಮತ್ತು ಧ್ಯಾನ ಅಪರೂಪದ್ದು. ರಾಜ್ಯದ ಬಹುಪಾಲು ಭಾಗಗಳ ಜಲಸ್ಥಿತಿಯ ಅನುಭವಜನ್ಯ ಮಾಹಿತಿ, ಸಮಸ್ಯೆಗಳ ಸ್ವರೂಪ ಹಾಗೂ ಸರಳ ಪರಿಹಾರೋಪಾಯಗಳು ಅವರ ಬಳಿಯಿವೆ. ‘ಕೆರೆಯ ಹೂಳನ್ನು ತೆಗೆಯುವುದು ಸುಲಭ, ಆದರೆ ಜನರ ತಲೆಯ ಹೂಳನ್ನು ತೆಗೆಯುವ ಕೆಲಸವೂ ಆಗಬೇಕು’ ಎಂಬ ಅವರ ಮಾತಿನಲ್ಲಿ ಕಟು ವಾಸ್ತವದ ವಾಸನೆ ಹೊಮ್ಮುತ್ತದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಕುಂದೂರು ಬೆಟ್ಟದಲ್ಲಿ ದಾಸದೊಡ್ಡಿಯ ಕಾಮೇಗೌಡರು ಕೈಯಾರೆ 16 ಕೆರೆಗಳನ್ನು ನಿರ್ಮಾಣ ಮಾಡಿದ್ದರು. ಜೊತೆಗೆ ಸಾವಿರಾರು ಗಿಡಗಳನ್ನು ಬೆಳೆಸಿದ್ದರು. ಅಂತರ್ಜಲ ಹೆಚ್ಚಳಕ್ಕೆ ಹಾಗೂ ಪ್ರಾಣಿ ಪಕ್ಷಿಗಳಿಗೆ ಉಪಯೋಗವಾಗಲಿ ಎಂಬ ಉದಾತ್ತ ಆಶಯ ಹೊತ್ತಿದ್ದರು. ಕುರಿ ಕಾಯುತ್ತಲೇ ಕೈಗೊಂಡ ಪರಿಸರ ಕಾರ್ಯಕ್ಕಾಗಿ ಅವರು ‘ಕೆರೆ ಕಾಮೇಗೌಡರು’ ಎಂದೇ ಜನಮನದಲ್ಲಿ ಉಳಿದಿದ್ದಾರೆ.

ಹಾಗೆಯೇ ಸಾಗರ ತಾಲ್ಲೂಕಿನ ‘ಸ್ವಾನ್ ಆ್ಯಂಡ್ ಮ್ಯಾನ್’ ಸಂಘಟನೆಯು ಸಮುದಾಯದ ಸಹಭಾಗಿತ್ವದಲ್ಲಿ ಮಾಡಿರುವ ಕೆರೆಗಳ ಪುನಶ್ಚೇತನ ಸಾಹಸಗಳು ಗಮನಾರ್ಹ. ಸಮುದಾಯ ಪಾಲ್ಗೊಳ್ಳುವಿಕೆ ತತ್ವ ಬಳಸಿ ಈ ತಂಡ ಇದುವರೆಗೆ ತಮ್ಮೂರ ಸುತ್ತಲಿನ ಐದು ಪುರಾತನ ಕೆರೆಗಳನ್ನು ‘ಹೂಳುಮುಕ್ತ’ ಮಾಡಿದೆ. ‘ಬರೀ ಉತ್ಸಾಹ, ಸಲಹೆ, ಸೂಚನೆಗಳು ಕೆರೆಯ ಹೂಳನ್ನು ಎತ್ತಲಾರವು!’ ಎಂಬುದು ತಂಡದ ಸದಸ್ಯರು ಅನುಭವದಿಂದ ಕಲಿತ ಎಚ್ಚರಿಕೆಯ ಪಾಠ.

ಹೀಗೆ ಕೆರೆಗಳ ಸಂರಕ್ಷಣೆಗಾಗಿ ಶ್ರಮ ವಹಿಸುವ ವ್ಯಕ್ತಿಗಳು, ಸಣ್ಣಪುಟ್ಟ ಗುಂಪುಗಳಿಗೆ ಸೇರಿದವರು ರಾಜ್ಯದ ಉದ್ದಗಲಕ್ಕೂ ಅಲ್ಲಲ್ಲಿ ಕಾಣಸಿಗುತ್ತಾರೆ. ಬೆಂಗಳೂರಿನ ಲಿಯೊ ಸಲ್ಡಾನ್ಹಾ ನೇತೃತ್ವದ ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್ 2008ರಲ್ಲಿ ಕರ್ನಾಟಕ ಹೈಕೋರ್ಟ್‌ನಲ್ಲಿ ಕೆರೆಗಳ ಸಂರಕ್ಷಣೆಗಾಗಿ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ಹಲವು ತಿರುವುಗಳಿಗೆ ಕಾರಣವಾಗಿದೆ. 2012ರಲ್ಲಿ ಹೊರಬಂದ ಅಂತಿಮ ತೀರ್ಪಿನಲ್ಲಿ, ಕೇಂದ್ರೀಯವಾಗಿ ಅಧಿಕಾರಿಗಳ ಸಮಿತಿಯನ್ನು ರಚಿಸುವ ಮೂಲಕ ಕೆರೆಗಳ ನಿರ್ವಹಣೆ ಮತ್ತು ಪುನಶ್ಚೇತನವನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಲಾಯಿತು.

ಕೆರೆಗಳ ಮೂಲ ಸ್ವರೂಪ ಮತ್ತು ಪುನಶ್ಚೇತನದ ಪರಿಕಲ್ಪನೆಯ ಗಂಧಗಾಳಿಯಿಲ್ಲದ ಅಧಿಕಾರಿವರ್ಗದ ದೌರ್ಬಲ್ಯದ ಪರಿಣಾಮವಾಗಿ ಅರ್ಜಿದಾರರ ಮತ್ತು ನ್ಯಾಯಾಲಯದ ಆಶಯಕ್ಕೆ ವ್ಯತಿರಿಕ್ತವಾಗಿ ಬಹಳಷ್ಟು ಕೆರೆಗಳು ನಾಶವಾದವು. ಮೇಲಾಗಿ 2012ರ ತೀರ್ಪಿನಲ್ಲಿ ನಗರ ಪ್ರದೇಶಗಳ 40,000 ಕೆರೆಗಳನ್ನು ಸೇರಿಸಲಾಗಿತ್ತು, ಗ್ರಾಮೀಣ ಕೆರೆಗಳನ್ನು ಹೊರಗಿಡಲಾಗಿತ್ತು. ಪರಿಣಾಮವಾಗಿ, ಗ್ರಾಮೀಣ ಪ್ರದೇಶಗಳಲ್ಲಿನ 10,000 ಕೆರೆಗಳು ಈಗ ಕಣ್ಮರೆಯಾಗಿವೆ. ಸಿಟಿಜನ್ಸ್ ಆ್ಯಕ್ಷನ್ ಗ್ರೂಪ್ ಮತ್ತು ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್ ಸಂಘಟನೆಗಳ ಸತತ ಪ್ರಯತ್ನದ ಫಲವಾಗಿ ಹೈಕೋರ್ಟ್ 2012ರ ತನ್ನ ಆದೇಶವನ್ನು ಹಿಂಪಡೆದು ತಿದ್ದುಪಡಿ ಮಾಡಿದೆ.

ಹಿಂದಿನ ಕೇಂದ್ರೀಕೃತ ಸಮಿತಿಯ ಅದಕ್ಷತೆಯನ್ನು ಗಮನಿಸಿದ ನ್ಯಾಯಾಲಯವು 2021ರ ಜೂನ್ 15ರ ತಿದ್ದುಪಡಿ ಆದೇಶದಲ್ಲಿ ಹೊಸ ವಿಕೇಂದ್ರೀಕೃತ ಸಮಿತಿಗಳನ್ನು ರಚಿಸಲು ನಿರ್ದೇಶಿಸಿದೆ. ಆ ಪ್ರಕಾರ, ಸಮಿತಿಗಳ ಕಾರ್ಯವ್ಯಾಪ್ತಿಯು ಕೆರೆಗಳು ಮತ್ತು ಇತರ ಜೌಗು ಪ್ರದೇಶಗಳ ಸಮೀಕ್ಷೆ, ಪುನರ್ವಸತಿ, ಪುನರುಜ್ಜೀವನ ಮತ್ತು ನಿರ್ವಹಣೆಯನ್ನು ಒಳಗೊಂಡಿರುತ್ತದೆ. ಇದರಲ್ಲಿ ಜಲಮೂಲಗಳ ಅತಿಕ್ರಮಣವನ್ನು ತಡೆಗಟ್ಟುವುದೂ ಸೇರಿದೆ. ಈ ಕ್ರಮವು ಪರಿಣಾಮಕಾರಿಯಾಗಿ ಜಾರಿಯಾದರೆ ಸ್ಥಳೀಯ ನಾಗರಿಕರು ಕೆರೆಗಳ ಆಡಳಿತ ಮತ್ತು ನಿರ್ಧಾರಕ ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲಿ ತೊಡಗಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಆದರೆ ವಾಸ್ತವದಲ್ಲಿ ರಾಜ್ಯದ ಎಲ್ಲೆಡೆಯ ಕೆರೆಕೊಳ್ಳಗಳ ದೈನೇಸಿ ಸ್ಥಿತಿಯು ನಮ್ಮ ನಾಗರಿಕ ಪ್ರಜ್ಞೆಯ ಅಭಾವ ಮತ್ತು ಆಡಳಿತದಲ್ಲಿನ ಭ್ರಷ್ಟಾಚಾರದ ತಾಂಡವಕ್ಕೆ ದ್ಯೋತಕವಾಗಿದೆ.

ನಿಸರ್ಗ ಮತ್ತು ಜೀವಸಂಕುಲದ ಸುಸ್ಥಿರತೆಗೆ ಸವಾಲು ಎಸೆಯುವುದಕ್ಕೆ ಪಣ ತೊಟ್ಟು ನಿಂತಿರುವ ಸರ್ಕಾರಗಳ ದೋಷಯುಕ್ತ ಅಭಿವೃದ್ಧಿ ಮಾದರಿಗಳು ಮಾಡುತ್ತಿರುವ ಅನಾಹುತ ಒಂದೆರಡಲ್ಲ. ಪರಿಸರ ನಾಶಕ್ಕೆ ಕಾರಣವಾಗುವಂತಹ ಯೋಜನೆಗಳಿಗೆ ವಿರೋಧ ಪಕ್ಷದಲ್ಲಿದ್ದಾಗ ಪ್ರತಿರೋಧ ಒಡ್ಡುವ ರಾಜಕಾರಣಿಗಳು ಆಡಳಿತಕ್ಕೆ ಬರುವುದೇ ತಡ, ತದ್ವಿರುದ್ಧ ನಿಲುವು ತಳೆಯುವುದನ್ನು ನಿರಂತರ ಗಮನಿಸುತ್ತಿದ್ದೇವೆ. ಜಾಗತಿಕ ಹವಾಮಾನ ತುರ್ತು ಪರಿಸ್ಥಿತಿ ಮನೆ ಬಾಗಿಲು ತಲುಪಿರುವ ಅರಿವು ಇರಿಸಿಕೊಂಡು ಕೂಡ ಆಡಳಿತ ನಡೆಸುವವರು ಅಸಡ್ಡೆ ತಾಳಿದರೆ, ನಾಗರಿಕರು ಎನ್ನಿಸಿಕೊಂಡವರು ಹೋರಾಟದ ಹೊಣೆಯನ್ನು ಇನ್ಯಾರದೋ ಹೆಗಲಿಗೆ ಹೊರಿಸಿ ಗೊಣಗುವುದನ್ನು ಕಾಣಬಹುದು.

ಇಷ್ಟಾಗಿಯೂ ಪರಿಸರ ಕಾಳಜಿಯ ಚಟುವಟಿಕೆಗಳಲ್ಲಿ, ಹೋರಾಟಗಳಲ್ಲಿ ತೊಡಗಿಸಿಕೊಂಡ ಮನಸ್ಸುಗಳು ತಮ್ಮದೇ ಆದ ರೀತಿ ಮತ್ತು ಮಿತಿಯಲ್ಲಿ ತಮ್ಮ ಜೀವಿತದ ಕರ್ತವ್ಯವೆಂಬಂತೆ ಶ್ರಮಿಸುತ್ತಿರುವುದನ್ನು ಗುರುತಿಸಲು ಸಾಧ್ಯ. ಶಿವಮೊಗ್ಗದ ಶರಾವತಿ ನದಿ-ಕಣಿವೆ ಉಳಿಸಿ ಹೋರಾಟ, ಕೊಪ್ಪಳದಲ್ಲಿ ಚಾಲ್ತಿಯಲ್ಲಿರುವ ಬೃಹತ್ ಉದ್ಯಮಗಳ ವಿರೋಧಿ ಚಳವಳಿ, ಸಂಡೂರು ಭಾಗದಲ್ಲಿ ಅಕ್ರಮ ಗಣಿಗಾರಿಕೆಗೆ ಒಡ್ಡುತ್ತಿರುವ ಪ್ರತಿರೋಧ, ಎತ್ತಿನಹೊಳೆ ಯೋಜನೆಯ ಅವೈಜ್ಞಾನಿಕತೆ ಬಗೆಗೆ ಅರಿವು ಮೂಡಿಸುವ ಕಾರ್ಯಕ್ರಮ, ಮೈಸೂರಿನಲ್ಲಿ ಪರಿಸರ ಗುಂಪುಗಳು ಮರಗಳ ಹನನದ ವಿರುದ್ಧ ರೂಪಿಸಿದ ಪ್ರತಿಭಟನೆ... ಹೀಗೆ ಅಲ್ಲಲ್ಲಿ ಪರಿಸರ ಕಾಳಜಿಯ ಕ್ಷೀಣದನಿಗಳು ಕೇಳಿಬರುತ್ತಿವೆ.

ಇಂತಹ ದನಿಗಳನ್ನು ಒಟ್ಟುಗೂಡಿಸಿ ರಾಜ್ಯಮಟ್ಟದಲ್ಲಿ ದೊಡ್ಡ ಗರ್ಜನೆಗೆ ನಾಂದಿ ಹಾಡುವ ಹಂಬಲದಿಂದ ಬೆಂಗಳೂರಿನಲ್ಲಿ ಇತ್ತೀಚೆಗೆ ಸಮಾನಾಸಕ್ತರೆಲ್ಲಾ ಸೇರಿ ‘ಪರಿಸರಕ್ಕಾಗಿ ನಾವು’ ಸಂಘಟನೆಗೆ ಚಾಲನೆ ನೀಡಿರುವುದು ಭರವಸೆದಾಯಕವಾಗಿದೆ. ರಾಜ್ಯದ ವಿವಿಧ ಭಾಗಗಳ ನೈಜ ಪರಿಸರವಾದಿಗಳ ಸಂಗಮವಾಗಿದ್ದ ಈ ಸಭೆಯಲ್ಲಿ ಜಲತಜ್ಞ ರಾಜೇಂದ್ರ ಸಿಂಗ್, ಅ.ನ.ಯಲ್ಲಪ್ಪ ರೆಡ್ಡಿ, ಬಿ.ಆರ್.ಪಾಟೀಲ, ಮೋಟಮ್ಮ, ಸುರೇಶ ಹೆಬ್ಳೀಕರ್, ಕಪ್ಪತ್ತಗುಡ್ಡ ಮತ್ತು ನಿಡಸೋಸಿ ಸ್ವಾಮೀಜಿಗಳು ಭಾಗವಹಿಸಿದ್ದರು. ದಲಿತ, ರೈತ, ಕನ್ನಡದಂತಹ ಎಲ್ಲಾ ಜನಪರ ಚಳವಳಿಗಳು ಪರಿಸರ ಹೋರಾಟವನ್ನು ಒಳಗೊಳ್ಳುವ ಅಗತ್ಯವಿದೆ ಎಂಬ ಪ್ರತಿಪಾದನೆಯಲ್ಲಿ ತಥ್ಯವಿದೆ.

ಸಂಘಟನೆಯ ಅಧ್ಯಕ್ಷತೆ ವಹಿಸಿಕೊಂಡಿರುವ ಅಪರೂಪದ ರಾಜಕಾರಣಿ ಎ.ಟಿ.ರಾಮಸ್ವಾಮಿ ಅವರು ತಾವು ಸಕ್ರಿಯ ರಾಜಕಾರಣದಿಂದ ದೂರ ಉಳಿಯುವುದಾಗಿ ಘೋಷಿಸಿದ್ದಾರೆ. ಇಂತಹ ಸಂಘಟನೆಗಳು ಪಕ್ಷ ರಾಜಕಾರಣದಿಂದ ದೂರ ಇರಬೇಕಾದುದು ಅಗತ್ಯವೂ ಹೌದು. ರಾಮಸ್ವಾಮಿ ಅವರು ಬಿಜೆಪಿಯಲ್ಲಿ ಇದ್ದಾರೆ. ಪಕ್ಷದ ಜೊತೆಗಿನ ಸಂಬಂಧದ ಕುರಿತು ಅವರು ಇನ್ನಷ್ಟು ಸ್ಪಷ್ಟತೆ ಒದಗಿಸಿದರೆ ಕೆಲವರಲ್ಲಿ ಉಳಿದಿರಬಹುದಾದ ಅನುಮಾನಗಳು ಸಂಪೂರ್ಣ ನಿವಾರಣೆಯಾಗುತ್ತವೆ.

ವೈರಾಗ್ಯ ಮತ್ತು ಹೋರಾಟವು ವ್ಯಕ್ತಿಯ ಒಳಗಿನಿಂದ ಹುಟ್ಟುವಂತಹ ಕ್ರಿಯೆಗಳು. ಹಾಗಾಗಿ, ಸಕಲ ಜೀವರಾಶಿಗೆ ಸೇರಿದ ಪರಿಸರವನ್ನು ಮಲಿನ ಮಾಡುವ ಐಷಾರಾಮಿ ಬದುಕಿನ ಬಗ್ಗೆ ವ್ಯಕ್ತಿಗತವಾಗಿ ವೈರಾಗ್ಯ ತಾಳುವುದು ಹಾಗೂ ಹವಾಮಾನ ತುರ್ತುಪರಿಸ್ಥಿತಿ ಎದುರಿಸಲು ಹೋರಾಟದ ಮನೋಭಾವ ಬೆಳೆಸಿಕೊಳ್ಳುವುದು ಕಾಲದ ಕರೆಯೇ ಆಗಿದೆ. ವ್ಯಕ್ತಿಗಳ ಅಂತರಂಗದಲ್ಲಿ ಮೂಡುವ ಇಂತಹ ಬೆಳಕು ಸಂಘಟಿತ ಸ್ವರೂಪದಲ್ಲಿ ಪ್ರಕಟವಾಗಲು ಹೆಚ್ಚು ಸಮಯವನ್ನೇನೂ ಬೇಡಲಾರದು.

ಚುರುಮುರಿ



ಎ.ಐ. ಸರ್ಕಾರ!

● ಬಿ.ಎನ್.ಮಲ್ಲೇಶ್

‘ಮಂಜಮ್ಮ ‘ಎ.ಐ. ಲವ್ ಯು’ ಅಂದ್ರೆ ಏನ್ ಅರ್ಥ ಗೊತ್ತಾ?’ ಹರಟೆಕಟ್ಟೆಯಲ್ಲಿ ಗುಡ್ಡೆ ಕೇಳಿದ.

‘ಇವತ್ತು ನಿನ್ ಗ್ರಾಚಾರ ನೆಟ್ಟಗಿಲ್ಲ ಅಂತ ಅರ್ಥ’ ಮಂಜಮ್ಮಗೆ ಸಿಟ್ಟು ಬಂತು.

‘ನಿನ್ಗೆಲಿ, ಗೊತ್ತಿಲ್ಲದ್ದನ್ನ ತಿಳ್ಕಾಬೇಕು. ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮೂಲಕ ಕನ್ನಡದಲ್ಲಿ ‘ಲವ್ ಯು’ ಅನ್ನೋ ಸಿನಿಮಾ ಮಾಡಿದಾರಂತೆ. ಒರಿಜಿನಲ್ ಹೀರೊ, ಹೀರೋಯಿನ್ನು, ವಿಲನ್ನು ಯಾರೂ ಇಲ್ಲಂತೆ. ಎಲ್ಲ ಎ.ಐ., ಅಂದ್ರೆ ಕೃತಕ ಬುದ್ಧಿಮತ್ತೆ ಸೃಷ್ಟಿಸಿರೋದಂತೆ!’

‘ಹೌದಾ? ಅದೆಂಗೆ?’ ಕೊಟ್ರೇಶಿ ಕೊಕ್ಕೆ.

‘ಎ.ಐ.ಗೆ ಕತೆ ಹೇಳಿಬಿಟ್ರೆ ಸಾಕಂತೆ. ಹೀರೊ, ಹೀರೋಯಿನ್ನು, ಹಾಡು ಎಲ್ಲ ಅದೇ ರೆಡಿ ಮಾಡ್ಕಳುತ್ತಂತೆ. ಎ.ಐ. ಸೃಷ್ಟಿಸಿದ್ದ ಲವ್ ಯು ಸಿನಿಮಾ ಹೀರೋಯಿನ್ನು ಎಷ್ಟ್ ಚೆನ್ನಾಗಿದಾಳೆ ಗೊತ್ತಾ? ಪೇಪರಲ್ಲಿ ಫೋಟೊ ಬಂದಿತ್ತು’ ಗುಡ್ಡೆಗೆ ಖುಷಿ.

‘ಅಂದ್ರೇ ಇನ್ಮುಂದೆ ಒರಿಜಿನಲ್ ನಟ-ನಟಿ ಯಾರೂ ಬ್ಯಾಡ. ಎಲ್ಲ ಅದೇ ರೆಡಿ ಮಾಡ್ಕಳುತ್ತೆ’ ದುಬ್ಬೀರ ಕೇಳಿದ.

‘ಎಸ್... ತಂತ್ರಜ್ಞಾನ ಹಂಗೈತೆ. ನಾವು ಕತೆ, ಕ್ಲೈಮ್ಯಾಕ್ಸ್ ಹೇಳಿಬಿಟ್ರೆ ಸಿನಿಮಾ ರೆಡಿ’.

‘ಈಗ ಅದೇ ತರ ಎ.ಐ.ಗೆ ಒಂದು ಸರ್ಕಾರ ಹೆಂಗೆ ನಡೀಬೇಕು, ಯಾರ್ಯಾರನ್ನ ಹೆಂಗೆ ಮಟ್ಟ ಹಾಕ್ಬೇಕು ಅನ್ನೋದನ್ನ ಹೇಳಿಕೊಟ್ರೆ ಸಿಎಂ, ಡಿಸಿಎಂ ಇಲ್ದೆ ಅದೇ ‘ಎ.ಐ. ಸರ್ಕಾರ’ ನಡೆಸುತ್ತಾ? ಜಾತಿ ಜನಗಣತೀನೂ ಮಾಡುತ್ತಾ?’ ತೆಪರೇಸಿಗೆ ಅನುಮಾನ.

‘ಏನೋಪ್ಪ, ಗೊತ್ತಿಲ್ಲ...’ ಗುಡ್ಡೆ ರಾಗ ಎಳೆದ.

‘ಈಗ ಎ.ಐ.ಗೆ ಹಾಲು, ಚಾ ಪುಡಿ, ಸಕ್ಕರೆ ಎಲ್ಲ ಎಷ್ಟೆಷ್ಟು ಹಾಕಬೇಕು ಅಂತ ಹೇಳಿಕೊಟ್ರೆ ಅದೇ ಚಾ ಮಾಡುತ್ತಾ?’

‘ಅದು ಚಾ ಮಾಡಬಹುದು, ಆದ್ರೆ ನೋಡೋಕಷ್ಟೇ, ಅದ್ನ ಕುಡಿಯಾಕಾಗಲ್ಲ’ ಎಂದಳು ಮಂಜಮ್ಮ.

‘ಥೋ ಎಂಥ ಕಾಲ ಬಂತಪ್ಪ’ ಎಂದ ದುಬ್ಬೀರ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಅಂಕ ಗಳಿಕೆಗೆ ಮಂತ್ರ ರಕ್ಷೆ!

ವಿದ್ಯಾರ್ಥಿಗಳು ಮೂಢನಂಬಿಕೆಗೆ ಒಳಗಾಗುವುದು ಅಹಿತಕರ ಬೆಳವಣಿಗೆ

● ಮಲ್ಲಿಕಾರ್ಜುನ ಹೆಗ್ಗಳಗಿ

ಬಾಗಲಕೋಟೆಯಲ್ಲಿ ಏರ್ಪಡಿಸಿದ್ದ ಸರ್ಕಾರಿ ಪ್ರೌಢಶಾಲೆಗಳ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಹೋಗಿದ್ದೆ. ಅಲ್ಲಿ ಸೇರಿದ್ದ ಬಹಳಷ್ಟು ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ತಮ್ಮ ಎಡಗಾಲಿಗೆ ಕಪ್ಪು ದಾರ ಕಟ್ಟಿಕೊಂಡಿದ್ದರು. ವಿಚಾರಿಸಿದಾಗ, ‘ಆರೋಗ್ಯ ಸುಧಾರಿಸಬೇಕು, ದೃಷ್ಟಿ ತಾಕಬಾರದು, ಹೆಚ್ಚು ಅಂಕ ಬರಬೇಕು, ತೊಂದರೆಗಳು ದೂರ ಆಗಬೇಕು ಎಂದು ಮಂತ್ರ ಹಾಕಿ ಈ ದಾರ ಸಿದ್ಧಪಡಿಸಲಾಗಿದೆ. ಇದು ಮಂತ್ರರಕ್ಷಾ ಕವಚ. ಬೆಲೆ 50 ರೂಪಾಯಿ ಮಾತ್ರ’ ಎಂದು ವಿವರ ನೀಡಿದರು.

ತಮಿಳುನಾಡಿನ ಕೊಯಮತ್ತೂರಿನಲ್ಲಿ, ಮುಟ್ಟಾದ 8ನೇ ತರಗತಿ ವಿದ್ಯಾರ್ಥಿನಿಯನ್ನು ‘ಮುಟ್ಟಾದವರನ್ನು ಮುಟ್ಟಬಾರದು’ ಎಂಬ ಮೂಢನಂಬಿಕೆಯ ಕಾರಣಕ್ಕೆ ಶಾಲೆಯ ಹೊರಗೆ ಕೂರಿಸಿ ವಾರ್ಷಿಕ ಪರೀಕ್ಷೆ ಬರೆಸಲಾಯಿತು ಎನ್ನಲಾದ ಅಮಾನವೀಯ ಪ್ರಕರಣವನ್ನು ಪತ್ರಿಕೆಯಲ್ಲಿ ಓದಿದಾಗ, ವಿದ್ಯಾರ್ಥಿಗಳು ಸಾಮೂಹಿಕವಾಗಿ ಮೂಢನಂಬಿಕೆಗೆ ಒಳಗಾಗಿ ಕರಿ ದಾರ ಕಟ್ಟಿಕೊಳ್ಳುವ ಸಂಗತಿ ನೆನಪಾಯಿತು.

ಕೃತಕ ಬುದ್ಧಿಮತ್ತೆ, ಹೊಸ ಹೊಸ ಸಂಶೋಧನೆಗಳು, ತಂತ್ರಜ್ಞಾನ, ಬಾಹ್ಯಾಕಾಶ ಸಂಶೋಧನೆ, ಆರೋಗ್ಯ ಮತ್ತು ವೈದ್ಯಕೀಯ ರಂಗದಲ್ಲಿ ಬಹಳಷ್ಟು ಬೆಳವಣಿಗೆಗಳಾಗಿವೆ. ಇದನ್ನೆಲ್ಲ ವಿದ್ಯಾರ್ಥಿಗಳು ಗಮನಿಸಿದ್ದರೂ ಯಾವುದೋ ಮಾತಿಗೆ ಮರುಳಾಗಿ ಮಂತ್ರದ ಕರಿ ದಾರ ಕಟ್ಟಿಕೊಳ್ಳುತ್ತಿದ್ದಾರೆ. ಇದನ್ನು ಕೆಲವು ಶಿಕ್ಷಕರು, ಪಾಲಕರು ಪ್ರೋತ್ಸಾಹಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇದು ತೀರಾ ಹೆಚ್ಚಾಗಿದೆ. ಇದರಿಂದ ವಿದ್ಯಾರ್ಥಿಗಳ ಆತ್ಮವಿಶ್ವಾಸ, ಪ್ರಯತ್ನ ಮತ್ತು ದೃಢತೆ ಕುಗ್ಗುವ ಅಪಾಯವಿದೆ ಎಂಬುದನ್ನು ಎಲ್ಲರೂ ಗಮನದಲ್ಲಿ ಇಟ್ಟುಕೊಳ್ಳುವುದು ಅವಶ್ಯ.

ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದು ಶಿಕ್ಷಣದ ಪ್ರಮುಖ ಆಶಯವಾಗಿದೆ. ಪಠ್ಯಗಳಲ್ಲಿ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ವಿಷಯಗಳನ್ನು ಅಳವಡಿಸಲಾಗಿದೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸೇರಿದಂತೆ ಹಲವಾರು ಸಂಸ್ಥೆಗಳು ವೈಜ್ಞಾನಿಕ ಮನೋಭಾವ ಬೆಳೆಸುವುದಕ್ಕಾಗಿ ಶ್ರಮಿಸುತ್ತಿವೆ. ಇದು ಭಾರತದ ಸಂವಿಧಾನದ ಪ್ರಮುಖ ಆಶಯ ಕೂಡ ಆಗಿದೆ.

ಶಿಕ್ಷಕರು ವೈಜ್ಞಾನಿಕ ಮನೋಭಾವ, ವೈಚಾರಿಕ ನಿಲುವನ್ನು ಹೊಂದಿ ಅದನ್ನು ಮಕ್ಕಳಿಗೆ ಬೋಧಿಸಬೇಕು ಮತ್ತು ಬದುಕಿನಲ್ಲಿ ಅಳವಡಿಸಿಕೊಳ್ಳಲು ಪ್ರೇರೇಪಿಸಬೇಕು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಆಗಿದ್ದ ಎಚ್.ನರಸಿಂಹಯ್ಯ, ವಿಚಾರವಾದಿ ಅಬ್ರಹಾಂ ಕೋವೂರ್ ಅಂಥವರು ಮೂಢನಂಬಿಕೆಗಳ ವಿರುದ್ಧ ನಡೆಸಿದ ಹೋರಾಟವನ್ನು ಮಕ್ಕಳಿಗೆ ಪರಿಚಯಿಸಬೇಕು.

ದೇಶದ ಸಮಗ್ರ ಅಭಿವೃದ್ಧಿಯಲ್ಲಿ ವೈಜ್ಞಾನಿಕ ಮನೋಭಾವ ನಿರ್ಣಾಯಕ ಪಾತ್ರ ವಹಿಸುತ್ತದೆ. ಮೂಢನಂಬಿಕೆ, ಕಂದಾಚಾರ ಬಹುದೊಡ್ಡ ಆತಂಕ ಸೃಷ್ಟಿಸುತ್ತವೆ. ಮಕ್ಕಳಿಗೆ ಅನಾರೋಗ್ಯ ಕಾಡತೊಡಗಿದರೆ ವೈದ್ಯರ ಬಳಿಗೆ ಹೋಗದೆ ಮಂತ್ರವಾದಿ, ತಂತ್ರಿಗಳ ಬಳಿಗೆ ಹೋಗುತ್ತಾರೆ. ಅವರು ‘ಶನಿ ಕಾಟ’ ಎಂದು ಹೇಳಿ ದಾರ, ಚೀಟಿ, ತಾಯತ ಮಾಡಿಕೊಡುತ್ತಾರೆ. ಜ್ವರಬಾಧಿತ ಮಕ್ಕಳ ಮೈ ಸುಡುವ ಮೌಢ್ಯದ ಆಚರಣೆಗಳು ಈಗಲೂ ಕೆಲವು ಭಾಗಗಳಲ್ಲಿ ತೆರೆಯಮರೆಯಲ್ಲಿ ನಡೆಯುತ್ತಿವೆ.

ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ವಿಠಲಾಪುರ ಗ್ರಾಮದಲ್ಲಿ ಜ್ವರಬಾಧಿತ ಮಕ್ಕಳಿಗೆ ಊದಿನ ಕಡ್ಡಿಯಿಂದ ಬರೆ ಹಾಕಿದ ಪ್ರಕರಣ ವರದಿಯಾಗಿತ್ತು. ದೇಹ ಸುಡುವುದರಿಂದ ಜ್ವರ ನಿವಾರಣೆ ಆಗುವುದಿಲ್ಲ. ಅದರಿಂದ ಸಮಸ್ಯೆ ಇನ್ನಷ್ಟು ಉಲ್ಬಣವಾಗುತ್ತದೆ. ಮಕ್ಕಳಿಗೆ ಮೌಢ್ಯದ ಹೆಸರಿನಲ್ಲಿ ನೋವುಂಟು ಮಾಡುವುದು ಹಿಂಸೆ. ಇಂಥ ವಿಚಾರಗಳನ್ನು ಶಿಕ್ಷಕರು ಧೈರ್ಯವಾಗಿ ವಿದ್ಯಾರ್ಥಿಗಳಿಗೆ, ಪಾಲಕರಿಗೆ ವಿವರಿಸಿ ಹೇಳಬೇಕು. ಹೀಗೆ ಹೇಳುವುದಕ್ಕೆ ಶಿಕ್ಷಕರಲ್ಲಿ ವೈಜ್ಞಾನಿಕ ಮನೋಭಾವ, ಸ್ಪಷ್ಟವಾದ ವೈಚಾರಿಕ ಅರಿವು ಇರಬೇಕಾಗುತ್ತದೆ. ಇದನ್ನು ಓದು, ಸಂವಾದ, ಪ್ರಾತ್ಯಕ್ಷಿಕೆಯಿಂದ ಗಳಿಸಬಹುದು. ಮಕ್ಕಳು ಬಹುಬೇಗ ತಮ್ಮ ಶಿಕ್ಷಕರನ್ನು ಮಾದರಿಯಾಗಿ ಸ್ವೀಕರಿಸುತ್ತಾರೆ.

ಶಾಲೆಯೊಂದರ ಗೋಡೆಯ ಮೇಲೆ ‘ಕಾಳಭೈರವ’ ಎಂದು ಐದು ಕಡೆ ಬರೆದಿದ್ದರು. ಏನಿದು ಎಂದು ಮುಖ್ಯ ಅಧ್ಯಾಪಕರನ್ನು ವಿಚಾರಿಸಿದರೆ, ‘ಶಾಲೆಯ ಆವರಣದಲ್ಲಿ ಹಾವುಗಳು ಬರುತ್ತಿವೆ. ಕಾಳಭೈರವ ಎಂದು ಬರೆದರೆ ಬರುವುದಿಲ್ಲವಂತೆ’ ಎಂದು ಅವರು ಹೇಳಿದರು. ‘ಈಗ ಹಾವುಗಳು ಬರುವುದು ನಿಂತಿದೆಯೇ’ ಎಂದು ಕೇಳಿದಾಗ, ಅಲ್ಲಿಯೇ ನಿಂತುಕೊಂಡಿದ್ದ ಮಕ್ಕಳು ‘ನಿನ್ನೆ ಬಂದಿತ್ತು’ ಎಂದು ಒಂದೇ ಧ್ವನಿಯಲ್ಲಿ ಹೇಳಿದರು. ಮುಖ್ಯ ಅಧ್ಯಾಪಕರ ಮುಖ ಕಪ್ಪಿಟ್ಟಿತು.

ಮಕ್ಕಳಿಗೆ ಬೀದಿನಾಯಿಗಳು ಕಚ್ಚಿದರೆ ಮಂತ್ರವಾದಿಗಳ ಬಳಿ ಕರೆದುಕೊಂಡು ಹೋಗುವ ಪಾಲಕರಿದ್ದಾರೆ. ಶಿಕ್ಷಕರು ಸರಿಯಾಗಿ ಮಾರ್ಗದರ್ಶನ ಮಾಡಬೇಕು. ವೈದ್ಯರ ಬಳಿ ಕಳಿಸುವ ವ್ಯವಸ್ಥೆ ಮಾಡಬೇಕು.

ಛತ್ರಪತಿ ಶಿವಾಜಿ ಮಹಾರಾಜರ ರಾಜ್ಯದಲ್ಲಿ ಕೆಲವು ರೈತರು ತಮ್ಮ ಭೂಮಿ ಶಾಪಗ್ರಸ್ತವಾಗಿದೆ ಎಂಬ ಮೂಢನಂಬಿಕೆಯಿಂದ ಉಳುಮೆ ಮಾಡುತ್ತಿರಲಿಲ್ಲ. ಶಾಪಗ್ರಸ್ತ ಎಂದು ಭಾವಿಸಿದ್ದ ಭೂಮಿಯಲ್ಲಿ ಕೃಷಿ ಮಾಡಿದರೆ ಅಕಾಲಿಕ ಸಾವು ಬರುತ್ತದೆ ಎಂದು ಹೆದರಿದ್ದರು. ಈ ಮೂಢನಂಬಿಕೆ ದೂರ ಮಾಡಲು ಶಿವಾಜಿ ಮಹಾರಾಜರು ಚಿನ್ನದ ಕೋರಿಗೆ ಮಾಡಿಸಿ ತಮ್ಮ ತಾಯಿಯಿಂದ ಬಿತ್ತನೆ ಕಾರ್ಯ ಆರಂಭಿಸಿದರು. ರಾಜ್ಯ ಸಮೃದ್ಧವಾಯಿತು. ನಾಯಕನಾದವನು ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕು ಎಂಬುದಕ್ಕೆ ಇದೊಂದು ಅತ್ಯುತ್ತಮ ಮಾದರಿ.

ವೈಜ್ಞಾನಿಕ ಮನೋಭಾವ ಆರೋಗ್ಯಪೂರ್ಣ ವ್ಯಕ್ತಿತ್ವದ ಲಕ್ಷಣ. ಇಲ್ಲಿ ಗೊಂದಲಗಳು ಇರುವುದಿಲ್ಲ. ವಿದ್ಯಾರ್ಥಿಗಳನ್ನು ಹಾಗೆ ರೂಪಿಸುವುದು ಬಹಳ ಅವಶ್ಯ. ಇದು ನಾಳಿನ ಸಮಾಜವನ್ನು ಸಶಕ್ತವಾಗಿ ಕಟ್ಟುವ ಕೆಲಸವಾಗಿದೆ.

ವಾಚಕರ ವಾಣಿ

ಸರ್ಕಾರಿ ಶಾಲೆಗೆ ದುಃಸ್ಥಿತಿ ಬಂದುದೇಕೆ?

ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳ ಕಲಿಕೆಯಲ್ಲಿ ಕಂಡುಬರುವ ನಿರಾಸಕ್ತಿಯ ಕುರಿತು ಎಂ.ಜೆ.ಅಲ್ಫೋನ್ಸ್ ಪಿಂಟೊ ಅವರ ಲೇಖನದಲ್ಲಿ (ಸಂಗತ, ಏ. 16) ಸಂಕ್ಷಿಪ್ತ ವಿವರಣೆ ಇದೆ. ‘ಪ್ರಾಥಮಿಕ ಹಂತದಲ್ಲಿ ಸರಿಯಾದ ತಳಪಾಯವಿಲ್ಲದೆ ಪ್ರೌಢ ಹಂತಕ್ಕೆ ಕಾಲಿರಿಸುವಂತಹ ಸಂದಿಗ್ಧ ಪರಿಸ್ಥಿತಿ ಇದೆ’ ಎಂದಿದ್ದಾರೆ ಲೇಖಕರು, ನಿಜವೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಕುಂಠಿತವಾಗಲು ಕಾರಣಗಳನ್ನು ಕಂಡುಕೊಳ್ಳುವ ಅಗತ್ಯ ಬಹಳ ಹಿಂದೆಯೇ ಬಂದೊದಗಿತ್ತು. ಸ್ವಾತಂತ್ರ್ಯಾನಂತರದ ತರುಣದಲ್ಲೇ ಸ್ವತಂತ್ರ ಭಾರತದಲ್ಲಿ ಶಿಕ್ಷಣದ ವಿನ್ಯಾಸವು ಪ್ರಾಥಮಿಕ ಹಂತದಿಂದ ಮೊದಲ್ಗೊಂಡು, ಹೇಗೆ ರೂಪುಗೊಳ್ಳಬೇಕು ಎನ್ನುವುದನ್ನು ತಜ್ಞರು ತಮ್ಮ ವರದಿಗಳಲ್ಲಿ ನಿರೂಪಿಸಿ ಸರ್ಕಾರದ ಮುಂದೆ ಇರಿಸಿದ್ದರು. ಆಗ ಎಚ್ಚೆತ್ತುಕೊಂಡು ಶಿಕ್ಷಣ ಕ್ಷೇತ್ರದ ದುರಸ್ತಿಗೆ ಮುಂದಾಗಿದ್ದರೆ ಸರ್ಕಾರಿ ಶಾಲೆಗಳು ಬಹಳಷ್ಟು ಸುಸ್ಥಿತಿಯಲ್ಲಿ ಇರುವ ಚಿತ್ರಣ ಇಂದು ನಮ್ಮ ಕಣ್ಣಮುಂದೆ ಇರುತ್ತಿತ್ತು.

ಬೃಹತ್ ಗಾತ್ರದ ವರದಿಗಳೇನೋ ಸಿದ್ಧವಾದವು. ಆದರೆ ಅನುಷ್ಠಾನ? ಆರೇಳು ದಶಕಗಳ ಆಡಳಿತದಲ್ಲಿ ಶಿಕ್ಷಣಕ್ಕಾಗಿ ಸರ್ಕಾರಗಳು ಮಾಡಿದ ವೆಚ್ಚದ ಪ್ರಮಾಣವನ್ನೂ ಶಿಕ್ಷಣದ ಸ್ಥಿತಿಗತಿಯನ್ನೂ ಗಮನಿಸಿದಾಗ, ಸರ್ಕಾರಿ ಶಾಲೆಗಳ ಇಂದಿನ ದುಃಸ್ಥಿತಿಗೆ ಯಾರು ಕಾರಣ, ಏನು ಕಾರಣ ಎಂಬುದು ಸ್ಪಷ್ಟವಾಗುವುದೇನೊ. ಈ ಕಾಲಮಾನದಲ್ಲಿ ಖಾಸಗಿ ಶಾಲೆಗಳು ಪ್ರಬಲವಾದವು, ಅಲ್ಲಿ ಸಿಕ್ಕುವ ಶಿಕ್ಷಣ, ಶಾಲಾ ವಾತಾವರಣ, ಶಿಸ್ತು (?) ಮೊದಲಾದವನ್ನು ಸರ್ಕಾರಿ ಶಾಲೆಗಳಲ್ಲಿ ಕಾಣಲು ಸಾಧ್ಯವಿಲ್ಲ ಎನ್ನುವ ಸನ್ನಿವೇಶ ನಿರ್ಮಾಣವಾಯಿತು. ಎಲ್ಲಕ್ಕೂ ಮಿಗಿಲಾಗಿ ಖಾಸಗಿ ಶಾಲೆಗಳು ಎಂದರೆ ಇಂಗ್ಲಿಷ್ ಕಲಿಸುವ ಶಾಲೆಗಳು ಎಂದೇ ಪ್ರಸಿದ್ಧವಾದುದು ಬೇರೆ! ಸರ್ಕಾರಿ ಶಾಲೆಗಳ ಬಗ್ಗೆ ಪೋಷಕರಲ್ಲಿ ತಾತ್ಸಾರ ಭಾವ ಬೆಳೆದು, ಅವು ಹಿಂದೆ ಬಿದ್ದವು. ಸರ್ಕಾರಿ ಶಾಲೆಗಳ ಸ್ಥಿತಿ ಹೇಗಾಯಿತೆಂದರೆ, ಪಠ್ಯ ವಿಷಯಗಳಲ್ಲೂ ಜಾತಿ ಮತ ಪಂಥಗಳು ನುಸುಳಿದವು. ಶಿಕ್ಷಣತಜ್ಞರು (ಅಲ್ಲೂ ಎಡಪಂಥೀಯರು, ಬಲಪಂಥೀಯರು ಎಂಬ ವಿಂಗಡಣೆ) ಮಾಡುವ ಶಿಫಾರಸುಗಳು ಅಧಿಕಾರದಲ್ಲಿದ್ದ ಅಂದಂದಿನ ರಾಜಕೀಯ ಪಕ್ಷಗಳಿಗೆ ಅನುಗುಣವಾಗಿ ರೂಪುಗೊಂಡಿವೆ ಎಂಬ ಆರೋಪ ಕೇಳಿಬಂತು. ದುರಸ್ತಿ ಮಾಡಲಾಗದ ಸ್ಥಿತಿಗೆ ಸರ್ಕಾರಿ ಶಾಲೆಗಳು ಬಂದು ನಿಂತಂತಿವೆ. ಎಂದು ಸರಿಹೋಗುತ್ತವೋ ಕಾದು ನೋಡಬೇಕು.

ಸಾಮಗ ದತ್ತಾತ್ರಿ, ಬೆಂಗಳೂರು

ಅಂಚೆ ವ್ಯವಸ್ಥೆ– ಅವ್ಯವಸ್ಥೆ

ಏರಿಕೆಯಾದ ಅಂಚೆ ದರದ ಬಗ್ಗೆ ಈ.ಬಸವರಾಜು ಅವರು ವಿರೋಧ ವ್ಯಕ್ತಪಡಿಸಿ, ಯಥಾಸ್ಥಿತಿ ಕಾಪಾಡಿಕೊಳ್ಳಲು ಆಗ್ರಹಿಸಿದ (ವಾ.ವಾ., ಏ. 14) ಬೆನ್ನಲ್ಲೇ, ಸಾಮಾನ್ಯ ಅಂಚೆಯಲ್ಲಿ ಹಾಕುವ ಪತ್ರಗಳು, ಪಾರ್ಸಲ್‌ಗಳು ವಿಳಾಸದಾರರಿಗೆ ಮುಟ್ಟುವ ಬಗ್ಗೆಯೇ ಸಂದೇಹ ಮೊದಲಾಗುತ್ತದೆ. ಈಚೆಗೆ ಮೊಬೈಲ್ ಫೋನ್ ಮೂಲಕ ಕರೆ ಮಾಡಿದ ವ್ಯಕ್ತಿಯೊಬ್ಬರು, ನಮ್ಮ ಮನೆಯ ವ್ಯಾಪ್ತಿಗೆ ಬರುವ ಬೆಂಗಳೂರಿನ ಸರ್ಜಾಪುರದ ಅಂಚೆ ಕಚೇರಿಯಲ್ಲಿ ನನ್ನ ಹೆಸರಿಗೊಂದು ಪುಸ್ತಕ ಬಂದಿದೆಯೆಂತಲೂ ಎರಡು ದಿನದೊಳಗೆ ಕಚೇರಿಗೆ ಬಂದು ಪಡೆಯಬೇಕೆಂತಲೂ ತಿಳಿಸಿದರು. ಸಿಬ್ಬಂದಿ ಕೊರತೆಯಿಂದ ತಲುಪಿಸಲಾಗುತ್ತಿಲ್ಲ ಎಂದು ಹೇಳಿದರು. ಅದರಂತೆ, ಮರುದಿನ ಕಚೇರಿಗೆ ಭೇಟಿ ಕೊಟ್ಟೆ. ಸಿಬ್ಬಂದಿ ನೀಡಿದ ಮಾಹಿತಿಯಂತೆ, ಅಲ್ಲಿ ಗೋಡೆ ಮೇಲೆ ನಮೂದಿಸಿದ್ದ ಮೊಬೈಲ್ ನಂಬರ್‌ಗೆ ಕರೆ ಮಾಡಿದೆ. ಆಗ ಆ ಕಡೆಯಿದ್ದ ವ್ಯಕ್ತಿ ‘ಈವತ್ತು ಇಲ್ಲ, ನಾಳೆ ಬನ್ನಿ’ ಅಂದರು. ಮರುದಿನ ಕಚೇರಿಗೆ ತೆರಳಿದಾಗಲೂ ಅವರು ಇರಲಿಲ್ಲ. ಪೋಸ್ಟ್ ಮಾಸ್ಟರ್ ಗೋಡೆ ಕಡೆ ಕೈತೋರಿಸಿ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು. ಅದಾಗಿ ಕೆಲ ದಿನಗಳೇ ಕಳೆದಿವೆ. ಆದರೆ ಈಗಲೂ ಆ ಪುಸ್ತಕ ನನಗೆ ಸಿಕ್ಕಿಲ್ಲ. ಯಾರು ಕಳಿಸಿದ್ದರು ಎಂಬುದು ಗೊತ್ತಿಲ್ಲ. ಹೀಗಿದೆ ಸಾಮಾನ್ಯ ಅಂಚೆ ವ್ಯವಸ್ಥೆ!

ಶಾಂತಕುಮಾರ್, ಸರ್ಜಾಪುರ

ಕನಿಷ್ಠ ವಯೋಮಿತಿ: ಸಡಿಲಿಕೆ ಸೂತ್ರ ಮುಂದುವರಿಯಲಿ

ಒಂದನೇ ತರಗತಿಗೆ ದಾಖಲಿಸುವ ಮಗುವಿನ ಕನಿಷ್ಠ ವಯೋಮಿತಿಯನ್ನು ಐದು ವರ್ಷ ಐದು ತಿಂಗಳಿಗೆ ಸಡಿಲಿಕೆ ಮಾಡಿರುವುದರಿಂದ ಪೋಷಕರು ನಿಟ್ಟುಸಿರು ಬಿಡುವಂತಾಗಿದೆ. ಆದರೆ ಇದು ಈ ವರ್ಷಕ್ಕೆ ಮಾತ್ರ ಅನ್ವಯವಾಗುತ್ತದೆ ಎಂದು ಶಿಕ್ಷಣ ಸಚಿವರು ತಿಳಿಸಿದ್ದಾರೆ. ಮುಂದಿನ ವರ್ಷ ಕನಿಷ್ಠ ವಯೋಮಿತಿ ಆರು ವರ್ಷ ಆಗಿರಲೇಬೇಕು ಎಂಬ ನೀತಿಯನ್ನು ಜಾರಿಗೆ ತರುವುದಾಗಿ ಹೇಳಿದ್ದಾರೆ. ಆದರೆ ಈ ಕ್ರಮ ಸರಿಯಲ್ಲ. ಐದು ವರ್ಷ ಐದು ತಿಂಗಳ ಕನಿಷ್ಠ ವಯೋಮಿತಿಯನ್ನೇ ಮುಂದುವರಿಸುವುದು ಒಳ್ಳೆಯದು. ಇಲ್ಲದಿದ್ದರೆ ಈಗಿನ ದಿನಗಳಲ್ಲಿ ಮಕ್ಕಳನ್ನು ಬೇಗ ಪ್ರಿ ನರ್ಸರಿ, ನರ್ಸರಿಗೆ ಸೇರಿಸುವ ಪೋಷಕರು, ಒಂದನೇ ತರಗತಿಗೆ ಮಕ್ಕಳನ್ನು ಸೇರಿಸುವಾಗ ಸಮಸ್ಯೆ ಎದುರಿಸಬೇಕಾಗುತ್ತದೆ.

ಎಂ.ಎಸ್.ಉಷಾ ಪ್ರಕಾಶ್, ಮೈಸೂರು

ಸಂವಿಧಾನದತ್ತ ಸಂಸ್ಥೆ ದುರ್ಬಲಗೊಳಿಸುವುದು ಅಸಾಧ್ಯ

ಭಾರತದ ಸಂವಿಧಾನ ರಚನೆಯಲ್ಲಿ ಬಿ.ಆರ್.ಅಂಬೇಡ್ಕರ್ ಅವರು ವಹಿಸಿದ ಮಹತ್ವದ ಪಾತ್ರ ಕುರಿತ ಎ. ಸೂರ್ಯಪ್ರಕಾಶ್ ಅವರ ಲೇಖನಕ್ಕೆ (ಪ್ರ.ವಾ., ಏ. 14) ದೊಡ್ಡಿಶೇಖರ ಅವರ ಪ್ರತಿಕ್ರಿಯೆ (ವಾ.ವಾ., ಏ. 15) ಅಚ್ಚರಿ ಉಂಟುಮಾಡಿತು. ಅಂಬೇಡ್ಕರ್ ಅವರು ಕಂಡ ಭಾರತದ ಕಲ್ಪನೆ ಏನಾಗಿತ್ತು, ಅವರ ವಿಚಾರವು ಭಾರತದ ಸ್ಥಿತಿಗತಿಗೆ ಹೇಗೆ ಪೂರಕವಾಗಿತ್ತು, ಸಂವಿಧಾನವನ್ನು ರೂಪಿಸುವ ಸಂದರ್ಭದಲ್ಲಿ ಅವರು ಅನುಸರಿಸಿದ ಉದಾತ್ತ ಚಿಂತನೆಗಳಾವುವು ಎನ್ನುವುದನ್ನು ಸೂರ್ಯಪ್ರಕಾಶ್ ವಿವರವಾಗಿ ತಿಳಿಸಿದ್ದಾರೆ. ಆದರೆ ದೊಡ್ಡಿಶೇಖರ ಅವರು ಇದರಲ್ಲೂ ಹುಳುಕು ಹುಡುಕಿದ್ದಾರೆ.

ಸಂವಿಧಾನದತ್ತವಾದ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ನಿಲುವುಗಳನ್ನು ಲೇಖಕರು ದೂಷಿಸಲಿಲ್ಲ ಎನ್ನುವುದು ಅವರ ಬೇಸರ. ಅವರೇ ಹೇಳಿದಂತೆ, ಸಂವಿಧಾನದತ್ತ ಸಂಸ್ಥೆಗಳನ್ನು ದುರ್ಬಲಗೊಳಿಸುವುದು ಎಂದರೆ ಏನರ್ಥ? ಹಾಗಾದರೆ ಯಾವ ಸಂಸ್ಥೆಯನ್ನು ಹೇಗೆ ಬೇಕಾದರೂ ಬಳಸಿಕೊಳ್ಳಲು ಅವಕಾಶ ನೀಡುವಷ್ಟು ಸಂವಿಧಾನ ದುರ್ಬಲವಾಗಿದೆಯೇ? ಸ್ವೇಚ್ಛಾಚಾರಕ್ಕೆ ಸಂವಿಧಾನದಲ್ಲಿ ಅವಕಾಶವಿದೆಯೇ? ಹಿಂದಿನ ಎರಡು ವಾರಗಳಲ್ಲಿನ ಬೆಳವಣಿಗೆಗಳನ್ನು ಗಮನಿಸಿದರೆ, ನ್ಯಾಯಾಲಯವು ರಾಜ್ಯಪಾಲರನ್ನು, ಕೇಂದ್ರ ಸರ್ಕಾರವನ್ನು ವಿವಿಧ ಪ್ರಕರಣಗಳಲ್ಲಿ ತರಾಟೆಗೆ ತೆಗೆದುಕೊಂಡಿದೆ. ಪರಿಶೀಲನೆಗಾಗಿ ರಾಜ್ಯಪಾಲರಿಂದ ಬಂದ ಮಸೂದೆಗಳ ಬಗ್ಗೆ ತೀರ್ಮಾನ ಕೈಗೊಳ್ಳಲು ಸ್ವತಃ ರಾಷ್ಟ್ರಪತಿಯವರಿಗೇ ಸುಪ್ರೀಂ ಕೋರ್ಟ್ ಕಾಲಮಿತಿ ನಿಗದಿಪಡಿಸಿದೆ. ಹೀಗಾಗಿ, ಸಂವಿಧಾನದತ್ತ ಸಂಸ್ಥೆಗಳನ್ನು ದುರ್ಬಲಗೊಳಿಸುವುದು ಎನ್ನುವುದು ಅರ್ಥಹೀನ ವಾದ.

ಸೂರ್ಯನಾರಾಯಣ ಭಟ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನ್ಯಾಯದಾನ ರಾಜ್ಯ ನಂ.1; ಆದರೆ...

ಪೊಲೀಸ್ ಮತ್ತು ನ್ಯಾಯಾಂಗ ಇಲಾಖೆಗಳಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿಯನ್ನು ಸಂಪೂರ್ಣವಾಗಿ ಜಾರಿ ಮಾಡಿದ ದೇಶದ ಏಕೈಕ ರಾಜ್ಯ ಕರ್ನಾಟಕ

‘ಭಾರತ ನ್ಯಾಯ ವರದಿ’ಯ ನಾಲ್ಕನೇ ಆವೃತ್ತಿ ಬಿಡುಗಡೆಯಾಗಿದೆ. ನ್ಯಾಯ ನೀಡಿಕೆಗೆ ಸಂಬಂಧಿಸಿದ ನಾಲ್ಕು ಪ್ರಮುಖ ವಿಭಾಗಗಳ ಒಟ್ಟಾರೆ ಕಾರ್ಯನಿರ್ವಹಣೆಯಲ್ಲಿ ಕರ್ನಾಟಕ ಮೊದಲ ರ‍್ಯಾಂಕ್ ಗಳಿಸಿದೆ. ಆಂಧ್ರ ಪ್ರದೇಶ, ತೆಲಂಗಾಣ, ಕೇರಳ ರಾಜ್ಯಗಳು ನಂತರದ ಸ್ಥಾನ ಪಡೆದಿವೆ. ಕರ್ನಾಟಕವು ಉತ್ತಮ ಅಂಕ ಗಳಿಸಿದ್ದರೂ ಹಲವು ಅಂಶಗಳಲ್ಲಿ ಇನ್ನೂ ಬಹಳ ಕೆಲಸ ಆಗಬೇಕಿದೆ ಎನ್ನುವುದನ್ನು ವರದಿ ಉಲ್ಲೇಖಿಸಿದೆ

ಪ್ರಜಾವಾಣಿ ವಾರ್ತೆ

ಭಾರತ ನ್ಯಾಯ ವರದಿ–2025 (ಇಂಡಿಯಾ ಜಸ್ಟೀಸ್ ರಿಪೋರ್ಟ್), ನ್ಯಾಯ ನೀಡುವಿಕೆಯಲ್ಲಿ ರಾಜ್ಯಗಳ ಸಾಮರ್ಥ್ಯವನ್ನು ವಿಶ್ಲೇಷಿಸುವ ಪ್ರಯತ್ನವಾಗಿದೆ. ಪೊಲೀಸ್ ವ್ಯವಸ್ಥೆ, ನ್ಯಾಯಾಂಗ, ಜೈಲು ನಿರ್ವಹಣೆ ಮತ್ತು ಕಾನೂನು ನೆರವು– ಈ ನಾಲ್ಕು ವಿಭಾಗಗಳ ಕಾರ್ಯನಿರ್ವಹಣೆ ಕುರಿತ ದತ್ತಾಂಶಗಳನ್ನು ಹೋಲಿಸಿ ವರದಿ ಸಿದ್ಧಪಡಿಸಲಾಗಿದೆ. ವರದಿಯಲ್ಲಿ ರಾಜ್ಯಗಳ ಮಾನವ ಹಕ್ಕು ಆಯೋಗಗಳ ಕಾರ್ಯನಿರ್ವಹಣೆಯನ್ನೂ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ರಾಜ್ಯಗಳ ನ್ಯಾಯ ವ್ಯವಸ್ಥೆಯ ಶಕ್ತಿ ಮತ್ತು ದೌರ್ಬಲ್ಯ, ಸಂಪನ್ಮೂಲಗಳ ಸ್ಥಿತಿಗತಿಯನ್ನು ವರದಿ ಒಳಗೊಂಡಿದೆ.

ನ್ಯಾಯ ನೀಡಿಕೆಗೆ ಸಂಬಂಧಿಸಿದ ನಾಲ್ಕು ವಿಭಾಗಗಳ ಕಾರ್ಯನಿರ್ವಹಣೆಯಲ್ಲಿ ದೇಶದ ದೊಡ್ಡ ಮತ್ತು ಮಧ್ಯಮ ಗಾತ್ರದ 18 ರಾಜ್ಯಗಳ ಪಟ್ಟಿಯಲ್ಲಿ ದಕ್ಷಿಣದ ರಾಜ್ಯಗಳು ಮುಂಚೂಣಿಯಲ್ಲಿದ್ದು, ಕರ್ನಾಟಕವು ಮೊದಲ ಸ್ಥಾನ ಪಡೆದಿದೆ. ಆದರೆ, ಪೊಲೀಸ್ ಇಲಾಖೆಯಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಿಸುವುದು, ನ್ಯಾಯಾಂಗ ವ್ಯವಸ್ಥೆಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು, ಗ್ರಾಮೀಣ ಭಾಗಗಳ ಜನರಿಗೆ ಕಾನೂನು ನೆರವು ಸೌಲಭ್ಯ ಕಲ್ಪಿಸುವುದು ಸೇರಿದಂತೆ ಹಲವು ಅಂಶಗಳಲ್ಲಿ ರಾಜ್ಯ ಸುಧಾರಣೆಯಾಗಬೇಕಾದ ಅಗತ್ಯವಿದೆ ಎಂದು ವರದಿ ಹೇಳಿದೆ.

ಪೊಲೀಸ್: ಮಹಿಳಾ ಪ್ರಾತಿನಿಧ್ಯ ಅತ್ಯಲ್ಪ

ಪೊಲೀಸ್ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ರಾಜ್ಯವು ಮೂರನೇ ಸ್ಥಾನ ಪಡೆದಿದೆ. ಸಿಬ್ಬಂದಿಗಾಗಿ ಸರ್ಕಾರ ಮಾಡುವ ತಲಾವಾರು ವೆಚ್ಚದಲ್ಲಿ ಗಮನಾರ್ಹ ಹೆಚ್ಚಳವಾಗಿದೆ; 2020–21ರಲ್ಲಿ ₹943 ಇದ್ದ ತಲಾವಾರು ವೆಚ್ಚ 2022–23ರ ಹೊತ್ತಿಗೆ ₹1,261ಕ್ಕೆ ಹೆಚ್ಚಾಗಿತ್ತು. 2022 ಮತ್ತು 2023ರ ನಡುವೆ ಕಾನ್‌ಸ್ಟೆಬಲ್‌ಗಳ ಖಾಲಿ ಹುದ್ದೆಗಳ ಪ್ರಮಾಣವನ್ನು ಶೇ 12ರಿಂದ ಶೇ 6ಕ್ಕೆ ಮತ್ತು ಅಧಿಕಾರಿಗಳ ಖಾಲಿ ಹುದ್ದೆಗಳ ಪ್ರಮಾಣವನ್ನು ಶೇ 11ರಿಂದ ಶೇ 1ಕ್ಕೆ ಇಳಿಸಲಾಗಿದೆ. ಎಲ್ಲ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಅಧಿಕಾರಿಗಳ ಖಾಲಿ ಹುದ್ದೆಗಳ ಸಂಖ್ಯೆ ಅತ್ಯಂತ ಕಡಿಮೆ (ಶೇ 1.2) ಇದೆ. ಜತೆಗೆ, ಅಧಿಕಾರಿಗಳು ಮತ್ತು ಕಾನ್‌ಸ್ಟೆಬಲ್ ಹುದ್ದೆಗಳನ್ನು ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿ ಅನ್ವಯ ಭರ್ತಿ ಮಾಡಿದ ಏಕೈಕ ರಾಜ್ಯವಾಗಿದೆ.

ರಾಜ್ಯದ ಶೇ 99ರಷ್ಟು ಪೊಲೀಸ್ ಠಾಣೆಗಳಲ್ಲಿ ಮಹಿಳಾ ಸಹಾಯ ಕೇಂದ್ರಗಳು ಇವೆ. ಆಧುನೀಕರಣದ ನಿಧಿಯನ್ನು ಅತಿ ಹೆಚ್ಚು ಬಳಸಿಕೊಂಡ (ಶೇ 85) ರಾಜ್ಯ ಕರ್ನಾಟಕವಾಗಿದೆ ಎಂದು ವರದಿ ತಿಳಿಸಿದೆ. ಇಷ್ಟಾದರೂ ಪೊಲೀಸ್ ಇಲಾಖೆಯಲ್ಲಿ ಪುರುಷರೇ ಹೆಚ್ಚಾಗಿದ್ದು, ಕೆಳಹಂತದಲ್ಲಿ ಶೇ 9ರಷ್ಟು ಮತ್ತು ಅಧಿಕಾರಿಗಳ ಮಟ್ಟದಲ್ಲಿ ಶೇ 6ರಷ್ಟು ಮಹಿಳೆಯರಿದ್ದಾರೆ.

ಕಾರಾಗೃಹ: ವಿಚಾರಣಾಧೀನ ಕೈದಿಗಳೇ ಹೆಚ್ಚು

ಬಂದೀಖಾನೆಗಳ ಒಟ್ಟಾರೆ ಕಾರ್ಯನಿರ್ವಹಣೆಯಲ್ಲಿ ರಾಜ್ಯವು ಎರಡನೇ ಸ್ಥಾನ ಪಡೆದಿದೆ. ಕಾರಾಗೃಹ ಸಿಬ್ಬಂದಿಯಲ್ಲಿ ಶೇ 33ರಷ್ಟು ಮಹಿಳೆಯರಿದ್ದು, ಇದು ರಾಷ್ಟ್ರೀಯ ಮಟ್ಟದಲ್ಲಿ ಅತಿ ಹೆಚ್ಚು ಎಂದು ವರದಿ ತಿಳಿಸಿದೆ. ರಾಜ್ಯದ ಜೈಲುಗಳಲ್ಲಿರುವ ವಿಡಿಯೊ ಕಾನ್ಫರೆನ್ಸ್ ಸೌಲಭ್ಯದಲ್ಲಿಯೂ ಸುಧಾರಣೆಯಾಗಿದೆ; 2021ರಲ್ಲಿ ಶೇ 68ರಷ್ಟು ಜೈಲುಗಳಲ್ಲಿ ಇದ್ದ ಈ ಸೌಲಭ್ಯ 2022ರ ಹೊತ್ತಿಗೆ ಶೇ 93ರಷ್ಟು ಜೈಲುಗಳಿಗೆ ವಿಸ್ತರಣೆಯಾಗಿದೆ.

ಆದಾಗ್ಯೂ, ವೈದ್ಯಾಧಿಕಾರಿಗಳ ಹುದ್ದೆಗಳು (ಶೇ 74) ಮತ್ತು ವೈದ್ಯಕೀಯ ಸಿಬ್ಬಂದಿ ಹುದ್ದೆಗಳು (ಶೇ 64) ಹೆಚ್ಚಿನ ಪ್ರಮಾಣದಲ್ಲಿ ಖಾಲಿ ಇವೆ. ಜತೆಗೆ, ಜೈಲುಗಳಲ್ಲಿರುವವರ ಪೈಕಿ ವಿಚಾರಣಾಧೀನ ಕೈದಿಗಳ ಸಂಖ್ಯೆ (ಶೇ 80) ಹೆಚ್ಚಾಗಿದ್ದು, 2015ರಿಂದ ಇದೇ ದೊಡ್ಡ ಪ್ರಮಾಣವಾಗಿದೆ ಎಂದು ವರದಿ ಉಲ್ಲೇಖಿಸಿದೆ.

ಯಾವ ರಾಜ್ಯಕ್ಕೆ ಎಷ್ಟನೇ ರ‍್ಯಾಂಕ್?

18 ದೊಡ್ಡ ರಾಜ್ಯಗಳು

ರಾಜ್ಯ	ರ‍್ಯಾಂಕ್	2022ರ ರ‍್ಯಾಂಕ್	ಅಂಕಗಳು (10ರಲ್ಲಿ)
ಕರ್ನಾಟಕ	1	1	6.78
ಆಂಧ್ರ ಪ್ರದೇಶ	2	5	6.32
ತೆಲಂಗಾಣ	3	3	6.15
ಕೇರಳ	4	6	6.09
ತಮಿಳುನಾಡು	5	2	5.62
ಛತ್ತೀಸಗಢ	6	9	5.54
ಮಧ್ಯಪ್ರದೇಶ	7	8	5.42
ಒಡಿಶಾ	8	11	5.41
ಪಂಜಾಬ್	9	10	5.33
ಮಹಾರಾಷ್ಟ್ರ	10	12	5.12
ಗುಜರಾತ್	11	4	5.07
ಹರಿಯಾಣ	12	13	5.02
ಬಿಹಾರ	13	16	4.88
ರಾಜಸ್ಥಾನ	14	15	4.83
ಜಾರ್ಖಂಡ್	15	7	4.78
ಉತ್ತರಾಖಂಡ	16	14	4.41
ಉತ್ತರ ಪ್ರದೇಶ	17	18	3.92
ಪಶ್ಚಿಮ ಬಂಗಾಳ	18	17	3.63

* 2019ರಲ್ಲಿ ಕರ್ನಾಟಕ 6ನೇ ಮತ್ತು 2020ರಲ್ಲಿ 14ನೇ ರ‍್ಯಾಂಕ್ ಗಳಿಸಿತ್ತು

7 ಸಣ್ಣ ರಾಜ್ಯಗಳು

ರಾಜ್ಯ	ರ‍್ಯಾಂಕ್	2022ರ ರ‍್ಯಾಂಕ್	ಅಂಕಗಳು (10ರಲ್ಲಿ)
ಸಿಕ್ಕಿಂ	1	1	5.20
ಹಿಮಾಚಲ ಪ್ರದೇಶ	2	6	4.36
ಅರುಣಾಚಲ ಪ್ರದೇಶ	3	2	4.21
ತ್ರಿಪುರಾ	4	3	4.11
ಮೇಘಾಲಯ	5	4	4.02
ಮಿಜೋರಾಂ	6	5	3.81
ಗೋವಾ	7	7	3.51

ರಾಜ್ಯದ ವಿಭಾಗವಾರು ರ‍್ಯಾಂಕಿಂಗ್

ವಿಭಾಗ	ರ‍್ಯಾಂಕ್	2022ರ ರ‍್ಯಾಂಕ್	ಅಂಕಗಳು
ಪೊಲೀಸ್ ಇಲಾಖೆ	3	2	6.19
ಕಾರಾಗೃಹ ವ್ಯವಸ್ಥೆ	2	2	6.78
ನ್ಯಾಯಾಂಗ ಸೇವೆ	4	2	6.7
ಕಾನೂನು ನೆರವು	1	2	7.52

ನ್ಯಾಯಾಂಗ: ಖಾಲಿ ಹುದ್ದೆಗಳಲ್ಲಿ ಇಳಿಕೆ

ಇದರಲ್ಲಿ ರಾಜ್ಯವು ನಾಲ್ಕನೇ ಶ್ರೇಯಾಂಕ ಹೊಂದಿದೆ. 2022ರಲ್ಲಿ ಶೇ 22ರಷ್ಟು ಜಿಲ್ಲಾ ಮಟ್ಟದ ನ್ಯಾಯಾಧೀಶರ ಹುದ್ದೆಗಳು ಖಾಲಿ ಇದ್ದವು. ಅವುಗಳನ್ನು 2025ರ ಹೊತ್ತಿಗೆ ಶೇ 16ಕ್ಕೆ ಇಳಿಸಲಾಗಿದೆ. ಜಿಲ್ಲಾ ನ್ಯಾಯಾಲಯಗಳ ನ್ಯಾಯಾಧೀಶರಲ್ಲಿ ಮಹಿಳೆಯರ ಪ್ರಮಾಣ ಶೇ 37ರಷ್ಟಿದೆ. ಹೈಕೋರ್ಟ್‌ನಲ್ಲಿ ಖಾಲಿ ಹುದ್ದೆಗಳ ಸಂಖ್ಯೆಯನ್ನು ಶೇ 26ರಿಂದ ಶೇ 17ಕ್ಕೆ ಇಳಿಸಲಾಗಿದೆ. ನ್ಯಾಯಾಲಯಗಳ ನೇಮಕಾತಿಗಳಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿಯ ಹುದ್ದೆಗಳನ್ನು ತುಂಬಿದ ಏಕೈಕ ರಾಜ್ಯ ಕರ್ನಾಟಕ ಎಂದು ವರದಿ ಶ್ಲಾಘಿಸಿದೆ.

ಕಾನೂನು ನೆರವಿನಲ್ಲಿ ಮೊದಲ ಸ್ಥಾನ

ಕಾನೂನು ನೆರವಿನಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆದಿದೆ. ರಾಷ್ಟ್ರ ಮಟ್ಟದಲ್ಲಿ ಅರೆನ್ಯಾಯಿಕ ಸ್ವಯಂಸೇವಕರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ಆದರೆ ರಾಜ್ಯದಲ್ಲಿ ಇವರ ಸಂಖ್ಯೆ ಹೆಚ್ಚಾಗುತ್ತಿದ್ದು, ಕರ್ನಾಟಕವು ದೇಶದಲ್ಲಿಯೇ ಹೆಚ್ಚು ಅರೆನ್ಯಾಯಿಕ ಸ್ವಯಂಸೇವಕರನ್ನು ಹೊಂದಿದೆ. 2019ರ ಜನವರಿಯಲ್ಲಿ ಇವರ ಪ್ರಮಾಣವು (ಒಂದು ಲಕ್ಷ ಜನಸಂಖ್ಯೆಗೆ) 4.9 ಇದ್ದರೆ, 2024ರ ಸೆಪ್ಟೆಂಬರ್‌ನಲ್ಲಿ 7.59 ಆಗಿದೆ. ಹಾಗೆಯೇ ರಾಜ್ಯವು ದೇಶದಲ್ಲಿ ಅತಿ ಹೆಚ್ಚು ಪ್ಯಾನೆಲ್ ವಕೀಲರನ್ನು (ಕಾನೂನು ನೆರವಿಗೆ ನಿಯೋಜಿತರಾದವರು) (ಶೇ 44ರಷ್ಟು) ಹೊಂದಿದೆ. ಆದರೆ, ಗ್ರಾಮೀಣ ಭಾಗದಲ್ಲಿ ಜನರಿಗೆ ಕಾನೂನಿನ ನೆರವು ಸಮರ್ಪಕವಾಗಿ ಸಿಗುತ್ತಿಲ್ಲ ಎಂದು ವರದಿ ಹೇಳಿದೆ. 2021–22ರಲ್ಲಿ ರಾಜ್ಯದಲ್ಲಿ ಕಾನೂನು ಸೇವಾ ಘಟಕಗಳ ಸಂಖ್ಯೆಯು 174 ಇತ್ತು. 2023–24ರ ವೇಳೆಗೆ ಅದು 32ಕ್ಕೆ ಕುಸಿತ ಕಂಡಿದೆ.

ನ್ಯಾಯ ವರದಿ: ದೇಶದ ನೋಟ

- ಶೇ 83ರಷ್ಟು ಪೊಲೀಸ್ ಠಾಣೆಗಳಲ್ಲಿ ಕನಿಷ್ಠ ಒಂದು ಸಿ.ಸಿ.ಟಿ.ವಿ ಕ್ಯಾಮೆರಾ ಸೌಲಭ್ಯವಿದೆ
- ಶೇ 78ರಷ್ಟು ಠಾಣೆಗಳು ಮಹಿಳಾ ಸಹಾಯಕೇಂದ್ರಗಳನ್ನು ಹೊಂದಿವೆ
- ಜಿಲ್ಲಾ ಹಂತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಶೇ 38ರಷ್ಟು ಮಹಿಳಾ ನ್ಯಾಯಾಧೀಶರಿದ್ದಾರೆ
- ಶೇ 86 ಕಾರಾಗೃಹಗಳಲ್ಲಿ ಕನಿಷ್ಠ ಒಂದು ವಿಡಿಯೊ ಕಾನ್ಫರೆನ್ಸಿಂಗ್ ಸೌಲಭ್ಯ ಇದೆ
- ಪೊಲೀಸ್ ಇಲಾಖೆಯಲ್ಲಿ ಮಹಿಳಾ ಮೀಸಲಾತಿಯನ್ನು ಯಾವುದೇ ರಾಜ್ಯ ಮತ್ತು ಯಾವುದೇ ಕೇಂದ್ರಾಡಳಿತ ಪ್ರದೇಶ ಪಾಲಿಸಿಲ್ಲ
- ಜಿಲ್ಲಾ ನ್ಯಾಯಾಂಗ ವ್ಯವಸ್ಥೆಯಲ್ಲಿ ಪರಿಶಿಷ್ಟ ಪಂಗಡದವರ ಪಾಲು ಶೇ 12 ಮತ್ತು ಪರಿಶಿಷ್ಟ ಜಾತಿಯವರ ಪಾಲು ಶೇ 17ರಷ್ಟಿದೆ
- ಅರೆನ್ಯಾಯಿಕ ಸ್ವಯಂಸೇವಕರ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಐದು ವರ್ಷಗಳಲ್ಲಿ ಈ ಪ್ರಮಾಣ ಶೇ 38ರಷ್ಟು ಕುಸಿತ ಕಂಡಿದೆ
- ದೇಶದಾದ್ಯಂತ ಇರುವ ಕಾರಾಗೃಹಗಳಲ್ಲಿ ಕೇವಲ 25 ಮನೋವಿಜ್ಞಾನಿ/ಮನೋವೈದ್ಯರು ಇದ್ದಾರೆ

ಆಧಾರ: ಇಂಡಿಯಾ ಜಸ್ಟೀಸ್ ರಿಪೋರ್ಟ್– 2025

ರಾಷ್ಟ್ರೀಯ

ಶರಿಯಾ ಬದಲು ಉತ್ತರಾಧಿಕಾರ ಕಾಯ್ದೆ: ಪರಿಶೀಲನೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಪೂರ್ವಜರ ಆಸ್ತಿಗಳ ಕುರಿತ ವ್ಯಾಜ್ಯಗಳಿಗೆ ಸಂಬಂಧಿಸಿ ಮುಸ್ಲಿಮರಿಗೆ ಶರಿಯಾ ಬದಲು, ಧಾರ್ಮಿಕ ನಂಬಿಕೆಗಳನ್ನು ನಿರಾಕರಿಸದೇ ಅವರಿಗೂ ಜಾತ್ಯತೀತವಾದ ಉತ್ತರಾಧಿಕಾರ ಕಾಯ್ದೆ ಅನ್ವಯಿಸಬೇಕೆ ಎಂಬುದನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಗುರುವಾರ ಒಪ್ಪಿದೆ.

ಕೇರಳದ ತ್ರಿಶ್ಶೂರಿನ ನೌಶಾದ್ ಕೆ.ಕೆ ಎಂಬುವವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ ಕುಮಾರ್ ಅವರು ಇದ್ದ ಪೀಠ ಈ ಮಾತು ಹೇಳಿದೆ.

ಈ ಬಗ್ಗೆ ಪ್ರತಿಕ್ರಿಯಿಸುವಂತೆ ಕೇಂದ್ರ ಹಾಗೂ ಕೇರಳ ಸರ್ಕಾರಕ್ಕೆ ಪೀಠ ನೋಟಿಸ್ ಜಾರಿ ಮಾಡಿತು. ಇದೇ ವಿಚಾರಕ್ಕೆ ಸಂಬಂಧಿಸಿ ವಿಚಾರಣೆಗೆ ಬಾಕಿ ಇರುವ ಅರ್ಜಿಗಳೊಂದಿಗೆ ಮೇಲ್ಮನವಿ ಸೇರಿಸುವಂತೆಯೂ ಆದೇಶಿಸಿದೆ.

‘ನಾನು ಇಸ್ಲಾಂ ತ್ಯಜಿಸಿದ್ದೇನೆ. ಈ ಕಾರಣಕ್ಕೆ ನನಗೆ ಶರಿಯಾ ಬದಲು ಉತ್ತರಾಧಿಕಾರ ಕಾಯ್ದೆ ಅನ್ವಯಿಸಬೇಕು’ ಎಂದು ನೌಶಾದ್ ಕೋರಿದ್ದಾರೆ.

ಅಲಪ್ಪುಳ ನಿವಾಸಿ ಹಾಗೂ ‘ಎಕ್ಸ್ ಮುಸ್ಲಿಮ್ಸ್ ಆಫ್ ಕೇರಳ’ ಸಂಘಟನೆ ಪ್ರಧಾನ ಕಾರ್ಯದರ್ಶಿ ಸಫಿಯ ಪಿ.ಎಂ ಅವರು ಇಂಥದೇ ಬೇಡಿಕೆಯುಳ್ಳ ಅರ್ಜಿಯನ್ನು ಸಲ್ಲಿಸಿದ್ದಾರೆ. ‘ಕುರಾನ್ ಸುನ್ನತ್ ಸೊಸೈಟಿ’ ಕೂಡ ಇದೇ ಬೇಡಿಕೆ ಮುಂದಿಟ್ಟುಕೊಂಡು 2016ರಲ್ಲಿ ಮೇಲ್ಮನವಿ ಸಲ್ಲಿಸಿದೆ. ಈ ಮೂರು ಅರ್ಜಿಗಳ ವಿಚಾರಣೆಯನ್ನು ಪೀಠ ನಡೆಸಲಿದೆ.

ಮಹಾರಾಷ್ಟ್ರ: ಪ್ರಾಥಮಿಕ ಹಂತದಲ್ಲಿ ಮೂರನೇ ಭಾಷೆಯಾಗಿ ಹಿಂದಿ

ಮುಂಬೈ (ಪಿಟಿಐ): ಮಹಾರಾಷ್ಟ್ರ ಸರ್ಕಾರ ರಾಜ್ಯದಲ್ಲಿ 25–26ನೇ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸಿದೆ. ಮರಾಠಿ, ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ 1ರಿಂದ 5ನೇ ತರಗತಿಯವರೆಗೆ ಮೂರನೇ ಭಾಷೆಯಾಗಿ ಹಿಂದಿ ಕಲಿಕೆ ಕಡ್ಡಾಯವಾಗಿ ಇರಲಿದೆ.

ರಾಜ್ಯ ಸರ್ಕಾರದ ಈ ನಡೆಯನ್ನು ವಿರೋಧ ಪಕ್ಷ ಕಾಂಗ್ರೆಸ್ ಕಟುವಾಗಿ ಟೀಕಿಸಿದೆ. ಈ ನಿರ್ಧಾರವು ರಾಜ್ಯದಲ್ಲಿ ಹಿಂದಿ ಭಾಷೆಯನ್ನು ಹೇರುವ ಕ್ರಮವಾಗಿದೆ ಎಂದು ಆರೋಪಿಸಿದೆ. ರಾಜ್ಯದಲ್ಲಿ ಸದ್ಯ 1ರಿಂದ 4ನೇ ತರಗತಿವರೆಗೆ ಮರಾಠಿ ಮತ್ತು ಇಂಗ್ಲಿಷ್ ಭಾಷೆ ಕಡ್ಡಾಯ ವಿಷಯವಾಗಿದೆ.

‘ಮೂರನೇ ಭಾಷೆಯಾಗಿ 1–5ನೇ ತರಗತಿವರೆಗೆ ಹಿಂದಿ ಭಾಷೆ ಕಲಿಕೆಯು ಕಡ್ಡಾಯ. 25–26ನೇ ಸಾಲಿನಿಂದ 1ರಿಂದ ತರಗತಿಗೆ ಅನ್ವಯವಾಗುವಂತೆ ಎನ್‌ಇಪಿ ಅನ್ನು ಜಾರಿಗೊಳಿಸಲಾಗಿದೆ’ ಎಂದು ಗುರುವಾರ ಹೊರಡಿಸಲಾದ ಸರ್ಕಾರದ ಅದೇಶ ತಿಳಿಸಿದೆ.

2, 3, 4 ಮತ್ತು 6ನೇ ತರಗತಿಗಳಿಗೆ 26–27ನೇ ಸಾಲಿನಿಂದ; 5, 9 ಮತ್ತು 11ನೇ ತರಗತಿಗಳಿಗೆ 2027–28ನೇ ಸಾಲಿನಿಂದ, 8, 10 ಮತ್ತು 12ನೇ ತರಗತಿಗಳಿಗೆ 28–29ನೇ ಸಾಲಿನಿಂದ ಎನ್‌ಇಪಿ ಜಾರಿಗೊಳಿಸಲಾಗುವುದು ಎಂದು ಆದೇಶ ವಿವರಿಸಿದೆ.

ಬಿಜೆಪಿ ರಾಜ್ಯ ಅಧ್ಯಕ್ಷರ ಆಯ್ಕೆ ಶೀಘ್ರ

ನವದೆಹಲಿ (ಪಿಟಿಐ): ಪಕ್ಷದ ನೂತನ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗೆ ಸಜ್ಜಾಗಿರುವ ಬಿಜೆಪಿಯು ಅದರ ಭಾಗವಾಗಿ ಹಲವು ರಾಜ್ಯಗಳ ಘಟಕಗಳಿಗೆ ಹೊಸ ಅಧ್ಯಕ್ಷರನ್ನು ನೇಮಿಸಲು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿಯ ಸಂವಿಧಾನದಂತೆ ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳಲು 37 ಸಂಘಟನಾ ರಾಜ್ಯ ಘಟಕಗಳ ಪೈಕಿ 19 ಘಟಕಗಳಿಗೆ ಅಧ್ಯಕ್ಷರನ್ನು ನೇಮಿಸಿರಬೇಕು. ಈಗಾಗಲೇ 15 ರಾಜ್ಯಗಳಿಗೆ ನೇಮಕ ಆಗಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಕರ್ನಾಟಕ ಮತ್ತು ಗುಜರಾತ್‌ನಂತಹ ದೊಡ್ಡ ರಾಜ್ಯಗಳಿಗೆ ಅಧ್ಯಕ್ಷರ ಆಯ್ಕೆ ಬಾಕಿ ಇದೆ. ಆರ್‌ಎಸ್‌ಎಸ್ ಮತ್ತು ಪಕ್ಷದ ಸೈದ್ಧಾಂತಿಕ ಸದಸ್ಯರ ಜೊತೆ ಈಗಾಗಲೇ ಚರ್ಚೆ ನಡೆದಿದೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜನಾಥ್ ಸಿಂಗ್, ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿ ಹಿರಿಯ ನಾಯಕರು ನಾಲ್ಕೈದು ದಿನಗಳಿಂದ ಸಮಾಲೋಚನೆ ನಡೆಸಿದ್ದಾರೆ.

‘ರಾಜ್ಯಗಳ ಅಧ್ಯಕ್ಷರ ಆಯ್ಕೆ ಮುಗಿಯುತ್ತಿದ್ದಂತೆ ನಡ್ಡಾ ಅವರ ಸ್ಥಾನ ತುಂಬಲಾಗುವುದು. ಈ ವರ್ಷಾಂತ್ಯಕ್ಕೆ ಬಿಹಾರ ಚುನಾವಣೆ ಇದೆ. ಮುಂದಿನ ವರ್ಷ ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಕೇರಳಕ್ಕೆ ಚುನಾವಣೆ ಇದ್ದು, ಅದನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಆಗಲಿದೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

2020ರ ಫೆಬ್ರುವರಿಯಲ್ಲಿ ಅಧ್ಯಕ್ಷರಾಗಿದ್ದ ನಡ್ಡಾ ಅವರನ್ನು ಮೂರು ವರ್ಷಗಳ ಅವಧಿ ಮುಗಿದ ನಂತರವೂ ಮುಂದುವರಿಸಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವಕ್ಫ್ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿ ಇತ್ತೀಚೆಗೆ ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ನಡೆದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತು. ಇದರ ನಡುವೆಯೇ, ನೂರಾರು ಜನರು ಬೈಕ್‌ಗಳಲ್ಲಿ ಮೆರವಣಿಗೆಯಲ್ಲಿ ಹೋಗುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರಾಜಸ್ಥಾನದ ಬಜರಂಗದಳದ ಸದಸ್ಯರು ಹಿಂಸಾಚಾರ ಪೀಡಿತ ಪಶ್ಚಿಮ ಬಂಗಾಳಕ್ಕೆ ತೆರಳುತ್ತಿರುವುದು ಎಂದು ಪ್ರತಿಪಾದಿಸುತ್ತಾ ಈ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ. ಇದು ಸುಳ್ಳು.

ವಿಡಿಯೊ ತುಣುಕಿನ ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ ‘i.love.shrigonda’ ಎಂಬ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಿದ್ದ, ಇದೇ ವಿಡಿಯೊ ಸಿಕ್ಕಿತು. ಈ ವಿಡಿಯೊವನ್ನು 2025ರ ಫೆ.19ರಂದು, ಅಂದರೆ ಮುರ್ಶಿದಾಬಾದ್ ಹಿಂಸಾಚಾರಕ್ಕೂ ಮುನ್ನವೇ ಪೋಸ್ಟ್ ಮಾಡಿರುವುದು ತಿಳಿಯಿತು. ಮಹಾರಾಷ್ಟ್ರದ ಸಾಂಗ್ಲಿಯದ್ದು ಎಂಬ ವಿವರ ಆ ಪೋಸ್ಟ್‌ನಲ್ಲಿತ್ತು. ಅಲ್ಲದೇ, ಸಾಂಗ್ಲಿಯಲ್ಲಿ ಮಧ್ಯರಾತ್ರಿ ರಂಪಾಟ ಮಾಡಿದ ಯುವಕರಿಗೆ ಪೊಲೀಸರು ಲಾಠಿಯೇಟು ನೀಡಿದ್ದಾರೆ ಎಂಬ ಮಾಹಿತಿಯೂ ಅದರಲ್ಲಿತ್ತು. ಮತ್ತಷ್ಟು ಹುಡುಕಿದಾಗ ಮಹಾರಾಷ್ಟ್ರದ ಸಾಮ್ ಟಿವಿ ಮಾಡಿದ ವರದಿ ಸಿಕ್ಕಿತು. ಕರ್ನಾಟಕದ ಚಿಂಚೋಳಿಯಲ್ಲಿ ಜಾತ್ರೆ ಮುಗಿಸಿಕೊಂಡು ರಾತ್ರಿ ಬೈಕ್‌ಗಳಲ್ಲಿ ಊರಿಗೆ ವಾಪಸ್ ಆಗುವಾಗ ಹಾರ್ನ್ ಹಾಕುತ್ತಾ, ಕೂಗಾಡುತ್ತ ಸಾಗಿದ ಜನರಿಗೆ ಪೊಲೀಸರು ಲಾಠಿ ಬೀಸಿರುವ ಬಗ್ಗೆ ಅದರಲ್ಲಿ ಉಲ್ಲೇಖಿಸಲಾಗಿತ್ತು. ಜತೆಗೆ, ಪಶ್ಚಿಮ ಬಂಗಾಳದತ್ತ ಬಜರಂಗದಳದ ಕಾರ್ಯಕರ್ತರು ಮೆರವಣಿಗೆ ನಡೆಸಿರುವ ಬಗ್ಗೆ ಯಾವ ಮಾಹಿತಿಯೂ ಸಿಗಲಿಲ್ಲ. ಮಹಾರಾಷ್ಟ್ರದಲ್ಲಿ ತಿಂಗಳ ಹಿಂದೆ ನಡೆದಿದ್ದ ಘಟನೆಯೊಂದರ ವಿಡಿಯೊವನ್ನು ಪಶ್ಚಿಮ ಬಂಗಾಳದ ಘಟನೆಗೆ ತಳಕು ಹಾಕಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಜಗತ್ತಿನ ಋಣ ತೀರಿಸಬೇಕು

ನುಡಿ ಬೆಳಗು 176



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಮ್ಮ ಮನೆಯ ಹಿತ್ತಲಿನ ಸಣ್ಣ ಬಳ್ಳಿಯಲ್ಲಿ ಒಂದು ಹೂವು ಅರಳುತ್ತದೆ. ಹೂವಿನ ಆಯಸ್ಸ ಎಷ್ಟು ಹೇಳಿ? ಮನುಷ್ಯನ ಹಾಗೆ ಒಂದು ಹೂವು ನೂರು ವರ್ಷ ಬದುಕುವುದಿಲ್ಲ. ಹೂವಿನ ಆಯಸ್ಸ ಒಂದೇ ದಿನ. ಸೂರ್ಯೋದಯದಿಂದ ಆರಂಭವಾಗಿ ಸೂರ್ಯಾಸ್ತದಲ್ಲಿ ಮುಗಿದು ಹೋಗುತ್ತದೆ. ಮನುಷ್ಯ ನೂರು ವರ್ಷ ಬದುಕಿದ. ಆದರೆ ಒಂದೇ ಒಂದು ದಿನ ಬದುಕುವ ಹೂವಿನ ಬದುಕಿನ ಸಾರ್ಥಕತೆ ಎಷ್ಟು ಅದ್ಭುತ ಎಂದರೆ ತನ್ನನ್ನು ಯಾರು ನಿರ್ಮಾಣ ಮಾಡಿದ್ದಾರಲ್ಲ ಆ ದೇವನ ತಲೆಯ ಮೇಲೆ ಹೋಗಿ ಕುಳಿತು ಜೀವನವನ್ನು ಸಾರ್ಥಕ ಮಾಡಿಕೊಳ್ಳುತ್ತದೆ.

ಮನುಷ್ಯ ಕೂಡ ಅಂತಹ ಸುಂದರ ಬದುಕು ಕಟ್ಟಿಕೊಳ್ಳಬೇಕು. ಏನು ಮಾಡಿ ಈ ಬದುಕಿನ ಋಣ, ಈ ಜಗತ್ತಿನ ಋಣ ತೀರಿಸಬೇಕು ಎಂದು ಆಲೋಚಿಸಬೇಕು. ‘ನಾನು ಇಲ್ಲಿಗೆ ಬರುವುದಕ್ಕೆ ಮೊದಲು ಮಣ್ಣು, ಕಲ್ಲು, ನೀರು, ಗಾಳಿ ಯಾವುದನ್ನೂ ನಿರ್ಮಾಣ ಮಾಡಲಿಲ್ಲ. ನಾನು ಹುಟ್ಟಿ ಬರುವುದಕ್ಕೆ ಮೊದಲೇ ನಿಸರ್ಗ ದೇವತೆ ನಾನು ಹುಟ್ಟಿ ವಿಕಾಸ ಆಗಲು ಏನೇನು ಬೇಕೋ ಅದೆಲ್ಲವನ್ನೂ ನಿರ್ಮಾಣ ಮಾಡಿ ಇಟ್ಟಿತ್ತು. ಈ ನಿಸರ್ಗಕ್ಕಾಗಿ ಮನುಷ್ಯ ಏನು ಕೊಟ್ಟಿದ್ದಾನೆ? ಅದಕ್ಕಾಗಿ ಮನುಷ್ಯ ಒಳ್ಳೆಯ ಕೆಲಸ ಮಾಡಬೇಕು. ಬೇಕಾದಷ್ಟು ಜನ ಈ ಜಗತ್ತು ನೆನಪಿನಲ್ಲಿ ಇಡುವಂತಹ ಕೆಲಸ ಮಾಡಿ ಹೋಗಿದ್ದಾರೆ. ಭಗತ್ ಸಿಂಗ್‌ನಂತಹ ರಾಷ್ಟ್ರಪ್ರೇಮಿಯನ್ನು ಈ ಜಗತ್ತು ಮರೆಯಲು ಸಾಧ್ಯವೇ? ಮನುಷ್ಯ ದೇಶಕ್ಕಾಗಿ, ಸಮಾಜಕ್ಕಾಗಿ, ನಿಸರ್ಗಕ್ಕಾಗಿ ಒಂದಿಷ್ಟು ಕೊಡುಗೆ ಕೊಟ್ಟು ಹೋಗಬೇಕಾಗುತ್ತದೆ. ಈ ಜಗತ್ತಿನಲ್ಲಿ ಯಾವುದೂ ನನ್ನದು ಎನ್ನುವುದಿಲ್ಲ. ಎಲ್ಲ ನಿಸರ್ಗ ಕೊಟ್ಟ ಪ್ರಸಾದ. ಜಗತ್ತಿನಲ್ಲಿ ಇರುವ ಎಲ್ಲ ವಸ್ತು ವಿಷಯಗಳ ಬಗ್ಗೆ ನನ್ನದು’ ಎಂಬ ಭಾವನೆ ಬಂದರೆ ಅದು ಪದಾರ್ಥವಾಗುತ್ತದೆ. ಇದು ದೇವರು ಕೊಟ್ಟಿದ್ದು ಎಂಬ ಭಾವನೆ ಬಂದರೆ ಈ ಬದುಕೇ ಪ್ರಸಾದವಾಗುತ್ತದೆ.

ಮನೆಯಿಂದ ಹೊರಡುವಾಗ ಬಾಳೆಹಣ್ಣು ತೆಗೆದುಕೊಂಡು ಹೋಗುತ್ತೀವಿ. ಗುಡಿಗೆ ಹೋಗಿ ನೈವೇದ್ಯ ಮಾಡಿ ಬಂದ ನಂತರ ಪ್ರಸಾದ ತೆಗೆದುಕೊಳ್ಳಿ ಅಂತೀವಿ. ಬಾಳೆಹಣ್ಣು ಬದಲಾಗಿಲ್ಲ. ಹಣ್ಣನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಹಾಗೆಯೇ ಈ ಬದುಕನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ನಾವು ಈ ಜಗತ್ತಿಗೆ ಅತಿಥಿಗಳಾಗಿ ಬಂದಿದ್ದೇವೆ. ಇಲ್ಲಿ ಯಾರೂ ಕಾಯಂ ಇರೋದಿಲ್ಲ. ಈ ಜಗತ್ತಿಗೆ ನಾವು ಕಲಾವಿದರಾಗಿ ಬಂದಿದ್ದೇವೆ. ಇಲ್ಲಿ ನಮ್ಮ ಕಲೆಯನ್ನು ಸರಿಯಾಗಿ ಪ್ರದರ್ಶಿಸಬೇಕು. ಮನುಷ್ಯ ಎಷ್ಟು ಬೆರಕಿ ಎಂದರೆ ಯಾವಾಗಲೂ ತನ್ನ ತಪ್ಪನ್ನು ಒಪ್ಪಿಕೊಳ್ಳುವುದೇ ಇಲ್ಲ. ಮನೆ ಬಹಳ ಕಾಡತ್ತೈತ್ರಿ ಅಂತಾನೆ. ಕೈಗೆ ಬಂದ ಹಣ ನಿಲ್ಲೋದಿಲ್ಲ ಅಂತಾನೆ. ವಾಸ್ತು ದೋಷ ಅನ್ನುತ್ತಾನೆ. ಜ್ಯೋತಿಷಿಗಳು ಅಥವಾ ಮಠಾಧೀಶರ ಬಳಿಗೆ ಹೋಗುತ್ತಾನೆ. ಅವರೂ ಇಂತಹ ಜನ ಬರಲಿ ಎಂದು ಕಾಯುತ್ತಾ ಕುಳಿತಿರುತ್ತಾರೆ. ಮನೆಯ ಬಾಗಿಲು ಬದಲಾಯಿಸು, ಅಡುಗೆ ಮನೆ, ದೇವರ ಮನೆ ಎಲ್ಲ ಬದಲಾಯಿಸು ಅಂತಾರೆ. ಇವನೂ ಹಾಗೆಯೇ ಮಾಡುತ್ತಾನೆ. ಆಗ ಮನೆ ಹೇಳುತ್ತದೆ. ‘ಮನೆ ಬದಲಾಯಿಸಿದೆ. ಆದರೆ ನೀನೇ ಬದಲಾಗಲಿಲ್ಲ’ ಅಂತ. ಮನೆಯನ್ನು ವಾಸ್ತು ಪ್ರಕಾರ ಕಟ್ಟುವುದಲ್ಲ. ಮನೆಯಲ್ಲಿರುವ ಮನಸ್ಸುಗಳನ್ನು ವಾಸ್ತು ಪ್ರಕಾರ ಕಟ್ಟಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಏಪ್ರಿಲ್ 18, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಪಂಚಮಿ ಗಂ. 17-08 ನಕ್ಷತ್ರ: ಜ್ಯೇಷ್ಠ ಗಂ. 08-21 ಯೋಗ: ಪರಿಘ ಗಂ. 25-03 ಕರಣ: ತೈತಿಲ ಗಂ. 17-08, ಮೇಷ ಮಾಸದ 05 ನೇ ದಿನ, ಮಳೆನಕ್ಷತ್ರ: ಅಶ್ವಿನಿ 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-10 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 19 ಶವ್ವಾಲ್
ದಿನ ವಿಶೇಷ : ಗುಡ್ ಫ್ರೈಡೇ, ಅದೃಷ್ಟ ಸಂಖ್ಯೆ : 4, 10

ಮೇಷ: ವ್ಯಕ್ತಿಯ ಪರವಾಗಿ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕು ಎನಿಸಿದ್ದರೂ ಅದು ಅಷ್ಟು ಸುಲಭವಲ್ಲ. ಸಾಮಾಜಿಕ ಸಮಾರಂಭಗಳಲ್ಲಿ ಅತ್ಯುತ್ತಮ ನಾಯಕತ್ವ ವಹಿಸಿಕೊಳ್ಳುವಿರಿ. ಪತ್ನಿಯ ಆರೋಗ್ಯ ಸುಧಾರಿಸಲಿದೆ.

ವೃಷಭ: ಸ್ವಂತ ಉದ್ಯೋಗದವರು ಕ್ಷೇತ್ರವನ್ನು ಹೆಚ್ಚು ವಿಸ್ತರಿಸಿಕೊಂಡು ಉನ್ನತ ಮಟ್ಟಕ್ಕೇರಿ ಅಭಿವೃದ್ಧಿ ಹೊಂದುವಿರಿ. ಮನೆಯಲ್ಲಿ ಸಮಸ್ತರ ಒಳಿತಿಗಾಗಿ ಮಾಡುವ ಕೆಲಸವೊಂದಕ್ಕೆ ಕುಟುಂಬದವರಿಂದ ಉತ್ತಮ ಸಹಕಾರ ಸಿಗಲಿದೆ.

ಮಿಥುನ: ಸಮಸ್ಯೆಯಲ್ಲಿ ಸಿಲುಕಿರುವ ನಿಮಗೆ, ಎಂಥ ಪರಿಸ್ಥಿತಿಯಿಂದಲೂ ಹೊರಬರುವ ಸಾಮರ್ಥ್ಯ ಇದೆ. ಕಬ್ಬಿಣ ಮತ್ತು ಸಿಮೆಂಟ್ ವ್ಯಾಪಾರದಲ್ಲಿ ಮಹತ್ತರ ಅಭಿವೃದ್ಧಿ ಕಾಣುವಿರಿ.

ಕರ್ಕಾಟಕ: ಇನ್ನೊಬ್ಬರಿಗೆ ವಿಶ್ವಾಸದಲ್ಲಿ ಸಾಲ ಕೊಡುವಾಗ ಸರಿಯಾಗಿ ಯೋಚಿಸಿ ತೀರ್ಮಾನ ಕೈಗೊಳ್ಳಿ. ಬಹಳ ಬೇಗ ಗುರಿ ತಲುಪಬೇಕು ಎಂಬ ಹಂಬಲವು, ಆತುರವು ಕೆಲಸಕ್ಕೆ ಅಡ್ಡಿ ಮಾಡಬಹುದು.

ಸಿಂಹ: ಕೆಲವು ಬಾರಿ ಆತಂಕ ಎದುರಾಗುವ ಸಾಧ್ಯತೆ ಇರುತ್ತದೆ. ಜೀವನದಲ್ಲಿ ಸೋಮಾರಿತನವನ್ನು ದೂರ ಮಾಡಿದರೆ, ಯೋಗ್ಯತೆಗೆ ಮೀರಿದ ಕೆಲಸಗಳಿಗೆ ಕೈಹಾಕಿದರೂ ಸಮಸ್ಯೆ ಆಗಲ್ಲ. ಗಮನವಿರಲಿ.

ಕನ್ಯಾ: ಸಾರಿಗೆ ವೃತ್ತಿಯಲ್ಲಿರುವವರಿಗೆ ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳುವುದು ಸದ್ಯದ ಮಟ್ಟಿಗೆ ಅನಿವಾರ್ಯ. ಕೊಡು-ಕೊಳ್ಳುವ ವಿಚಾರಗಳಲ್ಲಿ ಒಬ್ಬರೇ ತೀರ್ಮಾನ ಕೈಗೊಳ್ಳಿ.

ತುಲಾ: ಮುಂಜಾನೆ ಸಮಯದಲ್ಲಿ ಏಳುವಾಗಲೇ ಉತ್ಸಾಹಿಗಳಾಗಿರುತ್ತೀರಿ. ಹಾಗೆಯೇ ಸಂತಸ ಭರಿತ ಸುದ್ದಿ ತಲುಪುತ್ತದೆ. ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು.

ವೃಶ್ಚಿಕ: ಮೋಸ ಮಾಡುವ ಬುದ್ಧಿ, ಅನ್ಯಾಯ ಮಾಡುವ ಯೋಚನೆಗಳನ್ನು ಕಡಿಮೆ ಮಾಡಿಕೊಳ್ಳಿ. ಕಲಾವಿದರಿಗೆ ಕಿರುತೆರೆಯಲ್ಲಿ ಅಭಿನಯಿಸಲು ಅವಕಾಶಗಳು ಲಭಿಸುವುದು. ಖರ್ಚು ಅಧಿಕವಾದರೂ ಆದಾಯ ಉತ್ತಮ.

ಧನು: ಹಿಂದೆಂದೂ ಮಾಡದ ಅಪರೂಪದ ಕೆಲಸಗಳನ್ನು ಈಗ ಮಾಡಬೇಕಾಗುವುದು. ವಿದ್ಯಾರ್ಥಿಗಳಿಗೆ ಸಾಧನೆಯ ತಯಾರಿ ನಡೆಸಲು ಸೂಕ್ತ ದಿನವಾಗಿದೆ. ಸಾಯಂಕಾಲದ ವೇಳೆ ದಿಢೀರ್ ಪ್ರಯಾಣದ ಸಂಭವವಿದೆ.

ಮಕರ: ಆಶಾವಾದ ಮತ್ತು ಧನಾತ್ಮಕ ವರ್ತನೆಯ ಹೆಜ್ಜೆಗಳು ಸುತ್ತಮುತ್ತಲಿನ ಜನರ ಕಣ್ಣನ್ನು ಕೆಂಪಾಗಿಸುತ್ತವೆ. ಹಣಕಾಸಿನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಈ ದಿನ ಸೂಕ್ತ.

ಕುಂಭ: ಕೆಲಸದಲ್ಲಿ ಹಲವು ವಿಘ್ನಗಳು ಕಾಣುವುದರಿಂದ ಬೇಸರಗೊಳ್ಳ ಬೇಡಿ. ಏಕೆಂದರೆ ಪ್ರಯತ್ನವು ಅಧಿಕವಾಗಿರಬೇಕೆಂಬುವುದು ಅದರ ಸಂಕೇತ. ಮಹಾವಿಷ್ಣುವಿನ ಸ್ಮರಣೆಯಿಂದ ಮಾನಸಿಕವಾಗಿ ಸದೃಢರಾಗುವಿರಿ.

ಮೀನ: ವಿದೇಶದಿಂದ ಮಗನ ಆಗಮನದ ಸುದ್ದಿ ಮನೆಯವರಿಗೆಲ್ಲ ಸಂತೋಷ ತರುವುದು. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅನಿವಾರ್ಯ. ಇಂದು ಭೂ ವ್ಯವಹಾರದಲ್ಲಿ ಲಾಭವಿದೆ.

ಪದಬಂಧ 6015

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹುರಿ ಹಿಡಿದವ ತೋರಿದ ಸ್ವೇಚ್ಛಾ ವೃತ್ತಿ (4)
3.ಕತೆಯೊಳಗೆ ಲತೆಯನ್ನಿಟ್ಟಾಗ ಉಕ್ಕಿದ ಪ್ರೀತಿ (4)
5.ಪುರಿಯಲ್ಲಿರುವ ಮುಂದಾಳು (3)
6.ಖರ ಸಂವತ್ಸರದಲ್ಲಿ ಗೋಚರಿಸಿದ ಪಕ್ಷಿ! (3)
8.ನೈತಿಕವಾಗಿ ಪತನ ಹೊಂದಿದವನು (3)
10.ಸರಸದ ವಿರುದ್ಧ ಪದ (3)
12.ಮಾನವುಳ್ಳ ಮನುಷ್ಯ (3)
13.ಹುಟ್ಟಿದ ಕಾಲದ ಕಾಲ ತಿಥಿ, ಇತ್ಯಾದಿಗಳನ್ನು ತಿಳಿಸುವ ಪತ್ರಿಕೆ (3)
15.ಕುದುರೆಯ ಬಾಯಿಗೆ ಹಾಕುವ ಉಕ್ಕಿನ ತುಂಡು (4)
16.ಇದು ಉತ್ತರದವರ ಸೋಪು (4)

ಮೇಲಿಂದ ಕೆಳಕ್ಕೆ

1.ಕೈಯನ್ನಿಟ್ಟು ಮಧ್ಯೆ ಪ್ರವೇಶಿಸುವಿಕೆ! (4)
2.ಪುಢಾರಿ ಬಳಿಯಿರುವ ಶತ್ರು (2)
3.ಪಾಪ! ಕಮರಿಯಲ್ಲಿ ಬಿದ್ದಿದೆ ಈ ಆನೆ! (2)
4.ತೆರ ಬಾಕಿ ಉಳಿಸಿಕೊಂಡಿರುವ ದಡ್ಡ (3)
7.ಸ್ಥಾವರ ಹಾಗೂ ಜಂಗಮ ವಸ್ತುಗಳು (4)
9.ನಿಧಾನವಾಗಿ ನೋಡಿದಾಗ ಕಾಣದಂತಾಗುವಿಕೆ! (4)
11.ವರನಿಗೆ ಕಾಣಿಸಿದ ಕೊಳ (4)
12.ಅಳೆಯುವ ಸಾಧನ (3)
13.ಈತ ದಡ್ಡನಲ್ಲ! (2)
14.ಕನಸಲ್ಲಿ ಕಾಣಿಸಿದ ಕೊಳೆ (2)



6014ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಷೆ 3.ಸುಭಗ 5.ನಿಷ್ಪಕ್ಷಪಾತ 6.ಸಮೀಪ 7.ಗುಳಂಬ 8.ರಾಷ್ಟ್ರೀಕರಣ 9.ಸಮಾಧಿ 10.ಕಟಾಕ್ಷ 13.ದಂತಮಂಜನ 14.ಜಯಂತ 15.ಸಂಕ

ಮೇಲಿಂದ ಕೆಳಕ್ಕೆ:
1.ಉಪವಾಸ 2.ಅಕ್ಷತೆ 3.ಸುತ 4.ಗಲ್ಲುಗಂಬ 5.ನಿರಪರಾಧಿ 7.ಗುಣಕಥನ 9.ಸತ್ಕುಲಜ 11.ಕ್ಷಪಣಿಕ 12.ಸಾಮಂತ 13.ದಂತ

ಸುಡೊಕು 6400

	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6399 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,437
ಇಂದಿನ ಅಂತ್ಯ	23,851
▲	414
ದಿನದ ಕನಿಷ್ಠ	23,480

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹450
12 ಕ್ಕೆ	₹60
ಮೈಸೂರು	
100ಕ್ಕೆ	₹450

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹315-555
ದ್ವಿತಳಿ (ಬಿ.ವಿ) ₹411-690

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹193
ಆರ್‌ಎಸ್‌ಎಸ್-5 ₹188
ಗುಡ್ ಲಾಟ್ ₹180
(ಪ್ರತಿ ಕೆ.ಜಿಗೆ)

ಅಡಿಕೆ ಧಾರಣೆ (₹ಗಳಲ್ಲಿ)

ಸಿದ್ದಾಪುರ		ಚಾಲಿ	31898-43301	ಹೊಸಚಾಲಿ	32369-43400
ಬಿಳೆಗೋಟು	26509-33000	ಕೆಂಪುಗೋಟು	12288-23821	**ಸಾಗರ**	
ಚಾಲಿ	34099-42009	ರಾಶಿ	41909-48099	ಬಿಳೆಗೋಟು	8099-28599
ಕೋಕ	16159-22699	**ಚಿತ್ರದುರ್ಗ**		ಚಾಲಿ	27699-40039
ಹಳೆಚಾಲಿ	37039-41039	ಅಪಿ	55600-56000	ಕೋಕ	8099-30599
ಕೆಂಪುಗೋಟು	20689-22109	ಬೆಟ್ಟೆ	25200-25600	ಕೆಂಪುಗೋಟು	11299-28569
ರಾಶಿ	43369-49929	ಕೆಂಪುಗೋಟು	19600-20000	ರಾಶಿ	31899-57611
ತಟ್ಟಿಬೆಟ್ಟೆ	27419-39899	ರಾಶಿ	55100-55500	ಸಿಪ್ಪೆಗೋಟು	8169-20365
ಶಿವಮೊಗ್ಗ		**ದಾವಣಗೆರೆ**		**ಯಲ್ಲಾಪುರ**	
ಬೆಟ್ಟೆ	49009-57299	ಗೊರಬಲು	20000-20000	ಅಪಿ	60600-65115
ಗೊರಬಲು	19091-30689	ಸಿಪ್ಪೆಗೋಟು	10000-10000	ಬಿಳೆಗೋಟು	14899-32800
ರಾಶಿ	47665-57898	ಸರಕು	57669-95096	ಕೋಕ	4812-16929
ಸರಕು	58989-94596	**ಕುಮಟ**		ಕೆಂಪುಗೋಟು	16709-26899
ಶಿರಸಿ		ಚಾಲಿ	30699-43299	ರಾಶಿ	40689-58421
ಬೆಟ್ಟೆ	28799-37609	ಚಿಪ್ಪು	11060-32769	ತಟ್ಟಿಬೆಟ್ಟೆ	27306-39269
ಬಿಳೆಗೋಟು	20699-33099	ಕೋಕ	10600-29069		

ಹೊಸ ಎತ್ತರಕ್ಕೆ ಜಿಗಿದ ಚಿನ್ನದ ಬೆಲೆ

ಮುಂಬೈ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರವೂ ಬಂಗಾರದ ಬೆಲೆ ಹೊಸ ಎತ್ತರಕ್ಕೆ ಜಿಗಿದಿದೆ. ಜಾಗತಿಕ ಮಟ್ಟದಲ್ಲಿ ಹಳದಿ ಲೋಹಕ್ಕೆ ಹೆಚ್ಚಿರುವ ಬೇಡಿಕೆಯೇ ಇದಕ್ಕೆ ಕಾರಣ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹70 ಏರಿಕೆಯಾಗಿದ್ದು, ₹98,170 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹97,720ಕ್ಕೆ ಮಾರಾಟವಾಗಿದೆ ಎಂದು ತಿಳಿಸಿದೆ.

ಜಾಗತಿಕ ಮಟ್ಟದಲ್ಲೂ ಚಿನ್ನದ ಬೆಲೆ ಏರಿಕೆಯ ಹಾದಿ ಹಿಡಿದಿದೆ. ಪ್ರತಿ ಔನ್ಸ್‌ಗೆ (28.34 ಗ್ರಾಂ) 3,357 ಡಾಲರ್ (₹2.86 ಲಕ್ಷ) ಆಗಿದೆ.

'ಜಾಗತಿಕ ವ್ಯಾಪಾರ ಸಮರದಿಂದಾಗಿ ಡಾಲರ್ ಮೌಲ್ಯ ಇಳಿಕೆಯಾಗಿದೆ. ಹಾಗಾಗಿ, ಹಳದಿ ಲೋಹದ ಬೆಲೆ ಏರಿಕೆಯಾಗುತ್ತಿದೆ' ಎಂದು ಅಬಾನ್ಸ್ ಫೈನಾನ್ಶಿಯಲ್ ಸರ್ವಿಸಸ್‌ನ ಸಿಇಒ ಚಿಂತನ್ ಮೆಹ್ತಾ ಅವರು ಹೇಳಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಗವರ್ನರ್ ಜೆರೋಮ್ ಪೊವೆಲ್ ಅವರು, ಟ್ರಂಪ್ ಸುಂಕ ನೀತಿಯು ಅಮೆರಿಕದ ಆರ್ಥಿಕ ಬೆಳವಣಿಗೆ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಏರಿಕೆಯಾಗುತ್ತಿದೆ ಎಂದು ತಜ್ಞರು ಹೇಳಿದ್ದಾರೆ.

ಬೆಳ್ಳಿ ಬೆಲೆಯಲ್ಲಿ ಇಳಿಕೆಯಾಗಿದೆ. ಪ್ರತಿ ಕೆ.ಜಿಗೆ ₹1,400 ಕಡಿಮೆಯಾಗಿದ್ದು, ₹98 ಸಾವಿರ ಆಗಿದೆ.

ವಿದೇಶಿ ಬಂಡವಾಳ ಹೆಚ್ಚಳ: ಷೇರುಪೇಟೆಗೆ ಬಲ

ಗೂಳಿ ನಾಗಾಲೋಟ



ಮುಂಬೈ (ಪಿಟಿಐ): ಸತತ ನಾಲ್ಕನೇ ದಿನವಾದ ಗುರುವಾರವೂ ದೇಶದ ಷೇರುಪೇಟೆಯಲ್ಲಿ ಗೂಳಿಯ ನಾಗಾಲೋಟ ಮುಂದುವರಿದಿದ್ದು, ಸೂಚ್ಯಂಕಗಳು ಶೇ 2ರಷ್ಟು ಏರಿಕೆ ಕಂಡಿವೆ.

ಪ್ರತಿ ಸುಂಕಕ್ಕೆ ಸಂಬಂಧಿಸಿದಂತೆ ಅಮೆರಿಕ ಮತ್ತು ಜಪಾನ್ ನಡುವಿನ ಮಾತುಕತೆಯು ಫಲಪ್ರದ ಕಾಣುವ ನಿರೀಕ್ಷೆಯಿದೆ. ಮತ್ತೊಂದೆಡೆ ದೇಶೀಯ ಮಾರುಕಟ್ಟೆಗೆ ಮತ್ತೆ ವಿದೇಶಿ ಹೂಡಿಕೆದಾರರು ಮರಳಿದ್ದಾರೆ. ಈ ಅಂಶಗಳು ಷೇರುಪೇಟೆಗೆ ಬಲ ನೀಡಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,508 ಅಂಶ ಹೆಚ್ಚಳ ಕಂಡು (ಶೇ 1.96) 78,553 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 414 ಅಂಶ ಏರಿಕೆ ಕಂಡು (ಶೇ 1.77) 23,851 ಅಂಶಗಳಲ್ಲಿ ಅಂತ್ಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಐಸಿಐಸಿಐ ಬ್ಯಾಂಕ್, ಭಾರ್ತಿ ಏರ್‌ಟೆಲ್, ಸನ್ ಫಾರ್ಮಾ, ಎಸ್‌ಬಿಐ, ಬಜಾಜ್ ಫಿನ್‌ಸರ್ವ್, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಬ್ಯಾಂಕ್‌ನ ಷೇರಿನ ಮೌಲ್ಯ ಏರಿಕೆ ಕಂಡಿದೆ.

ಟೆಕ್ ಮಹೀಂದ್ರ ಮತ್ತು ಮಾರುತಿ ಸುಜುಕಿ ಕಂಪನಿಯ ಷೇರಿನ ಮೌಲ್ಯ ಕುಸಿದಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರದ ವಹಿವಾಟಿನಲ್ಲಿ ₹3,936 ಕೋಟಿ ಮತ್ತು ಗುರುವಾರದ ವಹಿವಾಟಿನಲ್ಲಿ ₹6,065 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

'ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ಮಾತುಕತೆಯು ಯಶಸ್ವಿಯಾಗುವ ನಿರೀಕ್ಷೆಯಿದೆ. ಮತ್ತೊಂದೆಡೆ ದೇಶದಲ್ಲಿ ಚಿಲ್ಲರೆ ಹಣದುಬ್ಬರ ಇಳಿಕೆಯಾಗಿದೆ. ಇದರಿಂದ ಹೂಡಿಕೆದಾರರ ವಿಶ್ವಾಸ ವೃದ್ಧಿಸಿದೆ' ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

₹11,000 ಕೋಟಿ ವಿಪ್ರೊಗೆ ನಷ್ಟ

ವಿಪ್ರೊ ಕಂಪನಿಯ ಷೇರುಗಳ ಮೌಲ್ಯದಲ್ಲಿ ಶೇ 4ರಷ್ಟು ಇಳಿಕೆಯಾಗಿದೆ. ಕಂಪನಿಯು ನಾಲ್ಕನೇ ತ್ರೈಮಾಸಿಕದಲ್ಲಿ ನಿರೀಕ್ಷಿತ ಲಾಭ ಗಳಿಸಿಲ್ಲ. ಇದು ಷೇರುಗಳ ಮೌಲ್ಯದ ಮೇಲೆ ಪರಿಣಾಮ ಬೀರಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಒಂದೇ ದಿನ ಕಂಪನಿಯ ಮಾರುಕಟ್ಟೆ ಬಂಡವಾಳವು ₹11,096 ಕೋಟಿ ಕರಗಿದೆ. ಒಟ್ಟು ಎಂ–ಕ್ಯಾಪ್ ₹2.48 ಲಕ್ಷ ಕೋಟಿ ಆಗಿದೆ.

ಇನ್ಫೊಸಿಸ್ ನಿವ್ವಳ ಲಾಭ ಕುಸಿತ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕ-ದಲ್ಲಿ ಐ.ಟಿ ಸೇವಾ ಕಂಪನಿ ಇನ್ಫೊಸಿಸ್‌ನ ನಿವ್ವಳ ಲಾಭದಲ್ಲಿ ಇಳಿಕೆಯಾಗಿದೆ.

ಕಂಪನಿಯು ಈ ತ್ರೈಮಾಸಿಕದಲ್ಲಿ ₹7,033 ಕೋಟಿ ಲಾಭ ಗಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹7,969 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 11.7ರಷ್ಟು ಕುಸಿತವಾಗಿದೆ.

ಪೂರ್ಣ ಆರ್ಥಿಕ ವರ್ಷದಲ್ಲಿ ₹1.62 ಲಕ್ಷ ಕೋಟಿ ವರಮಾನ ಗಳಿಸಿದೆ. ವರಮಾನ ಗಳಿಕೆಯಲ್ಲಿ ಶೇ 6.06ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿಯು ಗುರುವಾರ ಷೇರುಪೇಟೆಗೆ ಮಾಹಿತಿ ನೀಡಿದೆ.

ಪ್ರತಿ ಷೇರಿಗೆ ಮಧ್ಯಂತರ ಲಾಭಾಂಶ ಸೇರಿ ₹22 ಲಾಭಾಂಶ ನೀಡಲು ಆಡಳಿತ ಮಂಡಳಿಯು ಅನುಮೋದನೆ ನೀಡಿದೆ.

ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಲಾಭಾಂಶ ನೀಡಿಕೆಯಲ್ಲಿ ಶೇ 13.2ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿ ತಿಳಿಸಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಆರ್. ಲಕ್ಷ್ಮಯ್ಯ, ಕೋರಮಂಗಲ, ಬೆಂಗಳೂರು.

• ಪ್ರಶ್ನೆ: ನಾನು ರಾಜ್ಯ ಸರ್ಕಾರಿ ನಿವೃತ್ತ ಅಧಿಕಾರಿ. 2024-25ನೇ ಆರ್ಥಿಕ ವರ್ಷದಲ್ಲಿ ನನ್ನ ಆದಾಯ ಈ ರೀತಿ ಇದೆ. ವಾರ್ಷಿಕ ನಿವೃತ್ತಿ ವೇತನ ₹7.68 ಲಕ್ಷ. ಖಾಸಗಿ ಉದ್ಯೋಗದಿಂದ ಬರುವ ವೇತನ ₹5.02 ಲಕ್ಷ. ಮನೆ ಬಾಡಿಗೆ ₹2.64 ಲಕ್ಷ. ಒಟ್ಟಾರೆ ಆದಾಯ ₹15.34 ಲಕ್ಷ. ನಾನು ಒಂದು ಹಣಕಾಸು ಸಂಸ್ಥೆಯಿಂದ ₹20 ಲಕ್ಷ ಸಾಲ ಪಡೆದಿದ್ದು, ಇದಕ್ಕಾಗಿ ಪ್ರತಿ ತಿಂಗಳು ₹20,500 ಇಎಂಐ ಪಾವತಿಸುತ್ತಿದ್ದೇನೆ. ₹15,000 ಅನ್ನು ವಾಹನ ವಿಮೆಗಾಗಿ ಪಾವತಿಸುತ್ತಿದ್ದೇನೆ.

ನಾನು ಅಂಚೆ ಇಲಾಖೆಯ ಹಿರಿಯ ನಾಗರಿಕರಿಗೆ ಇರುವ ಹೂಡಿಕೆಗಳಲ್ಲಿ ಉಳಿತಾಯ ಮಾಡುತ್ತಿದ್ದೇನೆ. ನನಗೆ ಪರ್ಯಾಯ ಆದಾಯಗಳಿಲ್ಲ. ಮನೆ ಕಂದಾಯ ₹16,000 ಪಾವತಿಸುತ್ತಿದ್ದೇನೆ. ಈ ಹಂತದಲ್ಲಿ ನನಗೆ ಯಾವ ತೆರಿಗೆ ಪದ್ಧತಿಯ ಆಯ್ಕೆ ಸೂಕ್ತ. ಜೊತೆಗೆ, ಯಾವುದಾದರೂ ತೆರಿಗೆ ಉಳಿಸುವ ಅವಕಾಶ ಇದ್ದರೆ ತಿಳಿಸಿ.

ಉತ್ತರ: ನಿಮ್ಮ ಖಾಸಗಿ ಉದ್ಯೋಗದಿಂದ ಬರುವ ಆದಾಯವು ವೇತನವಾಗಿ ಅಥವಾ ನಿಮ್ಮ ವೃತ್ತಿ ಆದಾಯವಾಗಿ ಬರುತ್ತಿದೆಯೇ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಈ ಮಾಹಿತಿಯಂತೆ ಅದನ್ನು ತಿಂಗಳ ವೇತನವೆಂದೇ ಊಹಿಸಿ ತೆರಿಗೆ ಅಂದಾಜಿಸಲಾಗಿದೆ. ನಿಮ್ಮ ಮನೆ ಬಾಡಿಗೆ ಆದಾಯಕ್ಕೆ ತೆರಿಗೆ ಕಳೆದು ಶೇ 30ರ ಆದಾಯ ರಿಯಾಯಿತಿ ಇದೆ. ಅಂದರೆ ₹1.74 ಲಕ್ಷ ತೆರಿಗೆಗೊಳಪಡುವ ಬಾಡಿಗೆ ಆದಾಯವಾಗಿದೆ. ಹೀಗಾಗಿ, ನಿಮಗಿರುವ ಮೂರು ಮೂಲಗಳಿಂದ ತೆರಿಗೆಗೆ ಒಳಪಡುವ ಆದಾಯವನ್ನು ನಿರ್ಧರಿಸಬೇಕು.

ಇನ್ನು ವೇತನ ಆದಾಯ ಪಡೆಯುವವರಿಗೆ ಅವರು ಪಾವತಿಸುವ ಇನ್ಶೂರೆನ್ಸ್ ಅಥವಾ ಇಎಂಐ ಮೊತ್ತಕ್ಕೆ ಯಾವುದೇ ರೀತಿಯ ರಿಯಾಯಿತಿ ಸಿಗದು. ಅದರಂತೆ ನಿಮಗೆ ಹೊಸ ತೆರಿಗೆ ಪದ್ಧತಿಯೇ ಹೆಚ್ಚು ಅನುಕೂಲಕರ. ನೀವು ಅಂಚೆ ಇಲಾಖೆಯ ಉಳಿತಾಯ ಯೋಜನೆಯಲ್ಲಿ ಹಣ ಹೂಡಿಕೆ ಮಾಡಿದರೂ ಹಳೆಯ ತೆರಿಗೆ ಪದ್ಧತಿ ಅಡಿ ತೆರಿಗೆ ದರ ಅಧಿಕವಾಗಿರುವ ಕಾರಣ ಆ ಪದ್ಧತಿ ಸೂಕ್ತವಲ್ಲ.

ಇನ್ನು ನಿಮಗೆ ಸೂಚಿಸುವ ಬದಲಾವಣೆ ಏನೆಂದರೆ ನೀವು ನಿಮ್ಮ ಖಾಸಗಿ ಉದ್ಯೋಗದಿಂದ ಬರುವ ಆದಾಯವನ್ನು ವೃತ್ತಿ ಆದಾಯ ಎಂದು ಮುಂದಿನ ವರ್ಷಗಳಲ್ಲಿ ಬದಲಾಯಿಸಿ ಪಡೆಯುವುದಾದರೆ ನಿಮ್ಮ ವಾಹನಕ್ಕೆ ಸಂಬಂಧಿಸಿದ ವೆಚ್ಚ, ಸವಕಳಿ ಇತ್ಯಾದಿ ಕಳೆಯುವ ಅವಕಾಶ ಇದೆ. ಅದಕ್ಕೆ ತಕ್ಕಂತೆ ಈ ಮೂಲದಿಂದ ನಿಮ್ಮ ತೆರಿಗೆಗೊಳಪಡುವ ಆದಾಯ ಕಡಿಮೆಯಾಗುತ್ತದೆ. ಇದಕ್ಕೆ ಪಾವತಿದಾರರು ಶೇ 10ರ ದರದಲ್ಲಿ ತೆರಿಗೆ ಕಡಿತ ಮಾಡುತ್ತಾರೆ. ಆದರೆ, ಈ ಮೊತ್ತವನ್ನು ನಿಮ್ಮ ಒಟ್ಟು ತೆರಿಗೆಯಲ್ಲಿ ಸರಿದೂಗಿಸಿಕೊಳ್ಳಲು ಅವಕಾಶ ಇದೆ.

ಜಯಂತ ಪಾಟೀಲ, ಊರು ತಿಳಿಸಿಲ್ಲ.

• ಪ್ರಶ್ನೆ: ನನಗೆ 70 ವರ್ಷ. ನಾನು ತಾಲ್ಲೂಕು ಕೇಂದ್ರದಲ್ಲಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇನೆ. ಸುಮಾರು 30 ವರ್ಷದ ಹಿಂದೆ ಎಕರೆಗೆ ₹60 ಸಾವಿರದಂತೆ ಆರು ಎಕರೆ ಜಮೀನು ಖರೀದಿಸಿದ್ದೆ. ಅದರಲ್ಲಿ ಕೃಷಿ ಹೊಂಡ ನಿರ್ಮಾಣ ಮಾಡಿ ಪ್ಲಾಂಟೇಶನ್ ಮಾಡಿದ್ದೇನೆ. ವಯೋಸಹಜ ಅನಾರೋಗ್ಯದಿಂದ ಅದನ್ನು ನಿಭಾಯಿಸಲು ಆಗುತ್ತಿಲ್ಲ. ಅದುದರಿಂದ ಅದನ್ನು ಮಾರಾಟ ಮಾಡುವ ವಿಚಾರವಿದೆ. ಅದಕ್ಕೆ ಅಂದಾಜು ₹1 ಕೋಟಿಯಿಂದ ₹1.5 ಕೋಟಿ ಬೆಲೆ ಬರಬಹುದು. ಈ ರೀತಿ ಬಂದ ಹಣಕ್ಕೆ ತೆರಿಗೆ ಕಟ್ಟಬೇಕೆ? ಅಂದಾಜು ಎಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ಅದನ್ನು ಉಳಿಸಲು ಹಾಗೂ ಆ ಹಣವನ್ನು ಸುರಕ್ಷಿತವಾಗಿ ಹೇಗೆ ಎಲ್ಲಿ ತೊಡಗಿಸಬೇಕು ಎಂಬುದರ ಬಗ್ಗೆ ಸೂಕ್ತ ಮಾಹಿತಿ ನೀಡಲು ವಿನಂತಿ.

ಉತ್ತರ: ಸಾಮಾನ್ಯವಾಗಿ ಕೃಷಿ ಭೂಮಿ ಮಾರಾಟದ ಸಂದರ್ಭದಲ್ಲಿ ಕೆಲವು ನಿಯಮಗಳಿಗೆ ಒಳಪಟ್ಟು ತೆರಿಗೆ ವಿನಾಯಿತಿ ಇರುತ್ತದೆ. ಬಂಡವಾಳ ಆಸ್ತಿಯ ಪರಿಧಿಯಲ್ಲಿ ಬರುವ ಆಸ್ತಿಗಳು ಮಾತ್ರ ತೆರಿಗೆಗೊಳಪಡುತ್ತವೆ.

ಆದರೆ, ಗ್ರಾಮೀಣ ಕೃಷಿ ಭೂಮಿಯನ್ನು ಬಂಡವಾಳ ಆಸ್ತಿಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಹೀಗಾಗಿ, ಅಂತಹ ಆಸ್ತಿಗಳನ್ನು ಮಾರಾಟ ಮಾಡುವ ಸಂದರ್ಭದಲ್ಲಿ ಆದಾಯ ತೆರಿಗೆ ಇರುವುದಿಲ್ಲ. ಆದರೆ, ನೀವು ಉಲ್ಲೇಖಿಸಿದಂತೆ ಇನ್ನೂ ಒಂದು ವಿಚಾರ ಗಮನಿಸಿ. ನೀವು ತಾಲ್ಲೂಕು ಪ್ರದೇಶದ ವ್ಯಾಪ್ತಿಯಲ್ಲಿ ಒಳಪಟ್ಟ ಕೃಷಿ ಭೂಮಿ ಹೊಂದಿದ್ದರೆ ಅದು ಬಂಡವಾಳ ಆಸ್ತಿ ಎಂದು ಪರಿಗಣಿ-ಸಲ್ಪಡುತ್ತದೆ ಹಾಗೂ ಕೃಷಿ ಭೂಮಿಯಾದರೂ ತೆರಿಗೆಗೆ ಒಳಪಡುತ್ತದೆ.

ವಿನಾಯಿತಿಗೆ ಅರ್ಹವಾಗಲು ಅಂತಹ ಕೃಷಿ ಭೂಮಿಯು ನಿಮ್ಮ ಸಮೀಪದ ಮುನಿಸಿಪಾಲಿಟಿ ವ್ಯಾಪ್ತಿಯಿಂದ ಹೊರಗಿರಬೇಕು. ಅಂದರೆ ಇದು ಲಭ್ಯವಿರುವ ಅಲ್ಲಿನ ಅಧಿಕೃತ ಜನಗಣತಿ ಸಂಖ್ಯೆ ಆಧರಿಸಿ 10,000ದಿಂದ 1 ಲಕ್ಷ, 1 ಲಕ್ಷದಿಂದ 10 ಲಕ್ಷ ಹಾಗೂ 10 ಲಕ್ಷ ಮೀರಿದ ಜನಸಂಖ್ಯಾ ಸ್ಥಳವಾಗಿದ್ದರೆ ಕ್ರಮವಾಗಿ 2, 6, 8 ಕಿ.ಮೀ ವ್ಯಾಪ್ತಿಯಿಂದ ಹೊರಗಿರಬೇಕು. ಈ ಬಗ್ಗೆ ನಿಮ್ಮ ಕೃಷಿ ಭೂಮಿ ಇರುವ ಸ್ಥಳಕ್ಕೆ ಹೊಂದಿಕೊಂಡು ನಿರ್ಣಯಿ-ಸಿಕೊಳ್ಳಿ. ಅಕಸ್ಮಾತ್ ಪಟ್ಟಣದ ವ್ಯಾಪ್ತಿಯಲ್ಲಿ ಈ ಭೂಮಿ ಬರುವುದಿದ್ದರೆ ಮೇಲೆ ತಿಳಿಸಿದಂತೆ ತೆರಿಗೆ ಇರುತ್ತದೆ ಅಥವಾ ನಿಗದಿತ ಹೂಡಿಕೆಗಳಲ್ಲಿ ಮಾರಾಟದಿಂದ ಬಂದ ಮೊತ್ತವನ್ನು ತೊಡಗಿಸಿದರೆ ತೆರಿಗೆ ತಗ್ಗಿಸುವ ಅವಕಾಶ ಇರುತ್ತದೆ.

ಉದಾಹರಣೆಗೆ ನೀವು ಮನೆ ಕಟ್ಟಿಸಬಹುದು, ಖರೀದಿಸಬಹುದು ಅಥವಾ ₹50 ಲಕ್ಷದ ತನಕ ಎನ್‌ಎಚ್‌ಎಐ ಅಥವಾ ಆರ್‌ಇಸಿ ಬಾಂಡ್ ಖರೀದಿಸಬಹುದು. ನಿಮ್ಮ ನಿಖರ ತೆರಿಗೆ ಲೆಕ್ಕ ಹಾಕಲು ಅಥವಾ ಸಂಪೂರ್ಣ ವಿನಾಯಿತಿ ಇರುವ ಬಗ್ಗೆ ತಿಳಿದುಕೊಳ್ಳಲು ಅಧಿಕೃತ ದಾಖಲೆಗಳೊಂದಿಗೆ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಉಡುಪಿಯ ಗ್ರಾನೈಟ್ ಕಾರ್ಖಾನೆಯಲ್ಲಿ ಕೆಲಸ ಮಾಡಲು ಘನ ಮತ್ತು ಲಘು ವಾಹನ ಡ್ರೈವರ್ ಗಳು ಬೇಕಾಗಿದ್ದಾರೆ. ಉತ್ತಮ ವೇತನ, ಊಟ ಹಾಗೂ ವಸತಿ ಸೌಲಭ್ಯವಿದೆ.ಸಂಪರ್ಕಿಸಿ 7338687922, 7338687921

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ. ಊಟವಸತಿಇದೆ. 14,000 - 18,000. ಸಂಪರ್ಕಿಸಿ: 8951315839, 7022770052.

Manager

REQUIRED BRANCH Manager 5 to 6 Years Experience. Salary 25k to 30k & Office Assistant with Computer Acknowledge Tally 1 to 2yrs 15k to 18k Location Dodaballapura bskblore@gmail.com 9342851347

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Teachers/ Professors

WANTED PRIMARY and High School Teachers for all subjects, contact: MES residential School, Anjeneya extension Davangere 9880436414

ಭವಿಷ್ಯ

Astrology

★॥ನಂ.1.ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ ವಶೀಕರಣ ಸಂಭೋಗ ವಶೀಕರಣ ನೋಡುವ_ಮೂಲಕ ಹೆಸರಿನ_ಮೂಲಕ ಹನ್ನೊಂದು ಗಂಟೆಯಲ್ಲಿ ಶಾಶ್ವತ ಪರಿಹಾರ. ಪಂಡಿತ್. ಸಾಯಿಭಟ್. 9900222591

ಪ್ರವಾಸ

Travel Agencies

ಶ್ರೀಲಂಕಾ ಪ್ರವಾಸ ರಾಮಾಯಣ ಸ್ಥಳಗಳು 6 ದಿನಗಳು 9/5/25 ದಂಬುಲ್ಲಾ ಕ್ಯಾಂಡಿ ನೂವಾರ ಏಲಿಯ ಕೊಲಂಬೋ ಬೆಂಟೋಟ ಸುವರ್ಣಯಾತ್ರ 9019462508/ 6360146483

Travel

14 ದಿನಗಳ ಚಾರ್ಧಾಮ್`ಯಾತ್ರ 29.5.2025. 8 ದಿನಗಳ ಅಮರನಾಥ್`ಯಾತ್ರ 2.7.2025. ಶ್ರೀಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್. ಸಂಪರ್ಕಿಸಿ: 9611801143, 9742810701.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಸಂಕ್ಷಿಪ್ತ ಸುದ್ದಿ

ಸಕ್ಕರೆ ಉತ್ಪಾದನೆ ಶೇ 18ರಷ್ಟು ಇಳಿಕೆ

ನವದೆಹಲಿ (ಪಿಟಿಐ): 2024–25ನೇ ಮಾರುಕಟ್ಟೆ ಋತುವಿನಲ್ಲಿ (ಅಕ್ಟೋಬರ್–ಸೆಪ್ಟೆಂಬರ್) ಇಲ್ಲಿಯವರೆಗೆ ಸಕ್ಕರೆ ಉತ್ಪಾದನೆಯಲ್ಲಿ ಶೇ 18ರಷ್ಟು ಇಳಿಕೆಯಾಗಿದೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘ (ಐಎಸ್‌ಎಂಎ) ಗುರುವಾರ ತಿಳಿಸಿದೆ.

ದೇಶದಲ್ಲಿ ಸಕ್ಕರೆ ಉತ್ಪಾದಿಸುವ ಪ್ರಮುಖ ರಾಜ್ಯಗಳಾದ ಮಹಾರಾಷ್ಟ್ರ, ಉತ್ತರ ಪ್ರದೇಶ ಮತ್ತು ಕರ್ನಾಟಕದಲ್ಲಿ ಉತ್ಪಾದನಾ ಪ್ರಮಾಣ ಇಳಿಕೆಯಾಗಿರುವುದೇ ಇದಕ್ಕೆ ಕಾರಣ ಎಂದು ವಿವರಿಸಿದೆ.

ಕಳೆದ ಮಾರುಕಟ್ಟೆ ವರ್ಷದ ಇದೇ ಅವಧಿಗೆ ಹೋಲಿಸಿದರೆ ಈ ಮೂರು ರಾಜ್ಯಗಳಿಂದ ಒಟ್ಟು 25.49 ದಶಲಕ್ಷ ಟನ್‌ನಷ್ಟು ಸಕ್ಕರೆ ಉತ್ಪಾದನೆ ಕಡಿಮೆಯಾಗಿದೆ ಎಂದು ಹೇಳಿದೆ.

ಕಳೆದ ವರ್ಷ ಕಬ್ಬಿನ ಹಾಲು ಹಾಗೂ ಮೊಲಾಸಿಸ್–ಬಿ (ಕಾಕಂಬಿ) ಬಳಸಿ ಎಥೆನಾಲ್ ತಯಾರಿಕೆಗೆ 21.5 ಲಕ್ಷ ಟನ್ ಸಕ್ಕರೆ ಬಳಕೆಯಾಗಿತ್ತು. ಈ ಬಾರಿ 35 ಲಕ್ಷ ಟನ್ ಬಳಕೆಯಾಗುವ ನಿರೀಕ್ಷೆಯಿದೆ ಎಂದು ಅಂದಾಜಿಸಿದೆ.

ರೂಪಾಯಿ ಮೌಲ್ಯ ಶೇ 1.5ರಷ್ಟು ಏರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 26 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹85.38 ಆಗಿದೆ. ಕಳೆದ ನಾಲ್ಕು ವಹಿವಾಟುಗಳಲ್ಲಿ ರೂಪಾಯಿ ಮೌಲ್ಯವು ಶೇ 1.5ರಷ್ಟು (131 ಪೈಸೆ) ಏರಿಕೆಯಾಗಿದೆ.

ಜಾಗತಿಕ ಸುಂಕ ಸಮರದಿಂದಾಗಿ ಅಮೆರಿಕದ ಡಾಲರ್ ಮೌಲ್ಯ ಕಳೆದುಕೊಳ್ಳುತ್ತಿರುವುದು ರೂಪಾಯಿ ಪಾಲಿಗೆ ವರದಾನವಾಗಿದೆ.

ಟ್ರಂಪ್ ಪ್ರತಿ ಸುಂಕ ನೀತಿ ಘೋಷಿಸಿದ್ದ ವೇಳೆ ರೂಪಾಯಿ ಮೌಲ್ಯ ಇಳಿಕೆ ಕಂಡಿತ್ತು. ಆ ನಂತರ ಅಮೆರಿಕ ಮತ್ತು ಚೀನಾ ನಡುವೆ ನಡೆಯುತ್ತಿರುವ ಸುಂಕ ಸಮರವು ಡಾಲರ್ ಮೌಲ್ಯದ ಕುಸಿತಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ದ್ವಿಪಕ್ಷೀಯ ವ್ಯಾಪಾರ ಮುಂದಿನ ವಾರ ಚರ್ಚೆ

ನವದೆಹಲಿ (ಪಿಟಿಐ): ಅಮೆರಿಕ ಮತ್ತು ಭಾರತದ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಔಪಚಾರಿಕ ಮಾತುಕತೆ ನಡೆಸಲು ಕೇಂದ್ರದ ಅಧಿಕಾರಿಗಳ ತಂಡವು, ಮುಂದಿನ ವಾರ ವಾಷಿಂಗ್ಟನ್‌ಗೆ ಭೇಟಿ ನೀಡುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕದ ಉನ್ನತ ಮಟ್ಟದ ಅಧಿಕಾರಿಗಳ ತಂಡವು ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸಿತ್ತು.

ವಾಣಿಜ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ರಾಜೇಶ್ ಅಗರವಾಲ್ ಅವರು, ಅಧಿಕಾರಿಗಳ ತಂಡದ ನೇತೃತ್ವ ವಹಿಸುವ ಸಾಧ್ಯತೆಯಿದೆ.

ಹಣ ದುರ್ಬಳಕೆ: ಸಹ ಸಂಸ್ಥಾಪಕರ ವಿರುದ್ಧ ತನಿಖೆ

ಬ್ಲೂಸ್ಮಾರ್ಟ್ ಟ್ಯಾಕ್ಸಿ ಸೇವೆ ಸ್ಥಗಿತ

ಮುಂಬೈ (ಪಿಟಿಐ): ಬೆಂಗಳೂರು, ದೆಹಲಿ ಮತ್ತು ಮುಂಬೈನಲ್ಲಿ ಗುರುವಾರ ಬ್ಲೂಸ್ಮಾರ್ಟ್ ಟ್ಯಾಕ್ಸಿ ಸೇವೆ ದಿಢೀರ್ ಸ್ಥಗಿತಗೊಂಡಿದ್ದು, ಚಾಲಕರು ಮತ್ತು ಬಳಕೆದಾರರು ತೊಂದರೆಗೆ ಸಿಲುಕಿದ್ದಾರೆ.

ಬ್ಲೂಸ್ಮಾರ್ಟ್ ಕಂಪನಿಯು ಆ್ಯಪ್ ಆಧರಿತ ಟ್ಯಾಕ್ಸಿ ಸೇವೆ ಒದಗಿಸುತ್ತದೆ. ಈ ಮೂರು ನಗರಗಳ ವ್ಯಾಪ್ತಿಯಲ್ಲಿ 8 ಸಾವಿರಕ್ಕೂ ಹೆಚ್ಚು ಟ್ಯಾಕ್ಸಿ ಸೇವೆ ಸ್ಥಗಿತಗೊಂಡಿದೆ. ಬುಧವಾರ ಸಂಜೆಯಿಂದಲೇ ಸೇವೆಯಲ್ಲಿ ವ್ಯತ್ಯಯ ಗೊಂಡಿದ್ದು, ಈ ಕುರಿತು ಬಳಕೆದಾರರು ಸಾಮಾಜಿಕ ಜಾಲತಾಣಗಳಲ್ಲಿ ಅಸಮಾಧಾನ ತೋಡಿಕೊಂಡಿದ್ದಾರೆ.

ಸ್ಥಗಿತಕ್ಕೆ ಕಾರಣ ಏನು?: ಬ್ಲೂಸ್ಮಾರ್ಟ್ ಕಂಪನಿಯ ಸಹ ಸಂಸ್ಥಾಪಕರಾದ ಅನ್ಮೋಲ್ ಮತ್ತು ಪುನೀತ್ ಜಗ್ಗಿ ಅವರು ನವೀಕರಿಸಬಹುದಾದ ಇಂಧನ ತಯಾರಿಸುವ ಜೆನ್ಸೋಲ್ ಕಂಪನಿ ಸ್ಥಾಪಿಸಿದ್ದಾರೆ. ಇದು ಬ್ಲೂಸ್ಮಾರ್ಟ್‌ನ ಪ್ರಮುಖ ವಿದ್ಯುತ್ ಗುತ್ತಿಗೆ ಪಾಲುದಾರ ಕಂಪನಿಯೂ ಆಗಿದೆ. ಇದಕ್ಕೆ ಸರ್ಕಾರಿ ಸ್ವಾಮ್ಯದ ಹಣಕಾಸು ಸಂಸ್ಥೆಗಳಿಂದ ನೀಡಿದ ಸಾಲವನ್ನು ಪ್ರವರ್ತಕರು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ವಿದ್ಯುತ್‌ಚಾಲಿತ ವಾಹನಗಳ ಖರೀದಿಗೆ ನೀಡಿದ ಸಾಲವನ್ನು ಐಷಾರಾಮಿ ಅಪಾರ್ಟ್‌ಮೆಂಟ್‌ಗಳ ಖರೀದಿಗೆ ಬಳಸಿಕೊಂಡಿದ್ದಾರೆ. ಈ ಬಗ್ಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತನಿಖೆ ನಡೆಸುತ್ತಿದೆ. ಹಾಗಾಗಿ, ಬ್ಲೂಸ್ಮಾರ್ಟ್ ಆ್ಯಪ್ ಸೇವೆ ಸ್ಥಗಿತಗೊಂಡಿದೆ ಎಂದು ಹೇಳಲಾಗಿದೆ.

ಅಂತ್ಯಗೊಂಡ ಲಾರಿ ಮುಷ್ಕರ

ಒಂದನೇ ಪುಟದಿಂದ...

ರಾಜ್ಯ ಸರ್ಕಾರ ಏರಿಕೆ ಮಾಡಿರುವ ಡೀಸೆಲ್ ದರ ಇಳಿಕೆ, ರಾಜ್ಯ ಹೆದ್ದಾರಿ ಟೋಲ್ ರದ್ದು, ವಾಹನಗಳ ಸಾಮರ್ಥ್ಯ ಅರ್ಹತಾ ಪತ್ರ (ಫಿಟ್‌ನೆಸ್ ಸರ್ಟಿಫಿಕೆಟ್) ನವೀಕರಣ ಶುಲ್ಕ ಹೆಚ್ಚಿಸುವ ಕೇಂದ್ರ ಸರ್ಕಾರದ ಮಾರ್ಗಸೂಚಿ ನಿರಾಕರಣೆ, ನಗರಗಳಿಗೆ ಸರಕು ಸಾಗಾಣಿಕೆ ವಾಹನಗಳ ಪ್ರವೇಶ ನಿರ್ಬಂಧ ಸಡಿಲಿಕೆಗಾಗಿ ಭಾನುವಾರ ರಾತ್ರಿಯಿಂದ ಲಾರಿ ಮುಷ್ಕರ ಆರಂಭವಾಗಿತ್ತು.

ಗುರುವಾರ ಸಂಜೆ ಸಭೆ ನಡೆಸಿದ ಬಳಿಕ ಮಾತನಾಡಿದ ರಾಮಲಿಂಗಾರೆಡ್ಡಿ , 'ಲಾರಿ ಮಾಲೀಕರು ವಿವಿಧ ಬೇಡಿಕೆಗಳನ್ನು ಇಟ್ಟಿದ್ದಾರೆ. ಆನ್‌ಲೈನ್‌ನಲ್ಲಿ ದಂಡ ಪಾವತಿಗೆ ವ್ಯವಸ್ಥೆಯನ್ನು ಜಾರಿ ಮಾಡಲಿದ್ದೇವೆ. ಹಲವು ವರ್ಷಗಳಿಂದ ದಂಡ ಪಾವತಿಸದೇ ಬಾಕಿ ಉಳಿಸಿಕೊಂಡ ವರಿಗೆ ಒಂದು ಬಾರಿಯ ತೀರುವಳಿಗೆ (ಒನ್ ಟೈಮ್ ಸೆಟ್ಲ್‌ಮೆಂಟ್) ಅವಕಾಶ ಕಲ್ಪಿಸಲು ಕೋರಿದ್ದಾರೆ. ಮುಖ್ಯಮಂತ್ರಿ ಜೊತೆಗೆ ಚರ್ಚಿಸಿ ಒಟಿಎಸ್ ಅವಕಾಶ ನೀಡಲಾಗುವುದು. ಟೋಲ್ ವಿಚಾರ ಕೂಡ ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗುವುದು' ಎಂದರು.

ರಾಜ್ಯ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಖಪ್ಪ ಪ್ರತಿಕ್ರಿಯಿಸಿ, 'ಗಡಿ ತನಿಖಾ ಠಾಣೆ ಸಮಸ್ಯೆಯನ್ನು ಮೂರು ತಿಂಗಳಲ್ಲಿ ಬಗೆಹರಿಸುವ ಭರವಸೆ ನೀಡಿದ್ದಾರೆ. ಡೀಸೆಲ್ ದರವನ್ನು ಹಿಂದಿನ ಸರ್ಕಾರ 2023ಕ್ಕಿಂತ ಮೊದಲು ಯದ್ವಾತದ್ವಾ ಏರಿಕೆ ಮಾಡಿತ್ತು. ಆ ಬಗ್ಗೆ ಅಧ್ಯಯನ ಮಾಡುವುದಾಗಿ ಹೇಳಿದ್ದಾರೆ. ನಗರಗಳಿಗೆ ಸರಕು ವಾಹನಗಳ ಪ್ರವೇಶಕ್ಕೆ ಕೇವಲ 5 ಗಂಟೆ ಅವಕಾಶ ನೀಡಿರುವ ಬಗ್ಗೆ ಗಮನ ಹರಿಸುವುದಾಗಿ ತಿಳಿಸಿದ್ದಾರೆ. ವಾಹನಗಳ ಸಾಮರ್ಥ್ಯ ಅರ್ಹತಾ ಪತ್ರ (ಎಫ್‌ಸಿ) ನವೀಕರಣಕ್ಕೆ ₹13 ಸಾವಿರ ಶುಲ್ಕ ವಿಧಿಸುವ ಕೇಂದ್ರ ಸರ್ಕಾರದ ಪ್ರಸ್ತಾವವನ್ನು ಒಪ್ಪಿಕೊಳ್ಳದೇ ಕಡಿಮೆ ಮಾಡಲು ಪತ್ರ ಬರೆಯುವುದಾಗಿ ಹೇಳಿದ್ದಾರೆ. ಪೊಲೀಸರ ಕಿರುಕುಳ ತಪ್ಪಿಸಲು ಹೇಳಿದ್ದೇವೆ' ಎಂದು ತಿಳಿಸಿದರು.

'ಲಾರಿ ಮುಷ್ಕರದಿಂದಾಗಿ ದಿನಕ್ಕೆ ₹4,500 ಕೋಟಿ ನಷ್ಟವಾಗಿದೆ. ನಮ್ಮ ಬೇಡಿಕೆಗಳಿಗೆ ಸಚಿವರು ಸಕಾರಾತ್ಮಕ ವಾಗಿ ಸ್ಪಂದಿಸಿರುವುದರಿಂದ ಮುಷ್ಕರ ಕೊನೆಗೊಳಿಸಿದ್ದೇವೆ' ಎಂದು ಮಾಹಿತಿ ನೀಡಿದರು.

'ರಕ್ಷಣಾ ಕ್ಷೇತ್ರದ ತಯಾರಿಕೆ ಮೌಲ್ಯ: ₹1.6 ಲಕ್ಷ ಕೋಟಿ ದಾಟುವ ಅಂದಾಜು'

ರಾಜನಾಥ್ ಸಿಂಗ್

ನವದೆಹಲಿ (ಪಿಟಿಐ): 'ಭಾರತದಲ್ಲಿ ಈ ವರ್ಷ ರಕ್ಷಣಾ ಕ್ಷೇತ್ರದ ತಯಾರಿಕೆಯ ಒಟ್ಟು ಮೌಲ್ಯ ₹1.60 ಲಕ್ಷ ಕೋಟಿ ದಾಟಬಹುದು ಎಂದು ಅಂದಾಜು ಮಾಡಲಾಗಿದೆ. 2029ರವರೆಗೆ ₹3 ಲಕ್ಷ ಕೋಟಿ ಮೌಲ್ಯದ ಸೇನಾ ಪರಿಕರ ತಯಾರಿಕೆಯ ಗುರಿ ನಿಗದಿಪಡಿಸಲಾಗಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ.

ಆಮದು ಮೇಲಿನ ಅವಲಂಬನೆಯನ್ನು ತಗ್ಗಿಸಲಾಗುವುದು. ದೇಶದ ಅಗತ್ಯ ಬೇಡಿಕೆಯ ಜೊತೆಗೆ ರಫ್ತು ಅವಕಾಶವನ್ನು ಬಲಪಡಿಸುವಂತೆ ರಕ್ಷಣಾ ಕೈಗಾರಿಕಾ ಕ್ಷೇತ್ರವನ್ನು ರೂಪಿಸಲಾಗುವುದು ಎಂದು ಸಚಿವರು ಗುರುವಾರ ಹೇಳಿದರು.

'ರಕ್ಷಣಾ ಸಮಾವೇಶ–ಭವಿಷ್ಯದ ಬಲ' ವಿಷಯವನ್ನು ಕುರಿತು 'ದಿ ವೀಕ್' ನಿಯತಕಾಲಿಕವು ಇಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಷ್ಟ್ರದ ಭದ್ರತೆ, ರಕ್ಷಣಾ ಸ್ವಾಯತ್ತೆಗೆ ಪೂರಕವಾಗಿ ರಕ್ಷಣಾ ತಯಾರಿಕೆ ಸಾಮರ್ಥ್ಯ ಹೆಚ್ಚಿಸುವ ಗುರಿ ಇದೆ. ರಕ್ಷಣಾ ಕ್ಷೇತ್ರದಲ್ಲಿ ನಮ್ಮ ರಫ್ತು ವಹಿವಾಟು ಈ ವರ್ಷ ₹30 ಸಾವಿರ ಕೋಟಿಗೆ ಹಾಗೂ 2029ರ ವೇಳೆಗೆ ₹50 ಸಾವಿರ ಕೋಟಿಗೆ ಮುಟ್ಟಬೇಕು ಎಂದರು.

ಭಾರತವು ತನ್ನ ಗಡಿ ರಕ್ಷಣೆಯ ಜೊತೆಗೆ ಅಂತರರಾಷ್ಟ್ರೀಯ ಗಡಿ ರಕ್ಷಣಾ ವ್ಯವಸ್ಥೆಯಲ್ಲೂ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಭಾರತ, ರಕ್ಷಣಾ ಅಗತ್ಯಗಳಿಗೆ ಆಮದು ಮಾಡಿಕೊಳ್ಳಲಿದೆ ಎಂಬ ಮನಃಸ್ಥಿತಿ ಬದಲಿಸುವುದೇ ಮೊದಲ ಮತ್ತು ಪ್ರಮುಖ ಸವಾಲಾಗಿದೆ ಎಂದು ಹೇಳಿದರು.

'ಚೋಕ್ಸಿ ಗಡೀಪಾರಿಗೆ ಬೆಲ್ಜಿಯಂ ಜತೆ ನಿಕಟ ಸಂಪರ್ಕ'

ನವದೆಹಲಿ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ (ಪಿಎನ್‌ಬಿ) ₹13 ಸಾವಿರ ಕೋಟಿ ವಂಚಿಸಿದ ಪ್ರಕರಣದಲ್ಲಿ ಬೆಲ್ಜಿಯಂನಲ್ಲಿ ಬಂಧಿತರಾಗಿರುವ ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿಯನ್ನು ಭಾರತಕ್ಕೆ ಕರೆತರಲು ಆ ದೇಶದೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಭಾರತ ಗುರುವಾರ ತಿಳಿಸಿದೆ.

ಈ ಕುರಿತು ಮಾತನಾಡಿದ ವಿದೇಶಾಂಗ ವ್ಯವಹಾರಗಳ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್, 'ಚೋಕ್ಸಿಯನ್ನು ಭಾರತಕ್ಕೆ ಕರೆತಂದ ಬಳಿಕ ಆತನ ವಿಚಾರಣೆ ಸಾಧ್ಯವಾಗಲಿದೆ' ಎಂದಿದ್ದಾರೆ. ಭಾರತದ ಕೋರಿಕೆ ಮೇರೆಗೆ ಚೋಕ್ಸಿಯನ್ನು ಬೆಲ್ಜಿಯಂನಲ್ಲಿ ಬಂಧಿಸಲಾಗಿತ್ತು.

'1971ರ ದೌರ್ಜನ್ಯ: ಪಾಕ್ ಕ್ಷಮೆ ಕೋರಲಿ'

ಢಾಕಾ (ಪಿಟಿಐ): 1971ರ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನ ಸಾರ್ವಜನಿಕವಾಗಿ ಕ್ಷಮೆ ಕೋರಬೇಕು ಎಂದು ಬಾಂಗ್ಲಾದೇಶ ಒತ್ತಾಯಿಸಿದೆ.

ಗುರುವಾರ ನಡೆದ ಉಭಯ ದೇಶಗಳ ವಿದೇಶಾಂಗ ಕಾರ್ಯದರ್ಶಿಗಳ ಹಂತದ ಮಾತುಕತೆ ಸಂದರ್ಭದಲ್ಲಿ 'ಐತಿಹಾಸಿಕವಾಗಿ ಬಗೆಹರಿಯದ ಸಮಸ್ಯೆಗಳನ್ನು' ಬಾಂಗ್ಲಾದೇಶವು ಪ್ರಸ್ತಾಪಿಸಿತು.

ಬಾಂಗ್ಲಾದೇಶ ಹೊಸದಾಗಿ ರಚನೆಯಾದ ಬಳಿಕ ತನಗೆ ದೊರೆಯಬೇಕಾಗಿದ್ದ ಒಟ್ಟಾರೆ ಆಸ್ತಿಯ ಮೌಲ್ಯ 4.3 ಶತಕೋಟಿ ಡಾಲರ್ (₹36 ಸಾವಿರ ಕೋಟಿ) ಮೊತ್ತವನ್ನು ಸಹ ಪಾಕಿಸ್ತಾನ ಪಾವತಿಸಬೇಕು ಎಂದು ಅದು ಒತ್ತಾಯಿಸಿದೆ.

ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿ ಜೊತೆಗೆ ಚರ್ಚೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬಾಂಗ್ಲಾದೇಶದ ವಿದೇಶಾಂಗ ಕಾರ್ಯದರ್ಶಿ ಜಶೀಂ ಉದ್ದಿನ್, 'ಪಾಕಿಸ್ತಾನದ ಜೊತೆಗಿನ ಚರ್ಚೆ ವೇಳೆ ಐತಿಹಾಸಿಕವಾಗಿ ಬಗೆಹರಿಯದ ವಿಚಾರಗಳು ಸೇರಿದಂತೆ ಹಲವು ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ' ಎಂದಿದ್ದಾರೆ. ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಮಧ್ಯೆ ಸುಮಾರು 15 ವರ್ಷಗಳ ಬಳಿಕ ನಡೆದ ಮೊದಲ ಚರ್ಚೆ ಇದಾಗಿದೆ.

'ವಿದೇಶಿ ವಿದ್ಯಾರ್ಥಿಗಳ ನೋಂದಣಿ ಸೌಲಭ್ಯ ರದ್ದು'

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಅಂತರರಾಷ್ಟ್ರೀಯ ವಿದ್ಯಾರ್ಥಿ ವೀಸಾ ಹೊಂದಿರುವವರು ನಡೆಸುತ್ತಿರುವ 'ಕಾನೂನುಬಾಹಿರ ಮತ್ತು ಹಿಂಸಾತ್ಮಕ' ಚಟುವಟಿಕೆಗಳ ಕುರಿತ ಮಾಹಿತಿಯನ್ನು ಏಪ್ರಿಲ್ 30ರ ಒಳಗಾಗಿ ಸಲ್ಲಿಸುವಂತೆ ಅಮೆರಿಕ ಗೃಹ ಇಲಾಖೆಯು ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಸೂಚಿಸಿದೆ.

ಒಂದು ವೇಳೆ, ಈ ಗಡುವಿನ ಒಳಗಾಗಿ ಮಾಹಿತಿ ಸಲ್ಲಿಸದಿದ್ದಲ್ಲಿ, ವಿದೇಶಿ ವಿದ್ಯಾರ್ಥಿಗಳ ನೋಂದಣಿಗೆ ಸಂಬಂಧಿಸಿ ವಿ.ವಿ ಹೊಂದಿರುವ ಸೌಲಭ್ಯವನ್ನು ಹಿಂಪಡೆಯಲಾಗುವುದು ಎಂದು ಇಲಾಖೆ ಎಚ್ಚರಿಸಿದೆ. ಇದರೊಂದಿಗೆ ಹಾರ್ವರ್ಡ್ ವಿ.ವಿ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ನಡುವಿನ ಜಟಾಪಟಿ ತೀವ್ರಗೊಂಡಂತಾಗಿದೆ. ಜೊತೆಗೆ, ವಿಶ್ವವಿದ್ಯಾಲಯಕ್ಕೆ 2.7 ಮಿಲಿಯನ್ ಡಾಲರ್‌ಗೂ (ಅಂದಾಜು ₹23 ಕೋಟಿ) ಅಧಿಕ ಅನುದಾನ ನೀಡುವುದನ್ನು ಸರ್ಕಾರ ರದ್ದು ಮಾಡಿದೆ.

ಸರ್ಕಾರ ನೀಡಿದ್ದ ಕೆಲ ಸೂಚನೆಗಳನ್ನು ವಿಶ್ವವಿದ್ಯಾಲಯ ಇತ್ತೀಚೆಗೆ ತಿರಸ್ಕರಿಸಿತ್ತು. ಈ ಕಾರಣಕ್ಕೆ ಟ್ರಂಪ್ ಆಡಳಿತ ಈ ಕ್ರಮ ಕೈಗೊಂಡಿದೆ.

ಹಾರ್ವರ್ಡ್ ವಿಶ್ವವಿದ್ಯಾಲಯ ಎಡ ಪಂಥೀಯ ಸಿದ್ಧಾಂತ ಬೆಂಬಲಿಸುತ್ತದೆ ಎಂಬ ಕಾರಣಕ್ಕೆ ವಿ.ವಿಗೆ ನೀಡಿರುವ ತೆರಿಗೆ ವಿನಾಯಿತಿ ಸೌಲಭ್ಯವನ್ನು ಕೂಡ ಹಿಂಪಡೆಯುವುದಾಗಿ ಸರ್ಕಾರ ಎಚ್ಚರಿಸಿತ್ತು.

ಇಸ್ಲಾಮಾಬಾದ್: ಪಾಕ್ ಸೇನೆ ಮುಖ್ಯಸ್ಥ ಜನರಲ್ ಮುನೀರ್ ಹೇಳಿಕೆ

'ಕಾಶ್ಮೀರವು ಪಾಕ್‌ನ ಕಂಠನಾಳವಿದ್ದಂತೆ'

ಆಸೀಮ್ ಮುನೀರ್

ಇಸ್ಲಾಮಾಬಾದ್ (ಪಿಟಿಐ): 'ಪಾಕಿಸ್ತಾನದ ಪಾಲಿಗೆ ಕಾಶ್ಮೀರವು ಕಂಠನಾಳವಿದ್ದಂತೆ (ತಲೆಯಿಂದ ಹೃದಯಕ್ಕೆ ರಕ್ತ ಒಯ್ಯುವ ನಾಳ). ಕಾಶ್ಮೀರ ಪಾಕಿಸ್ತಾನಕ್ಕೇ ಸೇರಿದ್ದು' ಎಂದು ಪಾಕಿಸ್ತಾನ ಸೇನೆ ಮುಖ್ಯಸ್ಥ ಜನರಲ್ ಅಸೀಮ್ ಮುನೀರ್ ಹೇಳಿದ್ದಾರೆ.

'ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಿದ್ದು ಎಂಬುದು ನಮ್ಮ ಸ್ಪಷ್ಟ ನಿಲುವು. ಅದನ್ನು ಪಾಕಿಸ್ತಾನಕ್ಕೆ ಸೇರಿಸುವ ಸಂಬಂಧ ವೀರೋಚಿತ ಹೋರಾಟ ನಡೆಸುತ್ತಿರುವ ನಮ್ಮ ಕಾಶ್ಮೀರಿ ಸಹೋದರರನ್ನು ನಾವು ಎಂದಿಗೂ ಕೈಬಿಡುವುದಿಲ್ಲ' ಎಂದು ಜನರಲ್ ಮುನೀರ್ ಹೇಳಿದ್ದಾರೆ. ಈ ಮಾತಿಗೆ ಭಾರತ ತಿರುಗೇಟು ನೀಡಿದೆ.

ಮಂಗಳವಾರ ಇಲ್ಲಿ ಆಯೋಜಿಸಿದ್ದ ಮೊದಲ 'ಸಾಗರೋತ್ತರ ಪಾಕಿಸ್ತಾನಿಗಳ ಸಮಾವೇಶ'ದಲ್ಲಿ ಜನರಲ್ ಮುನೀರ್ ಈ ಮಾತುಗಳನ್ನಾಡಿದ್ದಾರೆ.

'ಪ್ರತಿಯೊಂದು ವಿಚಾರದಲ್ಲಿಯೂ ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಭಿನ್ನತೆ ಇತ್ತು ಎಂಬುದು ನಮ್ಮ ಪೂರ್ವಜರ ನಂಬಿಕೆಯಾಗಿತ್ತು. ದೇಶದ ಈ ಕಥೆಯನ್ನು ನಿಮ್ಮ ಮಕ್ಕಳಿಗೆ ತಿಳಿಸಿ' ಎಂದು ಕೋರಿದರು.

ಈ ಕಾರ್ಯಕ್ರಮದಲ್ಲಿ, ಪ್ರಧಾನಿ ಶೆಹಬಾಜ್ ಶರೀಫ್, ಹಿರಿಯ ಸಚಿವರು ಹಾಗೂ ವಿದೇಶಗಳಲ್ಲಿ ನೆಲಸಿರುವ ಪಾಕಿಸ್ತಾನ ಪ್ರಜೆಗಳು ಪಾಲ್ಗೊಂಡಿದ್ದರು.

'ಪಾಕಿಸ್ತಾನ ರಚನೆಯ ಉದ್ದೇಶವನ್ನು ನಿಮ್ಮ ಮಕ್ಕಳಿಗೆ ತಿಳಿಸಿ. ಪ್ರತಿಯೊಂದು ವಿಚಾರದಲ್ಲಿ ನಾವು ಹಿಂದೂಗಳಿಗಿಂತ ಬೇರೆ ಎಂಬುದು ನಮ್ಮ ಹಿರಿಯರ ಭಾವನೆಯಾಗಿತ್ತು ಎಂಬುದನ್ನು ನಿಮ್ಮ ಮಕ್ಕಳು ಮರೆಯುವುದಿಲ್ಲ' ಎಂದು ಹೇಳಿದ ಮುನೀರ್, ಎರಡು ದೇಶಗಳ ಸಿದ್ಧಾಂತ ಪ್ರತಿಪಾದಿಸಿದ್ದ ಎಂ.ಎ.ಜಿನ್ನಾ ಮಾತುಗಳನ್ನು ಉಲ್ಲೇಖಿಸಿದ್ದಾರೆ.

'ನಮ್ಮ ಧರ್ಮಗಳು ಬೇರೆ, ನಮ್ಮ ಪದ್ಧತಿಗಳು– ಸಂಪ್ರದಾಯಗಳು, ಆಚಾರ–ವಿಚಾರಗಳೂ ಬೇರೆ. ಅದೇ ರೀತಿ ನಮ್ಮ ಮಹತ್ವಾಕಾಂಕ್ಷೆಗಳು ಸಹ ಬೇರೆ. ಈ ಅಂಶಗಳೇ ಎರಡು ದೇಶ ಸಿದ್ಧಾಂತಕ್ಕೆ ತಳಹದಿಯಾಗಿದ್ದವು' ಎಂದೂ ಹೇಳಿದ್ದಾರೆ.

ಕಾಶ್ಮೀರ ತೆರವು ಮಾಡಲಿ ಪಾಕ್‌ಗೆ ಭಾರತ ತಿರುಗೇಟು

ರಣಧೀರ ಜೈಸ್ವಾಲ್

ನವದೆಹಲಿ: ಕಾಶ್ಮೀರ ಕುರಿತು ಜನರಲ್ ಅಸೀಮ್ ಮುನೀರ್ ನೀಡಿರುವ ಹೇಳಿಕೆಗೆ ಭಾರತ ಗುರುವಾರ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ.

'ತಾನು ಅತಿಕ್ರಮಿಸಿಕೊಂಡಿರುವ ಭಾರತದ ಭೂಭಾಗವನ್ನು ಪಾಕಿಸ್ತಾನ ತೆರವು ಮಾಡಬೇಕು. ಇದೊಂದೇ ಅದು ಕಾಶ್ಮೀರದೊಂದಿಗೆ ಹೊಂದಿರುವ ಏಕೈಕ ಸಂಬಂಧ' ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ ಜೈಸ್ವಾಲ್ ತಿರುಗೇಟು ನೀಡಿದ್ದಾರೆ.

'ವಿದೇಶದ ಭೂಭಾಗವೊಂದು ಅದರ (ಪಾಕಿಸ್ತಾನ) ಕಂಠನಾಳ ಹೇಗಾಗುತ್ತದೆ? ಕಾಶ್ಮೀರವು ಭಾರತದ ಕೇಂದ್ರಾಡಳಿತ ಪ್ರದೇಶ' ಎಂದು ಜೈಸ್ವಾಲ್ ಹೇಳಿದ್ದಾರೆ.

ಮುಂಬೈ ಮೇಲಿನ ದಾಳಿಯ ಪ್ರಮುಖ ಆರೋಪಿ ತಹವ್ವುರ್ ರಾಣಾನಿಂದ ಅಂತರ ಕಾಯ್ದುಕೊಂಡಿರುವ ಪಾಕಿಸ್ತಾನದ ನಡೆ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಜೈಸ್ವಾಲ್, 'ಎಷ್ಟೇ ಪ್ರಯತ್ನಗಳನ್ನು ಮಾಡಿದರೂ, ಪಾಕಿಸ್ತಾನವೇ ಭಯೋತ್ಪಾದನೆಯ ಜಾಗತಿಕ ಕೇಂದ್ರ ಎಂಬ ಕುಖ್ಯಾತಿ ಹೋಗುವುದಿಲ್ಲ' ಎಂದು ಉತ್ತರಿಸಿದರು.

ಜಿಲ್ಲಾ ಪಂಚಾಯತ್, ತುಮಕೂರು.
ಕಾರ್ಯಪಾಲಕ ಇಂಜಿನೀಯರ್ ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ:01/2025-26 ದಿನಾಂಕ:16-04-2025

ಕರ್ನಾಟಕ ರಾಜ್ಯಪಾಲರ ಪರವಾಗಿ **ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ** ವ್ಯಾಪ್ತಿಯ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅನ್ನು ಕರೆಯಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು **ದಿನಾಂಕ:16-04-2025 ರಿಂದ 30-04-2025** ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: **080-25501216, 080-25501227** ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/- **ಕಾರ್ಯಪಾಲಕ ಇಂಜಿನೀಯರ್,**
ಪಂ.ರಾ.ಇಂ.ವಿಭಾಗ,ಮಧುಗಿರಿ.

DIPR/TUM/RO-01/25-26/Oysters

ಪುರಸಭಾ ಕಾರ್ಯಾಲಯ, ಚನ್ನಗಿರಿ. (ದಾವಣಗೆರೆ ಜಿಲ್ಲೆ)

ಫೋ:08189-228021, www.channagiritown.mrc.gov.in
E-mail:ka.channagiri.tmc@gmail.com

ಸಂ:ಪುರಸಭೆ/ಕೆ.ಆ/ಎಸ್‌ಬಿಎಂ/ಟಿಆರ್-06/01/2024-25 ದಿ: 15.04.2025

ಮರು ಟೆಂಡರ್ ಪ್ರಕಟಣೆ

(ಸ್ಟಾಂಡರ್ಡ್ ಟೆಂಡರ್ ಪ್ರೊಕ್ಯೂರ್‌ಮೆಂಟ್ ಕೆಡಬ್ಲ್ಯೂ-3,4ರ ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಹಾಗೂ ಚಾಲ್ತಿ ಪಾರದರ್ಶಕತೆ ನಿಯಮದ ಪ್ರಕಾರ 2022-23 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ಅರ್ಹ ಗುತ್ತಿಗೆದಾರರಿಂದ ಕೆಪಿಪಿ-ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಪ್ರಯುಕ್ತ ಮಾಹಿತಿಗಾಗಿ https://kppp.karnataka.gov.in ರ ಮತ್ತು ಕಛೇರಿಯ ವೆಬ್‌ಸೈಟ್ www.channagiritown.mrc.gov.in/ tender ನಲ್ಲಿ ಹಾಗೂ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು. ಟೆಂಡರ್ ಫಾರಂ ಶುಲ್ಕ ಮತ್ತು ಇಎಂಡಿ ಕೆಪಿಪಿ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಇರುವಂತೆ ಆನ್‌ಲೈನ್ ನಲ್ಲಿ ಪಾವತಿಸುವುದು.

1. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 30-04-2025 ಸಮಯ : 5.30
2. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 02-05-2025 ಸಮಯ : 11.00
3. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 05-05-2025 ಸಮಯ : 11.00

DMA/2024-25/OW/WORK_INDENT33614/CALL-2 ಅಂದಾಜು ಮೊತ್ತ:- **134.00** ಲಕ್ಷ, ಇಎಂಡಿ ಮೊತ್ತ:- ರೂ. **1,34,000-00** ಕಾಲಾವಧಿ:-9 ತಿಂಗಳು
DMA/2024-25/OW/WORK_INDENT34809/CALL-2 ಅಂದಾಜು ಮೊತ್ತ:-**90.00** ಲಕ್ಷ, ಇಎಂಡಿ ಮೊತ್ತ:- ರೂ. **1,35,000-00** ಕಾಲಾವಧಿ:-9 ತಿಂಗಳು.

ವಾಸಾಇ/ದಾವಣಗೆರೆ/26/ ಕೆಎಸ್‌ಎಂಸಿಎ/2025-26

ಸಹಿ/- ಮುಖ್ಯಾಧಿಕಾರಿಗಳು, ಪುರಸಭೆ, ಚನ್ನಗಿರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಆಯುಕ್ತರು (ಆಡಳಿತ)ರವರ ಕಚೇರಿ, 1ನೇ ಮಹಡಿ, ಅನೆಕ್ಸ್-1 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು-560 002.

ಸಂಖ್ಯೆ:ಉಆ/ಆಡಳಿತ/ಟೆಂಡರ್/01/2025-26 ದಿನಾಂಕ: 17.04.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಉಪ ಆಯುಕ್ತರು (ಆಡಳಿತ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬ್ರ.ಬೆಂ.ಮ.ಪಾ) ಇವರು ಈ ಕೆಳಕಂಡ ಸೇವೆಗಳಿಗೆ ಅರ್ಹ ಹೆಸರಾಂತ ಸೇವಾ ಪೂರೈಕೆದಾರರನ್ನು ನೇಮಕ ಮಾಡಿಕೊಳ್ಳಲು ಪ್ರಸ್ತಾವನೆಗಳನ್ನು (ತಾಂತ್ರಿಕ ಮತ್ತು ಆರ್ಥಿಕ) ಆಹ್ವಾನಿಸಿದ್ದಾರೆ.

ಯೋಜನೆಯ ಹೆಸರು
ಬ್ರ.ಬೆಂ.ಮ.ಪಾಲಿಕೆಗೆ ಒಂದು ವರ್ಷದ ಅವಧಿಗೆ ಕೌಶಲ್ಯ ಹೊಂದಿದ ಕಾರ್ಮಿಕರು ಮತ್ತು ಇತರೆ ಮಾನವಸಂಪನ್ಮೂಲ ಸೇವೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವುದು.
ಟೆಂಡರಿಗಿಟ್ಟ ಮೊತ್ತ ₹.1,34,93,588/-, ಇಎಂಡಿ ಮೊತ್ತ: ₹.2,02,500/-

ಟೆಂಡರ್ ವೇಳಾಪಟ್ಟಿ: (1) ಐಎಫ್‌ಟಿ/ಆರ್‌ಎಫ್‌ಪಿ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ **18.04.2025**ರಿಂದ ಲಭ್ಯವಿರುತ್ತದೆ. (2) ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **28.04.2025**ರ ಮಧ್ಯಾಹ್ನ **3:30** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **29.04.2025**ರ ಮಧ್ಯಾಹ್ನ **3:00** ಗಂಟೆಯ ನಂತರ ನಡೆಸಲಾಗುವುದು. (4) ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **02.05.2025**ರ ಸಂಜೆ **5:00** ಗಂಟೆಯವರೆಗೆ. (5) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **03.05.2025**ರ ಸಂಜೆ **5:00** ಗಂಟೆಯ ನಂತರ ತೆರೆಯಲಾಗುವುದು. (6) ಆರ್ಥಿಕ ಬಿಡ್ ತೆರೆಯುವುದನ್ನು ಟೆಂಡರುದಾರರಿಗೆ ನಂತರ ಮೇಲ್/ಫೋನ್ ಮೂಲಕ ತಿಳಿಸಲಾಗುವುದು.

ಸಹಿ/- ಉಪ ಆಯುಕ್ತರು (ಆಡಳಿತ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ (ದಕ್ಷಿಣ ವಲಯ) ಕಛೇರಿ, ಬಿಬಿಎಂಪಿ, ದಕ್ಷಿಣ ವಲಯ, 9ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ, 2ನೇ ಬ್ಲಾಕ್, ಬೆಂಗಳೂರು - 560011.

ಸಂಖ್ಯೆ: ಎಸ್‌ಎಡಿಹೆಚ್(ಎಸ್)/ಟೆಂಡರ್/04/2025-26 ದಿನಾಂಕ: 17-04-2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ)

(ದ್ವಿ-ಲಕೋಟೆ ಪದ್ಧತಿ) (ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು (ದಕ್ಷಿಣ ವಲಯ), (ಈ ದಸ್ತಾವೇಜುಗಳಲ್ಲಿ ಉದ್ಯೋಗದಾತರು ಎಂದು ಉಲ್ಲೇಖಿಸಲಾಗಿದೆ) ಇವರು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಉದ್ಯಾನವನ ನಿರ್ವಹಣೆಯ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸುವರು ಅರ್ಹ ಮತ್ತು ಅನುಭವಶಾಲಿಗಳಾದ ವ್ಯಕ್ತಿ / ಏಜೆನ್ಸಿಗಳು / ಸಂಸ್ಥೆಗಳಿಂದ (ಈ ದಸ್ತಾವೇಜುಗಳಲ್ಲಿ ಟೆಂಡರುದಾರರು ಎಂದು ಉಲ್ಲೇಖಿಸಲಾಗಿದೆ) ಕೆಟಿಪಿಪಿ ನಿಯಮಗಳು 2000 ಅನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ - ಕೆಡಬ್ಲ್ಯೂ-1)

ಕ್ರ ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ಸುದ್ದುಗುಂಟೆಪಾಳ್ಯ ವಾರ್ಡ್ ಉದ್ಯಾನವನ (ವಾರ್ಡ್ ಸಂಖ್ಯೆ 178) ಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ ಕಾಮಗಾರಿ. (2ನೇ ಕರೆ) - (ಪ್ರವರ್ಗ-I) - ಅಂದಾಜು ಮೊತ್ತ (ರೂ. ಗಳಲ್ಲಿ): 50,66,000.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,700.00
2	ಜಯನಗರ ವಿಧಾನಸಭಾ ಮತಕ್ಷೇತ್ರದ ಉದ್ಯಾನವನಗಳಲ್ಲಿ ಶೌಚಾಲಯಗಳ ನಿರ್ವಹಣೆ ಕಾಮಗಾರಿ. (2ನೇ ಕರೆ) - (ಪ್ರವರ್ಗ-I) - ಅಂದಾಜು ಮೊತ್ತ (ರೂ. ಗಳಲ್ಲಿ): 9,50,464.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 11,900.00
3	ಯಡಿಯೂರು ವಾರ್ಡ್‌ನ (ವಾರ್ಡ್ ಸಂಖ್ಯೆ 188) ಲಕ್ಷ್ಮಣ್ ರಾವ್ ಬೌಲೆವಾರ್ಡ್ "ಎಫ್" ಪಾರ್ಕ್ ಉದ್ಯಾನವನದಲ್ಲಿ ಲೀಫ್ ಶ್ರೆಡ್ಡಿಂಗ್ ಮೆಷಿನ್ ನಿರ್ವಹಣೆ ಹಾಗೂ ಮ್ಯಾನೇಜ್‌ಮೆಂಟ್ ಕಾಮಗಾರಿ. (2ನೇ ಕರೆ) - (ಎಸ್.ಟಿ) - ಅಂದಾಜು ಮೊತ್ತ (ರೂ. ಗಳಲ್ಲಿ): 10,00,000.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 12,500.00
4	ಯಡಿಯೂರು ಕೆರೆ ಉದ್ಯಾನವನದಲ್ಲಿನ ಪಕ್ಷಿಗಳು ಹಾಗೂ ಅವುಗಳ ಆವಾಸಸ್ಥಾನ (ವಾರ್ಡ್ ಸಂಖ್ಯೆ 188 ಬನಶಂಕರಿ ಮರಳ ಬಾ ಗುಡಿಗೆ) ನಿರ್ವಹಣೆ ಕಾಮಗಾರಿ. (3ನೇ ಕರೆ) - (ಇತರೆ) - ಅಂದಾಜು ಮೊತ್ತ (ರೂ. ಗಳಲ್ಲಿ): 12,00,000.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 30,000.00
5	ಜಯನಗರ ವಿಧಾನಸಭಾ ಮತಕ್ಷೇತ್ರದ ಉದ್ಯಾನವನಗಳಲ್ಲಿ ಮೆಡಿಯನ್ನ್ ಹಾಗೂ ಸರ್ಕಲ್‌ಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. (3ನೇ ಕರೆ) - (ಇತರೆ) - ಅಂದಾಜು ಮೊತ್ತ (ರೂ. ಗಳಲ್ಲಿ): 7,43,400.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 18,585.00
6	ಪದ್ಮನಾಭನಗರ ವಿಧಾನಸಭಾ ಮತಕ್ಷೇತ್ರದ ಉದ್ಯಾನವನಗಳಲ್ಲಿ, ಮೆಡಿಯನ್ನ್ ಹಾಗೂ ಸರ್ಕಲ್‌ಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. (3ನೇ ಕರೆ) - (ಇತರೆ) - ಅಂದಾಜು ಮೊತ್ತ (ರೂ. ಗಳಲ್ಲಿ): 14,86,800.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 37,170.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **19-04-2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಸಲ್ಲಿಸಲು ದಿನಾಂಕ: **28-04-2025 ರಂದು ಸಂಜೆ 4.00 ಗಂಟೆವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **29-04-2025 ರಂದು ಸಂಜೆ 4.30 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ದಕ್ಷಿಣ ವಲಯ, ಬಿಬಿಎಂಪಿ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಬಗ್ಗೆ ಯಾವುದೇ ರೀತಿಯಲ್ಲಿ ಪತ್ರಿಕೆ ಜವಾಬ್ದಾರಿ ಆಗಿರುವುದಿಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಸಹಾಯಕ ಆಯುಕ್ತರು, ವಲಯ ಕಛೇರಿ ನಂ-04, ನವನಗರ, ಹುಬ್ಬಳ್ಳಿ
E-Mail: www.hdmczone04@gmail.com. Ph: 0836-2224865.

ನಂ: ಹುಧಮಪಾ/ವ.ಕ.ನಂ-04/02/ಸಾ.ಪ್ರ/2025-26. ದಿನಾಂಕ: 10-04-2024.

ಸಾರ್ವಜನಿಕ ಪ್ರಕಟಣೆ

ಹುಬ್ಬಳ್ಳಿ ಶಹರದ ಸಾರ್ವಜನಿಕರಲ್ಲಿ ಈ ದಿನಾಂಕ: 29-11-2024 ಠರಾವ ನಂ.657 ರಂತೆ ಹುಬ್ಬಳ್ಳಿ ವಿಭಾಗದ ವಾರ್ಡ ನಂ-27ರಲ್ಲಿ ಮಹಾನಗರ ಪಾಲಿಕೆಯಿಂದ ನಿರ್ಮಾಣಗೊಂಡ ನವನಗರದ ಮಾರುಕಟ್ಟೆಗೆ **"ಶ್ರೀ ಜಗದ್ಗುರು ಬಸವೇಶ್ವರ ತರಕಾರಿ ಮಾರುಕಟ್ಟೆ"** ಎಂದು ಠರಾವ ಪಾಸ್ ಮಾಡಿದ್ದು ಪ್ರಸ್ತಾಪಿತ ಸದರಿ ನಾಮಕರಣಕ್ಕೆ ಯಾವುದೇ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ 15 ದಿವಸಗಳಲ್ಲಿ ಮಹಾನಗರ ಪಾಲಿಕೆಯ ವಲಯ ಕಚೇರಿ ನಂ-04ಕ್ಕೆ ಸಲ್ಲಿಸಲು ಕೋರಲಾಗಿದೆ. ಅವಧಿ ನಂತರ ಬಂದ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲವೆಂದು ಈ ಮೂಲಕ ಸಾರ್ವಜನಿಕ ಪ್ರಕಟಣೆ.

ವಾ.ಸಾ.ಇ/ಧಾ/56/ ದೇಶಪಾಂಡೆ/ಜಾಹೀ/2025-26

ಸಹಿ/- ಸಹಾಯಕ ಆಯುಕ್ತರು, ವಲಯ ಕಚೇರಿ ನಂ. 04, ನವನಗರ, ಹುಬ್ಬಳ್ಳಿ

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

ದೂರವಾಣಿ: +91-8431186388, ಇ-ಮೇಲ್: sabvmcri@gmail.com

ಸಂಖ್ಯೆ: SABVMCRI/E-TENDER/CHARAKA/CATH/02/2025-26 ದಿನಾಂಕ: 17-04-2025

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ ಶಿವಾಜಿನಗರ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾರ್ಡಿಯಾಲಜಿ ವಿಭಾಗಕ್ಕೆ ಅಗತ್ಯವಿರುವ **CARDIAC CATHETERIZATION LABORATORY ITEMS** ಗಳನ್ನು ಪೂರೈಕೆ ಮಾಡಲು ಕೆಟಿಪಿಪಿ ನಿಯಮದಂತೆ ಇ-ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಡಾಕ್ಯುಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭವಾದ ದಿನಾಂಕ: **11-04-2025 ರಿಂದ.** 2) ಇ-ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **25-04-2025 ರ ಸಂಜೆ 5.30 ಗಂಟೆವರೆಗೆ. 3)** ಮಾದರಿಗಳನ್ನು ಸಲ್ಲಿಸುವ ದಿನಾಂಕ: **25-04-2025 ರಂದು ಬೆಳಿಗ್ಗೆ 10.30 ರಿಂದ ಸಂಜೆ 4.00 ಗಂಟೆವರೆಗೆ. 4)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **28-04-2025 ರಂದು ಬೆಳಿಗ್ಗೆ 10.30 ಗಂಟೆಗೆ.** ವಿವರವಾದ ಮಾಹಿತಿಗಾಗಿ ವೆಬ್‌ಸೈಟ್: **https://kppp.karnataka.gov.in** ಗೆ ಭೇಟಿನೀಡಿ. ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ವಾಸಾಇ/ಸಾ.ಪ್ರ/255/ಅಡ್ವರ್ಟೈಸ್/2025-26

ಸಹಿ/- ನಿರ್ದೇಶಕರು ಹಾಗೂ ಡೀನ್, ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN : U31401KA2002SGC030437)
ನಿಗಮ ಕಚೇರಿ, ನವನಗರ, ಪಿ. ಬಿ. ರಸ್ತೆ, ಹುಬ್ಬಳ್ಳಿ - 580 025,
ದೂರವಾಣಿ : 0836 - 2322771, 2324307.
ಮಿಂಚಂಚೆ : seeit@hescom.co.in

ಸಂಖ್ಯೆ : ಹು.ವಿ.ಸ.ಕಂ.ನಿ./ಅ.ಇಂ.(ಐ.ಟಿ.&ಎಂ.ಟಿ.)/ಐ.ಟಿ-1/ ಎಸ್.ಎಂ/1291/2025-26/ಸಿ.ವೈ.ಎಸ್.-575 ದಿನಾಂಕ : 17-04-2025

ಮರು ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ವಿ), ಐಟಿ & ಎಮ್‌ಟಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ಇವರಿಂದ ಈ ಕೆಳಕಂಡ ಅಲ್ಪಾವಧಿ ಟೆಂಡರ್ ಅನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

1) ಬಿಡ್ ಇಂಡೆಂಟ್ ಸಂಖ್ಯೆ : HESCOM/2024-25/SE0369/CALL-2, ಟೆಂಡರ್ ವಿವರಗಳು : ಹೆಸ್ಕಾಂ ವ್ಯಾಪ್ತಿಯಲ್ಲಿನ ಹೊಸ ಸಂಪರ್ಕಗಳಿಗೆ (ತಾತ್ಕಾಲಿಕ ಸ್ಥಾವರಗಳನ್ನು ಸೇರಿದಂತೆ) ಮತ್ತು ಸಂಭಾವ್ಯ ಗ್ರಾಹಕರಿಗೆ ಸ್ಮಾರ್ಟ್ ಮೀಟರ್‌ಗಳಂದ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು 05 ವರ್ಷಗಳ ಅವಧಿಗೆ ದರ ಒಪ್ಪಂದದ ಆಧಾರದ ಮೇಲೆ ಮೀಟರ್ ಮಾರಾಟಕ್ಕಾಗಿ ಮೀಟರ್ ಡೀಲರ್‌ಶಿಪ್ ಮಾರಾಟಗಾರರ ಆಯ್ಕೆ.

ಸದರಿ ಟೆಂಡರ್‌ನ ಪೂರ್ಣ ವಿವರಗಳನ್ನು ವೆಬ್‌ಸೈಟ್ : **www.kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನಿಯರರು (ವಿ), (ಐಟಿ & ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/62/ಮೀಡಿಯಾ/2025-26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ: O&MTENDER:2025-26/84
ದಿನಾಂಕ:16.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:01/2025-26
(ದ್ವಿ-ಲಕೋಟೆ ಪದ್ಧತಿ) (Kppp portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಎಂ.ವಿ.ಎಸ್ ಓ.&ಎಂ ಯೋಜನೆಯಡಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬಿ.ಜಿ.ಪುರ ಮತ್ತು ಇತರೆ 56 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ (12 ತಿಂಗಳು) ಕಾಮಗಾರಿಯ ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.113.15ಲಕ್ಷಗಳು, ಪೂರ್ವಭಾವಿ ಸಭೆ ದಿನಾಂಕ:21.04.2025 ಸಮಯ:ಬೆಳಿಗ್ಗೆ 11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ), ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:23.04.2025 ಸಂಜೆ: 5:00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:24.04.2025 ಸಂಜೆ: 05:05 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ:02.05.2025 ಬೆಳಿಗ್ಗೆ 11:00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ವೆಬ್ ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ. ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ:08232-222363.

ಸಹಿ/-ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ

ವಾಸಾಇಂ/ಸಂ-ಮಂ/ಕೆಎಸ್‌ಎಂಸಿಎ/035/2025-26

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

9ನೇ & 10ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು - 560 001. ದೂರವಾಣಿ : 080-22867172/22866302
ವೆಬ್‌ಸೈಟ್ : www.municipaladmn.gov.in

ನಂ: 1472186/DMA/DEV/AMRT/44/2024 ದಿನಾಂಕ : 17-04-2025

ಅಧಿಸೂಚನೆ

ಪೌರಾಡಳಿತ ನಿರ್ದೇಶನಾಲಯ, ಈ ಕೆಳಗಿನ ಕೆಲಸಕ್ಕಾಗಿ ಸೂಕ್ತ ಕನ್ಸಲ್ಟೆಂಟ್‌ಗಳನ್ನು ಆಯ್ಕೆ ಮಾಡಲು ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

Sl. No.	Notification No.	Description of Work
1	DMA/2025-26/SE5176	Consulting Services for Carrying out Credit Rating for 36 ULBs in Package 1 (South)
2	DMA/2025-26/SE5177	Consulting Services for Carrying out Credit Rating for 36 ULBs in Package 2 (North)

ಕ್ಯಾಲೆಂಡರ್: 1) ಬಿಡ್ ಡಾಕ್ಯುಮೆಂಟ್‌ಗಳನ್ನು ಪ್ರಕಟಿಸುವ ದಿನಾಂಕ: **17.04.2025.** 2) ಪ್ರೀ-ಬಿಡ್ ಮೀಟಿಂಗ್: **23.04.2025.** 3) ಪ್ರಸ್ತಾವನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **03.05.2025.** 4) ಕಾರ್ಯ ವಿಧಾನದ ಪ್ರಸ್ತುತಿ (Presentation on Approach and Methodology) : **05.05.2025.** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07.05.2025.** 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅಯ್ಕೆಯಾದವರಿಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.**

ವೆಬ್‌ಸೈಟ್ ಲಿಂಕ್ - https://kppp.karnataka.gov.in

ಸೂಚನೆ: ಹೆಚ್ಚಿನ ಮಾಹಿತಿ ಸಂಪರ್ಕಿಸಬಹುದು (ಕಛೇರಿ ಸಮಯದಲ್ಲಿ ಸಂಪರ್ಕಿಸುವುದು) ಜಂಟಿ ನಿರ್ದೇಶಕರು (ಅಭಿವೃದ್ಧಿ), ಪೌರಾಡಳಿತ ನಿರ್ದೇಶನಾಲಯ, 9ನೇ & 10ನೇ ಮಹಡಿ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-01. ಸಂಪರ್ಕ ದೂರವಾಣಿ ಸಂಖ್ಯೆ: 080-22863731. ಇ-ಮೇಲ್ ವಿಳಾಸ: dmablr.jdd1@gmail.com

ಸಹಿ/- ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.

ವಾಸಾಇಂ/ಸಾ.ಪ್ರ/254/ಎಂಸಿಎ/2025-26

TAMILNADU NEWSPRINT AND PAPERS LIMITED

Unit - 1 : Kagithapuram - 639 136. Karur Dist. Tamil Nadu. Ph.: 04324 - 277001 (10 Lines)
Unit - 2 : Mondipatti - 621 306, Trichy District, Tamil Nadu. Ph.: 04332 - 261600.

NOTICE INVITING TENDERS

Tender No.	Scope of Work	Due date
252613 000467	Procurement of Debarked Eucalyptus pulpwood from open market sources of Karnataka to TNPL Unit - I at Kagithapuram.	05.05.2025
252623 000155	Procurement of Debarked Eucalyptus pulpwood from open market sources of Karnataka to TNPL Unit - II at Mondipatti.	06.05.2025
Email	purchase.wood@tnpl.co.in	

Corrigendum if any will be issued in TNPL website only. Detailed terms & conditions, etc., are available in the tender document which can be downloaded from website : www.tnpl.com

DIPR/1601/Tender/2025 *TNPL - Maker of bagasse based eco-friendly Paper*

ಕರ್ನಾಟಕ ಸರ್ಕಾರ

ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

ಡಾ. ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು
E-mail-dswomysore9@gmail.com ದೂ: 0821-2344661

ಸಂಖ್ಯೆ:ಸಕಇ.ಮೈ/ಆಡಳಿತ/ಟಿಆರ್-1/2025-26 ದಿನಾಂಕ : 16-04-2025

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ನಿರಾಶ್ರಿತರ ಪರಿಹಾರ ಕೇಂದ್ರ, ಜ್ಯೋತಿನಗರ, ಮೈಸೂರು ಇಲ್ಲಿನ ನಿರಾಶ್ರಿತರುಗಳ ಊಟದ ನಿರ್ವಹಣೆಗಾಗಿ 2025-26ನೇ ಸಾಲಿಗೆ ಬೇಕಾಗಿರುವ ಆಹಾರ ಪದಾರ್ಥಗಳು ಮತ್ತು ಇತರೆ ವಸ್ತುಗಳ ಪೂರೈಕೆಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ httpp//.kppp.karnataka.gov.in ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

ಸಹಿ/-ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಹಾಗೂ ಕಾರ್ಯದರ್ಶಿ, ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,

ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಚಿಕ್ಕಮಗಳೂರು.
E-Mail: zpedckm@rediffmail.com, ದೂರವಾಣಿ : 08262-220936
ಟೆಂಡರ್ ಪ್ರಕಟಣೆ ಸಂಖ್ಯೆ : 01/2025-26 ದಿನಾಂಕ: 15.04.2025

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು ಇವರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಕಡೂರು, ಮೂಡಿಗೆರೆ, ಕಳಸ ಮತ್ತು ತರೀಕೆರೆ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ. 35.00 ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ ರೂ. 9.00 ಲಕ್ಷಗಳಾಗಿರುತ್ತದೆ. ಅರ್ಹ ನೋಂದಾಯಿತ ಗುತ್ತಿಗೆದಾರರು ಇ.ಎಂ.ಡಿ. ಬಗ್ಗೆ, Standard Tender Document KW-1ರಂತೆ ಸೂಚಿಸಲಾಗಿದೆ. ಅಧಿಕ ಅವಧಿ ಬಗ್ಗೆ ವಿವರಣೆಗಳನ್ನು ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯುಮೆಂಟ್‌ಗಳನ್ನು ದಿನಾಂಕ: 15.04.2025 ರಿಂದ ದಿನಾಂಕ: 29.04.2025 ರವರೆಗೆ ಸಂಜೆ 05:30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ: 02.05.2025 ರಂದು ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಸರ್ಕಾರಿ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp. karnataka.gov.in websiteನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಡಿಬಿ:**KW- 4:ಟೆಂ:2025-26: 168** ದಿನಾಂಕ: **15-04-2025**

ಅಲ್ಪಾವಧಿ ಟೆಂಡರ್ ಪ್ರಕಟಣೆ

2024-25ನೇ ಸಾಲಿನ ಲೆಕ್ಕ ಶೀರ್ಷಿಕೆ : 5054 (ಯೋಜನೆ) ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಅಡಿಯಲ್ಲಿ ಮಂಜೂರಾದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಆಕ್ಟ್ 2000ರ ನಿಯಮದಂತೆ, ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ **KW-3&4**ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 01 ಟೆಂಡರ್ (**ವರ್ಕ ಇಂಡೆಂಟ್ ಸಂಖ್ಯೆ: 18171/ CALL-3**) ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 02-05-2025** ಸಮಯ 13.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 03-05-2025** ಸಮಯ 13.30 ಗಂಟೆ, ಆರ್ಥಿಕ ಬಿಡ್ ತೆರೆಯುವ **ದಿನಾಂಕ: 05-03-2025** ಸಮಯ 13.00 ಗಂಟೆ ಅಂದಾಜು ಮೊತ್ತ ರೂ. 400.00 ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳ ಹೆಚ್ಚಿನ ಮಾಹಿತಿಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಮೀಸಲಾತಿಗಳಿಗಾಗಿ ಹಾಗೂ ಇತ್ಯಾದಿಗಾಗಿ ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/32/ಕೆಎಸ್‌ಎಂಸಿಎ/2025-26

ಸಮಗ್ರ ಶಿಕ್ಷಣ ಕರ್ನಾಟಕ

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,

ಸಮಗ್ರ ಶಿಕ್ಷಣ ಕರ್ನಾಟಕ # 1-9-74 ಮಾವಿನ ಕೆರೆ ರಸ್ತೆ, ಆಜಾದ್ ನಗರ, ರಾಯಚೂರು-584101

No: A1/SSKR/Smart Class/KPS/Imp/2024-25 ದಿನಾಂಕ:17.04.2025

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2023-24ನೇ ಸಾಲಿಗೆ ಮಹತ್ವಾಕಾಂಕ್ಷಿ ತಾಲೂಕುಗಳಿಗೆ ಸ್ಮಾರ್ಟ್ ಕ್ಲಾಸ್ ರೂಮ್ ಗಳ ಅಭಿವೃದ್ಧಿ ಚಟುವಟಿಕೆಯಡಿ ಕೆಪಿಎಸ್ ಶಾಲೆಗಳಿಗೆ ಐಸಿಟಿ ಸ್ಮಾರ್ಟ್ ಕ್ಲಾಸ್ ಗೆ 10 ಕೆಪಿಎಸ್ ಶಾಲೆಗಳಿಗೆ LED DISPLAY-29, UPS-1KV-29, LAPTOP-10, PROJECTOR-10, UPS 5KV-01, PRINTER CUM SCANNER-10, AND ALL IN ONE COMPUTER-10, ಇವುಗಳನ್ನು ಖರೀದಿಸಲು ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಇ-ಪ್ರೊಕ್ಯೂರ್‌ಮೆಂಟ್ ವೆಬ್ಸೈಟ್ http://www.kppp.karnataka.gov.in ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25.04.2025. **ಟೆಂಡರ್‌ನ ಮೊತ್ತ: 85.50 ಲಕ್ಷ**

ಸಹಿ/- ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ-ರಾಯಚೂರು

DIP/RCR/31/KSMCA/31/2025-26

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A+' Grade
Accredited by NAAC with A++
ಜ್ಞಾನಭಾರತಿ, ಬೆಂಗಳೂರು - 560 056.

ಸಂಖ್ಯೆ: ಎಸಿಎ-1/ಸ್ನಾತಕ ಪದವಿ ಅರ್ಜಿ/2025-26 ದಿನಾಂಕ: 17.04.2025

ಅಧಿಸೂಚನೆ

ವಿಷಯ: 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಅರ್ಜಿ ಆಹ್ವಾನಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.04.2025

ಬೆಂಗಳೂರು ವಿಶ್ವವಿದ್ಯಾಲಯ ಆವರಣದಲ್ಲಿ 2025-26ನೇ ಸಾಲಿಗೆ ಈ ಕೆಳಕಂಡ ಸ್ನಾತಕ ಪದವಿ ಕೋರ್ಸುಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂ.	ಪ್ರೋಗ್ರಾಮ್ ಹೆಸರು	ಪ್ರವೇಶಾತಿಯ ಮಾನದಂಡಗಳು
1.	ಬಿ.ಸಿ.ಎ. ಸ್ನಾತಕ ಪದವಿ Machine Learning, Data Science, and Full Stack Development ವಿಷಯ ಪ್ರಾವೀಣ್ಯತೆಯೊಂದಿಗೆ ಸಂಪರ್ಕ: 8147147632 (ಕಛೇರಿ ಸಮಯ) ಇ-ಮೇಲ್: bca@bub.ernet.in	ಎರಡು ವರ್ಷದ ಪಿ.ಯು.ಸಿ. ಅಥವಾ ತತ್ಸಮಾನ ಕಲೆ / ವಿಜ್ಞಾನ / ವಾಣಿಜ್ಯ ವಿಷಯಗಳ ಐಚ್ಛಿಕ ಮತ್ತು ಕನಿಷ್ಠ 50% ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
2.	ಬಿ.ಕಾಂ ಸ್ನಾತಕ ಪದವಿ ಪ್ರೋಗ್ರಾಮ್-NISM ಮೌಲ್ಯವರ್ಧಿತ ಪ್ರಮಾಣ ಪತ್ರದೊಂದಿಗೆ ಸಂಪರ್ಕ: 9845094550 (ಕಛೇರಿ ಸಮಯ)	
3.	ಬಿ.ಎ. ಸ್ನಾತಕ ಪದವಿ ಪ್ರೋಗ್ರಾಮ್ ಸಂಪರ್ಕ: 9141113010 (ಕಛೇರಿ ಸಮಯ)	
4.	ಬಿ.ಎಸ್ಸಿ. ಸ್ನಾತಕ ಪದವಿ ಪ್ರೋಗ್ರಾಮ್ ಸಂಪರ್ಕ: 9480091036 (ಕಛೇರಿ ಸಮಯ) ಇ-ಮೇಲ್: bscjbc@bub.ernet.in	ಎರಡು ವರ್ಷದ ಪಿಯು.ಸಿ. ಅಥವಾ ತತ್ಸಮಾನದಲ್ಲಿ ಕಡ್ಡಾಯವಾಗಿ ಗಣಿತ ಮತ್ತು ಇತರೆ ವಿಜ್ಞಾನ ವಿಷಯಗಳ ಐಚ್ಛಿಕ ಮತ್ತು ಕನಿಷ್ಠ 50% ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-Iರ ಅಭ್ಯರ್ಥಿಗಳಿಗೆ ಶೇ.45%ರಷ್ಟು ಅಂಕಗಳು. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ಅವರು ಗಳಿಸಿದ ಅಂಕಗಳ ಜೇಷ್ಠತಾ ಆಧಾರದ ಮೇಲೆ ನಿರ್ಧರಿಸಲಾಗುವುದು.

ಟಿಪ್ಪಣಿ

- ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಬಿ.ಸಿ.ಎ./ಬಿ.ಕಾಂ. ಮತ್ತು ಬಿ.ಎಸ್ಸಿ ಕೋರ್ಸುಗಳ ಸಂಯೋಜಕರು, ರುಸಾ ಕಟ್ಟಡ, ಮತ್ತು ಬಿ.ಎ. ಕೋರ್ಸಿನ ಸಂಯೋಜಕರು ಇತಿಹಾಸ ಅಧ್ಯಯನಗಳು, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು -56 ಇವರಿಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ಗೆ : **https://bangaloreuniversity.karnataka.gov.in/** ಭೇಟಿ ನೀಡಿ
- ಮೇಲಿನ ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವಿರುವುದಿಲ್ಲ, ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
- ಅರ್ಜಿ ಸಲ್ಲಿಸಲು ಕೊನೆ ದಿನಾಂಕ: **15.05.2025.**
- ಪ್ರವೇಶಾತಿ ಶುಲ್ಕ ಮತ್ತು ಇತರೆ ವಿವರಗಳನ್ನು ವಿಶ್ವವಿದ್ಯಾಲಯದ ಅಧಿಕೃತ ಅಂತರ್ಜಾಲದಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕುಲಸಚಿವರು

DIPR/CP/RO251/AAPL/2025-26

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

KUIDFC
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ, ಬಿನ್ನಮಂಗಲ ಡಿಪೋ ಹತ್ತಿರ, ಬೆಂಗಳೂರು 560 038. ದೂರವಾಣಿ: 91-80-25196100, 25196124 ಫ್ಯಾಕ್ಸ್: 080-25196110
ಇ-ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/37/ಟೆಂ.ಪ್ರ/2025-26/01 ದಿನಾಂಕ: 16.04.2025

ಅಲ್ಪಾವಧಿ ಕೆ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಸರ ಪರಿಹಾರ ನಿಧಿ ಹಾಗೂ ಸ್ವಚ್ಛ ಭಾರತ ಅಭಿಯಾನ (ನಗರ) 2.0 ರಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್‌ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) ರೂ.ಲಕ್ಷಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	Construction/ upgradation of sewerage system in **Ramdurga** town" under NGT environmental compensation fund and Swacch Bharath Mission (U) 2.0 fund on DBOT model.	1313.10	14.00
2	Construction/upgradation of sewerage system in **Muddebihal** Town" under NGT environmental compensation fund and Swacch Bharath Mission (U) 2.0 fund on DBOT model	2591.73	26.00
3	Construction/upgradation of sewerage system for **Sidlaghatta** Town" under NGT environmental compensation fund and Swacch Bharath Mission (U) 2.0 fund on DBOT model	2988.00	30.00
4	Construction/upgradation of sewerage system for **Kunigal** Town" under NGT environmental compensation fund and Swacch Bharath Mission (U) 2.0 fund on DBOT model	3260.00	33.00
5	Construction/upgradation of sewerage system for **Chintamani** City" under NGT environmental compensation fund and Swacch Bharath Mission (U) 2.0 fund on DBOT model	3959.00	40.00
6	Construction/upgradation of sewerage system for **Chittapur** town" under NGT environmental compensation fund on DBOT model	2269.75	23.00
7	Construction/upgradation of sewerage system for **Hospete** town" under NGT environmental compensation fund on DBOT model	2305.65	23.50
8	Construction/upgradation of sewerage system for **Humnabad** town" under NGT environmental compensation fund and Swacch Bharath Mission (U) 2.0 fund on DBOT model	2594.37	26.00

1) ಟೆಂಡರ್ ಪ್ರಕಟಣೆ ದಿನಾಂಕ: **17.04.2025.** 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **29.04.2025 ಸಮಯ: 11.30 ಪೂರ್ವಾಹ್ನ,** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **09.05.2025 ಸಮಯ: 5.30 ಅಪರಾಹ್ನ,** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **12.05.2025 ಸಮಯ: 11.30 ಪೂರ್ವಾಹ್ನ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **16.05.2025 ಸಮಯ: 11.30 ಪೂರ್ವಾಹ್ನ.** ಆಸಕ್ತ ಟೆಂಡರ್‌ದಾರರು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸುವುದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Website ಗಳಲ್ಲಿ ನೀಡಲಾಗುವುದು.

ಕಾರ್ಯಪಾಲಕ ಅಭಿಯಂತರರು, ಯೋಜನಾ ಮೇಲ್ವಿಚಾರಣಾ ಘಟಕ, ಯುಡಬ್ಲ್ಯೂಎಮ್-ಕೆಯುಐಡಿಎಫ್‌ಸಿ, ಬೆಂಗಳೂರು

ವಾಸಾಇಂ/ಸಾ.ಪ್ರ/229/ಎಂಸಿಎ/2025-26

ಕೊಹ್ಲಿ–ಚಾಹಲ್ ಮುಖಾಮುಖಿಗೆ ವೇದಿಕೆ ಸಿದ್ಧ • ಬೆಂಗಳೂರಿಗೆ ಪಂಜಾಬ್ ಸವಾಲು ಇಂದು

‘ರನ್ ಯಂತ್ರ’ಕ್ಕೆ ಸ್ಪಿನ್ ಚತುರನ ಸವಾಲು

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿಯ ರಂಗು ವಿಭಿನ್ನವಾಗುವ ಸಾಧ್ಯತೆ ಇದೆ. ಏಕೆಂದರೆ; ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿರುವ ‘ರನ್ ಯಂತ್ರ’ ವಿರಾಟ್ ಕೊಹ್ಲಿ ಮತ್ತು ಗರಿಷ್ಠ ಸಂಖ್ಯೆಯ ವಿಕೆಟ್ ಸಂಪಾದಿಸಿರುವ ‘ಸ್ಪಿನ್ ಚತುರ’ ಯಜುವೇಂದ್ರ ಚಾಹಲ್ ಮುಖಾಮುಖಿಯಾಗುತ್ತಿದ್ದಾರೆ.

ಕೆಲ ವರ್ಷಗಳ ಹಿಂದೆ ತಾವು ಪ್ರತಿನಿಧಿಸುತ್ತಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ ಯಜುವೇಂದ್ರ ಚಾಹಲ್ ಅವರು ಕಣಕ್ಕಿಳಿಯಲಿದ್ದಾರೆ. ಈಗ ಅವರು ಪಂಜಾಬ್ ಕಿಂಗ್ಸ್ ತಂಡದ ‘ಟ್ರಂಪ್ ಕಾರ್ಡ್’ ಆಗಿದ್ದಾರೆ. ಮೂರು ದಿನಗಳ ಹಿಂದಷ್ಟೇ; ಮುಲ್ಲನಪುರದ ಮೈದಾನದಲ್ಲಿ ಪಂಜಾಬ್ ಕಿಂಗ್ಸ್ ತಂಡವು ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್‌ಗೆ 111 ರನ್‌ಗಳ ಅಲ್ಪಗುರಿ ನೀಡಿತ್ತು. ಆದರೆ ಚೆಸ್ ಆಟಗಾರ ಕೂಡ ಆಗಿರುವ ಚಾಹಲ್ ಅವರು ಕೋಲ್ಕತ್ತ ತಂಡಕ್ಕೆ ‘ಚೆಕ್ ಮೇಟ್’ ನೀಡಿದರು. 4 ವಿಕೆಟ್‌ಗಳನ್ನು ಗಳಿಸಿದ್ದ ಅವರು ಪಂಜಾಬ್ ಗೆಲುವಿಗೆ ಕಾರಣ-ರಾಗಿದ್ದರು.

ಚಾಹಲ್‌ಗೆ ಬೆಂಗಳೂರಿನ ಪಿಚ್ ಚಿರಪರಿಚಿತ. 2014ರಿಂದ ಎಂಟು ಆವೃತ್ತಿಗಳಲ್ಲಿ ಚಾಹಲ್ ಅವರು ಆರ್‌ಸಿಬಿಯಲ್ಲಿ ಆಡಿದ್ದರು. ಆಗ ನಾಯಕರಾಗಿದ್ದ ಕೊಹ್ಲಿಗೆ ಚಾಹಲ್ ನೆಚ್ಚಿನ ಬೌಲರ್ ಆಗಿದ್ದರು. 2016ರಲ್ಲಿ ಆರ್‌ಸಿಬಿ ಫೈನಲ್ ತಲುಪುವಲ್ಲಿ ಚಾಹಲ್ ಕಾಣಿಕೆ ಮಹತ್ವದ್ದಾಗಿತ್ತು. 2022ರಲ್ಲಿ ರಾಜಸ್ಥಾನ ರಾಯಲ್ಸ್‌ಗೆ ಸೇರ್ಪಡೆಯಾದ ಅವರು ಅಲ್ಲಿಯೂ ತಮ್ಮ ಕೈಚಳಕ ತೋರಿದ್ದರು. ಈಗ ಕಿಂಗ್ಸ್‌ನಲ್ಲಿ ಮೆರೆಯುತ್ತಿ-ದ್ದಾರೆ.

ರಜತ್ ಪಾಟೀದಾರ್ ನಾಯಕತ್ವದ ಬೆಂಗಳೂರು ತಂಡವು ಈ ಬಾರಿ ತವರಿನಲ್ಲಿ ಆಡಿರುವ ಎರಡೂ ಪಂದ್ಯಗಳಲ್ಲಿ ಜಯಿಸಿಲ್ಲ. ಅದರಲ್ಲೂ ಹೋದವಾರ ಇಲ್ಲಿ ನಡೆದಿದ್ದ ಹಣಾಹಣಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಜಯಿಸಲು ಕನ್ನಡಿಗ ಕೆ.ಎಲ್. ರಾಹುಲ್ ಕಾರಣರಾಗಿದ್ದರು. ರಾಹುಲ್ ಕೂಡ ಈ ಹಿಂದೆ ಕೆಲ ವರ್ಷ ಆರ್‌ಸಿಬಿಯಲ್ಲಿ ಆಡಿದ್ದರು. ಈಗ ಕಿಂಗ್ಸ್ ತಂಡದಲ್ಲಿ ಇರುವ ಚಾಹಲ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ವೇಗಿ ವೈಶಾಖ ವಿಜಯಕುಮಾರ್ ಅವರೂ ಈ ಹಿಂದೆ ಆರ್‌ಸಿಬಿಯಲ್ಲಿ ಆಡಿದ್ದವರು. ಅವರೇ ಈಗ ರಜತ್ ಬಳಗಕ್ಕೆ ‘ತಿರುಗುಬಾಣ’ ಆಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಮ್ಯಾಕ್ಸ್‌ವೆಲ್ ಇದುವರೆಗೆ ಬ್ಯಾಟ್‌ಗಿಂತ ಹೆಚ್ಚು ಆಫ್‌ಬ್ರೇಕ್ ಬೌಲಿಂಗ್‌ನಲ್ಲಿ ಉಪಯುಕ್ತ ಕಾಣಿಕೆ ನೀಡಿದ್ದಾರೆ. ವೈಶಾಖ ಅವರು ಗುಜರಾತ್ ಜೈಂಟ್ಸ್ ಎದುರಿನ ಪಂದ್ಯದಲ್ಲಿ ಉತ್ತಮ ಬೌಲಿಂಗ್ ಮಾಡಿ ತಂಡದ ಸೋಲು ತಪ್ಪಿಸಿದ್ದರು. ವಿಕೆಟ್ ಪಡೆಯದಿದ್ದರೂ ಕಡಿಮೆ ರನ್ ನೀಡಿ ಬ್ಯಾಟರ್‌ಗಳನ್ನು ಕಾಡಿದ್ದರು.

ಆತಿಥೇಯ ತಂಡದ ಬ್ಯಾಟರ್‌ಗಳು ಉತ್ತಮ ಲಯದಲ್ಲಿದ್ದಾರೆ. ಅವರನ್ನು ಕಟ್ಟಿಹಾಕುವುದು ಸುಲಭಸಾಧ್ಯವಲ್ಲ. ಈಚೆಗೆ ಜೈಪುರದಲ್ಲಿ ನಡೆದಿದ್ದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಮಣಿಸುವಲ್ಲಿ ಆರ್‌ಸಿಬಿ ಬ್ಯಾಟಿಂಗ್ ಪಡೆ ಪ್ರಮುಖ ಪಾತ್ರವಹಿಸಿತ್ತು. ಮೂರು ಅರ್ಧಶತಕಗಳನ್ನು ಹೊಡೆದಿರುವ ವಿರಾಟ್, ಆರು ಪಂದ್ಯಗಳಿಂದ 203 ರನ್ ಸೂರೆ ಮಾಡಿರುವ ಫಿಲ್ ಸಾಲ್ಟ್, ಲಯಕ್ಕೆ ಮರಳಿರುವ ದೇವದತ್ತ ಪಡಿಕ್ಕಲ್, ನಾಯಕ ರಜತ್ ಮತ್ತು ಫಿನಿಷರ್ ಪಾತ್ರವನ್ನು ನಿಭಾಯಿಸುತ್ತಿರುವ ಜಿತೇಶ್ ಶರ್ಮಾ ಅವರು ಮಧ್ಯಮಕ್ರಮಾಂಕದ ಶಕ್ತಿಯಾಗಿದ್ದಾರೆ. ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಟಿಮ್ ಡೇವಿಡ್ ಮಿಂಚಿದರೆ ತಂಡಕ್ಕೆ ‘ಬೋನಸ್’ ಖಚಿತ. ಇವರೆಲ್ಲರೂ ಈಗ ಚಾಹಲ್ ಸ್ಪಿನ್ ಮಾತ್ರವಲ್ಲ ಎಡಗೈ ವೇಗಿ ಮಾರ್ಕೊ ಯಾನ್ಸೆನ್ ಹಾಗೂ ಅರ್ಷದೀಪ್ ಸಿಂಗ್ ಅವರನ್ನು ಹೇಗೆ ಎದುರಿಸುತ್ತಾರೆಂಬ ಕುತೂಹಲ ಗರಿಗೆದರಿದೆ.

ಪಂಜಾಬ್ ತಂಡದಲ್ಲಿಯೂ ಉತ್ತಮ ಬ್ಯಾಟಿಂಗ್ ಪಡೆ ಇದೆ. ನಾಯಕ ಶ್ರೇಯಸ್, ಟೂರ್ನಿಯಲ್ಲಿ ಒಂದು ಶತಕ ಹೊಡೆದಿರುವ ಪ್ರಿಯಾಂಶ್ ಆರ್ಯ, ಯಾವುದೇ ಪಿಚ್‌ನಲ್ಲಿಯೂ ಗಟ್ಟಿಯಾಗಿ ನಿಲ್ಲಬಲ್ಲ ಪ್ರಭಸಿಮ್ರನ್ ಸಿಂಗ್, ನೆಹಲ್ ವಧೇರಾ ಹಾಗೂ ಶಶಾಂಕ್ ಸಿಂಗ್ ಅವರು ರನ್‌ಗಳ ಮಳೆ ಸುರಿಸುವ ಆಟಗಾರರು. ಇವರನ್ನು ಕಟ್ಟಿಹಾಕುವ ಸವಾಲು ಆತಿಥೇಯ ತಂಡದ ಭುವನೇಶ್ವರ್ ಕುಮಾರ್, ಜೋಶ್ ಹ್ಯಾಜಲ್‌ವುಡ್ ಮತ್ತು ಸ್ಪಿನ್ನರ್ ಕೃಣಾಲ್ ಪಾಂಡ್ಯ ಅವರ ಮುಂದಿದೆ.

ಮಳೆ ಸಾಧ್ಯತೆ: ಶುಕ್ರವಾರ ಮಳೆ ಬರುವ ಸಾಧ್ಯತೆ ಇದೆ. ಕಳೆದ ಎರಡು ದಿನಗಳಿಂದ ಬೆಂಗಳೂರಿನಲ್ಲಿ ಮಳೆ ಯಾಗಿದೆ.

ಐಪಿಎಲ್ ಸಾಧನೆ	
ವಿರಾಟ್ ಕೊಹ್ಲಿ	
ಪಂದ್ಯ	258
ರನ್	8252
ಅವಧಿ	2008-2025
ಯಜುವೇಂದ್ರ ಚಾಹಲ್	
ಪಂದ್ಯ	166
ವಿಕೆಟ್	211
ಅವಧಿ	2013-2025

ಬಲಾಬಲ

ಪಂದ್ಯ 33

16 ಆರ್‌ಸಿಬಿ ಜಯ

17 ಪಂಜಾಬ್ ಗೆಲುವು

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಪಂಜಾಬ್ ಕಿಂಗ್ಸ್ ತಂಡದ ಆಟಗಾರ ಯಜುವೇಂದ್ರ ಚಾಹಲ್ ಅಭ್ಯಾಸ ನಡೆಸಿದರು ಚಿತ್ರ/ಕೃಷ್ಣ ಕುಮಾರ್ ಪಿ.ಎಸ್

ವಿರಾಟ್ ಕೊಹ್ಲಿ

ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಮತ್ತು ಬೌಲರ್ ವಿಲ್ ಜ್ಯಾಕ್ಸ್ ಸಂಭ್ರಮ –ಎಎಫ್‌ಪಿ ಚಿತ್ರ

ವಿಲ್ ಆಲ್‌ರೌಂಡ್ ಆಟಕ್ಕೆ ಒಲಿದ ಜಯ

ಮುಂಬೈ ತಂಡಕ್ಕೆ ಗೆಲುವು: ಮಂಕಾದ ಸನ್‌ರೈಸರ್ಸ್

ಮುಂಬೈ (ಪಿಟಿಐ): ವಿಲ್ ಜ್ಯಾಕ್ಸ್ ಅವರ ಆಲ್‌ರೌಂಡ್ ಆಟದ ಬಲದಿಂದ ಮುಂಬೈ ಇಂಡಿಯನ್ಸ್ ತಂಡವು ಜಯಭೇರಿ ಬಾರಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ವಿಲ್ (14ಕ್ಕೆ2 ಮತ್ತು 36 ರನ್) ಅವರ ಆಟದಿಂದ ಮುಂಬೈ ತಂಡವು 4 ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ಎದುರು ಜಯಿಸಿತು.

ಬೃಹತ್ ಮೊತ್ತವನ್ನು ಕಲೆಹಾಕುವ ಸನ್‌ರೈಸರ್ಸ್ ತಂಡದ ಬ್ಯಾಟರ್‌ಗಳಿಗೆ ಕಡಿವಾಣ ಹಾಕುವಲ್ಲಿ ವಿಲ್ ಪ್ರಮುಖ ಪಾತ್ರವಹಿಸಿದರು. ಅದರಿಂದಾಗಿ ಹೈದರಾಬಾದ್ ತಂಡವು 20 ಓವರ್‌ಗಳಲ್ಲಿ 5ಕ್ಕೆ162 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಮುಂಬೈ ತಂಡವು 18.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 166 ರನ್ ಗಳಿಸಿತು.

ಆದರೆ ಮುಂಬೈ ತಂಡವು ಸುಲಭವಾಗಿ ಜಯಿಸಲು ಹೈದರಾಬಾದ್ ತಂಡದ ವೇಗಿ ಪ್ಯಾಟ್ ಕಮಿನ್ಸ್ (26ಕ್ಕೆ3) ಮತ್ತು ಇಶಾನ್ ಮಾಲಿಂಗ (36ಕ್ಕೆ2) ಅವರು ಬಿಡಲಿಲ್ಲ. ಅದರಿಂದಾಗಿ ಆತಿಥೇಯ ಬ್ಯಾಟರ್‌ಗಳು ಸ್ವಲ್ಪ ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡಿದರು.

ಆರಂಭಿಕ ಬ್ಯಾಟರ್ ರಿಯಾನ್ ರಿಕೆಲ್ಟನ್ (31; 23ಎ, 4X5) ಮತ್ತು ಅನುಭವಿ ಬ್ಯಾಟರ್ ರೋಹಿತ್ ಶರ್ಮಾ (26; 16ಎ, 6X3) ಉತ್ತಮ ಆರಂಭ ನೀಡಿದರು. 3.5 ಓವರ್‌ಗಳಲ್ಲಿ 32 ರನ್ ಸೇರಿಸಿದರು. ಕಮಿನ್ಸ್ ಎಸೆತವನ್ನು ಹೊಡೆಯುವ ಭರದಲ್ಲಿ ರೋಹಿತ್ ಶರ್ಮಾ ಅವರು ಟ್ರಾವಿಸ್ ಹೆಡ್‌ಗೆ ಸುಲಭ ಕ್ಯಾಚ್ ನೀಡಿದರು.

ಕ್ರೀಸ್‌ಗೆ ಬಂದ ಜ್ಯಾಕ್ಸ್ 2 ಸಿಕ್ಸರ್ ಮತ್ತು 3 ಬೌಂಡರಿಗಳಿದ್ದ 36 ರನ್ ಗಳಿಸಿದರು. ಸೂರ್ಯಕುಮಾರ್ ಯಾದವ್ 15 ಎಸೆತಗಳಲ್ಲಿ 26 ರನ್ ಹೊಡೆದರು. ನಾಯಕ ಪಾಂಡ್ಯ ಕೂಡ 9 ಎಸೆತಗಳಲ್ಲಿ 21 ರನ್ ಮತ್ತು ತಿಲಕ್ ವರ್ಮಾ (ಅಜೇಯ 21) ಕೂಡ ಮಿಂಚಿದರು.

ಟಾಸ್ ಗೆದ್ದ ಮುಂಬೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹೈದರಾಬಾದ್ ತಂಡಕ್ಕೆ ಅಭಿಷೇಕ್ ಶರ್ಮಾ (40; 28ಎ, 4X7) ಮತ್ತು ಟ್ರಾವಿಸ್ ಹೆಡ್ (28; 29ಎ, 4X3) ಉತ್ತಮ ಆರಂಭ ನೀಡಿದರು. 7.2 ಓವರ್‌ಗಳಲ್ಲಿ 59 ರನ್ ಸೇರಿಸಿದರು. ಅಭಿಷೇಕ್ ಅವರಿಗೆ ಈ ಪಂದ್ಯದಲ್ಲಿ 50ರ ಗಡಿ ಮುಟ್ಟಲು ಹಾರ್ದಿಕ್ ಬಿಡಲಿಲ್ಲ. ಹೆಡ್ ಕೂಡ ದೊಡ್ಡ ಹೊಡೆತ ಪ್ರಯೋಗಿಸಲಿಲ್ಲ. ಇಬ್ಬರೂ ಆರಂಭಿಕರು ಒಂದೂ ಸಿಕ್ಸರ್ ಸಿಡಿಸಲಿಲ್ಲ.

ಹೆಡ್ ಮತ್ತು ಇಶಾನ್ ಕಿಶನ್ ಅವರ ವಿಕೆಟ್‌ಗಳನ್ನು ಜ್ಯಾಕ್ಸ್ ಪಡೆದರು. ಮಧ್ಯಮ ಕ್ರಮಾಂಕದಲ್ಲಿ ಒಂದಿಷ್ಟು ಭರವಸೆ ಮೂಡಿಸಿದ್ದ ಕ್ಲಾಸೆನ್ (37; 28ಎ) ಅವರನ್ನು 19ನೇ ಓವರ್‌ನಲ್ಲಿ ಬೂಮ್ರಾ ಕ್ಲೀನ್‌ಬೌಲ್ಡ್ ಮಾಡಿದರು. ಅನಿಕೇತ್ ವರ್ಮಾ 8 ಎಸೆತಗಳಲ್ಲಿ 18 ರನ್ ಹೊಡೆದರು. ಕ್ಲಾಸೆನ್ ಮತ್ತು ಅನಿಕೇತ್ ವರ್ಮಾ ತಲಾ 2 ಸಿಕ್ಸರ್ ಮತ್ತು ಪ್ಯಾಟ್ ಕಮಿನ್ಸ್ ಒಂದು ಸಿಕ್ಸರ್ ಹೊಡೆದರು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 5ಕ್ಕೆ162 (ಅಭಿಷೇಕ್ ಶರ್ಮಾ 40, ಟ್ರಾವಿಸ್ ಹೆಡ್ 28, ನಿತೀಶ್ ರೆಡ್ಡಿ 19, ಹೆನ್ರಿಚ್ ಕ್ಲಾಸೆನ್ 37, ಅನಿಕೇತ್ ವರ್ಮಾ ಔಟಾಗದೇ 18, ವಿಲ್ ಜ್ಯಾಕ್ಸ್ 14ಕ್ಕೆ2) ಮುಂಬೈ ಇಂಡಿಯನ್ಸ್: 18.1 ಓವರ್‌ಗಳಲ್ಲಿ 6ಕ್ಕೆ166 (ರಿಯಾನ್ ರಿಕೆಲ್ಟನ್ 31, ರೋಹಿತ್ ಶರ್ಮಾ 26, ವಿಲ್ ಜ್ಯಾಕ್ಸ್ 36, ಸೂರ್ಯಕುಮಾರ್ ಯಾದವ್ 26, ತಿಲಕ್ ವರ್ಮಾ ಅಜೇಯ 21, ಹಾರ್ದಿಕ್ ಪಾಂಡ್ಯ 21, ಪ್ಯಾಟ್ ಕಮಿನ್ಸ್ 26ಕ್ಕೆ3, ಇಶಾನ್ ಮಾಲಿಂಗ 36ಕ್ಕೆ2) ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 4 ವಿಕೆಟ್‌ಗಳ ಜಯ. ಪಂದ್ಯದ ಶ್ರೇಷ್ಠ ;ವಿಲ್ ಜ್ಯಾಕ್ಸ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಡೆಲ್ಲಿ ಕ್ಯಾಪಿಟಲ್ಸ್	6	5	1	10	0.744
ಗುಜರಾತ್ ಟೈಟನ್ಸ್	6	4	2	8	1.081
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	4	2	8	0.672
ಪಂಜಾಬ್ ಕಿಂಗ್ಸ್	6	4	2	8	0.172
ಲಖನೌ ಸೂಪರ್ ಜೈಂಟ್ಸ್	7	4	3	8	0.086
ಕೋಲ್ಕತ್ತ ನೈಟ್ ರೈಡರ್ಸ್	7	3	4	6	0.547
ಮುಂಬೈ ಇಂಡಿಯನ್ಸ್	7	3	4	6	0.239
ರಾಜಸ್ಥಾನ ರಾಯಲ್ಸ್	7	2	5	4	-0.714
ಸನ್‌ರೈಸರ್ಸ್ ಹೈದರಾಬಾದ್	7	2	5	4	-1.217
ಚೆನ್ನೈ ಸೂಪರ್ ಕಿಂಗ್ಸ್	7	2	5	4	-1.276

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 357 ರನ್

ಪರ್ಪಲ್ ಕ್ಯಾಪ್
ನೂರ್ ಅಹಮ್ಮದ್ (ಸಿಎಸ್‌ಕೆ) 12 ವಿಕೆಟ್

ಸಂಕ್ಷಿಪ್ತ ಸುದ್ದಿ

ನೀರಜ್ ಶುಭಾರಂಭ

ನವದೆಹಲಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತ ನೀರಜ್ ಚೋಪ್ರಾ ಅವರು ದಕ್ಷಿಣ ಆಫ್ರಿಕಾದ ಪೊಚೆಫ್‌ಸ್ಟ್ರೂಮ್‌ನಲ್ಲಿ ಬುಧವಾರ ನಡೆದ ಪೋಚ್ ಆಹ್ವಾನ ಟ್ರ್ಯಾಕ್ ಕೂಟದಲ್ಲಿ ಅಗ್ರಸ್ಥಾನ ಗಳಿಸುವ ಮೂಲಕ ಋತುವನ್ನು ಯಶಸ್ವಿನೊಡನೆ ಆರಂಭಿಸಿದರು.

ಆರು ಮಂದಿಯಿದ್ದ ಅಂತಿಮ ಕಣದಲ್ಲಿ ನೀರಜ್ ಅವರು ಜಾವೆಲಿನ್‌ಅನ್ನು 84.52 ಮೀ. ದೂರ ಎಸೆದರು. ಆತಿಥೇಯ ದಕ್ಷಿಣ ಆಫ್ರಿಕಾದ 25 ವರ್ಷ ವಯಸ್ಸಿನ ಡೂವ್ ಸ್ಮಿತ್ 82.44 ಮೀ. ಎಸೆತದೊಡನೆ ಎರಡನೇ ಸ್ಥಾನ ಗಳಿಸಿದರು. ಈ ಸ್ಪರ್ಧೆಯು ವಿಶ್ವ ಅಥ್ಲೆಟಿಕ್ಸ್‌ನ ಕಾಂಟಿನೆಂಟಲ್ ಟೂರ್ ಚಾಲೆಂಜರ್‌ನ ಭಾಗವಾಗಿದೆ.

ಆದರೆ ಇಲ್ಲಿ ನೀರಜ್ ದಾಖಲಿಸಿದ ದೂರವು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಗಿಂತ (89.94 ಮೀ.) ಕಡಿಮೆಯಾಗಿದೆ. ಡೂವ್ ಅವರೂ ಶ್ರೇಷ್ಠ ಸಾಧನೆ (83.29 ಮೀ.) ದಾಟಲಿಲ್ಲ. ಇವರಿಬ್ಬರನ್ನು ಬಿಟ್ಟರೆ ಉಳಿದ ನಾಲ್ವರು 80 ಮೀ.ಗಿಂತ ದೂರ ಎಸೆಯಲು ವಿಫಲರಾದರು. ದಕ್ಷಿಣ ಆಫ್ರಿಕಾದ ಮತ್ತೊಬ್ಬ ಸ್ಪರ್ಧಿ ಡಂಕನ್ ರಾಬರ್ಟ್‌ಸನ್ (71.22 ಮೀ.) ಮೂರನೇ ಸ್ಥಾನ ಗಳಿಸಿದರು.

27 ವರ್ಷ ವಯಸ್ಸಿನ ಚೋಪ್ರಾ ಅವರು ಹೊಸ ಕೋಚ್, ಝೆಕ್ ರಿಪಬ್ಲಿಕ್‌ನ ಯಾನ್ ಜೆಲ್ಜ್ನಿ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. ಜೆಲ್ಜ್ನಿ ಅವರು ಮೂರು ಬಾರಿ ಒಲಿಂಪಿಕ್ ಚಾಂಪಿಯನ್ ಆಗಿದ್ದಾರೆ. ಈ ಹಿಂದೆ ಅವರಿಗೆ ಜರ್ಮನಿಯ ಕ್ಲಾಸ್ ಬಾರ್ತೋನಿಟ್ಜ್ ಕೋಚ್ ಆಗಿದ್ದರು.

ಮುನಾಫ್‌ಗೆ ದಂಡ

ನವದೆಹಲಿ (ಪಿಟಿಐ): ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯದ ವೇಳೆ ಐಪಿಎಲ್ ನೀತಿಸಂಹಿತೆ ಉಲ್ಲಂಘಿಸಿದ್ದಕ್ಕೆ ಡೆಲ್ಲಿ ಕ್ಯಾಪಿಟಲ್ಸ್ ಬೌಲಿಂಗ್ ಕೋಚ್ ಮುನಾಫ್ ಪಟೇಲ್ ಅವರಿಗೆ ಪಂದ್ಯ ಶುಲ್ಕದ ಶೇ 25ರಷ್ಟು ದಂಡ ವಿಧಿಸಲಾಗಿದೆ.

ಬುಧವಾರ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ತಲಾ 188 ರನ್ ಗಳಿಸಿ ಸ್ಕೋರ್ ಟೈ ಆದ ಮೇಲೆ ಡೆಲ್ಲಿ ತಂಡ ಸೂಪರ್ ಓವರ್‌ನಲ್ಲಿ ಜಯಗಳಿಸಿತ್ತು.

ಕ್ರೀಡಾ ಸಂಸ್ಥೆಗಳ ಚಟುವಟಿಕೆಗೆ ತನಿಖಾ ಆಯೋಗ: ‘ಸುಪ್ರೀಂ’

ನವದೆಹಲಿ (ಪಿಟಿಐ): ದೇಶದ ಕ್ರೀಡಾ ಸಂಸ್ಥೆಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆ ಆಳವಾದ ತನಿಖೆ ನಡೆಸಲು ತನಿಖಾ ಆಯೋಗವೊಂದನ್ನು ರಚಿಸುವ ಸುಳಿವನ್ನು ಸುಪ್ರೀಂ ಕೋರ್ಟ್ ಗುರುವಾರ ನೀಡಿದೆ.

ಈ ಸಂಬಂಧ ಇಬ್ಬರು ರಾಷ್ಟ್ರೀಯ ಕಬಡ್ಡಿ ಆಟಗಾರರು ಸಲ್ಲಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂ-ರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್.ಕೋಟೀಶ್ವರ ಸಿಂಗ್ ಅವರನ್ನು ಒಳಗೊಂಡ ಪೀಠವು, ‘ಸಂಸ್ಥೆಗಳಲ್ಲಿ ಕ್ರೀಡಾ ಚಟುವಟಿಕೆ ಹೊರತುಪಡಿಸಿ ಅನ್ಯ ಚಟುವಟಿಕೆಗಳು ನಡೆಯುತ್ತಿವೆ ಎಂದು ಕಿಡಿಕಾರಿತು.

ಭಾರತ ಕಬಡ್ಡಿ ಫೆಡರೇಷನ್ (ಎಕೆಎಫ್‌ಐ) ಮತ್ತು ಅಂತರರಾಷ್ಟ್ರೀಯ ಕಬಡ್ಡಿ ಫೆಡರೇಷನ್‌ನಲ್ಲಿ ನಡೆಯುತ್ತಿರುವ ಚಟುವಟಿಕೆಯನ್ನು ಸಿಬಿಐ ತನಿಖೆಗೆ ವಹಿಸಬೇಕೆಂಬ ಮನವಿ ಬಗ್ಗೆ ಪ್ರಸ್ತಾಪಿಸಿ, ‘ಕಬಡ್ಡಿ ಸಂಸ್ಥೆಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆ ವಿಚಾರಣೆಗೆ ತನಿಖಾ ಆಯೋಗ ನಡೆಸಲು ನಾವು ಬಯಸಿದ್ದೇವೆ. ಇಂಥ ಸಂಸ್ಥೆಗಳಲ್ಲಿ ಕ್ರೀಡಾ ಚಟುವಟಿಕೆ ಬಿಟ್ಟು ಮತ್ತೆಲ್ಲವೂ ನಡೆಯುತ್ತವೆ. ಹೀಗಾಗಿ ತನಿಖಾ ಆಯೋಗದ ವ್ಯಾಪ್ತಿಯನ್ನು ಇತರ ಕ್ರೀಡಾ ಸಂಸ್ಥೆಗಳಿಗೂ ವಿಸ್ತರಿಸಲು ಉದ್ದೇಶಿಸಿದ್ದೇ-ವೆ’ ಎಂದು ಪೀಠ ಹೇಳಿತು.

ಕೇಂದ್ರದ ಪರವಾಗಿ ಹಾಜರಾಗಿದ್ದ ಅಡಿಷನಲ್ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್ ಅವರು, ಪೀಠದ ಫೆಬ್ರುವರಿ 4ರ ಆದೇಶದಂತೆ ಇರಾನ್‌ನ ಟೂರ್ನಿಗೆ ಇಬ್ಬರು ಆಟಗಾರರನ್ನು ಕಳಿಸಲಾಗಿತ್ತು. ಭಾರತ ತಂಡ ಅಲ್ಲಿ ಚಿನ್ನ ಗೆದ್ದಿದೆ ಎಂದು ಗಮನಕ್ಕೆ ತಂದರು. ಸಿಬಿಐ ತನಿಖೆಗೆ ಸಂಬಂಧಿಸಿ ಮಾತನಾಡಿದ ಅವರು ಈ ಬಗ್ಗೆ ರೂಪುರೇಷೆಗಳನ್ನು ಅಂತಿಮಗೊಳಿಸಲಾಗುತ್ತಿದೆ ಎಂದು ಹೇಳಿದರು. ಇದಕ್ಕೆ ಎರಡು ವಾರಗಳ ಅವಕಾಶ ಕೇಳಿದರು. ಇದಕ್ಕೆ ಪೀಠವು, ಎಲ್ಲ ರಾಜ್ಯಗಳ ಮತ್ತು ದೇಶದಲ್ಲಿರುವ ಅಂತರರಾಷ್ಟ್ರೀಯ ಫೆಡರೇಷನ್‌ಗಳ ಚಟು ವಟಿಕೆಗಳ ಬಗ್ಗೆ ತನಿಖೆ ಕೈಗೊಳ್ಳುವುದಾಗಿ ಮತ್ತು ಅಗತ್ಯ ಬಿದ್ದರೆ ವಿಸರ್ಜಿಸುವುದಾಗಿ ತಿಳಿಸಿತು.

ಕೊಡವ ಕೌಟುಂಬಿಕ ಹಾಕಿ ಟೂರ್ನಿ

ಪರದಂಡ ತಂಡಕ್ಕೆ ಗೆಲುವು

ಮಡಿಕೇರಿ: ಪರದಂಡ ತಂಡವು ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿ ’ಮುದ್ದಂಡ ಕಪ್’ನಲ್ಲಿ ಗುರುವಾರ 6-2 ಗೋಲುಗಳ ಅಂತರದಿಂದ ಅನ್ನಡಿಯಂಡ ತಂಡವನ್ನು ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ನಿರನ್ ಕುಶಾಲಪ್ಪ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಐನಂಡ ತಂಡವು 5-0 ಅಂತರದಿಂದ ಪಾಡೆಯಂಡ ವಿರುದ್ಧ ಜಯ ಗಳಿಸಿತು.

ಉಳಿದಂತೆ, ಕುಪ್ಪಂಡ (ಕೈಕೇರಿ) 5-0 ಯಿಂದ ನಾಗಂಡ ವಿರುದ್ಧ, ನೆಲ್ಲಮಕ್ಕಡ 5-0ಯಿಂದ ಮುಕ್ಕಾಟಿರ (ಕಡಗದಾಳು) ವಿರುದ್ಧ, ಮುಕ್ಕಾಟಿರ (ಬೋಂದ) 4-0ಯಿಂದ ಬೊಳ್ಳೇರ ವಿರುದ್ಧ, ಪೆಮ್ಮಂಡ 3-0 ಯಿಂದ ಕುಲ್ಲಚಂಡ ವಿರುದ್ಧ, ಕೂತಂಡ 3-0 ಯಿಂದ ಅಲ್ಲಪಂಡ ವಿರುದ್ಧ, ಕೋಳೆರ 3-2ರಿಂದ ಕೇಲೇಟಿರ ವಿರುದ್ಧ,

ಟೈ ಬ್ರೇಕರ್‌ನಲ್ಲಿ ಚೆಕ್ಕೇರ 3-1ರಿಂದ ಶಾಂತೆಯಂಡ ವಿರುದ್ಧ, ಮತ್ರಂಡ 4-2ರಿಂದ ಅಮ್ಮಂಡ ವಿರುದ್ಧ ಗೆಲುವು ಪಡೆದವು.

ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಮತ್ರಂಡ ಮತ್ತು ಅಮ್ಮಂಡ ತಂಡದ ಆಟಗಾರರು ಗೆಲುವಿಗಾಗಿ ಸೆಣಸಾಟ ನಡೆಸಿದರು

ಮುನ್ನಡೆಯಲ್ಲಿ ಪೆಂಟ್ಸುಲಾಯಿಯಾ

ಬೆಂಗಳೂರು: ಗ್ರ್ಯಾಂಡ್‌ಮಾಸ್ಟರ್ ಪಾ.ಇನಿಯನ್ ಅವರನ್ನು ಸೋಲಿಸಿದ ಜಾರ್ಜಿಯಾದ ಗ್ರ್ಯಾಂಡ್‌ಮಾ-ಸ್ಟರ್ ಲೆವನ್ ಪೆಂಟ್ಸುಲಾಯಿಯ ಅವರು ‘ನಮ್ಮ ಬೆಂಗಳೂರು ಇಂಟರ್ ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿ’ಯ ಒಂಬತ್ತನೇ ಸುತ್ತಿನ ನಂತರ ಏಳೂವರೆ ಪಾಯಿಂಟ್ಸ್ ಸಂಗ್ರಹಿಸಿ ಒಂಟಿಯಾಗಿ ಅಗ್ರಸ್ಥಾನಕ್ಕೇರಿದರು.

ಶುಕ್ರವಾರ ಕೊನೆಯ ಸುತ್ತು ನಡೆಯಲಿದ್ದು ಪ್ರಶಸ್ತಿಗೆ ಪೈಪೋಟಿ ತೀವ್ರಗೊಂಡಿದೆ. ತಲಾ ಏಳು ಪಾಯಿಂಟ್ಸ್ ಗಳಿಸಿರುವ ಹತ್ತು ಮಂದಿ ಆಟಗಾರರು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಅಗ್ರ ಶ್ರೇಯಾಂಕದ ಇನಿಯನ್ ಮೊದಲ ಬೋರ್ಡ್‌ನಲ್ಲಿ ನಡೆದ ಪಂದ್ಯದ 56ನೇ ನಡೆಯಲ್ಲಿ ಐದನೇ ಶ್ರೇಯಾಂಕದ ಲೆವನ್ ಎದುರು ಸೋಲೊಪ್ಪಿಕೊಂಡರು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಕೂಟದಲ್ಲಿ ಜಿಎಂ ಮ್ಯಾನುಯೆಲ್ ಪೆಟ್ರೋಸಿಯಾನ್ (ಅರ್ಮೇನಿಯಾ), ಐಎಂ ಅನುಜ್ ಶ್ರೀವತ್ರಿ (ಮಧ್ಯಪ್ರದೇಶ), ಐಎಂ ಅರಣ್ಯಕ್ ಘೋಷ್ (ಪಶ್ಚಿಮ ಬಂಗಾಳ) ಜಿಎಂ ಸಂದೀಪನ್ ಚಂದಾ (ಪಶ್ಚಿಮ ಬಂಗಾಳ), ಕೇರಳದ ನಿತಿನ್ ಬಾಬು, ಜಿಎಂ ಅಲೆಕ್ಸಿ ಫೆಡರೋವ್ (ಬೆಲರೂಸ್), ಐಎಂ ಹರಿಮಾಧವನ್ ಎನ್.ಬಿ (ತಮಿಳುನಾಡು), ಐಎಂ ಮೆಹರ್ ಚಿನ್ನಾರೆಡ್ಡಿ (ಆಂಧ್ರ ಪ್ರದೇಶ), ಎಂ ಅಮೇಯಾ ಆದಿ (ಗೋವಾ), ಐಎಂ ಸರವಣನ್ ಕೃಷ್ಣನ್ (ತಮಿಳುನಾಡು) ಅವರು ಎರಡನೇ ಸ್ಥಾನದಲ್ಲಿದ್ದಾರೆ.

ಮೆಹರ್ ಚಿನ್ನಾರೆಡ್ಡಿ ಹತ್ತನೇ ಬೋರ್ಡ್‌ನಲ್ಲಿ ಕರ್ನಾಟಕದ ವಿಯಾನಿ ಡಿಕುನ್ಹ (6) ಅವರನ್ನು ಸೋಲಿಸಿದರೆ, ಅರಣ್ಯಕ್ ಘೋಷ್, ಸುಭಾಯನ್ ಕುಂದು (6) ಅವರನ್ನು ಮಣಿಸಿದರು.

ಬೆಂಗಳೂರು ಸಿಟಿ ಎಫ್‌ಸಿಗೆ ಜಯ

ಬೆಂಗಳೂರು: ಬೆಂಗಳೂರು ಸಿಟಿ ಎಫ್‌ಸಿ ತಂಡ, ಬಿಡಿಎಫ್‌ಎ ಎ ಡಿವಿಷನ್ ಲೀಗ್ ಪಂದ್ಯದಲ್ಲಿ ಗುರುವಾರ ಬಿಟಿಎಂ ಎಫ್‌ಸಿ ವಿರುದ್ಧ 2–0 ಗೋಲುಗಳ ಜಯಪಡೆಯಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಸಿಟಿ ಎಫ್‌ಸಿ ಪರ ಸಚಿನ್ ಆರ್. (37ನೇ ನಿ.) ಮತ್ತು ನಿರಣ್ ಜೈ ಬಾಬು (72ನೇ ನಿ.) ಗೋಲು ಗಳಿಸಿದರು.ಇನ್ನೊಂದು ಪಂದ್ಯದಲ್ಲಿ ಆದಾಯ ತೆರಿಗೆ ಎಫ್‌ಸಿ ತಂಡ 3–2 ಗೋಲುಗಳಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಮಣಿಸಿತು. ಆದಾಯ ತೆರಿಗೆ ಎಫ್‌ಸಿ ಪರ ನರೇಂದ್ರ ಕುಮಾರ್ (37ನೇ ನಿ.), ಪ್ರೇಮ್ ಕುಮಾರ್ ವಿ.(51ನೇ ನಿ.) ಮತ್ತು ನೆಹೆನ್ ಗಿಲ್ಬರ್ಟ್ (72ನೇ ನಿ.) ಗೋಲು ಬಾರಿಸಿದರು. ಚಾಲೆಂಜರ್ಸ್ ತಂಡದ ಪರ ರಾಜು ಜಿ. (45 + 1ನೇ, 66ನೇ ನಿ.) ಗೋಲು ಹೊಡೆದರು.ಸಿ ಡಿವಿಷನ್ ಲೀಗ್ ಪಂದ್ಯದಲ್ಲಿ ನಾರ್ಥ್ ಈಸ್ಟ್ ಯೂತ್ ಕ್ಲಬ್ 1–0 ಗೋಲಿನಿಂದ ವಿಲಿಯಮ್ ಎಫ್‌ಸಿ ತಂಡವನ್ನು ಮಣಿಸಿತು.

ನೆರವು ಸಿಬ್ಬಂದಿ ತಂಡದ ಉನ್ನತ ಸದಸ್ಯರೊಬ್ಬರ ಜೊತೆ ಭಿನ್ನಾಭಿಪ್ರಾಯ?

ಸಹಾಯಕ ಕೋಚ್ ಸ್ಥಾನದಿಂದ ಅಭಿಷೇಕ್ ವಜಾ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಸಹಾಯಕ ಕೋಚ್ ಅಭಿಷೇಕ್ ನಾಯರ್ ಅವರನ್ನು ನೇಮಕಗೊಂಡ ಎಂಟೇ ತಿಂಗಳ ನಂತರ ಆ ಸ್ಥಾನದಿಂದ ತೆಗೆದುಹಾಕಲಾಗಿದೆ.

ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಸರಣಿಗಳಲ್ಲಿ ಅನುಭವಿಸಿದ ಹಿನ್ನಡೆ ಅವರನ್ನು ತೆಗೆದುಹಾಕಲು ಕಾರಣ ಎಂದು ತಿಳಿಸಲಾಗಿದೆ. ಆದರೆ ನೆರವು ಸಿಬ್ಬಂದಿ ತಂಡದ ಉನ್ನತ ಸದಸ್ಯರೊಬ್ಬರ ಜೊತೆ ಭಿನ್ನಾಭಿಪ್ರಾಯ ಈ ಕ್ರಮಕ್ಕೆ ಕಾರಣ ಎಂಬ ವದಂತಿಗಳು ಹರಿದಾಡಿವೆ.

41 ವರ್ಷ ವಯಸ್ಸಿನ ನಾಯರ್ ಅವರಿಗೆ ಮಂಡಳಿಯ ನಿರ್ಧಾರದ ಬಗ್ಗೆ ಈಗಾಗಲೇ ಮಾಹಿತಿ ನೀಡಲಾಗಿದೆ ಎಂದು ಬಿಸಿಸಿಐನ ನಂಬಲರ್ಹ ಮೂಲಗಳು ತಿಳಿಸಿವೆ.

ಅಭಿಷೇಕ್ ನಾಯರ್

‘ಇತ್ತೀಚಿನ ಟೆಸ್ಟ್ ಸರಣಿಗಳಲ್ಲಿ (ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ) ಭಾರತ ತಂಡದ ಹಿನ್ನಡೆ ಈ ಕ್ರಮಕ್ಕೆ ದಾರಿಮಾಡಿಕೊಟ್ಟಿದೆ. ಆದರೆ ನೆರವು ತಂಡದ ಪ್ರಮುಖ ಸಿಬ್ಬಂದಿ ಮತ್ತು ಭಾರತ ತಂಡದ ಸ್ಟಾರ್ ಆಟಗಾರನ ಜೊತೆ ಭಿನ್ನಾಭಿಪ್ರಾಯವು ಅವರನ್ನು ಬಲಿಪಶು ಮಾಡಿದೆ ಎಂಬ ಭಾವನೆ ಬಿಸಿಸಿಐನಲ್ಲಿ ಮೂಡಿದೆ’ ಎಂದು ಮಂಡಳಿಯ ಮೂಲವೊಂದು ಪಿಟಿಐಗೆ ತಿಳಿಸಿದೆ.

ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಮತ್ತು ಸ್ಟ್ರೆಂಥ್ ಮತ್ತು ಕಂಡಿಷನಿಂಗ್ ಕೋಚ್ ಸೋಹಮ್ ದೇಸಾಯಿ ಅವರೂ ಮೂರು ವರ್ಷಗಳ ಅವಧಿ ಪೂರೈಸಿದ್ದು ಅವರೂ ತಮ್ಮ ಹುದ್ದೆಗಳನ್ನು ಕಳೆದುಕೊಳ್ಳುವ ಹಾದಿಯಲ್ಲಿದ್ದಾರೆ. ಬಿಸಿಸಿಐನ ಪ್ರಮಾಣಿತ ಕಾರ್ಯಾಚರಣೆ ವಿಧಾನದ ಅನ್ವಯ ನೆರವು ಸಿಬ್ಬಂದಿಯ ಅವಧಿಯನ್ನು ಮೂರು ವರ್ಷಗಳಿಗೆ ಸೀಮಿತಗೊಳಿಸಲಾಗಿದೆ.

ಭಾರತ ತಂಡದ ಮೊತ್ತಮೊದಲ ಸ್ಟ್ರೆಂಥ್ ಅಂಡ್ ಕಂಡಿಷನಿಂಗ್ ಕೋಚ್ ಆಗಿದ್ದ ಅಡ್ರಿಯಾನ್ ಲೆ ರೋ ಅವರು ಮತ್ತೆ ಈ ಹುದ್ದೆಗೆ ಮರಳುವ ಸಾಧ್ಯತೆಯಿದೆ. 2003ರ ವಿಶ್ವಕಪ್‌ನಲ್ಲಿ ಅವರು ಮೊದಲ ಬಾರಿಗೆ ತಂಡದಲ್ಲಿ ಫಿಟ್ನೆಸ್ ಸಂಸ್ಕೃತಿಯ ಮಹತ್ವದ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದರು.

ಈ ಬೆಳವಣಿಗೆಗಳ ಬಗ್ಗೆ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರ ಪ್ರತಿಕ್ರಿಯೆ ಕೇಳಿದಾಗ, ಅವರು ವಿವರ ನೀಡಲಿಲ್ಲ. ‘ಕೆಲವು ವಿಷಯಗಳನ್ನು ಅಂತಿಮಗೊಳಿಸಲಾಗುತ್ತಿದೆ. ಕೆಲವೇ ದಿನಗಳಲ್ಲಿ ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು’ ಎಂದಷ್ಟೇ ತಿಳಿಸಿದರು.

ಭಾರತ ತಂಡದ ಪರ ಮೂರು ಏಕದಿನ ಪಂದ್ಯ ಮತ್ತು 103 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿರುವ ಅಭಿಷೇಕ್ ನಾಯರ್ ಅವರೂ ಪಿಟಿಐ ಕಳುಹಿಸಿದ ಸಂದೇಶಕ್ಕೆ ಪ್ರತಿಕ್ರಿಯಿಸಲಿಲ್ಲ.